# ಅಧ್ಯಾಯ – ೩

## ಧಾರವಾಡ ಜಿಲ್ಲೆಯ ಜನಪದ ಚಿತ್ರಕಲೆ : ಸ್ವರೂಪ ಮತ್ತು ವರ್ಗೀಕರಣ

ಕಲೆ ಎನ್ನುವುದು ಒಂದು ರೀತಿಯಲ್ಲಿ ಮನುಷ್ಯ ತನ್ನ ಭಾವನೆಗಳನ್ನು ವ್ಯಕ್ತಪಡಿಸಲು ಇರುವ ಒಂದು ಸಾಧನ ಎನ್ನಲಾಗುತ್ತದೆ. ಈ ಕಲೆಯಲ್ಲಿ ಭಿನ್ನ ಭಿನ್ನವಾದ ಪ್ರಕಾರಗಳು ಇವೆ. ವಿವಿಧ ರೀತಿಯ ಸಂಸ್ಕೃತಿಗಳ ಮೂಲಕ, ವೃತ್ತಿಯ ಮೂಲಕವೂ ಕಲೆ ಬೆಳೆದು ಬಂದಿದೆ. ಮಾನವನ ಸಂವಹನಕ್ಕಾಗಿ ಹುಟ್ಟಿಕೊಂಡ ಒಂದು ಮಾಧ್ಯಮವನ್ನೇ ಇಂದು ಕಲೆ ಎಂಬ ಹೆಸರಿನಲ್ಲಿ ಕರೆಯುತ್ತಿದ್ದೇವೆ. ಅಕ್ಷರಗಳ ಅರಿವಿಲ್ಲದ ಹೊತ್ತಿನಲ್ಲಿ, ತನ್ನ ಮನಸ್ಸಿನಲ್ಲಿ ಮೂಡಿದ ಭಾವನೆಗಳಿಗೆ ಸೂಕ್ತವಾದ ರೇಖೆಗಳನ್ನು ಎಳೆಯುವುದರ ಮೂಲಕ ಮನುಷ್ಯ ಸಂವಹನಕ್ಕೆ ಮುಂದಾದ. ಮಾತುಗಳು ಶುರುವಾದರೂ ಈ ಸಾಂಕೇತಿಕ ಚಿತ್ರಗಳ ಪ್ರಕ್ರಿಯೆ ನಿಲ್ಲಲಿಲ್ಲ. ಭಾಷೆ ಹುಟ್ಟಿಕೊಂಡು, ಅದು ಅಕ್ಷರ ರೂಪ ಪಡೆದುಕೊಂಡರೂ ಕೂಡ ಮನುಷ್ಯ ತನ್ನ ಭಾವನೆಗಳ ಸಂವಹನಕ್ಕಾಗಿ ರೂಢಿಸಿಕೊಂಡು ಬಂದಿರುವ ರೇಖೆಗಳ ರಚನೆಯನ್ನು ನಿಲ್ಲಿಸಲಿಲ್ಲ. ಇದುವೇ ಈಗ ನಮ್ಮ ಮುಂದೆ ಚಿತ್ರಕಲೆ ಎಂಬ ಹೆಸರಿನಲ್ಲಿ ಕಾಣುತ್ತಿದೆ.

ಅಕ್ಷರ–ಅರಿವುಗಳ ಮೂಲಕ ಒಂದು ಭಾಷೆ ಬೆಳೆದು ಬಂದ ಮೇಲೆ ಸಂವಹನಕ್ಕಾಗಿ ಬಳಸುತ್ತಿದ್ದ ಅವೇ ಚಿತ್ರಗಳಿಗೆ ಕಲಾತ್ಮಕ ಸ್ಪರ್ಶ ನೀಡಲು ಮಾನವ ಪ್ರಯತ್ನಿಸಿದ. 'ಬರೀ ಬುದ್ಧಿವಂತಿಕೆಯಿಂದ ವಿದ್ವತ್ತಿನಿಂದ, ಜಾಣತನದಿಂದ ರಸಾಸ್ವಾದನೆ ಸಾಧ್ಯವಾಗಲಾರದು. ರಸಗ್ರಹಣಕ್ಕೆ, ಆಸ್ವಾದನೆಗೆ ನಿರ್ಮಲವಾದ ಮನಸ್ಸು ಬೇಕು. ಪೂರ್ವಗ್ರಹಪೀಡೆ ಇರಬಾರದು. ತನ್ಮಯತೆ ಬೇಕು. ಇದನ್ನು ಪಾಶ್ಚಾತ್ಯರು 'ಎಂಪಥಿ' (Empathy) ಎನ್ನುತ್ತಾರೆ. ಭಾರತೀಯ ಕಾವ್ಯ ಮೀಮಾಂಸಕರರು 'ತಾದಾತ್ಮ್ಯ' ಎಂದಿದ್ದಾರೆ. ನಾನು ಎಂಬುದನ್ನು ಮರೆತು, ನನ್ನಿಂದ ನಾನು ಹೊರಗೆ ಬಂದು ಚಿತ್ರದಲ್ಲಿ ತಾದಾತ್ಮ್ಯ ಹೊಂದಿ ಆನಂದ ಪಡುವ ಮನೋವೈಶಾಲ್ಯತೆ ಬೇಕು. ಯಾವ ತರದ ಪ್ರತಿಫಲದ ಯೋಚನೆಯನ್ನು ಮಾಡದೆ ಅದರಲ್ಲಿ ಒಂದಾಗಿ ಅನುಭವಿಸುವ ಸ್ಥಿತಿಯೇ ರಸಾಸ್ವಾದದ ಸ್ಥಿತಿ. ಅನುಭವವನ್ನು ಪಡೆಯುವುದು, ಅದರ ವಿಶ್ಲೇಷಣೆ ಮಾಡುವುದು, ವಿಶ್ಲೇಷಣೆಯಿಂದ ಅನುಭವಕ್ಕೆ ಹಿಂದಿರುಗುವುದು ; ಅಂದರೆ ಅನುಭವದ ಸ್ವರೂಪ ಏನೆಂದು ವಿಶ್ಲೇಷಿಸಿ ಅಮೂರ್ತ ಕಲ್ಪನೆಯಿಂದ ಮತ್ತೆ ಮೂರ್ತ ಅನುಭವಕ್ಕೆ ಹಿಂತಿರುಗುವ ಕ್ರಿಯೆ ಕಲಾವಿದನ ಸ್ವಭಾವವಾದಾಗ ಕಲೆ ಹೊರಹೊಮ್ಮುತ್ತದೆ. ಅಮೂರ್ತಕ್ಕೊಂದು ಆಕಾರ ದೊರೆಯುತ್ತದೆ. ಅನುಭವಕ್ಕೊಂದು ರೂಪ ದೊರೆಯುತ್ತದೆ'[೧] ಎನ್ನುವ ಮಾತುಗಳಲ್ಲಿ ಚಿತ್ರಕಲೆಯ

---

೧. ಚಿತ್ರಕಲಾ ಚಿಂತನೆ : ಪಾಟೀಲ ಶಂಕರ : ಪ್ರಗತಿ ಪ್ರಕಾಶನ, ದಾವಣಗೆರೆ : ೧೯೯೫ : ಪು–೬೨

ವಿಕಸನದ ಹಾದಿಯನ್ನು ಸ್ಪಷ್ಟವಾಗಿ ಗುರುತಿಸಬಹುದು. ಇದನ್ನು ಅರಿತುಕೊಂಡರೆ ಚಿತ್ರಕಲೆ ಮೂಡುವ ಇಂದಿನ ಮನೋಭಾವ ಅರ್ಥವಾಗುತ್ತದೆ. ಈ ಮಾತುಗಳನ್ನು ಜನಪದ ಚಿತ್ರಕಲೆಗೂ ಅನ್ವಯಿಸಿ ಹೇಳಲು ಕಾರಣಗಳಿವೆ. ಯಾಕೆಂದರೆ ಜನಪದ ಚಿತ್ರಕಾರ ಬರೆಯುವ ಚಿತ್ರಗಳು ಕೆಲವು ಸಲ ಅನುಭವದ ಮಾದರಿಯನ್ನೇ ಮೂರ್ತರೂಪಕ್ಕೆ ಇಳಿಸುವ ಕಾರ್ಯದಂತೆ ಕಂಡರೂ ಮನೋಸ್ಥಿತಿ ಮಾತ್ರ ಭಿನ್ನವಾಗಿರುತ್ತದೆ. ಅದು ಗೊತ್ತಿಲ್ಲದಂತೆಯೇ ಘಟಿಸುವ ಪ್ರಕ್ರಿಯೆಯಾಗಿ ಕಾಣಿಸಿಕೊಳ್ಳುತ್ತದೆ.

'ಮಾನವನ ಸೃಜನಶೀಲ ಅಭಿವ್ಯಕ್ತಿಗಳಲ್ಲೊಂದಾದ ಚಿತ್ರಕಲೆ ಬರೀ ಸೌಂದರ್ಯೋಪಾಸನೆಯ ದೃಷ್ಟಿಯಿಂದ ಅಷ್ಟೇ ಅಲ್ಲದೇ ಆತನ ಬದುಕಿನ ಸುತ್ತ ವ್ಯಾಪಿಸಿಕೊಂಡ ಧಾರ್ಮಿಕ ನಂಬಿಕೆ, ಆಚರಣೆ, ವಿಧಿಕ್ರಿಯೆ ಮುಂತಾದವುಗಳ ಹಿನ್ನೆಲೆಯಲ್ಲಿ ಆಯಾ ಆಚರಣೆಯ ಅವಿಭಾಜ್ಯ ಅಂಗವಾಗಿಯೂ ಅಭಿವ್ಯಕ್ತಿ ಪಡೆಯುತ್ತ ಬಂದಿವೆ. ಹಾಗಾಗಿಯೇ ನಮ್ಮ ಅನೇಕ ಹಬ್ಬ ಹರಿದಿನಗಳು, ಮದುವೆ, ಮುಂಜಿ, ಜಾತ್ರೆ, ಉತ್ಸವ, ವಿಧಿಕ್ರಿಯೆ ಆಚರಣೆ ಇಂತಹ ಹತ್ತು ಹಲವಾರು ಆಚರಣೆಗಳಲ್ಲಿ ಚಿತ್ರಕಲೆಯು ಅವುಗಳ ಒಂದು ಭಾಗವಾಗಿ ರಚನೆಯಾಗುತ್ತ ಬಂದಿರುವುದನ್ನು ಕಾಣಬಹುದು'[೨] ಎಂಬ ಮಾತುಗಳನ್ನು ಗಮನಿಸಿದಾಗ ಚಿತ್ರಕಲೆ ಕೇವಲ ಸಂವಹನ ಅಥವಾ ರಸಾಸ್ವಾದನೆಯ ಅಂಗವಾಗಿ ಮಾತ್ರ ಬೆಳೆದು ಬರಲಿಲ್ಲ. ಅದಕ್ಕೆ ಧಾರ್ಮಿಕ ಪರಿಧಿ ಕೂಡ ಇರುವುದು ತಿಳಿದು ಬರುತ್ತದೆ.

ಈ ಹಿನ್ನೆಲೆಯಲ್ಲಿ ಧಾರವಾಡ ಜಿಲ್ಲೆಯ ಜನಪದ ಚಿತ್ರಕಲೆಯನ್ನು ಕುರಿತು ಅಧ್ಯಯನ ಮಾಡುವುದಕ್ಕಿಂತ ಮೊದಲು ಈ ಕಲೆಯ ಬಗ್ಗೆ ಒಂದಿಷ್ಟು ವಿವೇಚನೆ ಮಾಡುವುದು ಸಮಯೋಚಿತ ಎನಿಸುತ್ತದೆ. ಯಾಕೆಂದರೆ ಚಿತ್ರಕಲೆಯನ್ನು ತಿಳಿಯುವುದಕ್ಕಿಂತ ಮುಂಚೆ ಕಲೆ ಎಂದರೆ ಏನು ಎಂಬ ಅರ್ಥವ್ಯಾಪ್ತಿಯ ಲಭ್ಯತೆ ಒಬ್ಬ ಅಧ್ಯಯನಕಾರನಿಗೆ ಎಂತೋ ಒಬ್ಬ ಸಾಮಾನ್ಯ ಮನುಷ್ಯನಿಗೂ ಬೇಕಾಗುತ್ತದೆ.

'ತಮಗಾಗುವ ಭಾವನೆಗಳನ್ನು ಅಭಿವ್ಯಕ್ತಿಸುವುದು ಜೀವಿಗಳ ಒಂದು ಸಾಮಾನ್ಯ ಗುಣ. ಈ ಅಭಿವ್ಯಕ್ತಿ ಇನ್ನೊಬ್ಬರನ್ನು ತೀವ್ರವಾಗಿ ಸೆಳೆಯುವ, ಅವರ ಅಂತಃಕರಣವನ್ನು ತಟ್ಟುವ ವಿಶಿಷ್ಟ ಗುಣಲಕ್ಷಣಗಳಿಂದ ಕೂಡಿದ್ದರೆ ಅದನ್ನು ಕಲಾತ್ಮಕ ಅಭಿವ್ಯಕ್ತಿ ಎಂದು ಗುರುತಿಸಲಾಗುತ್ತದೆ. ಅಭಿವ್ಯಕ್ತಗೊಳ್ಳುವ ಮಾಧ್ಯಮವನ್ನು ಅವಲಂಬಿಸಿ ಅದನ್ನು ಕಾವ್ಯ, ಚಿತ್ತಾರ, ಸಂಗೀತ, ನೃತ್ಯ ಇತ್ಯಾದಿಯಾಗಿ ವರ್ಗೀಕರಿಸಲಾಗುತ್ತದೆ. ಇದು ಕಲೆಯ ಬಗೆಗೆ ಸಾಹಿತ್ಯದ ವಿದ್ಯಾರ್ಥಿಗಳು ಸಾಮಾನ್ಯವಾಗಿ ತಿಳಿದುಕೊಳ್ಳುವ ಪ್ರಾಥಮಿಕ ಸಂಗತಿಗಳು. ಇಲ್ಲಿ ಒಂದು ಪ್ರಶ್ನೆ ; ಒಬ್ಬಾತ

---

೨. ಬೆಳದಿಂಗಳ ಚಿತ್ರಕಲೆ : ಪೂಜಾರ ಆನಂದ ಕೆ : ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು : ೨೦೦೪ : ಪು-೧

ಏಕಾಂತದಲ್ಲಿ ಕುಳಿತು ತನಗಾಗುವ ಭಾವನೆಗಳನ್ನು ಕಲಾತ್ಮಕವಾಗಿಯೇ ಆದರೆ ತನಗೆ ಮಾತ್ರವೇ ಹೇಳಿಕೊಂಡರೆ ಅದೂ ಕಲೆ ಎನ್ನಿಸಿಕೊಳ್ಳುತ್ತದೆಯೇ ? ಆತನೂ ಕಲಾವಿದ ಆಗುತ್ತಾನೆಯೇ ? ಒಂದನ್ನಂತೂ ಗಮನದಲ್ಲಿಟ್ಟುಕೊಳ್ಳಬೇಕು ; ಕವಿತೆಯಾಗಲೀ ಚಿತ್ರಕಲೆಯಂತಹ ಕೆಲವು ಕಲಾ ಪ್ರಕಾರಗಳಾಗಲೀ ಹುಟ್ಟಿಕೊಳ್ಳುವುದು ಆಯಾ ಕವಿ, ಕಲಾವಿದನ ಖಾಸಗಿ ನೆಲೆಯಲ್ಲಿಯೇ. ಆಯಾ ಅಭಿವ್ಯಕ್ತಿಗಳು ಕಲಾತ್ಮಕವಾಗಿವೆಯೇ ? ಅವುಗಳ ಕರ್ತೃ, ಕವಿ ಅಥವಾ ಕಲಾವಿದ ಎನ್ನುವ ಅಭಿದಾನಕ್ಕೆ ಯೋಗ್ಯನಾಗಿದ್ದಾನೆಯೇ ? ಎಂಬುದು ತೀರ್ಮಾನವಾಗಬೇಕಾದರೆ ಅದು ಸಹೃದಯರ ಗಮನಕ್ಕೆ ಬರುವಂತಾಗಬೇಕು. ಅಂದರೆ ಆ ಆಕೃತಿ ಪ್ರದರ್ಶನಗೊಳ್ಳಲೇಬೇಕು. ಅಂದರೆ ಕಲೆ ಎನ್ನುವುದು ಕಲಾವಿದನ ಖಾಸಗಿತನದಲ್ಲಿ ಹುಟ್ಟಿ, ಸಾರ್ವಜನಿಕ ವಲಯದಲ್ಲಿ ಪ್ರಕಟಗೊಳ್ಳಬೇಕಾದ ಒಂದು ಪ್ರಕ್ರಿಯೆ'[೩] ಆಗಿರುತ್ತದೆ.

ಅಂದರೆ ಕಲೆಯು ಖಾಸಗಿತನದಲ್ಲಿ ಹುಟ್ಟಿ ಸಾರ್ವಜನಿಕ ವಲಯದಲ್ಲಿ ಮನ್ನಣೆ ಪಡೆದಾಗ ಮಾತ್ರ ಅದಕ್ಕೆ ಸಾರ್ಥಕತೆ ಲಭ್ಯವಾಗುತ್ತದೆ ಎಂದು ಇಲ್ಲಿ ಹೇಳಿರುವುದನ್ನು ಗಮನಿಸಬೇಕು. ಹಾಗೆ ನೋಡಿದರೆ ಕಲೆಯನ್ನು ನೋಡುವ ಪರಿಕಲ್ಪನೆ ಭಿನ್ನ ದೃಷ್ಟಿಯಿಂದ ಸಾಧಿತವಾಗುತ್ತದೆ. ಯಾಕೆಂದರೆ ಇಲ್ಲಿ ಬಂದಿರುವ ಖಾಸಗಿತನ ಎನ್ನುವುದು ಆಂಶಿಕವಾದ ಸತ್ಯ ಎನಿಸುತ್ತದೆ. ಖಾಸಗಿತನ ಎನ್ನುವುದು ಹಿಂದಿನಿಂದ ಇದೆಯಾದರೂ ಅದೇ ಕಲೆಯ ಉಗಮದ ಮೂಲ ಎಂದು ಗುರುತಿಸುವುದು ತಪ್ಪಾಗುತ್ತದೆ. ಯಾಕೆಂದರೆ ಕೆಲವು ಕಲೆಗಳು ಸಾಮೂಹಿಕ ಪ್ರಯತ್ನದ ಮೂಲಕ ಪ್ರದರ್ಶಿತವಾಗುತ್ತವೆ. ಸಾಮೂಹಿಕ ಕ್ರಿಯೆಗಳ ಮೂಲಕ ಹೊರಹೊಮ್ಮುತ್ತವೆ ಎಂಬುದನ್ನು ಮರೆಯುವಂತಿಲ್ಲ.

'ಕಲೆಯೆನ್ನುವುದು ಮೂಲತಃ ಪ್ರಕೃತಿಯ ಮಡಿಲಲ್ಲಿ ಬೆಳೆದ ಮಾನವ ಸ್ವಭಾವಕ್ಕೆ ಸಂಬಂಧಿಸಿದ್ದು. ಅವನ ತುಡಿತ–ದುಡಿತ–ಮಿಡಿತಗಳಿಗನುಣವಾಗಿ, ಅನುಭವಗಳಿಗೆ ಜೀವ ಕೊಡುವ ಕ್ರಿಯೆ ಸಹಜವಾಯಿತು. ಈ ಅನುಭವ ಭಾಷಾ ಮಾಧ್ಯಮದ ಮೂಲಕ ಅಭಿವ್ಯಕ್ತಗೊಂಡರೆ ಸಾಹಿತ್ಯವಾಗಿ, ಅಭಿನಯ ಮಾಧ್ಯಮದ ಮೂಲಕ ಹೊರ ಹೊಮ್ಮಿದರೆ ನೃತ್ಯವಾಗಿ, ಬಣ್ಣದ ಮಾಧ್ಯಮದಲ್ಲಿ ಅರಳಿದರೆ ಚಿತ್ರಕಲೆಯಾಗಿ ರೂಪ ಪಡೆಯಿತು. ಹೀಗೆ ಕಲೆಗಳಿಗೆ ಬದುಕಿನ ಅನುಭವವೇ ಮೂಲದ್ರವ್ಯವೆಂದು ಹೇಳಬಹುದು. ಇಂಥ ಕಲೆಗಳು ಸಾಂಸ್ಕೃತಿಕ ಬದುಕಿನ ಜೀವಂತ ಸಾಕ್ಷಿಗಳೆನಿಸಿಕೊಂಡಿವೆ.'[೪] ಇಲ್ಲಿಯ ವಿವರಣೆ ಕಲೆಯ ಬಗೆಗಿನ ಸಾಮಾನ್ಯ ಮತ್ತು ಸರಳ ನಿರೂಪಣೆಯನ್ನು ಒಳಗೊಂಡಿದೆ. ಇದರೊಂದಿಗೆ 'ಸಂಪ್ರದಾಯ,

---

೩. ಚಿತ್ತಾರದ ಗೊಂಬೆ ಕಲೆ : ಟಿ. ಗೋವಿಂದರಾಜು : ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು : ೨೦೦೪ : ಪು–೧

೪. ಕರ್ನಾಟಕದ ಜನಪದ ಚಿತ್ರಕಲೆ : ಪಾಟೀಲ ಎಸ್.ಸಿ : ವೀರಶೈವ ಅಧ್ಯಯನ ಸಂಸ್ಥೆ, ಗದಗ : ೧೯೯೩ : ಪು–೧೭

ನಂಬಿಕೆ, ಧರ್ಮದ ಆಚರಣೆಯ ಹಿನ್ನೆಲೆಯಲ್ಲಿ ಜನಪದರಲ್ಲಿ ಮೂರ್ತರೂಪಕ್ಕೆ ತಿರುಗಿದುದೇ ಜನಪದ ಚಿತ್ರಕಲೆ. ಶಾಸ್ತ್ರೋಕ್ತವಾದ ಕಲಿಕೆಗೆ ಒಳಪಟ್ಟು, ಕಲೆಗಾಗಿ ಕಲೆ, ಆನಂದಕ್ಕಾಗಿ ಕಲೆ, ಪ್ರವೃತ್ತಿಗಾಗಿ ಕಲೆ ಎಂಬುದು ಶಿಷ್ಟಪದ ಚಿತ್ರಕಲೆಯ ಲಕ್ಷಣವಾದರೆ ಬದುಕಿಗಾಗಿ ಪಟ್ಟ ಪಾಡೇ ಕಲೆ, ವೃತ್ತಿ ಮತ್ತು ಪ್ರವೃತ್ತಿಗಾಗಿ ಕಲೆ ಎಂದು ಜನಪದ ಚಿತ್ರಕಲೆಯಲ್ಲಿ ಪರಿಭಾವಿಸಬೇಕು. ಸಾಮಾಜಿಕ ಜೀವನದ ಒಳ ರಕ್ತ-ಮಾಂಸಗಳನ್ನು ಅಮೂರ್ತ ಕಲ್ಪನೆಯ ಮೂಲಕ ಜಂಗಮವಾಗುವಂತೆ ಮಾಡುವ ಸಾಮರ್ಥ್ಯ ಜನಪದ ಚಿತ್ರಕಲೆಗಿದೆ. ಅವು ಸರಳ ಚೌಕಟ್ಟಿನೊಂದಿಗೆ, ಮನಸ್ಸಿನ ಸ್ವಾತಂತ್ರ್ಯದೊಂದಿಗೆ ಕೆಲವು ಸಾರು ಸಮೂಹವಾಗಿಯೇ ನಿತ್ಯ ಬಳಕೆಯಲ್ಲಿ ಬಂದದ್ದುಂಟು.'[೫] ಎಂದು ಹೇಳಿದ್ದಲ್ಲಿ ಕಲೆಯ ವ್ಯಾಖ್ಯಾನ ಹೆಚ್ಚು ಸ್ಫುಟವಾಗುತ್ತದೆ. ಕಲೆಯನ್ನು ನೋಡುವ ದೃಷ್ಟಿಕೋನಗಳು ಬದಲಾವಣೆ ಹೊಂದಿದಂತೆಲ್ಲ ಹೊಸ ಹೊಸ ವ್ಯಾಖ್ಯಾನಗಳು ಲಭ್ಯವಾಗುತ್ತಲೇ ಹೋಗುತ್ತವೆ.

### ೩.೧. ಜನಪದ ಚಿತ್ರಕಲೆ ಮತ್ತು ಶಿಷ್ಟ ಚಿತ್ರಕಲೆ :

ಚಿತ್ರಕಲೆಯನ್ನೂ ಎರಡು ಪ್ರಕಾರವಾಗಿ ವಿಂಗಡಿಸಿಕೊಳ್ಳಲಾಗಿದೆ. ಶಿಷ್ಟ ಕಲೆ ಮತ್ತು ಜನಪದ ಕಲೆ ಎಂಬ ಹೆಸರುಗಳನ್ನು ಇಟ್ಟು ಪೂರಕವಾದ ಅಧ್ಯಯನಗಳು ನಡೆದಿವೆ. ಸಾಹಿತ್ಯದ ಅಧ್ಯಯನ ಕ್ರಮದಂತೆಯೇ ಇಲ್ಲಿಯೂ ವಿಂಗಡಣೆ ಇದೆ. ಈ ಕಲೆಯಲ್ಲೇ ಬರುವ ಚಿತ್ರಕಲೆಯನ್ನೂ ಅದೇ ರೀತಿ ವರ್ಗೀಕರಣ ಮಾಡಲಾಗಿದೆ. ಶಿಷ್ಟ ಚಿತ್ರಕಲೆ, ಜನಪದ ಚಿತ್ರಕಲೆ ಎಂದು ಹೆಸರಿಸುವ ಮೂಲಕ ಅಧ್ಯಯನಗಳು ಹೆಚ್ಚಾಗಬೇಕಾದ ಅಗತ್ಯ ಇದೆ. ಆದರೆ ಶಿಷ್ಟ ಚಿತ್ರಕಲೆಗೂ ಜನಪದ ಚಿತ್ರ ಕಲೆಗೂ ಇರುವ ಭೇದಗಳನ್ನು ಗುರುತಿಸುವಾಗ ತುಂಬ ಸೂಕ್ಷ್ಮವಾದ ಗಮನಿಕೆಯ ಆವಶ್ಯಕತೆ ಇರುತ್ತದೆ.

'ಜನಪದ ಚಿತ್ರಕಲೆಗೂ ಶಿಷ್ಟ ಚಿತ್ರಕಲೆಗೂ ಇರುವ ವ್ಯತ್ಯಾಸವನ್ನು ಗುರುತಿಸುವುದು ಸ್ವಲ್ಪ ಕಷ್ಟ. ಪ್ರಪಂಚದ ಜನಪದ ಕಲೆಗಳಂತೆ ಕರ್ನಾಟಕ ಈ ಜನಪದ ಚಿತ್ರಕಲೆಗೂ ಯಾವ ಲಿಖಿತ ಗ್ರಂಥಗಳ ಆಧಾರ ಅಥವಾ ತಾತ್ವಿಕ ವಿವೇಚನೆಯ ಹಿನ್ನೆಲೆ ಇಲ್ಲವಾಗಿದೆ. ಜನಪದ ಚಿತ್ರಕಲೆ ನಿಸರ್ಗಕ್ಕೆ ತುಂಬಾ ಹತ್ತಿರವಾಗಿದೆ. ಅನುಕರಣೆ ಮತ್ತು ಆಚರಣೆಗಳಿಂದ ಉಳಿದುಕೊಂಡು ಬಂದಿದೆ. ಅಲೌಕಿಕ ಜೀವಿಗಳ ಆರಾಧನೆ, ಅನೇಕ ಧಾರ್ಮಿಕ ನಂಬಿಕೆಗಳಿಂದ ಕೂಡಿದೆ. ಈ ಕಲೆಯಲ್ಲಿ ಕಂಡುಬರುವ ಆಚಾರ-ವಿಚಾರಗಳು, ನಂಬಿಕೆ-ಸಂಪ್ರದಾಯಗಳು, ಜನರ ಜೀವನ ವಿಧಾನ ಮತ್ತು ಮನೋದೃಷ್ಟಿಯನ್ನು ಪ್ರತಿನಿಧಿಸುತ್ತವೆ. ಜನಪದ ಚಿತ್ರಕಲೆಯನ್ನು 'ಕಲೆ' ಎಂದು

---

೫. ಶೀಗಿಯ ಚಿತ್ರಕಲೆ : ಪರದೇಶಿ ಯಾದಪ್ಪ : ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು : ೨೦೦೪ : ಪು-೩

ಭಾವಿಸದೇ ಆಚರಣೆಯ ಒಂದು ಅಂಗ ಎಂದು ಭಾವಿಸಿರುವುದೇ ಇಲ್ಲಿನ ವಿಶೇಷವಾಗಿದೆ'[೬] ಎಂದು ರಂಗಾರೆಡ್ಡಿ ಕೋಡಿರಾಂಪುರ ಅವರು ಹೇಳುತ್ತಾರೆ. ಇದಕ್ಕೆ ಪೂರಕವಾಗಿ 'ಯಾವುದಾದರೂ ಜನಪದ ಸಮಾಜಕ್ಕೆ ಹೋಗಿ ಅಲ್ಲಿರುವ ಚಿತ್ರಕಲೆಯನ್ನು ನೋಡಬೇಕೆಂದರೆ ಅದು ನೇರವಾಗಿ ನೋಡಲು ಸಿಗುವುದಿಲ್ಲ. ಆದರೆ ಇದನ್ನು ಅವರು ಮನೆಯ ಗೋಡೆಯ ಮೇಲೆ, ನೆಲದ ಮೇಲೆ, ಮಡಕೆ–ಗಡಿಗೆಗಳ ಮೇಲೆ ತೆಗೆದ ಚಿತ್ರಗಳನ್ನು ಅಭ್ಯಾಸ ಮಾಡುವುದನ್ನು ಕಾಣಬಹುದು. ಈ ಚಿತ್ರಗಳನ್ನು ಸಾಮಾನ್ಯವಾಗಿ ಯಾವುದಾದರೊಂದು ಹಬ್ಬದ ಸಂದರ್ಭದಲ್ಲಿ ವಿಧಿವತ್ತಾಗಿ ತೆಗೆಯುತ್ತಾರೆ. ಅವನ್ನು ಇಂಥದ್ದೇ ರೀತಿಯಲ್ಲಿ ಇಂಥದೇ ಬಣ್ಣವನ್ನು ಉಪಯೋಗಿಸಿ ಬರೆಯಬೇಕೆಂಬ ನಿಯಮವಿದೆ. ಈ ಚಿತ್ರಗಳಿಗೆ ಮುಖ್ಯವಾಗಿ ತಾವು ದಿನನಿತ್ಯದಲ್ಲಿ ಬಳಸುವ ಪ್ರಾಣಿ ಪಕ್ಷಿಗಳು, ಮರ ಮಟ್ಟುಗಳನ್ನು ಉಪಯೋಗಿಸುತ್ತಾರೆ. ಅನೇಕ ಸಾರಿ ಈ ಪ್ರಾಣಿಗಳಗಳನ್ನು ಅವುಗಳ ನಿಜರೂಪ, ಆಕಾರದಲ್ಲಿ ಉಪಯೋಗಿಸದೇ ಸಾಂಕೇತಿಕವಾಗಿ ಅವುಗಳ ಚಿತ್ರಗಳನ್ನು ಬರೆಯಲಾಗುವುದು'[೭] ಎಂದು ಡಾ. ಕೆ.ಜಿ. ಗುರುಮೂರ್ತಿಯವರು ಅಭಿಪ್ರಾಯ ಪಡುತ್ತಾರೆ.

'ಶಿಷ್ಟಪದ ಚಿತ್ರಕಲೆ ಬಿಡುವಿನ ವೇಳೆಯಲ್ಲಿ ಹುಟ್ಟಿದರೆ, ಜನಪದ ಚಿತ್ರಕಲೆ ದುಡಿಯುವ ಸಮಯದಲ್ಲಿ ಸೃಷ್ಟಿಯಾಗುತ್ತದೆ. ಒಂದು ವ್ಯಷ್ಟಿಯ ಸೃಷ್ಟಿ ಎನಿಸಿದರೆ, ಇನ್ನೊಂದು ಸಮಷ್ಟಿಯ ಸೃಷ್ಟಿಯಾಗಿದೆ. ಜನಪದರ ತೆರೆದ ಬದುಕಿನಂತೆಯೇ ಅವರ ಚಿತ್ರಕಲೆಯೂ ಕೂಡ ಬದುಕಿನ ಹುಟ್ಟು, ಸಾವು, ಬೆತ್ತಲೆಯಲ್ಲಿ ಪ್ರಕಟವಾಗುವ ಅಂಶಗಳು ಇಲ್ಲಿ ನೇರವಾಗಿ ಅಭಿವ್ಯಕ್ತಿ ಪಡೆದುಕೊಂಡಿರುತ್ತವೆ.

ದಪ್ಪನಾದ ರೇಖೆಗಳು ಜನಪದ ಚಿತ್ರಕಲೆಯ ಜೀವಾಳವಾಗಿದ್ದು, ದೈನಂದಿನ ಬದುಕಿನ ವಿವರಗಳು ಚಿತ್ರ ರಚನೆಯ ವಿಷಯಗಳಾಗಿರುತ್ತವೆ. ಹಳದಿ, ಕೆಂಪು, ಕಪ್ಪು, ಬಿಳಿ, ನಸುಕೆಂಪು, ಹಸಿರು, ಜಾಂಬಳಿ ಮುಂತಾದ ಪ್ರಖರ ವರ್ಣಗಳನ್ನು ಜನಪದ ಚಿತ್ರಕಲೆಯಲ್ಲಿ ಕಾಣಬಹುದು'[೮] ಎಂದು ಡಾ. ಯಾದಪ್ಪ ಪರದೇಶಿಯವರು ಹೇಳುತ್ತಾರೆ. ಅಂದರೆ ಜನಪದ ಚಿತ್ರಕಲೆ ಎನ್ನುವುದು ಮೊದಲಿಗೆ ಕಲೆ ಎಂಬ ಉದ್ದೇಶವನ್ನು ಇಟ್ಟುಕೊಂಡೇ ಬೆಳೆದು ಬರಲಿಲ್ಲ. ಅದು ಮನುಷ್ಯನ ಭಾವನೆ, ನಂಬಿಕೆ, ಆಚರಣೆಗಳನ್ನು ವ್ಯಕ್ತಪಡಿಸುವ ಉದ್ದೇಶದೊಂದಿಗೆ ಜನ್ಮ ತಳೆಯಿತು. ಆ ಮೂಲಕ ಮೌಖಿಕವಾಗಬೇಕಿದ್ದ ಭಾಷೆ ಅಥವಾ ಭಾವನೆ ರೇಖೆಗಳ ಸ್ವರೂಪ ಪಡೆದುಕೊಂಡಿತು.

---

೬. ಜನಪದ ಕಲೆ : ಅವಲೋಕನ : ಸಂ–ಅಂಬಳಿಕೆ ಹಿರಿಯಣ್ಣ–ಶಾಲಿನಿ ರಘುನಾಥ : ಕರ್ನಾಟಕ ಜಾನಪದ ಅಕಾಡೆಮಿ, ಬೆಂಗಳೂರು : ೨೦೧೦ : ಪು–೯೯

೭. ಜನಪದ ಸಮಾಜ ಮತ್ತು ಸಂಸ್ಕೃತಿ : ಗುರುಮೂರ್ತಿ ಕೆ.ಜಿ. : ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ : ೧೯೭೯ : ಪು–೧೫೯

೮. ಶೀಗಿಯ ಚಿತ್ರಕಲೆ : ಪರದೇಶಿ ಯಾದಪ್ಪ : ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು : ೨೦೦೪ : ಪು–೩

‘ಜಾನಪದರಲ್ಲಿ ಕುತೂಹಲವನ್ನು ಹುಟ್ಟಿಸುವ, ಮನರಂಜನೆ ನೀಡುವ ಭಾಗವೆಂದರೆ ಕಲಾದರ್ಶನ. ಜನಪದ ಕಲೆಗಳು ಎಂದರೆ ಉಳಿಮುಟ್ಟದ ಪ್ರತಿಮೆಗಳಿದ್ದಂತೆ. ಅವುಗಳಲ್ಲಿ ನಯನಾಜೂಕು ಕಡಿಮೆ ಇದ್ದರೂ ಅಂತಸ್ಸತ್ವ ಹಿರಿದಾಗಿದೆ. ಜೀವಂತ ಜನತೆಯ ಉಸಿರಾಗಿ, ತಾಳಕ್ಕೆ ಮೇಳವಾಗಿ ಸಮೃದ್ಧವಾಗಿ ಬೆಳೆದು ಬಂದುದೇ ಜನಪದ ಕಲೆ ಎನಿಸಿಕೊಂಡಿದೆ. ಅನಾದಿಕಾಲದಿಂದಲೂ ಶ್ರೀಸಾಮಾನ್ಯರು ಹಾಡಿ–ಕುಣಿದು, ಕುಣಿದು–ಹಾಡಿ ಆನಂದ ಪಡೆಯುವುದರ ಜೊತೆಗೆ ಜನಮನವನ್ನು ತಣಿಸಲು ಯತ್ನಿಸುತ್ತ ಬಂದಿದ್ದಾರೆ. ಮನವು ಹಿಗ್ಗಿದಾಗ ಹಾಡಿನ ಬುಗ್ಗೆ ಚಿಮ್ಮಿ ಬರುತ್ತದೆ. ಆ ತಾಳಬದ್ಧವಾಗಿ ಹಾಡಿಕೊಂಡರೆ ಮನವು ಹಿಗ್ಗಿ ಹೀರಿಯಕಾಯಿಯಂತಾಗುತ್ತದೆ. ಕೇವಲ ಮನರಂಜನೆ ಕಲೆಯ ಗುರಿಯಾಗಿಲ್ಲ. ಹಿಗ್ಗಿನ ಒಡಲಲ್ಲಿ ಜನತೆಯ ಸಂಸ್ಕೃತಿ ಅರಳಿ ನಿಲ್ಲುವುದನ್ನು ಮರೆಯಬಾರದು. ನಮ್ಮ ಸಾಂಸ್ಕೃತಿಕ ಪರಂಪರೆಯ ತಿರುಳು ಜನಪದ ಸಾಹಿತ್ಯದಲ್ಲಿ ಕಲೆಗಳಲ್ಲಿ ಹುದುಗಿರುವುದನ್ನು ಅರಿಯಬೇಕು. ನಮ್ಮ ಪೂರ್ವಜರ ಶ್ರದ್ಧೆ, ರೀತಿ–ನೀತಿ, ಅನುಭವ ಕಲೆಯಲ್ಲಿ ಹಾಸು ಹೊಕ್ಕಾಗಿ ನಿಂತಿರುವುದುಂಟು’[೯] ಎನ್ನುವ ಎಂ.ಎಸ್. ಸುಂಕಾಪುರ ಅವರ ಮಾತಿನಲ್ಲಿ ಜನಪದ ಕಲೆಯಯನ್ನು ಯಾವ ರೀತಿಯಲ್ಲಿ ಗ್ರಹಿಸಬೇಕು ಎಂಬ ಸಾಮಾನ್ಯವಾದ ತರ್ಕವಿದೆ.

ಇಲ್ಲಿಯ ವಿಷಯಗಳನ್ನು ಪರ್ಯಾಲೋಚಿಸಿದಾಗ ಜನಪದ ಚಿತ್ರಕಲೆಯು ಬದುಕಿನ ಅವಿಭಾಜ್ಯ ಅಂಗವಾಗಿರುವುದು ಕಂಡುಬರುತ್ತದೆ. ಇಲ್ಲಿ ಕಲೆ ಎನ್ನುವ ಕಲ್ಪನೆಯೇ ಇಲ್ಲದ ಕಲೆ ಹುಟ್ಟಿಕೊಂಡಿರುವುದನ್ನು ಗಮನಿಸಬೇಕು. ಯಾಕೆಂದರೆ ತಮಗೆ ತೋಚಿದಂತೆ ಚಿತ್ರಗಳನ್ನು ಅರಳಿಸುವ ಮತ್ತು ಆ ಮೂಲಕ ಜನರ ಗಮನ ಸೆಳೆದು ಖುಷಿ ಪಡುವ ಮಾನವ ಸಹಜ ಗುಣ ಇಲ್ಲಿ ವ್ಯಕ್ತವಾಗುತ್ತದೆ.

‘ಪ್ರಾಚೀನ ಕಾಲದ ಜನಪದ ಚಿತ್ರಕಲೆ ಸ್ವಚ್ಛಂದ ನೆಲೆಯಲ್ಲಿ ಮೈದಾಳಿರುವಂತಹದು. ಆಧುನಿಕ ಕಾಲದ ನಮ್ಮ ನಡುವಿನ ಜನಪದ ಚಿತ್ರಕಲೆ ಸಾಕಷ್ಟು ವಿಸ್ತಾರ ಮತ್ತು ವೈವಿಧ್ಯತೆಯಿಂದ ಕೂಡಿರುವಂತಹದು. ಇದೂ ಕೂಡ ನಿನ್ನೆ ಮೊನ್ನೆಯದೇನೂ ಅಲ್ಲ. ಮೊದಲ ಘಟ್ಟದ ಚಿತ್ರಗಳು ಮಾನವನ ಬೇಟೆಗಾರಿಕೆಯನ್ನು ಹೊತ್ತಿದ್ದರೆ, ನಂತರದಲ್ಲಿ ಕೃಷಿಗೆ ಹೆಚ್ಚಿನ ದೃಷ್ಟಿ ಚೆಲ್ಲಿವೆ. ಈ ಎರಡೂ ಘಟ್ಟಗಳ ಮುಂದಿನ ಹೆಜ್ಜೆಯಲ್ಲಿ ಜನಪದ ಚಿತ್ರಕಲೆ ತುಂಬಾ ವಿಸ್ತಾರವಾಗಿ ಬೆಳೆದಿದೆ. ಮಾನವನ ಊಟೋಪಚಾರಗಳಿಂದ ಹಿಡಿದು ರೂಢಿಗತ ಸಂಪ್ರದಾಯ, ಆಚರಣೆ ಮುಂತಾದ ಒಟ್ಟಾರೆ ಬದುಕಿನಲ್ಲಿ ಚಿತ್ರದೃಷ್ಟಿಯ ಪ್ರೇರಣೆಯಿದೆ. ಪ್ರತಿಯೊಂದು ವಸ್ತುವಿನ ನಿರ್ಮಾಣದ

೯. ಜಾನಪದ ಸಾಹಿತ್ಯ ದರ್ಶನ–೯:ಸಂ–ಹಕಾರಿ ದೇವೇಂದ್ರಕುಮಾರ : ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ : ೧೯೮೮ : ಪು–೧೦

ಹಿಂದುಗಡೆ ಚಿತ್ರಕಲೆಯ ಕಲ್ಪನೆಯಿದೆ. ಹಲವಾರು ನಿರ್ಬಂಧಗಳ ನಡುವೆ ಕಲೆ ಅರಳಿದೆ'[೧೦] ಈ ಮಾತು ಮೇಲಿನ ವ್ಯಾಖ್ಯಾನಕ್ಕೆ ಪೂರಕವಾಗಿ ನಿಲ್ಲುತ್ತದೆ. ಅಂದರೆ ಜನಪದ ಚಿತ್ರಕಲೆ ಎನ್ನುವುದು ಮನುಷ್ಯನ ವಿಕಾಸದೊಂದಿಗೆ ಬೆಳೆದು ಬಂದ ಒಂದು ಅಪೂರ್ವವಾದ ಕಲೆಯಾಗಿದೆ. ಬೇಟೆಯಾಡುವ ಕಾಲದಲ್ಲಿ ಬೇಟೆಯ ಬಗೆಗಿನ ಚಿತ್ರಗಳನ್ನು ಆತ ಬರೆಯುತ್ತಾನೆ. ಅದರ ಹೊರತಾಗಿ ಮುಂದೆ ಆತನ ವಿಚಾರ ಲಹರಿ ಹರಿದಂತಿಲ್ಲ. ಅನಂತರ ಕೃಷಿಯನ್ನು ಆರಂಭ ಮಾಡಿದಾಗ ಕೃಷಿಗೆ ಸಂಬಂಧಿಸಿದ ಚಿತ್ರಗಳನ್ನು ಬಿಡಿಸಲು ಆರಂಭಿಸಿದ. ಇಲ್ಲಿ ಜನಪದ ಚಿತ್ರಕಲೆ ಕಾಲದಿಂದ ಕಾಲಕ್ಕೆ ಬದಲಾಗುತ್ತ ಬಂದಿರುವುದನ್ನು ಗಮನಿಸಬೇಕು. ಈ ಚಿತ್ರಕಲೆಯನ್ನು ಅದನ್ನು ಆತ ಸಂವಹನಕ್ಕೂ ಬಳಸಿಕೊಂಡಿರಬಹುದಾದ ಸಾಧ್ಯತೆಗಳನ್ನು ಅಲ್ಲಗಳೆಯಲಾಗದು. ಆ ಸಂವಹನ ಮುಂದೆ ಮನುಷ್ಯನ ಭಾಷಾಭಿವ್ಯಕ್ತಿಗೆ ಹೇಗೋ ಹಾಗೆಯೇ ಭಾವಾಭಿವ್ಯಕ್ತಿಗೂ ಕಾರಣವಾಯಿತು ಎಂಬುದನ್ನು ಈ ಸಂದರ್ಭದಲ್ಲಿ ಹೇಳಬಹುದು.

ಇದಕ್ಕೆ ಪೂರಕವಾಗಿ '...ಜನಪದ ಕಲೆಯ ಲಕ್ಷಣವೆಂದರೆ ಬದುಕಿನ ಲಕ್ಷಣ, ಪ್ರಕೃತಿಯ ಲಕ್ಷಣವೆಂದೇ ಅರ್ಥ ಎನ್ನುವ ಅಜಿತಕುಮಾರ ಮುಖರ್ಜಿಯವರು 'A Folk art should be distinguished from a high way art both of which, however, can grow at one and the same time. Folk Art is always traditional but all traditional art is not folk art. Innumerable motifs, figures, terra-cottas, drawings etc. either in ... … wood and metal works embroidery and textiles…' ಎಂದು ಬಂಗಾಳದ ಜನಪದ ಕಲೆಗಳನ್ನು ಕುರಿತು ಹೇಳಿದ ಈ ಮಾತು ಕರ್ನಾಟಕದ ಜನಪದ ಕಲೆಗಳಿಗೂ ಅನ್ವಯವಾಗುವಂತಿದೆ' ಎಂಬುದು ಸರಿ. ಜನಪದ ಕಲೆಯು ಸಂಪ್ರದಾಯಬದ್ಧವಾಗಿರುತ್ತದೆ ; ಆದರೆ ಸಂಪ್ರದಾಯಬದ್ಧ ಕಲೆಗಳೆಲ್ಲ ಜನಪದ ಕಲೆಗಳಲ್ಲ ಎನ್ನುವ ಮಾತು ಗಮನ ಸೆಳೆಯುತ್ತದೆ. ಇಲ್ಲಿಯ ಸೂಕ್ಷ್ಮವಾದ ವಿಚಾರವನ್ನು ಮನನ ಮಾಡಿಕೊಳ್ಳಬೇಕು. ಜನಪದ ಕಲೆಗಳು ಸಂಪ್ರದಾಯಬದ್ಧವಾಗಿರುತ್ತವೆ ಎಂಬುದೇನೋ ನಿಜ. ಆದರೆ ಸಂಪ್ರದಾಯಬದ್ಧ ಕಲೆಗಳೆಲ್ಲ ಜನಪದ ಕಲೆಗಳಲ್ಲ ಎನ್ನುವಲ್ಲಿ ಸೂಕ್ಷ್ಮವಾದ ವಿಭಜಕ ಗೆರೆಯೊಂದು ಇರುವುದನ್ನು ಗುರುತಿಸಬೇಕು. ಹೀಗೆ ಗುರುತಿಸಿದಾಗ ಮೂಲ ಜನಪದ ಕಲೆ ಮತ್ತು ಶಿಷ್ಟ ಕಲೆಯನ್ನು ವಿಭಾಗಿಸಿ ಅಧ್ಯಯನ ಮಾಡಲು ಪೂರಕವಾದ ಮಾಹಿತಿಗಳು ತೆರೆದುಕೊಳ್ಳುತ್ತವೆ.

ನಮ್ಮ ಭಾರತದ ಪರಿಸರದಲ್ಲಿ ಜನಪದ ಕಲೆ ಎನ್ನುವುದು ಜನರ ಬದುಕಿನ ಅವಿಭಾಜ್ಯ ಅಂಗವೇ ಆಗಿದೆ. ಹಳ್ಳಿಗಳಲ್ಲಿ ಇಂದಿಗೂ ಜನರು ಹಬ್ಬ ಹರಿದಿನಗಳನ್ನು ಆಚರಿಸುವಾಗ ಇಂತಹ

---

೧೦. ಬತ್ತದ ಸೆಲೆ : ದುರ್ಗಾದಾಸ್ ಕೆ.ಆರ್ : ರಾಜ್ ಪ್ರಕಾಶನ, ಮೈಸೂರು : ೨೦೦೪ : ಪು–೧೦೨–೧೦೩

ಕಲೆಗಳನ್ನು ಅರಳಿಸುತ್ತಾರೆ. ಆದರೆ ಇದನ್ನು ಕಲೆಯೆಂದು ಅವರು ಪರಿಗಣಿಸದೇ ಅದೊಂದು ಧಾರ್ಮಿಕ ಕಾರ್ಯ ಎಂದೇ ಬಗೆಯುತ್ತಾರೆ. 'ಭಾರತದಲ್ಲಿ ಜನಪದ ಕಲೆ ಹಾಗೂ ಕುಶಲಕಲೆ ಜನಜೀವನದ ಅವಿಭಾಜ್ಯ ಅಂಗವಾಗಿ ಬೆಳೆದು ಬಂದಿದೆ. ನಮ್ಮ ಮನೆಗಳಲ್ಲಿ ನಿತ್ಯ ಬಳಸುವ ಸಾಮಗ್ರಿಗಳು, ಹಬ್ಬ ಹುಣ್ಣಿಮೆಗಳಲ್ಲಿ, ಸಡಗರದ ದಿನಗಳಲ್ಲಿ, ಉತ್ಸವ ಹಾಗೂ ವಿಧಿ ವಿಧಾನಗಳಲ್ಲಿ ಬಳಸುವ ವಿಶೇಷ ವಸ್ತುಗಳು ಜಮ್ಮ ಜನರ ಕರಕುಶಲ ಕಲೆಯ ಅಭಿವ್ಯಕ್ತಿ ಮಾಧ್ಯಮಗಳಾಗಿ ನೂರಾರು ಸಾವಿರಾರು ವರ್ಷಗಳಿಂದ ಸಂಸ್ಕೃತಿಯ ಸಂಪ್ರದಾಯ ಬೆಳವಣಿಗೆಯ ಜೊತೆಗೆ ಬೆಳೆದು ಬಂದದ್ದನ್ನು ನಾವು ಗಮನಿಸಬಹುದಾಗಿದೆ. ನಿತ್ಯ ಬಳಕೆಯ ವಾಟಿ, ಲೋಟ, ತಂಬಿಗೆ (ಚರಗಿ), ತಟ್ಟೆ (ಗಂಗಾಳ) ಮುಂತಾದವುಗಳು ಅನೇಕ ಆಕಾರಗಳನ್ನು ಕಂಡಿದ್ದರೂ ಅವು ಪ್ರಯೋಜಕ ಸುಂದರ ರೂಪಗಳನ್ನು ಪಡೆದಿವೆ. ಮಣ್ಣಿನಿಂದ ಲೋಹದವರೆಗೂ ಆಗಿರುವ ಬೆಳವಣಿಗೆಯಲ್ಲಿ ಕಲಾತ್ಮಕತೆಯನ್ನು ನಾವು ಕಾಣುತ್ತೇವೆ.

ನಿತ್ಯ ಬಳಸುವ ಬಟ್ಟೆಗಳು, ಮೈ ಮೇಲೆ ಧರಿಸುವ ಉಡುಪುಗಳಾಗಿರಬಹುದು, ಹಾಸುವ, ಹೊದಿಯುವ ಹಾಗೂ ಗೃಹಾಲಂಕಾರದ ಬಟ್ಟೆಗಳಾಗಿರಬಹುದು, ನೇಯ್ಗೆಯಲ್ಲಿ ಹಾಗೂ ಬಣ್ಣದ ಅಚ್ಚುಗಳಲ್ಲಿ ಬೆರಗುಗೊಳಿಸುವ ಕಲಾಕೌಶಲ್ಯವನ್ನು ನಾವು ನೋಡುತ್ತೇವೆ. ಕರಕುಶಲ ವಸ್ತುಗಳೆಂದರೆ ಹೆಚ್ಚು ಬೆಲೆ ಬಾಳುವ ಕೇವಲ ಶ್ರೀಮಂತರಿಗಾಗಿ ಮಾಡಿದ ಭೋಗದ ವಸ್ತುಗಳು ಎನ್ನುವುದಲ್ಲ. ಕರಕುಶಲ ವಸ್ತುಗಳೆಂದರೆ ಮಾನವನ ಕಲಾಕೌಶಲದಿಂದ ಕೈಯಿಂದಲೇ ಮಾಡಿದ ವಸ್ತುಗಳು ಎಂದಷ್ಟೇ ಹೇಳಬಹುದು. ಈ ವಿವಿಧ ಕರಕುಶಲ ವಸ್ತುಗಳು ಮಾನವನಲ್ಲಿನ ಸಹಜ ಕಲೆಯನ್ನು ಪ್ರದರ್ಶಿಸುವ ಮಾಧ್ಯಮಗಳು ಮಾತ್ರ. ಅವು ಬೆಲೆ ಬಾಳುವ ವಸ್ತುಗಳಿಂದ ಮಾಡಿದಾಗ ಕ್ರಯ ಹೆಚ್ಚಾಗಬಹುದಷ್ಟೆ.[೧೧] ಎನ್ನುವ ಮಾತುಗಳು ಮೇಲಿನ ಹೇಳಿಕೆಗೆ ಪುಷ್ಟಿ ನೀಡುತ್ತವೆ.

ಜನಪದ ಕಲೆಯ ಬಗ್ಗೆ ಹೇಳುವ ಎಚ್.ಎಲ್. ನಾಗೇಗೌಡ ಅವರು, 'ಈ ಕಲೆ ಬಣ್ಣಗಾರಿಕೆಯಾಗಿರಬಹುದು, ಚಿತ್ತಾರವಾಗಿರಬಹುದು, ಕೆತ್ತನೆ ಕೆಲಸವಾಗಿರಬಹುದು, ಶಿಲ್ಪವಾಗಿರಬಹುದು, ಮನೆ ಮಠ, ಗುಡಿ–ಗೋಪುರಗಳ ಅಲಂಕಾರವಾಗಿರಬಹುದು, ದೇವರು ದಿಂಡಿರುಗಳನ್ನು ಅಲಂಕರಿಸುವ ಕಲೆಯಾಗಿರಬಹುದು. ಇವೆಲ್ಲವುಗಳ ಅಭ್ಯಾಸ ಇನ್ನೂ ಆಗಿಯೇ ಇಲ್ಲ. ನಾವು ಹೊಸ ಬಗೆಯ, ಎಲ್ಲಿಯೋ ತಯಾರಾದ ಥಳಕು ಬೆಳಕಿನ ವಸ್ತುಗಳಿಗೆ ಮಾರುಹೋಗಿ ನಮ್ಮದನ್ನು ಕೈ ಬಿಡುತ್ತಿದ್ದೇವೆ. ಆದರೆ ವಿದೇಶಿಯರು ನಮ್ಮ ಕಲೆಯನ್ನು ಮೆಚ್ಚಿ

೧೧. ಚಿತ್ರಕಲಾ ಚಿಂತನೆ : ಪಾಟೀಲ ಶಂಕರ : ಪ್ರಗತಿ ಪ್ರಕಾಶನ, ದಾವಣಗೆರೆ : ೧೯೯೫ : ಪು–೩

ಅವರ ವ್ಯಾಪಾರ ವಹಿವಾಟುಗಳಿಗೆ ಉಪಯೋಗಿಸಿಕೊಳ್ಳುತ್ತಿದ್ದಾರೆ. ನಮ್ಮ ತಾತ್ಸಾರ ಸರಿಯಾದುದಲ್ಲ. ಜನಪದ ಚಿತ್ರಕಲೆಯ ಬಗೆ ಏನು, ಆ ಕಲಾವಿದರು ಯಾರು, ಎಲ್ಲಿದ್ದಾರೆ, ಬಣ್ಣಗಳನ್ನು ತಯಾರಿಸುವ ಬಗೆ ಏನು – ಇವೆಲ್ಲಾ ವಿಷಯಗಳ ಬಗ್ಗೆ ಆಸಕ್ತಿವಹಿಸಬೇಕಾಗಿದೆ'[೧೨] ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಅಂದರೆ ಜನಪದ ಕಲೆಯ ಬಗ್ಗೆ ಹೆಚ್ಚಿನ ಅಧ್ಯಯನಗಳು ನಡೆಯದೇ ಇರುವುದಕ್ಕೆ ಅವರು ಖೇದವನ್ನು ವ್ಯಕ್ತಪಡಿಸಿದ್ದಾರೆ. ಮನೆಯ ಅಲಂಕಾರ ಮಾಡುವುದು, ನೆಲ–ಗೋಡೆಯ ಮೇಲೆ ಚಿತ್ರ ಬರೆಯುವುದು, ಚರ್ಮದ ಮೇಲೆ ಚಿತ್ರ ವಿನ್ಯಾಸ, ತಾಳೆಗರಿ, ರಟ್ಟು, ಕಾಗದ, ಕಡತಗಳ ಮೇಲೆ ಬಿಡಿಸುವ ಚಿತ್ರಗಳು, ದಾರದಿಂದ ಮಾಡುವ ಚಿತ್ರಗಳು ಮೊದಲಾದವುಗಳು ಜನಪದ ಚಿತ್ರಕಲೆಯಲ್ಲಿ ಕಂಡುಬರುತ್ತವೆ. ಇವುಗಳ ಅಧ್ಯಯನ ಕೂಡ ನಡೆಯುವ ಅವಶ್ಯಕತೆ ಇದೆ. ಪ್ರಸ್ತುತ ಮಹಾಪ್ರಬಂಧ ಅಂತಹ ಒಂದು ಪ್ರಯತ್ನ ಮಾಡುವ ನಿಟ್ಟಿನಲ್ಲಿ ಇಟ್ಟ ಹೆಜ್ಜೆಯಾಗಿದೆ.

'ವೈಜ್ಞಾನಿಕ ಯುಗದಲ್ಲಿ ಬದುಕುತ್ತಿರುವ ನಮಗೆ ಜನಪದ ಸಂಸ್ಕೃತಿಯಿಂದುಂಟಾಗುವ ಪ್ರಯೋಜನವೇನು, ನಮ್ಮ ಸಂಸ್ಕೃತಿ ಪರಂಪರೆಯಲ್ಲಿ ಇವೆಲ್ಲಕ್ಕೂ ಯಾವ ಸ್ಥಾನಮಾನ ಸಲ್ಲಬೇಕು; ಇದರಲ್ಲಿ ಸ್ವೀಕಾರ ಯೋಗ್ಯವಾದುದು ಯಾವುದು ; ತ್ಯಾಜ್ಯವಾಗುವಂಥದು ಏನು ; ಇದನ್ನು ವಸ್ತು ಸಂಗ್ರಹಾಲಯಗಳಿಗೆ ಸೇರಿಸಿದರೆ ಸಾಕೆ ಎಂಬಂಥ ಹಲವಾರು ಪ್ರಶ್ನೆಗಳಿಗೆ ಕಾಲವಷ್ಟೆ ಉತ್ತರವನ್ನು ನೀಡಬಲ್ಲದು. ಆದರೆ ಹೀಗೆಂದು ನಾವು ಕೈಕಟ್ಟಿ ಕುಳಿತುಕೊಂಡರೂ ಅರ್ಥವಿಲ್ಲ. ಜನಪದದಿಂದ ನಾಗರಿಕ ಸಮಾಜ ಕಲಿಯಬಹುದಾದ ಅನೇಕ ಮಹತ್ವದ ಸಂಗತಿಗಳಿವೆ ಎಂಬುದನ್ನು ನಿರ್ಲಕ್ಷಿಸುವಂತಾಗಬಾರದು.'[೧೩] ಎಂದು ಎಸ್.ಎಸ್. ಹಿರೇಮಠ ಅವರು ಹೇಳುತ್ತಾರೆ. ಇವರ ಮಾತು ಕೂಡ ಜನಪದ ಕಲೆಗಳನ್ನು ತಾತ್ಸಾರದಿಂದ ನೋಡುವ ಪ್ರವೃತ್ತಿಯ ಬಗೆಗಿನ ಮನೋಸ್ಥಿತಿಯನ್ನೇ ಹೇಳುತ್ತದೆ. ಇಂದು ಹೆಚ್ಚು ಅಧ್ಯಯನಗಳು ಜನಪದ ಕಲೆಗಳ ಬಗ್ಗೆ ನಡೆಯಬೇಕು ಮತ್ತು ಆ ಮೂಲಕ ಭಾರತದ ಸಾಮಾಜಿಕ ಬದುಕಿನ ಚಿತ್ರಣವನ್ನು ಕಂಡುಕೊಳ್ಳಬೇಕು ಎಂಬ ಆಶಯ ಅವರ ಮಾತಿನಲ್ಲಿ ಕಾಣಿಸಿಕೊಳ್ಳುತ್ತದೆ.

ಸಾಂಸ್ಕೃತಿಕ ನಗರಿ ಎಂದೇ ಪ್ರಸಿದ್ಧಿ ಆಗಿರುವ ಧಾರವಾಡ ಜಿಲ್ಲೆಯು ಹಲವಾರು ಪಾರಂಪರಿಕ ಮತ್ತು ಐತಿಹಾಸಿಕ ವಿಷಯಗಳನ್ನು ತನ್ನ ಒಡಲೊಳಗೆ ಇಟ್ಟುಕೊಂಡಿದೆ. ಅವಿಭಜಿತ

---

೧೨. ಉತ್ತರ ಕರ್ನಾಟಕದ ಆಯಗಾರರು : ಸಂ–ವೃಷಭೇಂದ್ರಸ್ವಾಮಿ ಎಸ್.ಎಂ : ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ : ೧೯೮೨ : ಪು–೨೩

೧೩. ಜಾನಪದ ಆನ್ವಯಿಕತೆ : ಸಂ–ತಿಪ್ಪೇಸ್ವಾಮಿ ಜಿ.ಆರ್–ಕೋಡಿರಾಂಪುರ ರಂಗಾರೆಡ್ಡಿ : ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು : ೨೦೦೩ : ಪು–೭೯

ಜಿಲ್ಲೆಯಂತೂ ಸಾಹಿತ್ಯಾಸಕ್ತರಿಗೆ ಮತ್ತು ಸಂಶೋಧನ ಅಧ್ಯಯನಕಾರರಿಗೆ ಒಂದು ಖನಿಯೇ ಆಗಿದೆ. ವಿಭಜನೆಗೊಂಡ ನಂತರದಲ್ಲೂ ಧಾರವಾಡ ಜಿಲ್ಲೆಯ ಪರಂಪರೆ ಹೆಚ್ಚೇನೂ ಮುಕ್ಕಾಗಿಲ್ಲ. ಹೀಗಾಗಿ ಇಂದಿನ ಧಾರವಾಡ ಜಿಲ್ಲೆಯ ವಿಷಯ ಮತ್ತು ವ್ಯಾಪ್ತಿ ಎಣಿಕೆಗೆ ನಿಲುಕದಂತೆ ಚಾಚಿಕೊಂಡಿದೆ. ಎಲ್ಲ ಪ್ರಕಾರಗಳಲ್ಲೂ ಮುಂಚೂಣಿಯಲ್ಲಿ ಇರುವ ಧಾರವಾಡ ಜಿಲ್ಲೆಯು ಜನಪದ ಚಿತ್ರಕಲೆಯಲ್ಲೂ ತನ್ನದೇ ಆದ ಛಾಪನ್ನು ಹೊಂದಿದೆ. ಪಾರಂಪರಿಕ ಚಿತ್ರಕಲೆಯಲ್ಲದೆ ನವ ನಿರ್ಮಾಣದ ಚಿತ್ರಕಲೆ ಕೂಡ ಇಲ್ಲಿ ಮೈದಾಳಿ ನಿಂತಿದೆ. ಆದರೆ ಈ ಕುರಿತು ನಿರೀಕ್ಷಿತ ಪ್ರಮಾಣದಲ್ಲಿ ಅಧ್ಯಯನ ನಡೆದಿಲ್ಲ. ಯಾಕೆಂದರೆ ಜನಪದ ಚಿತ್ರಕಲೆ ತುಂಬ ಸಂಕೀರ್ಣವಾದದ್ದು. ಅಲ್ಲಿಯ ವಿಷಯದ ವ್ಯಾಪ್ತಿ ಪರೀಕ್ಷಿಸಿದಷ್ಟು ವಿಸ್ತಾರಗೊಳ್ಳುತ್ತಲೇ ಸಾಗುತ್ತದೆ. ಅದೊಂದು ರೀತಿಯಲ್ಲಿ ಸಿಕ್ಕು ಇದ್ದ ಹಾಗೆ. ಅದನ್ನು ಬಿಡಿಸಿ ನೋಡುವ ಅಧ್ಯಯನ ಕ್ರಮಗಳು ಸಾಧಿತವಾಗುವ ಎಲ್ಲ ಸಾಧ್ಯತೆಗಳು ಇದ್ದಾಗಲೂ ಪ್ರಯತ್ನಗಳು ಮಾತ್ರ ಅಲ್ಪ ಪ್ರಮಾಣದಲ್ಲಿವೆ ಎಂದು ಹೇಳಬಹುದು. ಈ ನಿಟ್ಟಿನಲ್ಲಿ ಪ್ರಸ್ತುತ ಅಧ್ಯಾಯದಲ್ಲಿ ಅವುಗಳನ್ನು ಹೆಕ್ಕಿ ತೆಗೆದು ಸರಿಯಾದ ವಿವರಣೆ ಮತ್ತು ವಿಶ್ಲೇಷಣೆಗಳೊಂದಿಗೆ ಸಾದರಪಡಿಸಲಾಗಿದೆ. ವಿವಿಧ ಆಕರಗಳ ಮೂಲಕ ಸಂಗ್ರಹಿಸಲಾದ ಮಾಹಿತಿಗಳನ್ನು ಆಧರಿಸಿ ಇಲ್ಲಿ ವಿಷಯವನ್ನು ಪ್ರಸ್ತಾಪಿಸಲಾಗಿದೆ.

## ೩.೨. ಜನಪದ ಚಿತ್ರಕಲೆಯ ವರ್ಗೀಕರಣ :

ಜನಪದ ಚಿತ್ರಕಲೆಯನ್ನು ಕೆಲವು ವಿದ್ವಾಂಸರು ಹಲವು ಬಗೆಯಲ್ಲಿ ವಿಂಗಡನೆ ಮಾಡಿ ಅಧ್ಯಯನ ಮಾಡುವ ಪ್ರಯತ್ನ ಮಾಡಿದ್ದಾರೆ. ಪಿ.ಆರ್. ತಿಪ್ಪೇಸ್ವಾಮಿಯವರು ಈ ಕೆಳಗಿನಂತೆ ವಿಂಗಡಿಸಿದ್ದಾರೆ.[೧೪]

**ಅ. ಜನಪದ ಕಲೆ :**

೧. ಭಿತ್ತಿ ಚಿತ್ರಗಳು (ಹಬ್ಬ ಹರಿದಿನಗಳಲ್ಲಿ ಗೋಡೆಗಳ ಮೇಲೆ ರಚಿತವಾದ)
೨. ರಂಗವಲ್ಲಿ
೩. ಮಡಕೆ, ಕುಡಿಕೆ, ಸಾಧನ ಸಲಕರಣೆಗಳ ಮೇಲಿನ ಚಿತ್ರಗಳು
೪. ತೊಗಲು ಗೊಂಬೆ ಮತ್ತು ಸೂತ್ರದ ಗೊಂಬೆಗಳ ಕಲೆ
೫. ಮುಖವಾಡಗಳು, ಹರಿಗೆ, ಗ್ರಾಮ ದೇವತೆಗಳು
೬. ಯಕ್ಷಗಾನ, ಬಯಲಾಟಗಳು, ಮುಖವರ್ಣಿಕೆಗಳು
೭. ಬಟ್ಟೆ, ಗಾಜು, ಕಾಗದ ಮುಂತಾದವುಗಳ ಮೇಲಿನ ಚಿತ್ರಗಳು

---

೧೪. ಜಾನಪದ ಆನ್ವಯಿಕತೆ : ಸಂ-ತಿಪ್ಪೇಸ್ವಾಮಿ ಜಿ.ಆರ್-ಕೋಡಿರಾಂಪುರ ರಂಗಾರೆಡ್ಡಿ : ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು : ೨೦೦೩ : ಪು-೧೬೧-೧೬೨

**ಆ. ಜನಪದ ಶಿಲ್ಪಕಲೆ :**

ಅ. ವಸ್ತು ವಿಶೇಷಗಳು – ಸಾಧನ ಸಲಕರಣೆ, ಆಯುಧಗಳು, ಉಪಕರಣಗಳು, ಮನೆ ಬಳಕೆ ವಸ್ತುಗಳು (ಆಭರಣಗಳು)

ಆ. ಸೂತ್ರದ ಗೊಂಬೆ, ಯಕ್ಷಗಾನ ವೇಷಭೂಷಣಗಳು ಮತ್ತು ಇತರ ವೇಷಭೂಷಣಗಳು

ಇ. ಊರುಗಳ ವಿನ್ಯಾಸ, ಮನೆಗಳ ವಿನ್ಯಾಸ ಇತ್ಯಾದಿ

ಈ. **ಭಿತ್ತಿ ಚಿತ್ರಗಳು :** ಗೋಡೆಗಳ ಮೇಲೆ ಬಿಡಿಸುವ ಚಿತ್ತಾರಗಳು.

ಇದೇ ಮಾದರಿಯನ್ನು ಇಟ್ಟುಕೊಂಡರೂ ಭಿನ್ನವಾದ ಆಲೋಚನೆಗಳೊಂದಿಗೆ, ಭಿನ್ನ ವಿಚಾರಗಳನ್ನು ಇಟ್ಟುಕೊಂಡು ಡಾ. ಎಸ್.ಸಿ. ಪಾಟೀಲ ಅವರು ಮೂರು ತೆರನಾಗಿ ವರ್ಗೀಕರಣ ಮಾಡಿದ್ದಾರೆ.[೧೫]

೧. **ಸೌಂದರ್ಯಮೂಲ ಜನಪದ ಚಿತ್ರಕಲೆ :** ಇಲ್ಲಿ ಗೃಹಲಂಕಾರದ ಚಿತ್ರವಿನ್ಯಾಸ, ನೆಲಗೋಡೆಯ ಮೇಲಿನ ಚಿತ್ರವಿನ್ಯಾಸ, ಚರ್ಮದ ಮೇಲಿನ ಚಿತ್ರವಿನ್ಯಾಸ, ಹಚ್ಚೆ, ಮದರಂಗಿ, ತಾಳೆಗರಿ, ಕಾಗದ, ಕಡತ, ರಟ್ಟಿನ ಮೇಲಿನ ಚಿತ್ರವಿನ್ಯಾಸ, ನೀಲಿ ಹೊತ್ತಿಗೆ ಮತ್ತು ಗಿಳಿಶಕುನದ ಚಿತ್ರಕಲೆ, ಕೌದಿ ಮೇಲಿನ ಚಿತ್ರಕಲೆ, ಕಸೂತಿ, ನೇಯ್ಗೆಯ ಚಿತ್ರಕಲೆ, ಗಂಜೀಫಾ ಚಿತ್ರಕಲೆ, ಪಗಡೆಯಾಟದ ಚಿತ್ರಕಲೆ, ಹುಲಿಮನಿ ಆಟ, ಚಕಾರಮನಿಯಾಟ, ಕೈಲಾಸಪಟದ ಆಟಗಳ ಚಿತ್ರಕಲೆ, ಗೊಂಬೆಯಾಟದ ಚಿತ್ರಕಲೆ, ಯಕ್ಷಗಾನ, ದೊಡ್ಡಾಟಗಳಲ್ಲಿಯ ಚಿತ್ರಕಲೆಗಳ ಕುರಿತು ವಿವರಣೆ ಇದೆ.

೨. **ಧರ್ಮಮೂಲ ಜನಪದ ಚಿತ್ರಕಲೆ :** ಹಬ್ಬ–ಹರಿದಿನಗಳಲ್ಲಿ ಚಿತ್ರಿಸುವ ಚಿತ್ರವಿನ್ಯಾಸಗಳು, ಗೋಡೆ ಅಲಂಕಾರ, ಬಾಗಿಲು ಅಲಂಕಾರ, ಗುಡಿ ಹುಣ್ಣಿಮೆಯ ಬೆಳದಿಂಗಳ ಚಿತ್ರ, ಸೀಗಿ ಹುಣ್ಣಿಮೆಯ ಬುಟ್ಟಿ ಚಿತ್ರ, ಗೌರಿ ಹುಣ್ಣಿಮೆಯ ಗೌರಿ ಚಿತ್ರ, ಅಷ್ಟಮಿಯ ಕೊಡದ ಚಿತ್ರ, ಮಣ್ಣೆತ್ತಿನ ಅಮವಾಸ್ಯೆಯ ಮೂರ್ತಿಗಳ ಅಲಂಕಾರ, ನಾಗರಪಂಚಮಿಯಲ್ಲಿ ನಾಗಪ್ಪನ ಅಲಂಕಾರ, ಗಣೇಶಚೌತಿಯಲ್ಲಿ ಗಣಪತಿಯ ಅಲಂಕಾರ, ದೀಪಾವಳಿ ಹಬ್ಬದಲ್ಲಿ ಪಾಂಡವರ ಹೆಜ್ಜೆಯ ಚಿತ್ರ, ದೇವಸ್ಥಾನದ ಅಲಂಕಾರ, ದೇವರ ಅಲಂಕಾರ, ತೇರಿನ ಅಲಂಕಾರ, ಮದುವೆ–ಮುಂಜಿಗಳಲ್ಲಿ ಮೂಡಿಸುವ ಚಿತ್ರ, ಹಾಲಕ್ಕಿಗಳ ಹಲಿ ಚಿತ್ರ, ತುಳಸಿ ಕಟ್ಟೆಯ ಅಲಂಕಾರ, ತೊಟ್ಟಿಲು ಸಮಾರಂಭದ ಚಿತ್ರ, ಮದುವೆ ಸಂದರ್ಭದ ಚಿತ್ರಗಾರಿಕೆ, ರಂಗೋಲಿ, ಶೆಟಿಗೆವ್ವನ ಚಿತ್ರ, ತಾಯಿತಗಳ ಮೇಲಿನ ಚಿತ್ರ,

---

೧೫. ನೋಡಿ : ಕರ್ನಾಟಕದ ಜನಪದ ಚಿತ್ರಕಲೆ : ಪಾಟೀಲ ಎಸ್.ಸಿ : ವೀರಶೈವ ಅಧ್ಯಯನ ಸಂಸ್ಥೆ, ಗದಗ : ೧೯೯೩

೩. **ವೃತ್ತಿಮೂಲ ಜನಪದ ಚಿತ್ರಕಲೆ** : ಕಲಘಟಗಿಯ ತೊಟ್ಟಿಲು ಚಿತ್ರಕಾರರು, ಹುಬ್ಬಳ್ಳಿಯ ವಸ್ತ್ರಗಳಿಗೆ ಬಣ್ಣಹಾಕುವ ವೃತ್ತಿಗಾರರು, ಗೋಕಾಕದ ಕಟ್ಟಿಗೆ ವಸ್ತುಗಳ ಚಿತ್ರವೃತ್ತಿಯವರು, ಮುತ್ತಗಿ ದೊಡ್ಡಾಟ ವಸ್ತ್ರಾಲಂಕಾರ ಮಾಡುವವರು, ತೊನಶ್ಯಾಳ ದೇವರ ಮೂರ್ತಿಗಳ ಬಣ್ಣಗಾರರು, ತಾಳಿಕೋಟೆಯ ದುರಗಮುರಿಗಿ, ಗಿಳಿಶಕುನದ ಚಿತ್ರಕಲೆ, ಕಿನ್ನಾಳ ಗೊಂಬೆಗಳ ವೃತ್ತಿಗಾರರು, ಬುಡಬುಡಕಿಯವರ ಚಿತ್ರಕಾರಿಕೆ, ಸುಡುಗಾಡ ಸಿದ್ಧರು, ಕಿಳ್ಳಿಕ್ಯಾತರು, ಮೋಡಿಕಾರರು, ವೇಷಗಾರರು ಸಾರುವ ಅಯ್ಯಗಳು

ಪಿ. ಆರ್. ತಿಪ್ಪೇಸ್ವಾಮಿ ಯವರ ವರ್ಗೀಕರಣ ಒಂದು ರೀತಿಲ್ಲಿ ಸರಿ. ಆದರೆ ಇದನ್ನು ಭಿನ್ನವಾಗಿಯೂ ವರ್ಗೀಕರಿಸಬಹುದು.

ಅಧ್ಯಯನದ ದೃಷ್ಟಿಯಿಂದ ಪ್ರಸ್ತುತ ಅಧ್ಯಯನದಲ್ಲಿ ಮೂರು ಪ್ರಕಾರದಲ್ಲಿ ಜನಪದ ಕಲೆಗಳನ್ನು ವಿಂಗಡಣೆ ಮಾಡಿಕೊಳ್ಳಲಾಗಿದೆ. ಅವುಗಳೆಂದರೆ–

೧. ವೃತ್ತಿಮೂಲ ಜನಪದ ಚಿತ್ರಕಲೆ.

೨. ಹವ್ಯಾಸಿ ಜನಪದ ಚಿತ್ರಕಲೆ.

೩. ಇತರೆ ಜನಪದ ಚಿತ್ರಕಲೆ.

ಹೀಗೆ ವಿಂಗಡಣೆ ಮಾಡಿಕೊಂಡು ಅಧ್ಯಯನವನ್ನು ಸಾಕಾರಗೊಳಿಸಲಾಗಿದೆ.

## ೩.೨.೧. ವೃತ್ತಿ ಮೂಲ ಜನಪದ ಚಿತ್ರಕಲೆ :

ಜನಪದರು ತಮ್ಮ ದೈನಂದಿನ ಬದುಕಿನ ದಾರಿ ಕಂಡುಕೊಳ್ಳಲು ವಿವಿಧ ವೃತ್ತಿಗಳನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಉದಾಹರಣೆಗೆ ಬಡಗಿತನ, ಕಮ್ಮಾರಿಕೆ, ಕುಂಬಾರಿಕೆ, ಮೊದಲಾದ ವೃತ್ತಿಗಳು ಜೀವನೋಪಾಯಕ್ಕೆ ಕಾರಣವಾಗಿವೆ. ಈ ವೃತ್ತಿಗಳನ್ನು ಮಾಡಿಕೊಂಡು ಬದುಕುವ ಸಮುದಾಯಗಳು ಆನಂತರದ ಕಾಲದಲಿ ಜಾತಿಗಳಾಗಿ ರೂಪು ಪಡೆದಿವೆ. ಜಾತಿ ಎಂಬುದು ಈ ವೃತ್ತಿಗೆ ಅನುಗುಣವಾಗಿಯೇ ಬಂದಿದೆ ಎಂದು ಕೆಲವರು ಹೇಳುತ್ತಾರೆ. ಭಾರತದಲ್ಲಿ ಜಾತಿ ವ್ಯವಸ್ಥೆ ತುಂಬ ಆಳವಾಗಿ ಬೇರು ಬಿಟ್ಟಿದ್ದು, ಆಯಾ ವೃತ್ತಿಗೆ ಅನುಗುಣವಾಗಿ ಜಾತಿಯನ್ನು ನಿರ್ಧರಿಸಿಕೊಂಡು ಬರಲಾಗಿದೆ ಅಥವಾ ಆಯಾ ವೃತ್ತಿಯವರನ್ನು ಒಂದು ಜಾತಿಯನ್ನಾಗಿ ಗುರುತಿಸಲಾಗುತ್ತದೆ. ಇದರಲ್ಲಿ ಕಮ್ಮಾರಿಕೆ, ಚಿಮ್ಮಾರಿಕೆ, ಕುಂಬಾರಿಕೆ, ಬಡಿಗತನ, ಚಿನಿವಾರಿಕೆ ಮೊದಲಾದ ಚಿತ್ರಕಲೆಗಳು ಬರುತ್ತವೆ. ಸಧ್ಯ ಈ ವೃತ್ತಿಗಳು ಜಾತಿಗಳನ್ನು ಹೊರತುಪಡಿಸಿಯೂ ನಡೆಯುತ್ತವೆ. ಆದರೆ ವೃತ್ತಿಯನ್ನು ಕಂಡುಕೊಂಡರೆ ಆಯಾ ಜಾತಿಗಳೇ ಕಣ್ಣೆದುರಿಗೆ ಬಂದು

ನಿಲ್ಲುತ್ತವೆ. ವೃತ್ತಿಮೂಲ ಜನಪದ ಕಲೆಗಳ ಸ್ವರೂಪವನ್ನು ನೋಡಿದಾಗ ವೃತ್ತಿಯಲ್ಲಿಯೇ ಕಾಲ ಕಾಲಕ್ಕೆ ಬದಲಾವಣೆಗಳು ಕಾಣಿಸಿಕೊಂಡಿವೆ. ಇದಕ್ಕೆ ಮಾನವನ ಸೃಷ್ಟಿಶೀಲ ಮನೋಧರ್ಮವೇ ಕಾರಣವಾಗಿದೆ.

**ಬಡಿಗತನ :** ಕಟ್ಟಿಗೆಯಿಂದ ವಿವಿಧ ನಮೂನೆಯ ವಸ್ತುಗಳನ್ನು ತಯಾರಿಸುವವರನ್ನು ಬಡಿಗ ಎನ್ನುತ್ತಾರೆ. ಇದೀಗ ಇದು ಜಾತಿವಾಚಕವಾಗಿಯೂ ಪ್ರಯೋಗಿಸಲ್ಪಡುತ್ತಿದೆ. ಆದರೆ ನಿಜವಾಗಿಯೂ ಬಡಿಗತನವನ್ನು ವೃತ್ತಿಮೂಲವನ್ನಾಗಿ ಮಾಡಿಕೊಂಡು ಬದುಕು ಸಾಗಿಸಿದವರು ಒಂದೇ ಜಾತಿಗೆ ಸೀಮಿತವಾದವರಲ್ಲ ಎಂಬುದನ್ನು ನಾವು ತಿಳಿದುಕೊಳ್ಳಬೇಕು.

'ಬಡಗಿ–ಬಡಿಗಿ–ಬಡಿಗಾರ–ಬಡಿಗೇರ–ಬಡಿಗ್ಯಾರ ಎಂಬ ಅಚ್ಚಕನ್ನಡದ ಮಾತು ಸಂಸ್ಕೃತದ ವರ್ಧ (=ಕತ್ತರಿಸು, ಕಡಿ), ವರ್ಧಕಿ>ವದ್ದಕಿ>ಬಡ್ಡಕಿ(ಗಿ) ಮುಂತಾಗಿ ಬೆಳೆದು ಬಂದಿರಬಹುದೆಂಬುದನ್ನು ಭಾಷಾಶಾಸ್ತ್ರದ ದೃಷ್ಟಿಯಿಂದ ಸ್ಥಾಪಿಸಲೆತ್ನಿಸಿದರೂ ಜನಬಳಕೆಯ ಹಾಗೂ ಚಾರಿತ್ರಿಕ ಪ್ರಯೋಗಗಳನ್ನು ಗಮನಿಸಿದರೆ ಬಡಗಿ–ಬಡಿಗಿ [ಬಡಿ+ಕಿ(ಗಿ)] ಅಚ್ಚ ಕನ್ನಡವೆಂದು ತೋರುತ್ತದೆ. ಅದು ಸಂಸ್ಕೃತಕ್ಕೆ ಭಾಷಾಂತರವಾಗುವಾಗ ವರ್ಧಕಿ ಆಗಿರಬಹುದು ಅಥವಾ ಈ ಎರಡೂ ಸ್ವತಂತ್ರವಾಗಿಯೂ ರೂಪಿತವಾಗಿರುವ ಸಾಧ್ಯತೆಗಳಿವೆ ; ಅರ್ಥ ಒಂದೇ ಆದುದರಿಂದ ಈ ಎರಡೂ ಶಬ್ದಗಳ ಸಮೀಕರಣ ಪ್ರಯತ್ನ ನಡೆದಿರಬೇಕು. ಹೀಗೆಯೇ ಕಮ್ಮಾರ, ಕುಂಬಾರ, ಸಮಗಾರ ಮುಂತಾದ ಶಬ್ದಗಳಿಗೂ ಈ ಮಾತನ್ನು ಅನ್ವಯಿಸಬಹುದು'[೧೬] ಎಂಬುದನ್ನು ತಿಳಿದುಕೊಂಡಾಗ ಬಡಿಗತನ ಅದು ಕನ್ನಡದ್ದೇ ಆದ ಪದವಾಗಿದ್ದು, ಬಳಕೆಯಲ್ಲಿ ಬಂದಿದೆ. ಧಾರವಾಡ ಜಿಲ್ಲೆಯಲ್ಲಿ ಈ ಬಡಿಗತನ ಮೊದಲಿನಿಂದಲೂ ಹೆಸರುವಾಸಿಯಾಗಿದೆ. ಜಿಲ್ಲೆಯ ಹೊಸೂರ ಗ್ರಾಮದ ಕ್ರಿ.ಶ. ೧೧೮೬ ರ ಶಾಸನದಲ್ಲಿ ಬಡಗಿಯನ್ನು ಕುರಿತ ದಾಖಲೆ ಕಂಡುಬರುತ್ತದೆ.

'ಬಡಗಿ ಕಲೋಜ ಮೋರಕೇಶ್ವರ ದೇವರ ತೋಟಕೆಯ್ಯಿ ಮನೆಯ ಗೆಯ್ದ ಕೂಲಿಯನೀತುಂಟನಿತುಮಂ ದೇವರ ನಿವೇದ್ಯಕ್ಕೊಮ್ಮಾನ ಅಕ್ಕಿಯ ನಡೆವಂತಾಗಿ ತನ್ನ ಪುತ್ರ ಪೌತ್ರದಾದಿಯಾಗಿ ... ... ಕೊಟ್ಟಯಿಲ್ಲಿ ಬಡಗಿತನಕ್ಕಾರು ನಿಂದವರ ಹಿಟ್ಟು ಕಾಱಿ ಬಡಗಿ ಕಲೋಜ ಬಿಟ್ಟ ಧರ್ಮಮಂ ಏಳುನೂರ್ವರುಂ ಪ್ರಜೆ ಮಹಾಬಳ ಗಾವುಂಡನುಂ ಪ್ರತಿಪಾಲಿಸುವನು'[೧೭]

---

೧೬. ಉತ್ತರ ಕರ್ನಾಟಕದ ಆಯಗಾರರು : ಸಂ–ವೃಷಭೇಂದ್ರಸ್ವಾಮಿ ಎಸ್.ಎಂ : ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ : ೧೯೮೨ : ಪು–೧೫೬

೧೭. ಉಲ್ಲೇಖ : ಉತ್ತರ ಕರ್ನಾಟಕದ ಆಯಗಾರರು : ಸಂ–ವೃಷಭೇಂದ್ರಸ್ವಾಮಿ ಎಸ್.ಎಂ : ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ : ೧೯೮೨ : ಪು–೧೫೭

ಅಂದರೆ ಬಡಗಿ ಕಲೋಜನು ಬಡಗಿತನವನ್ನು ಮಾಡಿಕೊಂಡ ಸಂಗತಿ ಜಿಲ್ಲೆಯಲ್ಲಿ ಹನ್ನೆರಡನೇ ಶತಮಾನದಲ್ಲಿಯೇ ದೊರೆಯುತ್ತದೆ. ಅದಕ್ಕಿಂತಲೂ ಮೊದಲು 'ಕ್ರಿ.ಶ. ೧೧೩೫ ರ ಧಾರವಾಡ ಜಿಲ್ಲೆಯ ಚಿಕ್ಕಹಂದಿಗೋಳ ಗ್ರಾಮದ ಶಿಲಾಶಾಸನವನ್ನು ಬರೆದವನು ಹಿಟ್ಟಿನ ಸೇನಬೋವ. ಬಡಗಿ, ಕಮ್ಮಾರ, ಅಕ್ಕಸಾಲೆ, ಸೇನಬೋವ, ತಲವಾರಿ ಮುಂತಾದವರಿಗೆ ಹಿಟ್ಟಿನ ಹಾಗೂ ಹಿಟ್ಟುಕಾಜಿ ಎಂಬ ಹಿಟ್ಟು ಪದದ ವಿಶೇಷಣ ರೂಪಗಳನ್ನು ಬಳಸಲಾಗುತ್ತಿದ್ದಿತ್ತೆಂದು ತಿಳಿದುಬರುತ್ತದೆ'[೧೮] ಎಂದು ಡಾ. ಎಸ್.ಎಂ. ವೇಷಭೇಂದ್ರಸ್ವಾಮಿ ಹೇಳುತ್ತಾರೆ. ಇವೆಲ್ಲವನ್ನು ಅರಿತುಕೊಂಡಾಗ ಬಡಗಿತನವು ಜಿಲ್ಲೆಯಲ್ಲಿ ತುಂಬ ಪ್ರಾಚೀನ ಕಾಲದಿಂದಲೂ ಪ್ರಚಲಿತದಲ್ಲಿ ಇತ್ತು ಎಂಬುದು ತಿಳಿದು ಬರುತ್ತದೆ.

ಇಂದಿಗೂ 'ಕಲಘಟಗಿಯ ಸಾಹುಕಾರ ಮನೆತನದ ಜನರು ಕಲಾವಿದರ ಅಪೂರ್ವ ಕುಸುರಿ ಕೆತ್ತನೆ ಹಾಗೂ ವಿಶಿಷ್ಟವಾಗಿ ಅಲಂಕರಿಸುವ ಈ ಬಗೆಯ ಚಿತ್ರಕಲೆಗಾರಿಕೆ ನಾಡಿನ ಬೇರಾವ ಕಡೆಯೂ ರೂಪುಗೊಳ್ಳುತ್ತಿಲ್ಲ. ಹೀಗಾಗಿಯೇ ಕಲಘಟಗಿಯ ತೊಟ್ಟಿಲುಗಳಿಗೆ ಒಂದು ವಿಶಿಷ್ಟ ಸ್ಥಾನ ಲಭಿಸಿದೆ. ಇವರು ದೇವಿಕೊಪ್ಪ, ಮುಂಡಗೋಡ, ಕಿರವತ್ತಿ, ಕಲಕೇರಿ ಮುಂತಾದ ಕಡೆಗೆ ಇರುವ ಸರಕಾರಿ ಡಿಪೋದಿಂದ ಸಾಗವನಿ ಕಟ್ಟಿಗೆಯನ್ನು ಖರೀದಿಸುತ್ತಾರೆ ಮತ್ತು ತಮಗೆ ಬೇಕಾದ ವಿನ್ಯಾಸಕ್ಕಾಗಿ ಕಟ್ಟಿಗೆಯನ್ನು ಸಿದ್ಧಗೊಳಿಸಿಕೊಳ್ಳುವ ಕ್ರಮ ಒಂದಾದರೆ ಅದಕ್ಕೆ ಶೇಡಿ ಮಣ್ಣಿನ್ನು ಕುಟ್ಟಿ ಪುಡಿ ಮಾಡಿ ಸೋಸಿ ಉಂಡಿ ಕಟ್ಟುತ್ತಾರೆ. ನೆನೆ ಹಾಕಿದ ಹುಣಸೆಯ ಬೀಜವನ್ನು ರುಬ್ಬಿ, ಕುದಿಸಿ, ಇಕ್ಕೆ ಸೇಡಿಮಣ್ಣಿನೊಂದಿಗೆ ಕೂಡಿಸಿದ ಮಿಶ್ರಣವನ್ನು ತೊಟ್ಟಿಲ ಕಟ್ಟಿಗೆಗೆ ಹಚ್ಚಿ ಬಿಸಿಲಿನಲ್ಲಿ ಒಣಗಿಸುತ್ತಾರೆ. ನಂತರ ಅರಗಿನ ರಾಳದ ಬಣ್ಣ ಲೇಪಿಸುತ್ತಾರೆ. ಅರಗು ರಾಳಕ್ಕೆ ವಿವಿಧ ರೀತಿಯ ವನಸ್ಪತಿಗಳನ್ನು ಸೇರಿಸಿ ಬಣ್ಣಗಳನ್ನು ತಯಾರಿಸುತ್ತಾರೆ. ತೊಟ್ಟಿಲಿನ ದುಂಡು ಕಟ್ಟಿಗೆಗಳಿಗೆ ಈ ಅರಗಿನ ಬಣ್ಣಗಳಿಂದ ಬಣ್ಣ ಕೊಡುತ್ತಾರೆ. ಗಂಡಸರು ಚಿತ್ರ ಬಿಡಿಸಿದರೆ ಹೆಂಗಸರು ಆ ಚಿತ್ರಗಳಲ್ಲಿ ಬಣ್ಣ ತುಂಬುತ್ತಾರೆ. ಕುಸುರಿ ಕೆಲಸವನ್ನು ಗಂಡಸರು ಮಾತ್ರ ಮಾಡುತ್ತಾರೆ. ಹೀಗೆ ಕುಟುಂಬವೇ ಈ ಕೆಲಸದಲ್ಲಿ ತೊಡಗಿಸಿಕೊಳ್ಳುತ್ತದೆ.

ತೊಟ್ಟಿಲುಗಳಿಗೆ ಮೊಳೆ ಹೊಡೆಯದೇ ಹಾಗೆಯೇ ಜೋಡಿಸುವುದು ಇಲ್ಲಿಯ ವೈಶಿಷ್ಟ್ಯ. ತೊಟ್ಟಿಲಿನ ಮೇಲೆ ರಾಮಾಯಣ, ಮಹಾಭಾರತದ ದೃಶ್ಯಾವಳಿ, ಗ್ರಾಮ ದೇವತೆಗಳು, ಲಕ್ಷ್ಮಿ, ಸರಸ್ವತಿ, ನಂದಿ, ಮಕ್ಕಾ-ಮಸೀದಿ, ಏಸುಕ್ರಿಸ್ತ – ಹೀಗೆ ವಿವಿಧ ಧರ್ಮದವರು ಹೇಳುವ

---

೧೮. ಉತ್ತರ ಕರ್ನಾಟಕದ ಆಯಗಾರರು : ಸಂ-ವೃಷಭೇಂದ್ರಸ್ವಾಮಿ ಎಸ್.ಎಂ : ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ : ೧೯೮೭ : ಪು-೧೫೭

ಚಿತ್ರಗಳನ್ನು ತೊಟ್ಟಿಲಲ್ಲಿ ಚಿತ್ರಿಸುತ್ತಾರೆ. ಅಲ್ಲದೆ ಸುಂದರವಾದ ಸುಳುವುಗಳು, ವಿವಿಧ ವರ್ಣಗಳ ಸಮುಚ್ಚಯಗಳಿಂದ ತುಂಬಾ ಕಲಾತ್ಮಕವಾಗಿ ತೊಟ್ಟಿಲುಗಳು ಗಮನ ಸೆಳೆಯುತ್ತವೆ’[೧೯]

ಹೀಗೆ ವಿಶೇಷವಾಗಿ ತಯಾರಿಸಲ್ಪಡುತ್ತಿದ್ದ ತೊಟ್ಟಿಲುಗಳಿಗೆ ತುಂಬ ಬೇಡಿಕೆ ಇತ್ತು. ಆರರಿಂದ ಎಂಟು ಇಂಚಿನ ತೊಟ್ಟಿಲು ಮಾದರಿಗಳನ್ನು ಮಾಡಿ, ಗಾಜಿನ ಪೆಟ್ಟಿಗೆಯಲ್ಲಿ ಇಟ್ಟು ಅಲಂಕಾರಿಕ ವಸ್ತವನ್ನಾಗಿಸುವ ಪ್ರಯತ್ನ ಕೂಡ ಇಲ್ಲಿ ಕಂಡುಬರುತ್ತದೆ. ಗೋವಾ, ಮಹಾರಾಷ್ಟ್ರ, ಆಂಧ್ರಪ್ರದೇಶ ಮೊದಲಾದ ಭಾರತದ ರಾಜ್ಯಗಳಲ್ಲದೇ ದುಬೈ, ಅಮೇರಿಕಾ, ಫ್ರಾನ್ಸ್ ಮೊದಲಾದ ದೇಶಗಳಿಗೂ ತೊಟ್ಟಿಲುಗಳನ್ನು ರವಾನಿಸಿದ ಕೀರ್ತಿ ಇಲ್ಲಿಯ ತೊಟ್ಟಿಲು ತಯಾರಿಕರಿಗೆ ದೊರೆಯುತ್ತದೆ. ರಾಸಾಯನಿಕ ಬಣ್ಣಗಳನ್ನು ಬಳಸದೇ ಇರುವುದರಿಂದ ಎಷ್ಟು ವರ್ಷ ಕಳೆದರೂ ಈ ತೊಟ್ಟಿಲುಗಳ ಬಣ್ಣ ಮಾಸುವುದಿಲ್ಲ.

ಮೊದಲು ಕಲಘಟಗಿಯ ಐದಾರು ಮನೆತನಗಳು ಈ ತೊಟ್ಟಿಲು ತಯಾರಿಕೆಯನ್ನು ಮಾಡುತ್ತಿದ್ದವು. ಆದರೆ ಆಧುನಿಕತೆಯಲ್ಲಿ ಭರಾಟೆ ಮತ್ತು ತಗ್ಗಿದ ಬೇಡಿಕೆಗಳಿಂದಾಗಿ ಈಗ ಹೆಚ್ಚಿನವರು ಈ ಉದ್ಯೋಗವನ್ನು ಬಿಟ್ಟು ಬೇರೆ ಕ್ಷೇತ್ರವನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಸಧ್ಯ ಸಾವುಕಾರ ಕುಟುಂಬದವರು ಮಾತ್ರ ಈ ಉದ್ಯೋಗವನ್ನು ಉಳಿಸಿಕೊಂಡು, ಬೆಳೆಸಿಕೊಂಡು ಬರುತ್ತಿದ್ದಾರೆ. ತೊಟ್ಟಿಲ ತಯಾರಿಕೆಯಲ್ಲಿ ಇನ್ನೂ ಹೊಸ ಹೊಸ ಪ್ರಯೋಗಗಳನ್ನು ಮಾಡಲು ಇಳಿವಯಸ್ಸಿನಲ್ಲೂ ತೊಡಗಿಕೊಂಡಿರುವ ಲಕ್ಷ್ಮಣ ಸಾವುಕಾರ ಮತ್ತು ಗಂಗಾಧರ ಸಾವುಕಾರ ಅವರ ಶ್ರಮ ಮೆಚ್ಚುವಂಥದ್ದು.

ಕೇವಲ ತೊಟ್ಟಿಲುಗಳನ್ನು ಮಾತ್ರ ನಿರ್ಮಾಣ ಮಾಡದೇ ಕಲಾತ್ಮಕವಾದ ಟೀಪಾಯಿಗಳು, ದಿವಾನ್‌ಗಳು, ಕುರ್ಚಿಗಳು, ತೂಗುಯ್ಯಾಲೆ, ದೇವರ ಪಲ್ಲಕ್ಕಿ, ಕೆಲವು ದೇವರ ಮೂರ್ತಿಗಳನ್ನೂ ಕಲಘಟಗಿಯ ಸಾವುಕಾರ ಮನೆತನದವರು ನಿರ್ಮಾಣ ಮಾಡುತ್ತಾರೆ.

ಯಮನೂರಿನ ಕುಸುರಿಕಲೆಯ ಬಾಗಿಲವಾಡಗಳು ಇಂದಿಗೂ ಹೆಸರುವಾಸಿಯಾಗಿವೆ. ನಾಗರಹಾವು, ಗಿಳಿ, ನವಿಲು, ಎಲೆ–ಬಳ್ಳಿ, ಹುಲಿ–ಸಿಂಹ, ಶಿವ–ಪಾರ್ವತಿ, ನಂದಿ, ಗಣೇಶ, ಲಕ್ಷ್ಮಿ, ಸರಸ್ವತಿ, ಬಸವೇಶ್ವರ, ಗಾಂಧಿ, ಬುದ್ಧ, ಅಂಬೇಡ್ಕರ್ ಮೊದಲಾದ ಪ್ರಾಕೃತಿಕ, ಪೌರಾಣಿಕ ಮತ್ತು ಐತಿಹಾಸಿಕ ವಸ್ತು ಮತ್ತು ವ್ಯಕ್ತಿಗಳನ್ನು ಈ ಬಾಗಿಲವಾಡಗಳ ಮೇಲೆ ಸೂಕ್ಷ್ಮವಾಗಿ ಕೆತ್ತಲಾಗುತ್ತದೆ.[೨೦]

---

೧೯. ಜನಪದ ಕಲೆ : ಪಾಟೀಲ ಎಸ್.ಸಿ : ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು : ೧೯೯೫ : ಪು–೨೨–೨೩

೨೦. ವಕ್ತೃ : ೧.ಮೋನಪ್ಪ ಬಡಿಗೇರ : ವಯಸ್ಸು–೫೬ : ಯಮನೂರು : ೩೦–೦೭–೨೦೧೬
೨.ಸಾದಿಕ್ ಅಹ್ಮದ್ ದಾ. ನಾಯ್ಕರ್ : ವಯಸ್ಸು–೫೪ : ಯಮನೂರು : ೩೦–೦೭–೨೦೧೬

ಯಂತ್ರಗಳಿಂದ ತಯಾರಾಗುವ ಬಾಗಿಲವಾಡದ ಚಿತ್ರಗಳಿಗಿಂತ ಕೈಯಿಂದ ಬಿಡಿಸಿದ ಚೌಕಟ್ಟುಗಳು ತುಂಬ ಸೂಕ್ಷ್ಮವಾಗಿದ್ದು ಹೆಚ್ಚು ಬೇಡಿಕೆಯನ್ನು ಉಳಿಸಿಕೊಂಡಿವೆ.

ಒಕ್ಕಲುತನಕ್ಕೆ ಉಪಯೋಗವಾಗುವ ಕೂರಿಗೆಗಳನ್ನು ಛಬ್ಬಿಯಲ್ಲಿ ತುಂಬ ಅಚ್ಚುಕಟ್ಟಾಗಿ ರೈತಸ್ನೇಹಿಯಾಗಿ ಮಾಡಲಾಗುತ್ತಿತ್ತು. ಮೊದ ಮೊದಲು ಕಟ್ಟಿಗೆಗಳಲ್ಲಿ ತಯಾರಾಗುತ್ತಿದ್ದ ಕೂರಿಗೆಗಳು ಈಗ ರೈತರ ಬೇಡಿಕೆಯ ಫಲವಾಗಿ ತುಕ್ಕು ಹಿಡಿಯದ, ಬಹುಕಾಲ ಬಾಳಿಕೆ ಬರುವ ಲೋಹಗಳಿಂದ ನಿರ್ಮಾಣ ಮಾಡಲಾಗುತ್ತದೆ. ಬಡಿಗತನಕ್ಕೆ ಇಲ್ಲಿ ಆಧುನಿಕ ಸ್ಪರ್ಷ ಸಿಕ್ಕಿರುವುದು ಕಂಡುಬರುತ್ತದೆ. ಕೂರಿಗೆಗಳ ಜೊತೆಗೆ ರೆಂಟೆ, ಕುಂಟೆ, ಎಡೆಕುಂಟೆ, ಹಗುರವಾದ ಚಕ್ಕಡಿ, ಚಕ್ಕಡಿ ಗಾಲಿಗಳನ್ನೂ ಇಲ್ಲಿ ತಯಾರಿಸಲಾಗುತ್ತಿದ್ದು, ಅದಕ್ಕಾಗಿಯೇ 'ಕಾಳಿಕಾ ಇಂಡಸ್ಟ್ರೀಸ್' ಹುಟ್ಟಿಕೊಂಡಿದೆ ಎಂದು ಛಬ್ಬಿಯ ಐವತ್ಮೂರು ವರ್ಷ ವಯಸ್ಸಿನ ಡಿ.ಎಸ್. ಬಡಿಗೇರ ಅವರು ಹೇಳುತ್ತಾರೆ.[೨೧]

ಅಮ್ಮಿನಭಾವಿಯಲ್ಲಿ ಇರುವ ದ್ಯಾಮವ್ವನ ಗುಡಿಯಲ್ಲಿ ದ್ಯಾಮವ್ವ ದೇವತೆಯ ಜೊತೆಗೆ ದುರುಗಮ್ಮನ ಮೂರ್ತಿಯೂ ಕಟ್ಟಿಗೆಯಿಂದ ಮಾಡಲಾಗಿದೆ. ದ್ಯಾಮವ್ವನ ಮೂರ್ತಿಗೆ ಕೆಂಪು ಬಣ್ಣ ಹಾಕಲಾಗುತ್ತಿದ್ದರೆ, ದುರುಗಮ್ಮನ ಮೂರ್ತಿಗೆ ಹಸಿರು ಬಣ್ಣವನ್ನು ಬಳೆಯಲಾಗುತ್ತದೆ. ಈ ಮೂರ್ತಿಗಳ ತಯಾರಿಕೆಯಲ್ಲಿ ಬಡಿಗತನ ಮಾಡುವವರು ಕೈಚಳಕ ಮೆರೆದಿದ್ದಾರೆ. ಎರಡೂ ಮೂರ್ತಿಗಳ ಹಿಂದೆ ಪ್ರಭಾವಳಿಯಿದ್ದು, ಅಲ್ಲಿ ದೇವಿಯ ಹಲವು ಅವತಾರಗಳ ಜೊತೆಗೆ ರಕ್ಕಸರು, ದೇವತೆಗಳು, ಪ್ರಾಣಿ–ಪಕ್ಷಿಗಳ ಚಿತ್ರಗಳನ್ನು ಸೂಕ್ಷ್ಮವಾಗಿ ಕೆತ್ತನೆ ಮಾಡಲಾಗಿದೆ. ಸುಮಾರು ಮೂವತ್ತು ವರ್ಷಗಳಿಗೊಮ್ಮೆ ಈ ಮೂರ್ತಿಗಳಿಗೆ ಬಣ್ಣ ಬಳೆಯಲಾಗುತ್ತದೆ ಎಂದು ದ್ಯಾಮವ್ವನ ಗುಡಿಯ ಪೂಜಾರಿಯೂ ಆಗಿರುವ ೭೫ ವರ್ಷ ವಯಸ್ಸಿನ ಪರಮೇಶ್ವರ ಬಡಿಗೇರ ಅವರು ಹೇಳುತ್ತಾರೆ.[೨೨]

ಕಟ್ಟಿಗೆಯಿಂದ ವಿಭೂತಿ ಭರಣಿ, ರಥದಂತಹ ಬಂಡಿಯನ್ನು ಮಾಡಿ ಅದರಲ್ಲಿ ವಿಭೂತಿಯ ಉಂಡೆಯನ್ನು ಇಡುತ್ತಿದ್ದರು. ಊಟಕ್ಕೆ ಕುಳಿತ ಪಂಥಿಯಲ್ಲಿದ್ದ ಎಲ್ಲರೂ ಹಣೆಗೆ ವಿಭೂತಿ ಧರಿಸುತ್ತಿದ್ದುದರಿಂದ ಅದು ಇಡೀ ಪಂಥಿಯಲ್ಲಿ ಬಳಕೆಯಾಗುತ್ತಿತ್ತು.

ಕೃಷಿಯಲ್ಲಿ ಬಳಸುವ ನೊಗವನ್ನು ತಯಾರಿಸುವಲ್ಲಿ ಬಡಿಗತನದ ಕೈಚಳಕ ಮೆಚ್ಚುವಂಥದ್ದು. ನೊಗದ ಮೇಲೆ ನಂದಿ, ಈಶ್ವರ, ತ್ರಿಶೂಲ, ಗಣಪ ಮುಂತಾದ

---

೨೧. ಕ್ಷೇತ್ರಕಾರ್ಯ : ೧೬–೦೪–೨೦೧೪
೨೨. ಕ್ಷೇತ್ರಕಾರ್ಯ : ೦೩–೦೭–೨೦೧೨

ಚಿತ್ರಗಳಿಗಳೊಂದಿಗೆ ಗೆರೆ, ಚೌಕ, ತ್ರಿಕೋನ, ವೃತ್ತ ಇತ್ಯಾದಿ ಆಕೃತಿಗಳನ್ನು ಕೆತ್ತುತ್ತಿದ್ದರು. ಈಳಿಗೆ ಮಣೆ, ಚೊಂಗೆ ಮಣೆ, ಶ್ಯಾವಿಗೆ ಮಣೆ, ಊಟದ ಮಣೆ, ಕುರ್ಚಿ, ಪಲ್ಲಂಗ ಇಂಥ ಹಲವಾರು ಮರದ(ಕಟ್ಟಿಗೆ) ವಸ್ತುಗಳು ಇಂದು ಗ್ರಾಮೀಣ ಪ್ರದೇಶದಲ್ಲೂ ಕಾಣಸಿಗುವುದು ವಿರಳ. ಇವುಗಳನ್ನು ಜಾನಪದ ಲೋಕ, ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಜಾನಪದ ವಸ್ತು ಸಂಗ್ರಹಾಲಯ ಮತ್ತು ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ವಸ್ತು ಸಂಗ್ರಹಾಲಯಗಳಲ್ಲಿ ಕಾಣಬಹುದಾಗಿದೆ.

ಗ್ರಾಮೀಣ ಪ್ರದೇಶಗಳಲ್ಲಿ ಇದ್ದ ಬಡಿಗತನವು ಇಂದು ನಶಿಸುತ್ತ ಹೋಗುತ್ತಿದೆ. ಅದಕ್ಕೆ ಬದಲಾಗಿ ಅದೊಂದು ಉದ್ದಿಮೆಯಾಗಿ ಮಾಲೀಕ ಮತ್ತು ಕಾರ್ಮಿಕ ಎನ್ನುವ ನಿಟ್ಟಿನಲ್ಲಿ ಅದನ್ನು ಇಂದು ನಡೆಯಿಸಿಕೊಂಡು ಹೋಗಲಾಗುತ್ತಿದೆ. ಆದರೆ ಮೊದಲಿನ ಬಡಿಗತನದಲ್ಲಿ ಇದ್ದ ಜಾನಪದೀಯ ಅಂಶಗಳು ಮರೆಯಾಗುತ್ತಿವೆ ಎಂಬುದೇ ಖೇದಕರ ಸಂಗತಿ. ಆಗ ಬಡಿಗತನ ಮಾಡುವವರು ತಾವು ಮಾಡುವ ಕಾಯಕದಲ್ಲಿ ಕೈಲಾಸವನ್ನು ಕಾಣುತ್ತಿದ್ದರು. ಹೀಗಾಗಿ ಅವರ ಕಾರ್ಯದಲ್ಲಿ ಜನಪದ ಚಿತ್ರಕಲೆ ಉತ್ತಮವಾಗಿ ಮೂಡಿಬರಲು ಕಾರಣವಾಗಿದೆ. ಆದರೆ ಇಂದು ಯಾಂತ್ರೀಕೃತವಾದ ಈ ವೃತ್ತಿಯು ತನ್ನ ಮೊದಲಿನ ಸೊಬಗನ್ನು ಕಳೆದುಕೊಂಡಿದೆ ಎಂದರೆ ತಪ್ಪಾಗಲಾರದು.

**ಚಿನಿವಾರಿಕೆ :** ಚಿನಿವಾರಿಕೆ ಮಾಡುವವರನ್ನು ಅಥವಾ ಅಕ್ಕಸಾಲಿಗರನ್ನು ಉತ್ತರ ಕರ್ನಾಟಕದಲ್ಲಿ ಪತ್ತಾರ ಎಂದೂ ಕರೆಯಲಾಗುತ್ತದೆ. ಧಾರವಾಡ ಜಿಲ್ಲೆಯಲ್ಲಿಯೂ ಈ ಪದ ಚಾಲ್ತಿಯಲ್ಲಿದೆ. ಬೆಳ್ಳಿ ಮತ್ತು ಚಿನ್ನದ ವಸ್ತುಗಳನ್ನು ಇವರು ತಯಾರಿಸುತ್ತಾರೆ. ಆಕರ್ಷಕರವಾದ ಆಭರಣಗಳನ್ನು ತಯಾರಿಸುವ ಇವರು ಧಾರವಾಡ ಜಿಲ್ಲೆಯ ಕೆಲವು ಕಡೆ ಬಡ್ಡಿ ವ್ಯಾಪಾರವನ್ನೂ ಮಾಡುತ್ತಾರೆ.

‘ಅಕ್ಕಸಾಲಿಗೆ ಅರ್ಕಸಾಲೆಯೇ ಮೂಲಪದ. ಅರ್ಕ ಎಂದರೆ ಅರಗು. ಅಂದರೆ ಅರಗು ಕೂಡಿಸುವ, ಕರಗಿಸುವ ಅಥವಾ ಭಟ್ಟಿ ಇಳಿಸಿ ಆಭರಣಗಳಿಗೆ ತುಂಬುವ ಶಾಲೆಯೇ ಅರ್ಕಸಾಲೆ ಎಂದಿಟ್ಟುಕೊಳ್ಳಬಹುದು. ಕೌಟಿಲ್ಯನು ಬಂಗಾರದ ಒಡವೆ ಮಾಡುವ ಶಾಲೆಗೆ ಅಕ್ಷಶಾಲೆ ಎಂದಿದ್ದಾನೆ. ಒಟ್ಟು ಬೆಳ್ಳಿ ಇಲ್ಲವೆ ಚಿನ್ನವನ್ನು ಭಟ್ಟಿ ಇಳಿಸುವ ಸಾಲೆಯೇ ಅರ್ಕಸಾಲೆ ಎಂದು ಕರೆಯಬಹುದು. ಮೂಲತಃ ಅಕ್ಕಸಾಲಿ, ಬಡಗಿ, ಕಮ್ಮಾರ, ಶಿಲ್ಪಿ (ಒಡ್ಡ) ಇವರು ಒಂದೇ ಮೂಲದವರಾದರೂ ಹಳ್ಳಿಯ ಜಾತಿವ್ಯವಸ್ಥೆ ಹಾಗೂ ಸಾಮಾಜಿಕವಾದ ಸ್ಥಾನಮಾನಗಳಿಂದ ಇತರರಂತೆ ತಮ್ಮ ಜಾತಿಯಲ್ಲಿಯೇ ಅಂತರವನ್ನು ಸಾಧಿಸಿಕೊಂಡಿರುವುದು

ಗಮನಾರ್ಹವಾಗಿದೆ'[೨೩] ಎಂಬುದನ್ನು ತಿಳಿದುಕೊಂಡಾಗ ಅರಗನ್ನು ಮೂಲವಾಗಿ ಇಟ್ಟುಕೊಂಡು ಚಿನ್ನ-ಬೆಳ್ಳಿಯ ಆಭರಣಗಳನ್ನು ತಯಾರಿಸುವ ಕೆಲಸಗಾರಿಕೆಯೇ ಚಿನಿವಾರಿಕೆಯಾಗಿದೆ ಎಂಬ ಅರ್ಥ ಲಭ್ಯವಾಗುತ್ತದೆ. ಮುಂದೆ ಇದು ಜಾತಿಮೂಲದ ವೃತ್ತಿಯಾಗಿ ಪರಿವರ್ತನೆಯಾಗಿದೆ ಎಂಬುದನ್ನೂ ಕೂಡ ಇಲ್ಲಿ ಹೇಳಲಾಗಿದೆ.

'ಅಕ್ಕಸಾಲಿಗೆ ತನ್ನ ಮುಖ್ಯ ವೃತ್ತಿಯೊಂದಿಗೆ ಮಾಡಬಹುದಾದ ಸಾಮಾಜಿಕವಾದ ಮಹತ್ವದ ಕೆಲಸವೆಂದರೆ ಮಂತ್ರ, ತಂತ್ರ, ವೈದ್ಯ. ಮಧ್ಯಕಾಲದ ಯುರೋಪದಲ್ಲಿ ಒಳ್ಳೆಯ ಆರೋಗ್ಯಕ್ಕಾಗಿ ಬಂಗಾರದ ನೀರನ್ನು ಔಷಧಿಯಂತೆ ಕುಡಿಸಲಾಗುತ್ತಿತ್ತು. ಅದಲ್ಲದೆ ಕಾಳಮ್ಮ, ದ್ಯಾಮವ್ವ, ಉಡಚವ್ವ, ಲಕ್ಕವ್ವ ಮುಂತಾದ ದೇವತೆಗಳ ಹೆಸರಿನಲ್ಲಿ ಮಂತ್ರಿಸಲಾದ ವಸ್ತು ಸೇವನೆಯಿಂದ ರೋಗ ರುಜಿನಗಳು ನಿವಾರಿಸುವಲ್ಲಿ, ತಾಯತ ಮಾಡಿ ಕಟ್ಟುವಲ್ಲಿ ಅಕ್ಕಸಾಲಿಯೇ ಪ್ರವೀಣ'[೨೪] ಹೀಗೆ ಇರುವ ಅಕ್ಕಸಾಲಿಗರಲ್ಲಿ ಧಾರವಾಡ ಜಿಲ್ಲೆಯಲ್ಲಿ ಸಾಕಷ್ಟು ಜನ ಇದ್ದಾರೆ. ಅಲ್ಲದೇ ದೀಪಾವಳಿಯಂಥ ಕೆಲವೊಂದು ವಿಶೇಷ ಹಬ್ಬಗಳಲ್ಲಿ ತೀರಿಹೋದ ಹಿರಿಯರಿಗೆ/ಪಿತೃಗಳಿಗೆ ಎಡೆಹಾಕುವ ಪದ್ಧತಿ ಇದ್ದು, ಈ ಸಂದರ್ಭದಲ್ಲಿ ತೀರಿದ ವ್ಯಕ್ತಿಯ ಭಾವಚಿತ್ರವನ್ನಿರಿಸಿ ಅದರ ಜೊತೆ ಮನೆದೇವರು(ಗಂಡು-ಹೆಣ್ಣು ದೇವರು)ಗಳ ಚಿಕ್ಕ ಪಟವನ್ನು ಇಟ್ಟು ಪೂಜಿಸುವರು. ಈ ಪಟವನ್ನು ಹಿತಾಳೆ, ಬೆಳ್ಳಿ, ಪಂಚಲೋಹಗಳಿಂದ ತಯಾರಿಸುತ್ತೇವೆ. ಇವನ್ನು 'ದೇವರ ಮುಖ' ಎಂದು ಕರೆಯುವರು. ಈ ದೇವರ ಮುಖಗಳು ಇಲ್ಲದಿದ್ದರೆ ಹಿರಿಯರ ಪೂಜೆ ಅಪೂರ್ಣ ಎಂದೇ ಭಾವನೆ. ದೇವರ ಮುಖಗಳನ್ನು ಅಕ್ಕಸಾಲಿಗರೇ ವಿಶೇಷವಾಗಿ ಲೋಹದ ಉಬ್ಬು ಚಿತ್ರ ವಿನ್ಯಾಸದಲ್ಲಿ ಚಿತ್ರಿಸಿ, ಅದಕ್ಕೆ ಲೋಹದ ಚೌಕಟ್ಟನ್ನು ಕಟ್ಟುತ್ತೇವೆ. ಎಂದು ಧಾರವಾಡದ ಸಂಜೀವಪ್ಪ ವೇರ್ಣೇಕರ ಅವರು ತಿಳಿಸುತ್ತಾರೆ.[೨೫] ಇಂದಿನ ತಲೆಮಾರಿಗೆ ಇಷ್ಟವಾಗುವ ರೀತಿಯಲ್ಲಿ ಆಭರಣಗಳನ್ನು ಸಿದ್ಧಪಡಿಸುವ ಕಾರ್ಯವನ್ನು ಮಾಡುತ್ತಿದ್ದಾರೆ. ಕೆಲವು ಸಲ ಅಚ್ಚುಗಳು ಇಲ್ಲದಿದ್ದರೂ ಹೊಸದಾಗಿ ಮಾಡಿ ಗ್ರಾಹಕರಿಗೆ ಒದಗಿಸುತ್ತಾರೆ. ಸಧ್ಯ ಧಾರವಾಡ ಮತ್ತು ಹುಬ್ಬಳ್ಳಿ ನಗರಗಳಲ್ಲಿ ಹೊಸ ಹೊಸ ಪ್ರಯತ್ನ ನಡೆದಿವೆ.

**ಕಮ್ಮಾರಿಕೆ :** ಕಮ್ಮಾರಿಕೆ ಇಂದು ಇಲ್ಲವೇ ಇಲ್ಲ ಎನ್ನುವಷ್ಟು ನಶಿಸಿ ಹೋಗುತ್ತಿದೆ. ಧಾರವಾಡ ಜಿಲ್ಲೆಯಲ್ಲಿ ಮೊದಲಿದ್ದ ಕಂಬಾರಿಕೆಯ ಕೆಲಸಗಳನ್ನು ಈಗ ಆಧುನಿಕ ಯಂತ್ರಗಳೇ ಮಾಡುತ್ತಿರುವುದರಿಂದ ಈ ಉದ್ಯೋಗವನ್ನು ಅವಲಂಬಿಸಿಕೊಂಡವರು ಅದಕ್ಕೆ ತಿಲಾಂಜಲಿ ನೀಡುತ್ತಿದ್ದಾರೆ.

---

೨೩. ಜನಪದ ಆಲೋಕನ : ಇಮ್ರಾಪೂರ ಸೋಮಶೇಖರ : ಸಿ.ವಿ.ಜಿ. ಪಬ್ಲಿಕೇಶಷನ್ಸ್, ಬೆಂಗಳೂರು : ೨೦೦೨ : ಪು-೫೭

೨೪. ಜನಪದ ಆಲೋಕನ : ಇಮ್ರಾಪೂರ ಸೋಮಶೇಖರ : ಸಿ.ವಿ.ಜಿ. ಪಬ್ಲಿಕೇಶಷನ್ಸ್, ಬೆಂಗಳೂರು : ೨೦೦೨ : ಪು-೬೩

೨೫. ವಕ್ತೃ : ಸಂಜೀವಪ್ಪ ವೇರ್ಣೇಕರ : ವಯಸ್ಸು-೬೫ : ಧಾರವಾಡ : ೨೩-೦೮-೨೦೧೦

'ಕರ್ಮ ಎಂಬ ಶಬ್ದದಿಂದಲೇ ಕಂಬಾರ ಎಂಬ ಶಬ್ದ ವ್ಯುತ್ಪತ್ತಿಯಾದಂತಿದೆ. ಕಮ್ಮಾರ ಎನ್ನುವುದು ಕರ್ಮಕಾರ ಎಂಬ ಶಬ್ದದ ತದ್ಭವ. ಕರ್ಮ+ಕಾರ=ಕಮ್ಮಾರ ಎಂದು ನಿಷ್ಪತ್ತಿಯನ್ನು ಹೇಳಬಹುದಾಗಿದೆ. ಒಟ್ಟಿನಲ್ಲಿ ಕರ್ಮ ಎಂಬ ಶಬ್ದದಿಂದ ಕಮ್ಮಾರ ಅಥವಾ ಕಂಬಾರ ಎರಡೂ ಶಬ್ದಗಳು ಸಮಾನ ಬಳಕೆಯಲ್ಲಿವೆ. ಕುಂಬಾರ ಎಂಬ ಶಬ್ದ ಪ್ರಭಾವದಿಂದ ಕಮ್ಮಾರ ಎನ್ನುವುದು ಕಂಬಾರ ಎಂದು ಮಾರ್ಪಾಟು ಹೊಂದಿದಂತಿದೆ. ಮರಾಠಿಯ ಪ್ರಭಾವದಿಂದಾಗಿ ಬೆಳಗಾವ ಹಾಗೂ ಕಾರವಾರ ಜಿಲ್ಲೆಗಳಲ್ಲಿ ಲೋಹಾರ ಎಂದೂ ಕರೆಯಲಾಗುತ್ತದೆ. ಕಮ್ಮಾರ, ಕಂಮಾರ, ಕರ್ಮಹರ, ಕಂಮರ, ಕಂಮಟಿಗ, ಕಮ್ಮಟಿ, ಕಂಬಟಿ, ಕನ್ಮಾರ, ಕಮ್ಬಾರ, ಕಂಬಾರ ಎಂಬ ಹೆಸರುಗಳು ಪ್ರಾಚೀನ ಹಾಗೂ ಅರ್ವಾಚೀನ ಕನ್ನಡ ಶಾಸನಗಳಲ್ಲಿ, ಕಾವ್ಯ, ವ್ಯಾಕರಣಗಳಲ್ಲಿ ಕಾಣಿಸಿಕೊಂಡಿವೆ'[೨೬] ಎಂಬುದಾಗಿ ಡಾ. ಎಸ್.ಎಸ್. ಕೋತಿನ ಅಭಿಪ್ರಾಯಪಡುತ್ತಾರೆ. ಇವರ ಈ ಅಭಿಪ್ರಾಯ ಸಮಂಜಸವಾಗಿದ್ದು ಕರ್ಮಕಾರವೇ ಕಮ್ಮಾರ ಆಗಿ ಪರಿವರ್ತಿತಗೊಂಡಿದೆ ಎಂಬುದಾಗಿ ಹೇಳಬಹುದು. ಇದು ತುಂಬ ಪ್ರಾಚೀನ ಕಾಲದಿಂದಲೂ ಒಂದು ವೃತ್ತಿಯಾಗಿ ನಡೆದುಕೊಂಡು ಬಂದಿದೆ.

ಧಾರವಾಡ ಜಿಲ್ಲೆಯ ಹಲವೆಡೆ ಇಂದಿಗೂ ಕಮ್ಮಾರ ಕುಲುಮೆಗಳನ್ನು ಕಾಣಬಹುದು. ಯಾಂತ್ರಿಕಯುಗದಲ್ಲೂ ಕೆಲವು ತಿದಿಯೊತ್ತುವ ಕುಲುಮೆಗಳು ಕಂಡುಬರುತ್ತವೆ. ಕೃಷಿಗೆ ಸಂಬಂಧಿಸಿದ ಕುಡಗೋಲು, ಕೊಡಲಿ, ಮಚ್ಚು, ಕುರ್ಚಗಿ(ಕುರ್ಪಿ)ಗಳನ್ನು ತಯಾರಿಸುತ್ತಾರೆ. ಹಾಗೂ ಇವುಗಳಿಗೆ ಸುಂದರವಾದ ಆಕೃತಿಗಳಲ್ಲಿ ಕೆತ್ತನೆ ಮಾಡಿದ ಕಟ್ಟಿಗೆಯ ಹಿಡಿಕೆಗಳನ್ನು ಹಾಕುತ್ತಾರೆ. ಕೋಟೂರಿನಲ್ಲಿ ತಯಾರಾಗುವ ಕುಡುಗೋಲುಗಳು ಬಹುಕಾಲ ಬಾಳಿಕೆ ಬರುವುದರಿಂದ ಜಿಲ್ಲೆಯಾದ್ಯಂತ 'ಕೋಟೂರ ಕುಡಗೋಲು'ಗಳು ಹೆಸರುವಾಸಿಯಾಗಿವೆ. ಬಂಡಿಗುಡಗೋಲು, ಕೈ ಕುಡಗೋಲು, ದೊಡ್ಡ ಕೊಡಲಿ, ಚಾಪುಗೊಡಲಿ, ಕುರ್ಚಗಿ, ಕೆತ್ತುಗುರ್ಚಗಿ, ಕೊಯ್ಲುಗುರ್ಚಗಿ, ಗುದ್ದಲಿ(ಪಿಕಾಸಿ), ಬಾಯ್ಗುದ್ದಲಿ, ನೆಟ್ಟಗುದ್ದಲಿ, ಸಲಿಕೆ(ಗ್ವಾರಿ), ಚಾಕು, ಚೂರಿ ಹಾಗೂ ಕೃಷಿ ಸಂಬಂಧಿತ ಕುಡ, ಕುಳ, ಚಕ್ಕಡಿ ಕೀಲು, ಬಳೆ ಮುಂತಾದ ವಸ್ತುಗಳನ್ನು ಬಳಕೆಗೆ ತಕ್ಕಂಥ ವಿನ್ಯಾಸಗಳಿಂದ ತಯಾರಿಸುತ್ತಾರೆ. ಇವೆಲ್ಲವೂ ಜನಪದರ ಸೃಜನಶೀಲ ತಂತ್ರಜ್ಞಾನವೆಂದರೆ ತಪ್ಪಾಗಲಾರದು.

'ಕಂಬಾರರು ವ್ಯವಸಾಯಕ್ಕೆ, ಯುದ್ಧಕ್ಕೆ, ನಿತ್ಯಜೀವನಕ್ಕೆ ಅನಿವಾರ್ಯವಾದ ಕಬ್ಬಿಣದ ಉಪಕರಣಗಳನ್ನು ತಯಾರಿಸಿಕೊಡುವ ಕಸಬುಗಾರರು. ಹಳ್ಳಿಯ ಹನ್ನೆರಡು ಆಯಗಾರರಲ್ಲಿ

---

೨೬. ಉತ್ತರ ಕರ್ನಾಟಕದ ಆಯಗಾರರು : ಸಂ–ವೃಷಭೇಂದ್ರಸ್ವಾಮಿ ಎಸ್.ಎಂ : ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ : ೧೯೮೨ : ಪು–೧೭೬–೧೭೭

ಒಬ್ಬರು. ಮಾನವನ ಮೂಲಭೂತ ಆವಶ್ಯಕತೆಗಳನ್ನು ಈಡೇರಿಸಬಲ್ಲ ವ್ಯವಸಾಯದ ದೃಷ್ಟಿಯಿಂದ ಈ ಕಮ್ಮಾರ ವೃತ್ತಿ ಮಿಕ್ಕ ವೃತ್ತಿಗಳಲ್ಲೆಲ್ಲ ಅತ್ಯಂತ ಉಪಯುಕ್ತವಾದುದು'[೨೭] ಎನ್ನುವ ಮಾತುಗಳಿಂದ ಕಂಬಾರರ ಮಹತಿ ಅರ್ಥವಾಗುತ್ತದೆ. ಈಗ ಇವರು ಕೇವಲ ಕಬ್ಬಿಣದ ಉಪಕರಣಗಳನ್ನು ಮಾತ್ರ ಮಾಡದೇ ಎಲ್ಲ ರೀತಿಯ ಲೋಹಗಳಿಂದ ಉಪಕರಣಗಳನ್ನು ತಯಾರಿಸುತ್ತಾರೆ.

'ಕಮ್ಮಾರ ವೃತ್ತಿಯುಳ್ಳವರು ಮೂಲತಃ ವಿಶ್ವಕರ್ಮ ಬ್ರಾಹ್ಮಣರಾಗಿದ್ದರೂ ಲಿಂಗಾಯತರು, ಮರಾಠರು ಹಾಗೂ ಮುಸ್ಲಿಮರು ಈ ವೃತ್ತಿಯಲ್ಲಿ ಕಾಣಿಸಿಕೊಳ್ಳುತ್ತಾರೆ. ಬಹುತೇಕ ಇವರೆಲ್ಲ ಒಂದು ಕಾಲಕ್ಕೆ ಮತಾಂತರಗೊಂಡ ಪಂಚಾಳರೆಂದು ತಿಳಯಬಹುದಾಗಿದೆ. ಮುಸ್ಲಿಮರನ್ನುಳಿದು ಉಳಿದೆಲ್ಲ ಕಂಬಾರರ ಕುಲದೇವತೆ ಕಾಳಮ್ಮನೇ ಆಗಿರುವುದು ಈ ಊಹೆಯನ್ನು ಸಮರ್ಥಿಸುವಂತಿದೆ'[೨೮] ಎಂದು ವಿ. ಶಿವಾನಂದ ಅವರು ಹೇಳುತ್ತಾರೆ.

ಧಾರವಾಡ ಜಿಲ್ಲೆಯಲ್ಲಿ ಕಂಬಾರಿಕೆ ಮಾಡುವವರು ವಿಶೇಷವಾಗಿ ಮುಸ್ಲಿಂ ಜನಸಮುದಾಯಕ್ಕೆ ಸೇರಿದವರಾಗಿದ್ದಾರೆ. ಹುಬ್ಬಳ್ಳಿಯ ಜಾಮೀಯಾ ಮಸೀದಿಯ ಹತ್ತಿರ ಇರುವ ಜಾಫರ್‌ಸಾಬ್ ತಹಶೀಲ್ದಾರ್ ಕುಟುಂಬವು ತಾಮ್ರದ ಪಾತ್ರೆಯನ್ನು ತಯಾರಿಸುವ ಕಾರ್ಯವನ್ನು ಮಾಡುತ್ತಿದೆ. ಹಂಡೆ, ಕೊಡ, ದೇವರ ಕಳಸ ಮೊದಲಾದ ವಸ್ತುಗಳನ್ನು ತಯಾರಿಸುವ ಇವರು ಅವುಗಳ ಮೇಲೆ ವಿಧ ವಿಧವಾದ ಚಿತ್ರಗಳನ್ನು ಬಿಡಿಸುತ್ತಾರೆ. ಮುಖ್ಯವಾಗಿ ನಕ್ಷತ್ರ, ಕಚ್ಚುಗಳು, ಹೂವುಗಳನ್ನು ಸೂಕ್ಷ್ಮವಾಗಿ ಕೆತ್ತನೆ ಮಾಡಲಾಗುತ್ತದೆ. ಆದರೆ ಇಡಿಯಾಗಿ ಪಾತ್ರಗಳ ಮೇಲೆ ಅಥವಾ ವಸ್ತುಗಳ ಮೇಲೆ ಚಿತ್ರಗಳನ್ನು ಬಿಡಿಸಲೇ ಬೇಕು ಎಂಬ ನಿಯಮವನ್ನು ಅವರು ಇಟ್ಟುಕೊಂಡಿಲ್ಲ. ಇವರನ್ನು ಕಂಚುಗಾರರೆಂದೂ ಕರೆಯಲಾಗುತ್ತದೆ. ಧಾರವಾಡದಲ್ಲಿಯೂ ಈ ವೃತ್ತಿ ಮಾಡುವವರನ್ನು ಕಾಣಬಹುದಾಗಿದೆ.

ಲೋಹದ ಮೂರ್ತಿಗಳನ್ನು ತಯಾರಿಸುವಲ್ಲಿ ಹುಬ್ಬಳ್ಳಿಯ ಸಾಯಿನಾಥ ಹಿತ್ತಾಳೆ ಕುಟುಂಬ ಪ್ರಸಿದ್ಧವಾಗಿದೆ. ಹಿತ್ತಾಳೆ, ಬೆಳ್ಳಿ, ಬಂಗಾರ ಲೇಪಿತ ಮೂರ್ತಿಗಳನ್ನು ಇವರು ತಯಾರಿಸುತ್ತಾರೆ. ಇದು ವಂಶಪರಂಪರೆಯಿಂದ ಬಂದ ವೃತ್ತಿಯಾಗಿದ್ದು ಇಂದಿಗೂ ಮುಂದುವರಿಸಿಕೊಂಡು ಬಂದಿದ್ದಾರೆ. ಯಲ್ಲಮ್ಮ, ದುರ್ಗಾಮಾತೆ, ಕಾಳಿಕಾದೇವಿ, ಶಿವ, ಶಿವನ

---

೨೭. ಉತ್ತರ ಕರ್ನಾಟಕದ ಆಯಗಾರರು : ಸಂ–ವೃಷಭೇಂದ್ರಸ್ವಾಮಿ ಎಸ್.ಎಂ : ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ : ೧೯೮೨ : ಪು–೧೭೬

೨೮. ಜನಪದ ತಂತ್ರಜ್ಞಾನ : ಸಂ–ಶಿವಶಂಕರ ಚಕ್ಕೆರೆ : ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು : ೨೦೦೩ : ಪು–೧೭೭

ತಲೆಯ ಹಿಂದೆ ನೆರಳಾಗಿರುವ ಸಪ್ತ ಹೆಡೆಗಳನ್ನು ಹೊಂದಿದ ಸರ್ಪ, ಸಿಂಹ ಮೊದಲಾದವುಗಳನ್ನು ತುಂಬ ಸೂಕ್ಷ್ಮವಾದ ಕಲೆಗಾರಿಕೆಯಿಂದ ಇವರು ನಿರ್ಮಾಣ ಮಾಡುತ್ತಾರೆ.

ಹುಬ್ಬಳ್ಳಿಯ ಸಿದ್ಧಾರೂಢ ಮಠದ ಬೆಳ್ಳಿ ಪಾದುಕೆ, ದಾಜೀಬಾನಪೇಟೆಯ ಗಣೇಶ ಗುಡಿಯ ಬೆಳ್ಳಿ ಮಂಟಪ, ಬರದ್ವಾಡದ ಪಂಚಲೋಹದ ಗಣಪನ ವಿಗ್ರಹ, ಮೊಹರಮ್ ಹಬ್ಬದಲ್ಲಿ ಬೆಳ್ಳಿ ಪಂಜಾಗಳು, ಕ್ರಿಶ್ಚಿಯನ್ ಹಬ್ಬಗಳಲ್ಲಿ ಬೆಳ್ಳಿಯ ಶಿಲುಬೆಗಳನ್ನೂ ಇವರು ತಯಾರಿಸುತ್ತಾರೆ. ಹೀಗೆ ತಯಾರಿಸಿದ ವಸ್ತುಗಳ ಮೇಲೆ ಸೂಕ್ಷ್ಮವಾದ ಹೂವು, ಗೆರೆ, ಎಲೆ ಮೊದಲಾದ ಚಿತ್ರಗಳೂ ಅರಳಿ ನಿಂತಿರುತ್ತವೆ.

ಕಮ್ಮಾರಿಕೆ ಕೂಡ ಇಂದು ಅಲ್ಲಲ್ಲಿ ಕಂಡುಬಂದರೂ ಯಂತ್ರಗಳ ಮೂಲಕ ತಯಾರಿಸಲಾಗುವ ಉಪಕರಣಗಳೇ ಹೆಚ್ಚಾಗಿ ಬಳಕೆಯಾಗಿ ಕಮ್ಮಾರಿಕೆಯ ಮಹತ್ವವನ್ನು ಕಡಿಮೆ ಮಾಡಿವೆ. ಕಮ್ಮಾರಿಕೆಯಲ್ಲಿ ಮೂಡುವ ಜನಪದ ಚಿತ್ರಕಲೆ ಇನ್ನಿಲ್ಲದಂತೆ ವಿರಳವಾಗುತ್ತಿವೆ. ಜೊತೆಗೆ ಪ್ಲಾಸ್ಟಿಕ್ ಬಳಕೆಯೂ ಹೆಚ್ಚಾಗಿ ಕಮ್ಮಾರಿಕೆಯ ವೃತ್ತಿ ಇಂದು ಅವನತಿಯ ಹಾದಿ ಹಿಡಿದಿದೆ.

**ಕುಂಬಾರಿಕೆ :** ಧಾರವಾಡ ಜಿಲ್ಲೆಯಲ್ಲಿ ಕುಂಬಾರಿಕೆ ಇಂದು ಬಹುತೇಕ ಅವನತಿಯ ಹಾದಿ ಹಿಡಿದಿದ್ದು, ಧಾರವಾಡ, ಹುಬ್ಬಳ್ಳಿ ಸೇರಿದಂತೆ ಕಾಮನಕಟ್ಟಿ, ಕಲಘಟಗಿ, ಮುಗದ, ತಡಕೋಡ, ಹೆಬ್ಬಳ್ಳಿ, ಹೂಲಿ, ಅಮ್ಮಿನಭಾವಿ, ಮರೇವಾಡ ಮೊದಲಾದ ಕಡೆಗಳಲ್ಲಿ ಕುಂಬಾರಿಕೆ ವೃತ್ತಿಯನ್ನು ವಿಶೇಷವಾಗಿ ಪೋಷಿಸಿಕೊಂಡು ಬಂದಿರುವುದು ಕಂಡುಬರುತ್ತದೆ. ಆದರೆ ಬೇಡಿಕೆ ಇಳಿಮುಖವಾಗಿರುವುದರಿಂದ ಇಂದು ಕುಂಬಾರಿಕೆಯನ್ನೇ ನೆಚ್ಚಿಕೊಂಡು ಬದುಕು ಸಾಗಿಸುವ ಹಾಗಿಲ್ಲ. ಹೀಗಾಗಿ ಇಂದಿನ ಕುಂಬಾರರು ಪರ್ಯಾಯದ ಹಾದಿಯಲ್ಲಿ ಸಾಗುತ್ತಿದ್ದಾರೆ.

'ಬಿಲ್ಲಿಗೆ ಅಂಬು, ಕೋಣೆಗೆ ಇಂಬು, ಸಾರಿಗೆ ಸಂಬಾರ ಎಷ್ಟು ಮುಖ್ಯವೋ ಅಷ್ಟೇ ಮುಖ್ಯ ಒಂದು ಊರಿಗೆ ಕುಂಬಾರ. ಅನಾದಿ ಕಾಲದಿಂದ ನಮ್ಮ ಜನಾಂಗದ ಬದುಕಿನ ಅವಿಭಾಜ್ಯ ಅಂಗವಾಗಿ ಬೆಳೆದು ಬಂದ ಕುಂಬಾರ ಎನ್ನುವ ಶಬ್ದಕ್ಕೆ ಕುಲಾಲ, ಚಕ್ರಿ, ದಂಡಧರ, ಕುಂಭಕಾರ ಮುಂತಾದ ಅರ್ಥಗಳಿವೆ'[೨೯] ಎಂದು ಡಾ. ದೇವೇಂದ್ರಕುಮಾರ ಹಕಾರಿಯವರು ತಿಳಿಸುತ್ತಾರೆ. ಅಂದರೆ ಕುಂಬಾರನಿಲ್ಲದ ಊರನ್ನು ಊಹಿಸಿಕೊಳ್ಳಲೂ ಸಾಧ್ಯವಿಲ್ಲ ಎಂಬ ಅರ್ಥ ಇಲ್ಲಿ ಬಂದಿದೆ. ಇದು ಕುಂಬಾರ ಅಥವಾ ಕುಂಬಾರಿಕೆಯ ಹಿರಿಮೆಯನ್ನು ಹೇಳುತ್ತದೆ.

---

೨೯. ಜಾನಪದ ಸಾಹಿತ್ಯ ದರ್ಶನ, ಭಾಗ-೭ (ಉತ್ತರ ಕರ್ನಾಟಕದ ಆಯಗಾರರು) : ಸಂ-ವೃಷಭೇಂದ್ರಸ್ವಾಮಿ ಎಸ್.ಎಂ : ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ : ೧೯೮೨ : ಪು-೧೯೬

'ಕುಂಬಾರಿಕೆ – ವಿಶೇಷತಃ ಕುಶಲಕಲಾ ಕುಂಬಾರಿಕೆ ಇರಾನ್ ಮುಂತಾದ ಪ್ರದೇಶಗಳಿಂದ ಭಾತರದ ವಿವಿಧ ಪ್ರದೇಶಗಳಿಗೆ ಹರಡಿತೆಂದು ಎಚ್.ಆರ್. ಸಂಕಾಲಿಯಾ ಊಹಿಸುತ್ತಾರೆ. ಇಂಡಸ್ (ಸಿಂಧುಕೊಳ್ಳಗಳ) ನಾಗರಿಕತೆಯ ಅಧ್ಯಯನ ನಡೆಸಿದ ಈ ವಿದ್ವಾಂಸರು ಕುಂಬಾರಿಕೆ ಭಾರತದ ಪ್ರಾಚೀನ ಕಲೆಯಾಗಿತ್ತೆನ್ನುವುದನ್ನು ಅಲ್ಲಗಳೆಯುವುದಿಲ್ಲ. ಆದರೆ ಕುಂಬಾರಿಕೆಯು ಒಂದು ವರ್ಣಮಯ ಕುಶಲ ಕಲೆಯಾಗಿ ರೂಪುಗೊಂಡ ಸಂದರ್ಭವನ್ನು ಕುರಿತು ಹೇಳುವಾಗ ಮಾತ್ರ ಅಂಥ ಕಲಾತ್ಮಕ ನೈಪುಣ್ಯ ಇರಾನ, ಅಫ್ಘಾನಿಸ್ತಾನ, ಬಲೂಚಿಸ್ಥಾನ ಮೊದಲಾದ ದೇಶಗಳ ನಯಗಾರಿಕೆಯಿಂದ ಪ್ರಭಾವಿತವಾಯಿತು ಎಂದು ಹೇಳುತ್ತಾರೆ'[೩೦] ಎಂದು ಡಾ. ದೇವೇಂದ್ರಕುಮಾರ ಹಕಾರಿಯವರು ದಾಖಲಿಸಿದ್ದಾರೆ. ಅಂದರೆ ಕುಂಬಾರಿಕೆಯ ಮೂಲ ಭಾರತವಲ್ಲ ಎಂಬ ಅಭಿಪ್ರಾಯ ಇಲ್ಲಿದೆ. ಆದರೆ ಅದೇ ಸಂದರ್ಭದಲ್ಲಿ ಸಿಂಧೂ ಕೊಳ್ಳಗಳ ನಾಗರಿಕತೆಯಲ್ಲಿ ಕೆಲವು ಮಡಿಕೆ–ಕುಡಿಕೆಗಳು ದೊರೆತಿರುವುದು ಸಂಕಾಲಿಯಾ ಅವರ ವಾದ ಸುಳ್ಳು ಎನ್ನುವುದಕ್ಕೆ ಸಾಕ್ಷಿಯಾಗಿ ನಿಲ್ಲುತ್ತದೆ. ಕಲೆ ಮತ್ತು ಕುಶಲತೆ ಕೂಡ ಭಾರತದಲ್ಲಿಯೇ ಪ್ರಚಲಿತದಲ್ಲಿತ್ತು. ಅದು ಯಾವುದೇ ದೇಶದ ಎರವಲು ಅಲ್ಲ ಎಂಬುದನ್ನು ಈ ಸಂದರ್ಭದಲ್ಲಿ ಹೇಳಲೇಬೇಕಾಗುತ್ತದೆ.

'ಸುಮಾರು ಮೂರು ಸಾವಿರ ವರ್ಷಗಳಿಗಿಂತ ಹೆಚ್ಚು ಪ್ರಾಚೀನತೆಯುಳ್ಳ ಕುಂಭಕಲೆ ಇಪ್ಪತ್ತೊಂದನೆ ಶತಮಾನದಲ್ಲೂ ಜೀವಂತವಾಗಿ ಉಳಿದಿರುವುದು ಮನುಷ್ಯನ ಬದುಕಿಗೆ ಅದರ ಉಪಯುಕ್ತತೆಯನ್ನು ಸಾರಿ ಹೇಳುತ್ತದೆ. ಮನುಷ್ಯನ ಅತ್ಯಂತ ಪ್ರಾಚೀನವಾದ ಸಾಧನೆಗಳಲ್ಲಿ ಕುಂಭಕಲೆಯೂ ಒಂದು. ಕುಂಬಾರಿಕೆ ಶುದ್ಧವಾದ ಪರಿಪೂರ್ಣ ಕಲೆ ಎಂದು ಸರ್ ಹರ್ಬರ್ಟ್ ರೀಡ್ ಹೇಳುತ್ತಾನೆ ; Pottery is pure art, it is freed from any imitative intention. ಪ್ರಾಚೀನ ನಾಗರಿಕತೆಯ ಉತ್ಖನನದುದ್ದಕ್ಕೂ ಗಡಿಗೆಯ ಪಳಿಯುಳಿಕೆಗಳು ಮನುಷ್ಯನ ಅಸ್ಥಿಯೊಂದಿಗೆ ಲಭ್ಯವಾಗುತ್ತಲೆ ಬಂದಿವೆ'[೩೧] ಎನ್ನುವ ಮಾತುಗಳನ್ನು ಗಮನಿಸಿದಾಗ ಮಾನವ ಬಳಸುವ ಸಾಧನಗಳಲ್ಲಿ ಒಂದಾಗಿದ್ದ ಈ ಕುಂಬಾರಿಕೆಯ ವಸ್ತುಗಳು ತುಂಬ ಪ್ರಾಚೀನವಾದ ಇತಿಹಾಸವನ್ನು ಹೊಂದಿರುವುದು ಸ್ಪಷ್ಟ. ಕುಂಬಾರಿಕೆಯನ್ನು ಇಲ್ಲಿ ಶುದ್ಧ ಅಥವಾ ಪರಿಪೂರ್ಣ ಕಲೆ ಎಂದು ಕರೆದಿರುವುದು ಸಮಂಜಸ ಎನಿಸುತ್ತದೆ.

'ಮಣ್ಣಿನ ಪಾತ್ರೆ ಮಾಡುವುದು ಮನುಕುಲದ ಅತಿ ಹಳೆಯ ಕಲೆಯಲ್ಲೊಂದಾಗಿದೆ. ಇದು ಹಗುರವಾದ ಸರಳವಾದ ಕಲೆ ಆಗಿರುವಷ್ಟೇ ಎಲ್ಲ ಕಲೆಗಳಿಗಿಂತ ಕಷ್ಟದ ಕಲೆ ಕೂಡಾ ಹೌದು.

---

೩೦. ಜಾನಪದ ಸಾಹಿತ್ಯ ದರ್ಶನ, ಭಾಗ–೭ (ಉತ್ತರ ಕರ್ನಾಟಕದ ಆಯಗಾರರು) : ಸಂ–ವೃಷಭೇಂದ್ರಸ್ವಾಮಿ ಎಸ್.ಎಂ : ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ : ೧೯೮೨ : ಪು–೨೦೨

೩೧. ಕುಂಬಾರ ಜನಾಂಗ : ಕುಂಚೂರು ಬಸವರಾಜ : ಶ್ರೀ ಚಕ್ರ ಪ್ರಕಾಶನ, ದಾವಣಗೆರೆ : ೨೦೦೩ : ಪು–೭೧

ಇದು ಅತಿ ಸರಳವಾದದ್ದು. ಯಾಕೆಂದರೆ ಇದು ಅಗತ್ಯದಿಂದ ರೂಪಗೊಂಡ ಮೂಲ ಕಲೆ ; ಇದು ಕಷ್ಟದಾಯಕ ಕಲೆ ಯಾಕೆಂದರೆ ಇದು ಅತ್ಯಂತ ಪ್ರಯೋಗ ಸಿದ್ಧವಲ್ಲದ ಕಲೆಯಾಗಿದೆ. ಐತಿಹಾಸಿಕವಾಗಿ ಇದು ಮಾನ ನಿರ್ಮಿತ ಮೊದಲ ಕಲೆಯಾಗಿದೆ. ಅಷ್ಟೇ ಅಲ್ಲ ಎಲ್ಲ ಕಲೆಗೆ ಮೂಲ ಕೂಡಾ ಎಂದು ಹೇಳಬಹುದು. ಬೇರೆ ಬೇರೆ ಸಂಸ್ಕೃತಿಗಳಲ್ಲಿ ಮಣ್ಣಿನ ಪಾತ್ರೆ ಮೂಲ ಪ್ರಯೋಜಕ ಕಾರಣಗಳ ನಂತರ ಅಲಂಕಾರಿಕ ಹಾಗೂ ಶೃಂಗಾರದ ಸಾಧನವಾಗಿ ಬೆಳೆದು ಗ್ರೀಸ್ ಹಾಗೂ ಚೀನಾ ದೇಶಗಳಲ್ಲಿ ರಚಿಸಿದ ಕೃತಿಗಳು ಜನತೆಯ ಪ್ರೇರಣೆಯ ಹಾಗೂ ಸಂಸ್ಕೃತಿಯ ಪ್ರಭಾವದ ಹಾಗೂ ಗೌರವದ ವರ್ಚಸ್ಸಿನ ವಸ್ತುಗಳಾಗಿದ್ದುದು ಕಂಡುಬರುತ್ತದೆ. ಈ ಕುಂಭ ಕಲೆ ಭಾರತದಷ್ಟೇ ಪೆರು, ಮೆಕ್ಸಿಕೋ, ಇಂಗ್ಲಂಡ್ ಹಾಗೂ ಸ್ಪೇನ್ ದೇಶದಲ್ಲಿ ಕೂಡ ೧೮ನೇ ಶತಮಾನದಲ್ಲಿ ಅತಿ ಕಲಾತ್ಮಕವಾದ ಸುಂದರವಾದ ಬೆಳವಣಿಗೆಯನ್ನು ಕಂಡುಕೊಂಡ ಉದಾಹರಣೆಗಳು ಸಿಗುತ್ತವೆ.'[೩೨] ಎನ್ನುವುದು ಕುಂಬಾರಿಕೆಯ ಇತಿಹಾಸವನ್ನು ಹೇಳುವಲ್ಲಿ ಒಂದು ಆಧಾರವನ್ನು ಒದಗಿಸುತ್ತದೆ.

ಕರ್ನಾಟಕದಲ್ಲಿ ಜನಪದ ಚಿತ್ರಕಲೆಯನ್ನು ಅರಗಿಸಿಕೊಂಡು ಕುಂಬಾರಿಕೆ ಬೆಳೆದು ಬಂದಿರುವುದನ್ನು ಈ ಮುಂದಿನ ಹೇಳಿಕೆ ಅನುಮೋದಿಸುತ್ತದೆ. 'ಕರ್ನಾಟಕದಲ್ಲಿ ಬೆಳವಣಿಗೆಯಾಗಿ ಬಂದಿರುವ ಜನಪದ ಚಿತ್ರಕಲೆಯ ಪ್ರಕಾರ ಮೊದಲು ಆಹಾರ ಅನಂತರ ಸೌಂದರ್ಯ ವಿಚಾರ. ಜನಪದ ಚಿತ್ರಕಲೆಯಲ್ಲಿ ಸೌಂದರ್ಯ ವಿಚಾರ ತಾತ್ವಿಕ ಅಂಶವಾಗಿ ಬಳಕೆಯಾಗುತ್ತಿರುವುದನ್ನು ತಾಮ್ರ ಶಿಲಾಯುಗದ ಕೆಲವು ಮಡಕೆಗಳ ಮೇಲಿನ ಚಿತ್ರಗಳು ಸ್ಪಷ್ಟಪಡಿಸುತ್ತಿವೆ. ಮಾಸಲು ಕೆಂಪುವರ್ಣದ ಮಡಕೆಗಳ ಮೇಲ್ಭಾಗದಲ್ಲಿ ಕಪ್ಪು ಅಥವಾ ನೇರಳೆ ವರ್ಣದ ಚಿತ್ರಗಳಿವೆ. ದಪ್ಪ ರೇಖೆಗಳು ಹಲವು ವಿನ್ಯಾಸಗಳಲ್ಲಿ ಬಳಕೆಯಾಗಿವೆ. ಈ ಹಂತದಲ್ಲಿ ಬಣ್ಣ ಮತ್ತು ರೇಖೆಗಳ ವಿನ್ಯಾಸ ಹೆಚ್ಚು ದಟ್ಟವಾಗಿರುವುದನ್ನು ಕಾಣಬಹುದು.

ಚರಿತ್ರೆಯ ಆರಂಭ ಕಾಲದಲ್ಲಿ ಇಂಥ ಹೊಳಪಿನ ಮಡಕೆಗಳ ಮೇಲೆ ಬಿಳಿಯ ಬಣ್ಣದಿಂದ ರೇಖಾಕೃತಿಗಳನ್ನು ಮೂಡಿಸಿರುವುದನ್ನು ಕಾಣುತ್ತೇವೆ. ರೇಖಾಕೃತಿಗಳು ಅಲೆ ಅಲೆಯಾಗಿ, ದಪ್ಪ, ಸಣ್ಣ ಚುಕ್ಕೆಗಳಾಗಿ ಹೂವಿನಂತೆ ಹತ್ತು ಹಲವು ಬಗೆಯಾಗಿ ಅಭಿವ್ಯಕ್ತಗೊಂಡು ಕೆಂಪುಬಣ್ಣದ ಲೇಪನ ಪಡೆದಿರುವುದು ಗಮನಾರ್ಹವಾಗಿದೆ. ಇಂಥ ಚಿತ್ರಿತ ಮಡಕೆಗಳು ಬ್ರಹ್ಮಗಿರಿ, ಚಂದ್ರವಳ್ಳಿ, ಹೆಮ್ಮಿಗೆ, ಹೆರಕಲ್ಲು, ವಡಗಾಂವ-ಮಾಧವಪುರ, ಮಸ್ಕಿ, ಬೆಂಗಳೂರು ಮುಂತಾದ ಸ್ಥಳಗಳ ನಿವೇಶನಗಳಲ್ಲಿ ದೊರೆತಿವೆ. ಇವುಗಳಲ್ಲಿ ಕಂಡುಬರುವ ಸಮಾನಾಂತರ

---

೩೨. ಚಿತ್ರಕಲಾ ಚಿಂತನೆ : ಪಾಟೀಲ ಶಂಕರ : ಪ್ರಗತಿ ಪ್ರಕಾಶನ, ದಾವಣಗೆರೆ : ೧೯೯೫ : ಪು-೨

ರೇಖೆಗಳು, ಗುಹಾ ಚಿತ್ರಗಳಲ್ಲಿರುವ ಕೆಮ್ಮಣ್ಣಿನ ರೇಖೆಗಳು ಇಂದಿಗೂ ಜನಪದ ಸಾರಣಿಕಾರಣಿಗಳಲ್ಲಿ ಕಂಡುಬರುತ್ತಿವೆ'[೩೩] ಅಂದರೆ ಪ್ರಾಚೀನ ಕಾಲದಿಂದಲೇ ನಮ್ಮಲ್ಲಿ ಕುಂಬಾರಿಕೆ ಕುಶಲಕಲೆಯಾಗಿ ಮಾರ್ಪಟ್ಟಿತ್ತು ಎಂಬುದು ಇದರಿಂದ ತಿಳಿದುಬರುತ್ತದೆ.

'ಪ್ರಾಚೀನದಿಂದ ಅರ್ವಾಚೀನದವರೆಗೂ ವಿಶ್ವದಾದ್ಯಂತ ನಡೆದ ಉತ್ಖನನಗಳಲ್ಲಿ ದೊರೆತ ಮಣ್ಣಿನ ಮಡಕೆಗಳಲ್ಲಿ ಜ್ಯಾಮಿತಿಯ ರೇಖಾ ಚಿತ್ರಗಳನ್ನು, ನವಿಲು, ಜಿಂಕೆ, ಹಕ್ಕಿ, ಬಸವ, ನಾಯಿ ಮೊದಲಾದ ಪ್ರಾಣಿಗಳ, ಹೂ, ಗಿಡ, ಬಳ್ಳಿ ಚಿತ್ರಗಳನ್ನು ಕಾಣಬಹುದು. ಈ ಚಿತ್ರಗಳನ್ನು ಮಡಕೆಗಳು ತಕ್ಕ ಮಟ್ಟಿಗೆ ಹಸಿ ಇರುವಾಗಲೇ ಡಬ್ಬಳ, ಸೂಜಿಯಂತಹ ಮೊನಚಾದ ವಸ್ತುವಿನಿಂದ ಚುಚ್ಚಿ ಚುಚ್ಚಿ ಬಿಡಿಸಲಾಗಿದೆ. ಇದಲ್ಲದೆ ಮುದ್ರೆಗಳನ್ನು ಒತ್ತಿ ಮಡಕೆಗಳನ್ನು ಅಲಂಕರಿಸಿರುವುದು ಕಂಡುಬರುತ್ತದೆ'[೩೪] ಎಂಬುದನ್ನು ಕಂಡುಕೊಂಡಾಗ ತುಂಬ ಹಿಂದೆಯೇ ಕುಂಬಾರಿಕೆಯಲ್ಲಿ ಜಾನಪದ ಚಿತ್ರಗಾರಿಕೆ ಅರಳಿ ನಿಂತಿರುವುದು ಮತ್ತು ಅದು ತುಂಬ ಸೂಕ್ಷ್ಮವಾದ ಶೈಲಿಯಾಗಿ ಒಡಮೂಡಿರುವುದು ಕಂಡುಬರುತ್ತದೆ.

'ವಿದ್ಯುತ್ತಿನ ಆವಿಷ್ಕಾರದ ನಂತರ ಮಡಿಕೆ ಮಾಡಲು ವಿದ್ಯುತ್ ಚಕ್ರ ಬಳಕೆಗೆ ಬಂದುದರಿಂದ ಕುಂಭಕಲೆ ಶ್ರಮರಹಿತವು ಸಮಯದ ಉಳಿತಾಯವಾಗಿ ಆಧುನಿಕವಾಗಿ ಮುನ್ನಡೆಯಲು ಸಾಧ್ಯವಾಯಿತು. ಕುಂಭಕಲೆ ಆಧುನಿಕತೆಗೊಳ್ಳಲು ವಿದ್ಯುತ್ತಿನ ಪಾತ್ರ ಬಹಳ ಮುಖ್ಯವಾದದ್ದು. ಸುಧಾರಿತ ಭಟ್ಟಿಗಳು ಬಳಕೆಗೆ ಬಂದವು. ಗಡಿಗೆಗಳನ್ನು ಸುಡಲು ತೈಲ, ಅನಿಲ, ವಿದ್ಯುತ್‌ನ್ನು ಉಪಯೋಗಿಸುವುದು ಆರಂಭವಾಯಿತು. ಹತ್ತು ವರ್ಷಗಳಿಂದೀಚೆಗೆ ಪಾಶ್ಚಿಮಾತ್ಯ ರಾಷ್ಟ್ರಗಳು ಫೈಬರ್ ಕವಚದ ಆವಿಗೆಯನ್ನು ಗಡಿಗೆಗಳನ್ನು ಸುಡಲು ಉಪಯೋಗಿಸಲಾರಂಭಿಸಿವೆ. ಇದರಿಂದಾಗಿ ಗಡಿಗೆಗಳ ಸುಡುವಿಕೆಯ ಕ್ರಮದಲ್ಲಿ ಸಾಕಷ್ಟು ಬದಲಾವಣೆಗಳು ಆಗಿವೆ. ಕೇವಲ ಒಂದೆರಡು ಗಂಟೆಗಳಲ್ಲಿ ಮಡಕೆಗಳನ್ನು ಸುಡಬಹುದಾಗಿದೆ'[೩೫] ಆಧುನಿಕತೆಯ ಸ್ಪರ್ಷ ಪಡೆದುಕೊಂಡ ಕುಂಬಾರಿಕೆ ಇಂದು ಭಿನ್ನವಾದ ನೆಲೆಯಲ್ಲಿ ಎದ್ದು ನಿಲ್ಲುವ ಪ್ರಯತ್ನ ಮಾಡುತ್ತಿದೆ. ಯಾಕೆಂದರೆ ಇಂದಿನ ಆಧುನಿಕ ಯುಗದಲ್ಲಿ ಕುಂಬಾರಿಕೆಯ ದಿನಬಳಕೆಯ ವಸ್ತುಗಳು ಮಾಯವಾಗಿವೆ. ಹೀಗಾಗಿ ಕುಂಬಾರಿಕೆಯನ್ನೇ ನೆಚ್ಚಿಕೊಂಡವರು ಅದರಲ್ಲೇ ಹೊಸತನವನ್ನು ರೂಢಿಸಿಕೊಂಡು ಅಲಂಕಾರಿಕ ಸಾಮಗ್ರಿಗಳನ್ನೂ ಮಾಡುವ ಪ್ರಯತ್ನದಲ್ಲಿರುವುದು ಕಂಡಬರುತ್ತದೆ.

---

೩೩. ಗಂಧದ ಮಡುವ ಕಲಕೂತ : ಕೋಡಿರಾಂಪೂರ ರಂಗಾರೆಡ್ಡಿ : ತಳಗವಾದಿ ಪ್ರಕಾಶನ, ಮೈಸೂರು : ೨೦೦೩ : ಪು-೨೩೭

೩೪. ಕುಂಬಾರ ಜನಾಂಗ : ಕುಂಚೂರು ಬಸವರಾಜ : ಶ್ರೀ ಚಕ್ರ ಪ್ರಕಾಶನ, ದಾವಣಗೆರೆ : ೨೦೦೩ : ಪು-೧೧೯

೩೫. ಕುಂಬಾರ ಜನಾಂಗ : ಕುಂಚೂರು ಬಸವರಾಜ : ಶ್ರೀ ಚಕ್ರ ಪ್ರಕಾಶನ, ದಾವಣಗೆರೆ : ೨೦೦೩ : ಪು-೮೭

ಧಾರವಾಡ ಜಿಲ್ಲೆಯಲ್ಲಿ ಕಾಮನಕಟ್ಟೆ, ಕಲಘಟಗಿ, ಮುಗದ, ತಡಕೋಡ, ಹೆಬ್ಬಳ್ಳಿ, ಅಮ್ಮಿನಬಾವಿ, ಮರೇವಾಡ ಮೊದಲಾದ ಕಡೆ ಕುಂಬಾರಿಕೆಯನ್ನು ಇಂದಿಗೂ ಮುಂದುವರಿಸಿಕೊಂಡು ಬರಲಾಗಿದ್ದು ಮುಗದ ಗ್ರಾಮದಲ್ಲಿ ಈ ಕಾರ್ಯ ಹೆಚ್ಚಾಗಿ ನಡೆಯುತ್ತಿದೆ. ಗ್ರಾಮದಲ್ಲಿ ೧೯೫೬–೫೭ ರ ಆಸುಪಾಸಿನಲ್ಲಿ 'ಮಂಗಳೂರು ಹೆಂಚು ತಯಾರಿಕಾ ಘಟಕ'ವಿತ್ತು, ಆ ಘಟಕ ಮುಚ್ಚಿದ ಮೇಲೆ ಕುಂಬಾರಿಕೆಯನ್ನೇ ಅವಲಂಬಿಸಿದೆವು ಎಂದು ಮುಗದ ಗ್ರಾಮದ ಬಸವರಾಜ ಕುಂಬಾರ(ಬಿ.ಕೆ)[೩೬] ಅವರು ಹಿಂದಿನ ದಿನಗಳನ್ನು ನೆನಪಿಸಿಕೊಳ್ಳುತ್ತಾರೆ. ಕುಂಬಾರಿಕೆಯಲ್ಲಿ ಮುಖ್ಯವಾಗಿ ತಯಾರಿಸುವುದು ಮಡಿಕೆ–ಕುಡಿಕೆಗಳನ್ನು. ಇಂದಿನ ಆಧುನಿಕ ಯುಗದಲ್ಲಿ ಅವು ಮಾಯವಾಗಿರುವುದರಿಂದ ಕೇವಲ ಹಬ್ಬ–ಹರಿದಿನಗಳಲ್ಲಿ ಮಾತ್ರ ಅವುಗಳ ಮಾರಾಟ ಸಾಧ್ಯವಾಗುತ್ತದೆ. ಮೊದಲಾದರೆ ಈ ಮಡಿಕೆ–ಕುಡಿಕೆಗಳಿಗೆ ತುಂಬ ಬೇಡಿಕೆ ಇರುತ್ತಿತ್ತು. ಆ ಬಿಂದಿಗೆಗಳ ಮೇಲೆ ಸುಂದರವಾದ ಚಿತ್ರಗಳನ್ನು, ಗೆರೆಗಳನ್ನು ಮೂಡಿಸಿ ಗಮನ ಸೆಳೆಯುವಂತೆ ಮಾಡಲಾಗುತ್ತಿತ್ತು. ರೇಖಾಚಿತ್ರಗಳ ಮೂಲಕ ಅವುಗಳನ್ನು ಸಿಂಗರಿಸಲಾಗುತ್ತಿತ್ತು. ಆದರೆ ಇದೀಗ ಕಾಲ ಬದಲಾವಣೆಯಾಗಿದೆ. ಮಣ್ಣಿನ ಮಡಿಕೆ, ಕುಡಿಕೆಗಳಿಗೆ ಇಂದು ಹೆಚ್ಚಾಗಿ ಬೇಡಿಕೆ ಇಲ್ಲ. ಹೀಗಾಗಿ ಕುಂಬಾರಿಕೆ ಮಾಡುವವರು ಪರ್ಯಾಯ ಮಾರ್ಗಗಳ ಮೂಲಕ ತಮ್ಮ ವೃತ್ತಿಯನ್ನು ಮುಂದುವರಿಸಿಕೊಂಡು ಬರುತ್ತಿದ್ದಾರೆ.

ಮಡಿಕೆ ಕುಡಿಕೆಗಳ ಜೊತೆಗೆ ಹೂಕುಂಡ, ಪ್ರಣತಿ, ಹೂಜಿ, ಒಲೆ, ಮದುವೆ ಸಂದರ್ಭದಲ್ಲಿ ಉಪಯೋಗಿಸುವ ಗುಗ್ಗಳ ಬಿಂದಿಗೆ, ಕೇಲ್ಐರಣಿಗಳನ್ನು ತಯಾರಿಸಲಾಗುತ್ತದೆ. ಅಲ್ಲದೇ ಗಣಪತಿ, ನಾಗಪ್ಪ, ಬಸವಣ್ಣ (ಎತ್ತು) ಮೊದಲಾದವುಗಳನ್ನು ತಯಾರಿಸಿ ಮಾರುತ್ತಾರೆ. ಅಲ್ಲದೇ ಆನೆ, ಕುದುರೆ, ಜಿಂಕೆ, ಮೊಲ, ನವಿಲು, ತೂಗುದೀಪ ಮೊದಲಾದವುಗಳನ್ನು ತಯಾರಿಸುತ್ತಾರೆ. ಅವುಗಳನ್ನು ಅಲಂಕಾರ ಮಾಡಿ ವಿವಿಧ ಬಗೆಯ ಬಣ್ಣಗಳ ಮೂಲಕ ಸಿಂಗರಿಸಲಾಗುತ್ತದೆ. ಅಲ್ಲದೇ ವಿವಿಧ ನಮೂನೆಯ ಚಿತ್ರಗಳನ್ನು ಅವುಗಳ ಮೇಲೆ ಬಿಡಿಸಿ ಜನರ ಗಮನ ಸೆಳೆಯುವಂತೆ ಮಾಡಲಾಗುತ್ತದೆ.

ಬಿಂದಿಗೆ, ಹರವಿ, ಮಗಿ, ಮುಚ್ಚಳಗಳ ಮೇಲೆ ಸರಳ ರೇಖೆಯ ಗೆರೆ, X ಆಕಾರದ ಗೆರೆಗಳು, ಹೂವು–ಬಳ್ಳಿಗಳ ಚಿತ್ರಗಳನ್ನು ಹಸಿ ಇರುವಾಗಲೇ ಚಿತ್ರಿಸಲಾಗುತ್ತದೆ. ಅವುಗಳ ಬಣ್ಣ ಬಳಿದರಂತೂ ನೋಡಲು ಇನ್ನೂ ಸೊಬಗು. ಇದೀಗ ಟೆರ್ರಕೋಟಾ ಎಂಬ ಆಧುನಿಕ ಕಲೆ ಬೆಳೆದು ಬಂದಿರುವುದರಿಂದ ಮನೆಯನ್ನು ಅಲಂಕರಿಸಲು ವಿವಿಧ ನಮೂನೆಯ ವಸ್ತುಗಳನ್ನು ತಯಾರಿಸುವಲ್ಲಿ ಕುಂಬಾರಿಕೆಯ ವೃತ್ತಿಯವರಲ್ಲದೆ ಇರತರರೂ ಪಾಲ್ಗೊಳ್ಳುತ್ತಿದ್ದಾರೆ.

---

೩೬. ವಕ್ತೃ : ಬಸವರಾಜ ಕುಂಬಾರ(ಬಿ.ಕೆ) : ವಯಸ್ಸು–೫೦ : ಮುಗದ : ೧೪–೦೬–೨೦೧೩

ಆದರೆ ಇಂದು ಕುಂಬಾರಿಕೆಯಿಂದ ತಯಾರಾಗುವ ವಸ್ತುಗಳು ಕೇವಲ ಹಬ್ಬ-ಹರಿದಿನ, ಉತ್ಸವ, ಮದುವೆ ಮೊದಲಾದ ಸಂಭ್ರಮಗಳಲ್ಲಿ ಮಾತ್ರ ಬಳಕೆಯಾಗುತ್ತಿದ್ದು, ಇನ್ನುಳಿದಂತೆ ಕುಂಬಾರಿಕೆ ತನ್ನ ನೆಲೆಯನ್ನು ಕಳೆದುಕೊಳ್ಳುತ್ತಿದೆ. ಹಗುರವಾದ ಪ್ಲಾಸ್ಟಿಕ್ ಬಿಂದಿಗೆಗಳು, ಚೆಂಬುಗಳು ಬಂದಿವೆ, ಅಲಂಕಾರಿಕವಾದ ಸ್ಟೀಲ್ ಮತ್ತು ಇತರೆ ಲೋಹಗಳ ಗೃಹೋಪಯೋಗಿ ವಸ್ತುಗಳು ಎಲ್ಲರ ಮನೆಯನ್ನು ಅಲಂಕರಿಸಿವೆ. ಹೀಗಾಗಿ ಕುಂಬಾರಿಕೆ ವೃತ್ತಿ ಮಾಡುತ್ತಿದ್ದವರು ಇಂದು ಬೇರೆ ಬೇರೆ ವೃತ್ತಿಗಳನ್ನು ಅರಸಿ ಹೊರಟಿದ್ದಾರೆ.

ಈ ವೃತ್ತಿಗಳಲ್ಲದೇ ಇನ್ನೂ ಕೆಲವು ಜನಪದ ಚಿತ್ರಕಲೆಯನ್ನು ಒಳಗೊಂಡ ವೃತ್ತಿಗಳು ಇವೆ. ಅವುಗಳನ್ನು ಕೂಡ ಇಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಇದು ಸಮಗ್ರ ಅಧ್ಯಯನದ ಮಾದರಿಯೂ ಎನಿಸಿಕೊಳ್ಳುತ್ತದೆ. ಯಾಕೆಂದರೆ ಸಾಮಾಜಿಕ ಜೀವನದಲ್ಲಿ ನೂರೆಂಟು ವೃತ್ತಿಗಳು ಕಂಡುಬರುತ್ತವೆ. ಅವುಗಳನ್ನೂ ಕೂಡ ಪ್ರಸ್ತುತ ಅಧ್ಯಾಯದಲ್ಲಿ ಗಣನೆಗೆ ತೆಗೆದುಕೊಳ್ಳಲಾಗಿದೆ. ಹೀಗಾಗಿ ವಿಸ್ತಾರವಾದ ವ್ಯಾಪ್ತಿಯನ್ನು ಹೊಂದಿದ ಜನಪದ ಚಿತ್ರಕಲೆಯನ್ನು ಒಳಗೊಂಡ ವೃತ್ತಿಗಳನ್ನೂ ಇಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

**ಚಮ್ಮಾರಿಕೆ :** ಚಪ್ಪಲಿಗಳನ್ನು ತಯಾರು ಮಾಡುವವರನ್ನು ಚಮ್ಮಾರರು ಅಥವ ಸಮಗಾರರು ಎಂದು ಉತ್ತರ ಕರ್ನಾಟಕದಲ್ಲಿ ಗುರುತಿಸುತ್ತಾರೆ. ಇವರು ಮಾಡುವ ಈ ವೃತ್ತಿಗೆ 'ಚಮ್ಮಾರಿಕೆ' ಎಂದು ಕರೆಯಲಾಗಿದೆ. 'ಮೋಚಿ, ಮೋಚಿಗಾರ್, ಚಮ್ಮಾರ್, ಚಂಬಾರ್, ಸಮಗಾರರೆಲ್ಲರೂ ಚರ್ಮಗಾರಿಕೆ ವೃತ್ತಿ ಮೂಲದವರು. ಚರ್ಮದ ಮೂಲ ವೃತ್ತಿಯಿಂದ ಜೀವನೋಪಾಯ. 'ಮೋಚಿ' ಎಂಬ ಪದವು 'ಮಾಚಿ' ಎಂಬ ಕನ್ನಡ ಪದದಿಂದ ನಿಷ್ಪತ್ತಿಯಾಗಿದೆ. 'ಮಾಚಿ' ಎಂದರೆ ಚಪ್ಪಲಿ ಎಂದರ್ಥವಾಗುವುದು. ಇನ್ನೊಂದು ಶಬ್ದದಲ್ಲಿ ಸಮಗಾರ ಎಂಬುದು ಸಂಸ್ಕೃತದ 'ಚರ್ಮಕಾರ' ಕನ್ನಡದಲ್ಲಿ 'ಚಮಗಾರ' ಆಗಿ ಮುಂದೆ ಚ>ಸ ಪರಿವರ್ತನೆಯಲ್ಲಿ 'ಸಮಗಾರ', 'ಸಮ್ಮಗಾರ' ಎಂದಾಗಿದೆ ಹಾಗೂ ಚಮಗಾರ ಶಬ್ದವೇ ವರ್ಣಪಲ್ಲಟಗೊಂಡು 'ಮಚಗಾರ' ಆಗಿರುವ ಸಾಧ್ಯತೆ ಇದೆ. ಒಟ್ಟಿನಲ್ಲಿ ಸಮಗಾರ ಅಥವಾ ಚಮ್ಮಾರ ಇಲ್ಲವೇ ಮಚಗಾರ ಎಂಬುದು ಒಂದೇ ಜನಾಂಗವಾಗಿದ್ದು, ಪ್ರಾದೇಶಿಕ ಭಿನ್ನತೆಯಿಂದ ಬೇರೆ ಬೇರೆ ಹೆಸರುಗಳಿಂದ ಕರೆಯಲ್ಪಟ್ಟಿವೆ. ಪಾದರಕ್ಷೆಗಳಿಗೆ ಇನ್ನೊಂದು ಹೆಸರು 'ಮೊಚ್ಚೆ'. ಇದರಿಂದಾಗಿ ಮೊಚ್ಚೆಗಳನ್ನು ತಯಾರಿಸುವವರಿಗೆ ಮಚ್ಚಿಗಾರರೆಂದೂ ಕರೆಯುತ್ತಾರೆ.'[೩೭]

೩೭ .ಉತ್ತರ ಕರ್ನಾಟಕದ ಸಮಗಾರರು: ಜಾನಪದೀಯ ಅಧ್ಯಯನ (ಅಪ್ರಕಟಿತ ಮಹಾಪ್ರಬಂಧ) : ಗಂಗಾಧರ ಗ. ಗರಗ : ಕ.ವಿ.ವಿ ಧಾರವಾಡ : ೨೦೦೬ : ಪು-೧೩

‘ಬಹಳ ಪ್ರಾಚೀನ ಕಾಲದಿಂದಲೂ ಮಾನವ ಚರ್ಮದ ಚಪ್ಪಲಿಗಳನ್ನು ತಯಾರಿಸಿ ಉಪಯೋಗಿಸುತ್ತಿದ್ದನು. ಆಹಾರಕ್ಕಾಗಿ ಪ್ರಾಣಿಗಳನ್ನು ಕೊಂದು, ಮಾಂಸವನ್ನು ತೆಗೆದುಕೊಂಡು ಉಳಿದ ಚರ್ಮವನ್ನು ಉಡುಪಾಗಿ, ಹೊದಿಕೆಯಾಗಿ, ಪಾದುಕೆಗಳಾಗಿ ಬಳಸುತ್ತಿದ್ದನು. ಜಗತ್ತಿನ ಪ್ರತಿಯೊಂದು ಜನಾಂಗದ ಸಂಸ್ಕೃತಿಯ ಪ್ರಾರಂಭದಲ್ಲೂ ಚರ್ಮದ ಬಳಕೆಯನ್ನು ಕಾಣಬಹುದು. ಸ್ಮೃತಿ ಪುರಾಣ ಹಾಗೂ ರಾಮಾಯಣಗಳಲ್ಲೆಲ್ಲ ಪಾದುಕೆಗಳ ಉಲ್ಲೇಖವಿದೆ. ಆ ಕಾಲಕ್ಕಾಗಲೇ ಚರ್ಮ ಪ್ರಸಾಧನ ಅಭಿವೃದ್ಧಿ ಹೊಂದಿತ್ತೆಂಬುದರ ಬಗ್ಗೆ ದಾಖಲೆಗಳಿವೆ. ಅಂದರೆ ಕ್ರಿ.ಪೂ ೫೦೦ ರ ಹೊತ್ತಿಗೆ ಚರ್ಮದ ವಸ್ತುಗಳ ಬಳಕೆ ಅಪಾರವಾಗಿತ್ತು.’[೩೮] ಎಂದು ಗಂಗಾಧರ ಗರಗ ಅವರು ಅಭಿಪ್ರಾಯಪಡುತ್ತಾರೆ.

ಧಾರವಾಡ ಜಿಲ್ಲೆಯಾದ್ಯಂತ ಚಮ್ಮಾರಿಕೆ ವೃತ್ತಿಯನ್ನೇ ನಂಬಿಕೊಂಡಿದ್ದ ಹಲವಾರು ಕುಟುಂಬಗಳಿದ್ದವು ಎಂಬುದು ಹಿಂದಿನ ಮಾತು. ಇಂದು ಕೆಲವೇ ಕುಟುಂಬಗಳು ಚಮ್ಮಾರಿಕೆ ವೃತ್ತಿಯಲ್ಲಿ ತೊಡಗಿಕೊಂಡಿರುವುದು ಅಚ್ಚರಿಯ ಸಂಗತಿ. ಜಿಲ್ಲೆಯ ಮಿಶ್ರಿಕೋಟೆಯಲ್ಲಿ ತಯಾರಾಗುವ ಚರ್ಮದ ಚಪ್ಪಲಿಗಳು ‘ಕೊಲ್ಲಾಪುರ ಚಪ್ಪಲಿ’ಗಳಷ್ಟೇ ಪ್ರಸಿದ್ಧಿ ಪಡೆದಿವೆ. ‘ಮಿಶ್ರಿಕೋಟೆಯ ಚಪ್ಪಲಿಗಳು ಚರ್ಮದಿಂದ ಮಾಡಿದ ಸುಂದರ ಕರಕುಶಲ ಕಲೆಗಾರಿಕೆಯಿಂದ ಕೂಡಿದ್ದು, ವಿನ್ಯಾಸ, ಹೊಲಿಗೆ, ಶೃಂಗಾರದಲ್ಲಿ ನೋಡುಗರ ಹಾಗೂ ಗ್ರಾಹಕರ ಮನ ಸೆಳೆಯುತ್ತವೆ. ಧರಿಸುವವರ ದೇಹಕ್ಕೆ ತಂಪು ನೀಡಿ ಆರೋಗ್ಯವನ್ನು ಕಾಪಾಡುವುದರ ಜೊತೆಗೆ ಪಾದದ ರಕ್ಷಣೆಯನ್ನು ಮಾಡುತ್ತವೆ.’[೩೯] ಎಂದು ಚಪ್ಪಲಿ ತಯಾರಕ ಅರವಿಂದ ಅವರು ಹೇಳುತ್ತಾರೆ.

ಕರಕುಶಲ ಕಲೆಯಿಂದ ಕೂಡಿದ ಚರ್ಮದ ಪಾದರಕ್ಷೆಗಳು ವೈವಿಧ್ಯಮಯವಾಗಿದ್ದು ಬೇರೆ ಬೇರೆ ಹೆಸರುಗಳಿಂದ ಗುರುತಿಸಲ್ಪಡುತ್ತಿವೆ. ಇಂಥ ಚಪ್ಪಲಿಗಳ ವಿಧಗಳನ್ನು ಗಂಗಾಧರ ಗರಗ ಅವರು ಹೀಗೆ ಗುರುತಿಸುತ್ತಾರೆ.[೪೦] ಒಂಟಿಬಾರ, ಕಿರಬಾರ, ಜೋಡ ಪಟ್ಟಿಬಾರ, ಸಂಪತ್ತಿಗೆ ಸವಾಲ್, ಮಯೂರ, ಕುರುವರ ಕೆರವು, ತವರು ಬಣ್ಣದ ಚಪ್ಪಲಿ, ದಾಲಿಬಾರ, ಕಾಪಸಿ, ರೆಕ್ಕೆಜೋಡು, ಪುರಂದರವಾಡ, ಕೊಕ್ಕಣಿ, ದೇಶಿ, ಕತ್ರಿಪಟ, ಹೆಣಿಕಿ ಚಪ್ಪಲಿ, ಪಟ್ಟ ಕಾಲ್ಮರಿ, ಸೀಳ ಕಾಲ್ಮರಿ, ಹೆಣಿಕಿ ಕಾಪಸಿ, ಕೊಡ್ಡಗೆರವು ಮುಂತಾದ ವಿಧಗಳು ಕಂಡುಬರುತ್ತವೆ. ಅಲ್ಲದೆ ಗಾಂಧೀ

---

೩೮ .ಉತ್ತರ ಕರ್ನಾಟಕದ ಸಮಗಾರರು: ಜಾನಪದೀಯ ಅಧ್ಯಯನ (ಅಪ್ರಕಟಿತ ಮಹಾಪ್ರಬಂಧ) : ಗಂಗಾಧರ ಗ. ಗರಗ : ಕ.ವಿ.ವಿ ಧಾರವಾಡ : ೨೦೦೬ : ಪು-೩೦

೩೯ .ವಕ್ತೃ : ಅರವಿಂದ ಮಾದರ : ವಯಸ್ಸು-೪೭ : ಮಿಶ್ರಿಕೋಟೆ : ೧೮-೦೮-೨೦೧೪

೪೦. ಉತ್ತರ ಕರ್ನಾಟಕದ ಸಮಗಾರರು: ಜಾನಪದೀಯ ಅಧ್ಯಯನ (ಅಪ್ರಕಟಿತ ಮಹಾಪ್ರಬಂಧ) : ಗಂಗಾಧರ ಗ. ಗರಗ : ಕ.ವಿ.ವಿ ಧಾರವಾಡ : ೨೦೦೬ : ಪು-೫೧-೫೨

ಚಪ್ಪಲಿ, ಜವಾರಿ ಚಪ್ಪಲಿ, ಬಂಟೂ ಚಪ್ಪಲಿ, ಕಚ್ಚ ಪಟ್ಟಿ ಚಪ್ಪಲಿ, ಪಾಂಡಿಚೇರಿ ಚಪ್ಪಲಿ, ತೇರೆ ನಾಮ್ ಚಪ್ಪಲಿ, ಧೂಮ್ ಚಪ್ಪಲಿ ಹೀಗೆ ಮುಂತಾದ ಚಪ್ಪಲಿಗಳನ್ನು ತಯಾರಿಸುವುದಾಗಿ ಚಪ್ಪಲಿ ತಯಾರಕರಾದ ಮಂಜುನಾಥ ದೊಡವಾಡ[೪೧] ಅವರು ಹೇಳುತ್ತಾರೆ.

ಇವರು ತಯಾರಿಸುವ ಚರ್ಮದ ಚಪ್ಪಲಿಗಳಲ್ಲಿ ಹೆಣಿಕೆ, ಹೊಲಿಗೆಗಳಿಂದ ಹೆಣಿಕೆಗಳ ನಡಬಾರು, ಚಾಪಿ ಹೆಣಿಕೆ, ಸಣ್ಣ ಹೆಣಿಕೆ ಎಳೆಗಳು, ಹೆಣಿಕೆ ಪಟ್ಟಿಗಳು, ಜಿಗ್‌ಜಾಗ್ ಮಾದರಿಯ ಗಿರಬಾರು, ಗಂಟುಬಾರುಗಳು ಹಾಗೂ ಚರ್ಮದ ಗೊಂಡೆಗಳು, ಎಲೆಗೊಂಡೆಗಳು, ಬಾರು ಹಾಕಿದ ಚಿತ್ರಗಳು, ಕಿಟಕಿ ಆಕಾರದ ಚರ್ಮದ ಎಳೆಗಳು, ಕತ್ರಿ ಬಾರುಗಳು ಅಲ್ಲದೇ ಅಕ್ಕಪಕ್ಕದಲ್ಲಿ ಕಾಪಸಿ ಅಥವ ರೆಕ್ಕೆಗಳು, ಬಕ್ಕಲ್ ಪಟ್ಟಿಯಂಥ ವೈವಿಧ್ಯತೆಯಿಂದ ಕೂಡಿದ ವಿನ್ಯಾಸಗಳನ್ನು ಗಮನಿಸಬಹುದಾಗಿದ್ದು, ತೂತಿನ ರಿಂಗ್‌ಗಳು, ಹಿತ್ತಾಳೆ ಬಾಗಿ ರಿಂಗ್‌ಗಳು, ರಿಪ್ಪಿಟ್‌ಗಳು, ಎಲಿಪಂಚ್, ಪಂಚಿನ ಚಿತ್ರ, ಚರ್ಮದ ತುಕಡಿಯಿಂದ ಮಾಡಿದ ಚಿತ್ರಗಳು ಚಪ್ಪಲಿಯ ಸೌಂದರ್ಯಕ್ಕೆ ಮೆರುಗು ನೀಡುತ್ತವೆ. ಒಂದಕ್ಕಿಂತ ಒಂದು ಸುಂದರ ವಿನ್ಯಾಸಗಳಲ್ಲಿ ಅವರ ಕಲೆಗಾರಿಕೆಯು ಪ್ರದರ್ಶನಗೊಳ್ಳುತ್ತದೆ.

ಎಲ್ಲ ಕ್ಷೇತ್ರಗಳಲ್ಲಿಯೂ ಆಧುನಿಕತೆ ತನ್ನ ಪ್ರಭಾವವನ್ನು ಇಂಥ ಸಾಂಪ್ರದಾಯಿಕ ವೃತ್ತಿ ಕಲೆಗಳ ಮೇಲೆ ತನ್ನ ಕರಾಳ ಛಾಯೆ ಬೀರಿದೆ. ಹಿಂದೆಲ್ಲ ಎಷ್ಟೋ ಕುಟುಂಬಗಳು ಈ ವೃತ್ತಿಯನ್ನೇ ನಂಬಿ ಬದುಕುತ್ತಿದ್ದ ಕಾಲ ಮರೆಯಾಗುತ್ತಿದೆ. ಈಗ ಯಂತ್ರಗಳಿಂದ ತಯಾರಾಗುವ ಚಪ್ಪಲಿಗಳು ತಯಾರಾಗುತ್ತಿದ್ದು, ತಯಾರು ಮಾಡುವ ಕೆಲಸ ಬಿಟ್ಟು ಚಪ್ಪಲಿ ರಿಪೇರಿ ಕಾಯಕದಲ್ಲಿ ಕಾಲ ನೂಕುತ್ತಿರುವುದು ವಿಷಾಧಕರ ಸಂಗತಿಯಾಗಿದೆ.

**ಕಂಚುಗಾರರು :** ತಾಮ್ರದ ಪಾತ್ರೆಗಳನ್ನು ತಯಾರಿಸುವವರನ್ನು ಕಂಚುಗಾರರು ಎನ್ನಲಾಗುತ್ತದೆ. ಕೆಲವು ಸಲ ಇವರು ಪಾತ್ರೆಗಳ ರಿಪೇರಿ ಕೂಡ ಮಾಡುತ್ತಾರೆ. ಮೊದಲಿಗೆ ಇವರು ಕಂಚಿನ ವಸ್ತುಗಳನ್ನು ವಿಶೇಷವಾಗಿ ತಯಾರಿಸುತ್ತಿರುವುದರಿಂದ ಇವರನ್ನು ಕಂಚುಗಾರರು ಎಂದು ಕರೆದಿರಬಹುದಾದ ಸಾಧ್ಯತೆ ಇದೆ. ಸ್ಟೀಲ್ ಮತ್ತು ಪ್ಲಾಸ್ಟಿಕ್ ಪಾತ್ರೆಗಳ ಭರಾಟೆಯಲ್ಲಿ ತಾಮ್ರದ ಪಾತ್ರೆಗಳು ಇಂದು ಕಡಿಮೆಯಾಗಿವೆ. ಇವು ಆರೋಗ್ಯ ಕಾಪಾಡುವಲ್ಲಿ ಬಹುಮುಖ್ಯ ಪಾತ್ರ ವಹಿಸುತ್ತವೆ. ತಾಮ್ರದ ಪಾತ್ರೆಗಳಲ್ಲಿಯ ಆಹಾರ, ನೀರು ಆರೋಗ್ಯಕ್ಕೆ ಹಿತಕಾರಿಯಾಗಿರುತ್ತದೆ. ಧಾರವಾಡ ಜಿಲ್ಲೆಯಲ್ಲಿ ಇಂದಿಗೂ ಈ ಕಾರ್ಯವನ್ನು ಮಾಡುತ್ತ ಉಪಜೀವನ ಮಾಡುವ ಕುಟುಂಬಗಳಿವೆ. ಹುಬ್ಬಳ್ಳಿಯ ಜಾಮೀಯಾ ಮಸೀದಿ ರಸ್ತೆಯಲ್ಲಿ ಇರುವ ೬೮ ವರ್ಷದ

---

೪೧. ವಕ್ತೃ : ಮಂಜುನಾಥ ದೊಡವಾಡ : ವಯಸ್ಸು-೪೫ : ಮಿಶ್ರಿಕೋಟೆ : ೧೮-೦೮-೨೦೧೪

ಜಾಫರ್‌ಸಾಬ್ ತಹಶೀಲ್ದಾರ ಅವರ ಮುಂದಾಳತ್ವದಲ್ಲಿ ತಾಮ್ರದ ಪಾತ್ರೆಗಳು ಸಿದ್ಧಗೊಳ್ಳುತ್ತಿದ್ದು, ಇವು ನೋಡಲು ಸುಂದರವೂ ಆಗಿರುತ್ತವೆ. ಹಂಡೆ, ಕೊಡ, ತಂಬಿಗೆ, ಗಿಂಡಿ, ಪಾತ್ರೆ, ಫಿಲ್ಟರ್, ದೇವರ ಕಳಸ ಮೊದಲಾದವುಗಳನ್ನು ಇಲ್ಲಿ ತಯಾರಿಸಲಾಗುತ್ತದೆ. ಇವುಗಳ ಮೇಲೆ ನಕ್ಷತ್ರ, ಚುಕ್ಕಿ, ಗೆರೆ, ಕಚ್ಚು ಮತ್ತು ವಿಧ ವಿಧವಾದ ಚಿತ್ರಗಳನ್ನು ಕೊರೆಯಲಾಗುತ್ತದೆ. ಇದೊಂದು ಜನಪದ ಕರಕುಶಲ ಕಲೆಯಾಗಿದ್ದು ಕಚ್ಚಾ ತಾಮ್ರವನ್ನು ತರಿಸಿಕೊಂಡು ವಸ್ತುಗಳನ್ನು ಸಿದ್ಧಪಡಿಸುತ್ತಿದ್ದರು. ಇತ್ತೀಚೆಗೆ ತಾಮ್ರದ ತಗಡುಗಳು ಸಿಗುತ್ತಿರುವುದರಿಂದ ಇವರ ಶ್ರಮ ಒಂದಿಷ್ಟು ಕಡಿಮೆಯಾಗಿದೆ. ಸುಮಾರು ಎಂಟು ಜನರು ಇಲ್ಲಿ ಕೆಲಸ ಮಾಡುತ್ತಾರೆ. ಇಲ್ಲಿ ತಯಾರಾಗುವ ವಸ್ತುಗಳಿಗೆ ಧಾರವಾಡ ಜಿಲ್ಲೆ ಸೇರಿದಂತೆ, ಹಾವೇರಿ, ದಾವಣಗೆರೆ, ಗದಗ ಮೊದಲಾದ ಜಿಲ್ಲೆಗಳಲ್ಲಿಯೂ ಬೇಡಿಕೆ ಇದೆ.[೪೨]

ಆಧುನಿಕ ಕಾಲಘಟ್ಟದ ಆರಂಭ ಕಾಲದಲ್ಲಿ ಇದು ಸಹಜವಾಗಿಯೇ ಅವಗಾಹನೆಗೆ ಕಾರಣವಾಯಿತು. ಆದರೆ ಇಂದು ವೈಜ್ಞಾನಿಕ ಆವಿಷ್ಕಾರಗಳು ನಡೆದು ಹೊಸ ಹೊಸ ವಿಚಾರಗಳನ್ನು ಪ್ರತಿಪಾದಿಸಿದಾಗ ಹಳೆಯವುಗಳಲ್ಲಿ ಕೆಲವು ವಸ್ತುಗಳು ಹೊನ್ನು ಎಂಬ ವಾಸ್ತವದ ಅರಿವುಂಟಾಗುತ್ತಿದೆ. ತಾಮ್ರದ ತಂಬಿಗೆಯಲ್ಲಿ ನೀರು ಕುಡಿಯುವುದರಿಂದ ಮನುಷ್ಯನಿಗೆ ರೋಗ ನಿರೋಧಕ ಶಕ್ತಿ ಹೆಚ್ಚಾಗುತ್ತದೆ ಎಂಬುದು ವಿಜ್ಞಾನ ಇಂದು ಸಾರುತ್ತಿದೆ. ಹೀಗಾಗಿ ಕೆಲವರು ಮತ್ತೇ ತಾಮ್ರದ ಪಾತ್ರೆಗಳ ಮೊರೆ ಹೋಗತೊಡಗಿದ್ದಾರೆ. ಮುಂಬರುವ ಕಾಲದಲ್ಲಿ ಈ ಪ್ಲಾಸ್ಟಿಕ್ ಮತ್ತು ಉಳಿದ ಲೋಹಗಳ ಪಾತ್ರೆಗಳು ಇನ್ನಿಲ್ಲವಾಗಿ ತಾಮ್ರದ ಪಾತ್ರೆಗಳು ಮತ್ತೆ ವಿಜೃಂಭಿಸಬಹುದು ಎಂಬ ಊಹೆ ಕೂಡ ಇಲ್ಲಿ ಮಾಡಬೇಕಾಗುತ್ತದೆ.

**ಲೋಹದ ಮೂರ್ತಿ ತಯಾರಕರು :** ಹಿತ್ತಾಳೆ, ಬೆಳ್ಳಿ, ತಾಮ್ರ ಮತ್ತು ಚಿನ್ನ ಲೇಪಿತ ಮೂರ್ತಿಗಳನ್ನು ತಯಾರಿಸುವುದರ ಜೊತೆಗೆ ಚಿನ್ನ ಮತ್ತು ಬೆಳ್ಳಿ ಲೇಪಿತ ಬಾಗಿಲುಗಳನ್ನು ದೇವಾಲಯಗಳಿಗೆ ತಯಾರಿಸಿ ಕೊಡುತ್ತಾರೆ. ಧಾರವಾಡ ಜಿಲ್ಲೆಯ ಹುಬ್ಬಳ್ಳಿಯಲ್ಲಿ ಇರುವ ಸಾಯಿನಾಥ ಹಿತ್ತಾಳೆಯವರು ಈ ಕಾರ್ಯದಲ್ಲಿ ಹೆಸರು ಗಳಿಸಿದ್ದಾರೆ. ತಮ್ಮ ಅಜ್ಜ ರುದ್ರಪ್ಪ ಮತ್ತು ಮುತ್ತಜ್ಜ ಭೀಮರಾಯಪ್ಪ ಕೂಡ ಇದೇ ವೃತ್ತಿಯನ್ನು ಮಾಡುತ್ತಿದ್ದು, ಈ ಕಾಯಕ ತಮಗೆ ವಂಶಪಾರಂಪರ್ಯವಾಗಿ ಬಂದಿದೆ ಎಂಬುದನ್ನು ಅವರು ಹೇಳುತ್ತಾರೆ.[೪೩] ಯಲ್ಲಮ್ಮ, ದುರ್ಗಾದೇವಿ, ಕಾಳಿಕಾದೇವಿ, ಶಿವ, ಶಿವನ ತಲೆಯ ಹಿಂದೆ ನೆರಳಾಗಿರುವ ಹಲವಾರು ಹೆಡೆಗಳನ್ನು ಹೊಂದಿದ ಸರ್ಪ, ಸಿಂಹ ಮೊದಲಾದ ಮೂರ್ತಿಗಳನ್ನು ಮಾತ್ರವಲ್ಲದೇ ಅವುಗಳ ಮುಖ ಮತ್ತು

---

೪೨. ಕ್ಷೇತ್ರಕಾರ್ಯ : ೧೪-೦೩-೨೦೧೨

೪೩. ಕ್ಷೇತ್ರಕಾರ್ಯ : ೧೪-೦೩-೨೦೧೨

ಹಸ್ತಗಳನ್ನು ಕೂಡ ಇವರು ಮಾಡಿಕೊಡುತ್ತಾರೆ. ಸಿದ್ಧಾರೂಢ ಮಠದ ಬೆಳ್ಳಿ ಪಾದುಕೆ, ದಾಜೀಬಾನ ಪೇಟೆಯ ಗಣೇಶ ಗುಡಿಯ ಬೆಳ್ಳಿ ಮಂಟಪ, ಬರದ್ವಾಡದ ಪಂಚಲೋಹಗಳಿಂದ ಮಾಡಿರುವ ಗಣಪತಿ ಮೂರ್ತಿ, ಮೊಹರಂ ಹಬ್ಬದಲ್ಲಿ ಬಳಸುವ ಬೆಳ್ಳಿ ಪಂಜಾಗಳು, ಬೆಳ್ಳಿ ಶಿಲುಬೆಗಳು, ಕಳಸಗಳನ್ನೂ ಇವರು ತಯಾರಿಸುತ್ತಾರೆ. ಈ ವೃತ್ತಿ ಅನಿಶ್ಚಿತವಾಗಿರುವುದರಿಂದ ಇವರು ಅದಕ್ಕಾಗಿ ಪ್ರತ್ಯೇಕವಾದ ಅಂಗಡಿಯನ್ನು ಹಾಕಿಲ್ಲ. ಬೇಡಿಕೆಯನ್ನು ಅನುಸರಿಸಿ ಮೂರ್ತಿಗಳನ್ನು ತಯಾರಿಸಿ ಕೊಡುವ ಇವರ ಉಪಜೀವನಕ್ಕೆ ಯಾವುದೇ ಕೊರತೆ ಆಗಿಲ್ಲ. ಈ ಕಲೆಯಲ್ಲಿ ಸೂಕ್ಷ್ಮವಾದ ಕೆತ್ತನೆ ಇರುತ್ತದೆ. ಮೂರ್ತಿಗಳು ಸುಂದರವಾಗಿ ಕಾಣಲು ಇವುಗಳಿಗೆ ಪಾಲಿಶ್ ಕೂಡ ಹಾಕಲಾಗುತ್ತದೆ.

**ಗಣಪತಿ ತಯಾರಿಕೆ :** ಉತ್ತರ ಕರ್ನಾಟಕದಲ್ಲಿ ಗಣಪತಿ ಹಬ್ಬದಲ್ಲಿ ಗಣಪತಿ ವಿಗ್ರಹಗಳನ್ನು ಮಾಡುವಲ್ಲಿ ಧಾರವಾಡ ಜಿಲ್ಲೆಯೂ ಹೆಸರುವಾಸಿಯಾಗಿದೆ. ಜಿಲ್ಲೆಯ ಹುಬ್ಬಳ್ಳಿ, ಅಮ್ಮಿನಭಾವಿ, ಛಬ್ಬಿ ಮೊದಲಾದ ಕಡೆ ಈ ಗಣೇಶ ವಿಗ್ರಹಗಳನ್ನು ತಯಾರಿಸಲಾಗುತ್ತಿದೆ. ಗಣೇಶ ಚತುರ್ಥಿ ಹಬ್ಬದಲ್ಲಿ ಮಾತ್ರ ಈ ಕಾರ್ಯ ನಡೆಯುವುದರಿಂದ ವಿವಿಧ ಕಾರ್ಯಗಳನ್ನು ಮಿಕ್ಕ ಸಮಯದಲ್ಲಿ ನಿರ್ವಹಿಸಬೇಕಾಗುತ್ತದೆ ಎಂಬುದು ಅಮ್ಮಿನಭಾವಿಯ ದೇವೇಂದ್ರಪ್ಪ ಬಳಿಗೇರ ಹೇಳುತ್ತಾರೆ.[೪೪] ಹಳೆ ಹುಬ್ಬಳ್ಳಿಯ ಬೊಮ್ಮಾಪುರ ಓಣಿಯಲ್ಲೇ ಸುಮಾರು ೨೦ಕ್ಕೂ ಹೆಚ್ಚು ಕುಟುಂಬಗಳು ಈ ಕಾರ್ಯದಲ್ಲಿ ತೊಡಗಿಕೊಳ್ಳುತ್ತವೆ. ನಾವು ಮಾಡುವ ಗಣಪತಿ ಮೂರ್ತಿಗಳಿಗೆ ಗುಬ್ಬಿರಾಳು, ಅಂಟು, ಹರಳೆಣ್ಣೆ ಮುಂತಾದ ನೈಸರ್ಗಿಕವಾಗಿ ದೊರೆಯುವ ಕಚ್ಚಾವಸ್ತುಗಳನ್ನೇ ಕುಟ್ಟಿ ಪುಡಿಮಾಡಿ, ಕಾಯಿಸಿ, ಸೋಸಿ, ಆರಿಸಿ ಬಣ್ಣವನ್ನು ಸಿದ್ಧಮಾಡಿಕೊಳ್ಳುತ್ತೇವೆ. ಎಲ್ಲ ಬಣ್ಣಗಳೂ ನೈಸರ್ಗಿಕವಾದವುಗಳಾಗಿದ್ದು ಪರಿಸರಕ್ಕೆ ಯಾವುದೇ ಹಾನಿ ಮಾಡುವುದಿಲ್ಲ ಎಂದು ಹುಬ್ಬಳ್ಳಿ ಬೊಮ್ಮಾಪುರ ಓಣಿಯ ಉದಯ ಕಾಂಬಳೆ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ.[೪೫]

ಛಬ್ಬಿಯ ಗಣಪತಿ ವಿಗ್ರಹಕ್ಕೆ ತುಂಬ ಪ್ರಾಮುಖ್ಯತೆ ಇದೆ. ಗ್ರಾಮದ ಈರಣ್ಣ ಬಡಿಗೇರ ಮತ್ತು ಮಹಾದೇವ ಬಡಿಗೇರ ಅವರು ತಯಾರಿಸುವ ರಕ್ತ ಕೆಂಪು ಬಣ್ಣದ ಗಣಪತಿ 'ಛಬ್ಬಿ ಗಣಪತಿ' ಎಂದೇ ಪ್ರಸಿದ್ಧಿಯನ್ನು ಪಡೆದುಕೊಂಡಿದೆ. ೧೮೨೭-೨೮ ರಿಂದಲೂ ಈ ಕಾರ್ಯವನ್ನು ಬಡಿಗೇರ ಕುಟುಂಬವೇ ಮಾಡಿಕೊಂಡು ಬಂದಿದೆ.[೪೬] ಹಬ್ಬಕ್ಕೆ ಒಂದೆರಡು ತಿಂಗಳು ಮುಂಚೆಯೇ ಕೆಂಪು ಮಣ್ಣನ್ನು ತಂದು ಅದರಲ್ಲಿನ ಕಸಕಡ್ಡಿಗಳನ್ನು ಆರಿಸಿ ತೆಗೆದು,

---

೪೪. ಕ್ಷೇತ್ರಕಾರ್ಯ : ೦೩-೦೭-೨೦೧೨
೪೫. ಕ್ಷೇತ್ರಕಾರ್ಯ : ೨೩-೦೨-೨೦೧೩
೪೬. ಕ್ಷೇತ್ರಕಾರ್ಯ : ೧೬-೦೪-೨೦೧೪

ಮಡಿಮಾಡಿ, ಜರಡಿ ಹಿಡಿದು ಅದಕ್ಕೆ ನೀರು ಹಾಕಿ ನೆನೆಯಲು ಬಿಡುತ್ತಾರೆ. ಕೆಲದಿನಗಳ ನಂತರ ಹದಮಾಡಿಕೊಂಡ ಮಣ್ಣಿನಲ್ಲಿ ಮೂರ್ತಿ ತಯಾರಿಕೆಯಲ್ಲಿ ತೊಡಗುತ್ತಾರೆ. ಹಬ್ಬದ ಹೊತ್ತಿಗೆ ಕೆಂಪು ಬಣ್ಣದ ಗಣಪತಿ ಮೂರ್ತಿ ಸಿದ್ಧವಾಗುತ್ತದೆ. ಈ ಗಣಪತಿಯನ್ನು ನೋಡಲು ದೇಶದ ನಾನಾ ಭಾಗಗಳಿಂದ ಜನರು ಬರುತ್ತಾರೆ.

ಧಾರವಾಡ ಜಿಲ್ಲೆಯಲ್ಲಿ ಇತ್ತೀಚೆಗೆ ಪರಿಸರ ಕಾಳಜಿಯ ಕಾರಣವಾಗಿ ಪರಿಸರಸ್ನೇಹಿ ಗಣಪತಿ ಮೂರ್ತಿಯನ್ನು ಮಾಡುವ ಮತ್ತು ಕೊಳ್ಳುವ ಪ್ರವೃತ್ತಿ ಹೆಚ್ಚಾಗುತ್ತಿದೆ. ಈ ಪರಿಸರಸ್ನೇಹಿ ಗಣಪತಿ ಮೂರ್ತಿಗಳನ್ನು ಎರಡು ಬಗೆಯಾಗಿ ವಿಂಗಡಿಸಬಹುದು. ಒಂದು ಬಣ್ಣರಹಿತ ಗಣಪತಿ ಮೂರ್ತಿ ಮತ್ತು ನೈಸರ್ಗಿಕ ಬಣ್ಣಗಳಿಂದ ತಯಾರಿಸಲಾದ ಗಣಪತಿ ಮೂರ್ತಿ. ಇವೆರಡಕ್ಕೂ ಧಾರವಾಡ ಜಿಲ್ಲೆಯಲ್ಲಿ ಈಗೀಗ ಬೇಡಿಕೆ ಹೆಚ್ಚಾಗುತ್ತಿದೆ. ಇದರ ಸಲುವಾಗಿ ಧಾರವಾಡದ ಕ್ರಿಯಾಶೀಲ ಬಳಗ ಅವಿರತವಾಗಿ ಕಾರ್ಯ ಮಾಡುತ್ತಿದೆ. ಪರಿಸರಸ್ನೇಹಿ ಗಣಪತಿ ಮೂರ್ತಿ ತಯಾರಿಕೆಗೆ ಉತ್ತೇಜನ ಕೊಡುತ್ತದೆ ಮತ್ತು ಅವುಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸುವ ಪ್ರಯತ್ನ ಮಾಡುತ್ತಿದೆ. 'ಈ ವರ್ಷ ಗಣಪನನ್ನು ಮಾಡುವ ಕಲಾವಿದರನ್ನು ಸಂಘಟಿಸಿ, ಪರಿಸರಸ್ನೇಹಿ ಗಣಪನನ್ನು ಸಿದ್ಧಗೊಳಿಸಲು ಮನವರಿಕೆ ಮಾಡಿಕೊಟ್ಟೇವು. ಆದರೆ ಮಾರಾಟದ್ದೇ ಸಮಸ್ಯೆ ಎಂದು ಕಲಾವಿದರು ಹೇಳಿದಾಗ ಧಾರವಾಡದ ಮಾಳಮಡ್ಡಿಯ ೭ನೇ ಕ್ರಾಸಿನಲ್ಲಿ ನಮ್ಮ ಮನೆಯಲ್ಲಿಯೇ ಪರಿಸರಸ್ನೇಹಿ ಗಣಪನನ್ನು ಮಾರಲು ಅವಕಾಶ ಮಾಡಿಕೊಟ್ಟಿದ್ದೇವೆ. ತೇಜಸ್ವಿ ನಗರದಲ್ಲಿ ಕಾಂಬಳೆ, ಕೆಲಗೇರಿಯ ಆಂಜನೇಯ ನಗರದಲ್ಲಿ ಮಂಜುನಾಥ ಹಿರೇಮಠ, ಮಾಳಮಡ್ಡಿಯಲ್ಲಿ ಪ್ರಾಣೇಶ ಕದರಮಂಡಲಗಿ ಪರಿಸರಸ್ನೇಹಿ ಗಣಪನನ್ನು ಮಾರುತ್ತಾರೆ'[೪೭] ಎಂದು ಕ್ರಿಯಾಶೀಲ ಗೆಳೆಯರ ಬಳಗದ ಅಧ್ಯಕ್ಷ ಮುಕುಂದ ಮೈಗೂರ ಅವರು ಹೇಳುತ್ತಾರೆ.

ಈ ಪರಿಸರ ಸ್ನೇಹಿ ಬಣ್ಣದ ಗಣಪತಿ ಮೂರ್ತಿ ತಯಾರಿಕೆಯಲ್ಲಿ ಅಷ್ಟಗಂಧ, ಗೋಪಿಚಂದನ, ಪಾಲಕ್ ಸೊಪ್ಪಿನಿಂದ ತಯಾರಿಸಲಾದ ಹಸಿರು ಬಣ್ಣ, ಚೆಂಡು ಹೂವಿನಿಂದ ಅರಿಸಿನ, ಸೇವಂತಿಗೆ ಹೂವಿನಿಂದ ಕೆಂಪು, ಬೀಟ್‌ರೂಟ್‌ನಿಂದ ಕೆಂಪು ಬಣ್ಣಗಳನ್ನು ಬಳಸಲಾಗುತ್ತದೆ. ಬಿಳಿ ಬಣ್ಣಕ್ಕೆ ಸುಣ್ಣ ಬಳಸುತ್ತಾರೆ ಇಲ್ಲವೆ ಬಳಪದ ಕಲ್ಲನ್ನು ನೀರಿನಲ್ಲಿ ತೇಯ್ದು ಬಿಳಿ ಬಣ್ಣವನ್ನು ತಯಾರಿಸಿ ಬಳಸಲಾಗುತ್ತದೆ. ಕಬ್ಬಿಣದ ತುಕ್ಕಿಗೆ ಬೆಲ್ಲ ಕೂಡಿಸಿದರೂ ಕೆಂಪು ಬಣ್ಣ ದೊರೆಯುತ್ತದೆ. ಪಾನಬೀಡಾದಲ್ಲಿ ಹಾಕುವ ಕಾಚಿನಿಂದ (ಕತ್ತಾ) ಕ್ರೀಮ್ ಬಣ್ಣ ದೊರೆಯುತ್ತದೆ. ಹೀಗೆ ಲಭ್ಯವಾಗುವ ಬಣ್ಣಗಳಿಗೆ ಬಿಲ್ವಪತ್ರೆ ಅಂಟಿನಿಂದ ಬಣ್ಣ ಹಚ್ಚುವ

೪೭. ಪ್ರಜಾವಾಣಿ : ಗಣೇಶ ಅಮೀನಗಡ : ೦೧-೦೯-೨೦೧೧

ತರಬೇತಿಯನ್ನು ನೀಡಿರುವ ಕುರಿತೂ ಮುಕುಂದ ಮೈಗೂರ ಅವರು ಹೇಳುತ್ತಾರೆ.[೪೮] ಸಾಮಾಜಿಕ ಕಾರ್ಯಗಳಲ್ಲಿ ನಿರಂತರವಾಗಿ ತೊಡಗಿಕೊಂಡು ಇಂತಹ ವಿನೂತನ ಮತ್ತು ಪ್ರಕೃತಿ-ಪರಿಸರ ಕಾಳಜಿಯೊಂದಿಗೆ ದಾಪುಗಾಲು ಇಡುತ್ತಿರುವ ಮೈಗೂರ ಅವರ ಪ್ರಯತ್ನ ಮುಂದೊಂದು ದಿನ ಪರಿಪೂರ್ಣವಾಗಿ ಸಾಕಾರವಾಗುತ್ತದೆ ಎಂಬುದರಲ್ಲಿ ಯಾವುದೇ ಸಂದೇಹವಿಲ್ಲ. ಯಾಕೆಂದರೆ ಆಧುನಿಕತೆಯ ಭರಾಟೆಯಲ್ಲಿ ಸಿಲುಕಿಕೊಂಡ ಜನ ಮತ್ತೇ ಅವುಗಳಿಂದ ರೋಸಿ ಹೋಗಿ ಮತ್ತೇ ಪರಿಸರ ಪ್ರೇಮಿಯಾಗಿ ಪರಿವರ್ತನೆ ಆಗುತ್ತಿದ್ದಾರೆ. ನೈಸರ್ಗಿಕವಾದ ಉತ್ಪನ್ನಗಳಿಗೆ ಹೆಚ್ಚಿನ ಪ್ರೋತ್ಸಾಹ ಕೊಡುವ ನಿಟ್ಟಿನಲ್ಲಿ ಆಲೋಚನೆ ಮಾಡುತ್ತಿದ್ದಾರೆ.

ಇಷ್ಟೆಲ್ಲ ಪರಿಕ್ರಮಗಳು ನಡೆಯುತ್ತಿದ್ದರೂ ಜನರ ಉತ್ಸಾಹದ ಅಮಲಿನಲ್ಲಿ ನೈಸರ್ಗಿಕವಲ್ಲದ ಬಣ್ಣಗಳನ್ನು ಬಳಕೆ ಮಾಡಿ ಸುಂದರವಾಗಿ ಗಣಪತಿಯನ್ನು ಮಾಡುವ ಕಾಯಕದವರೂ ಇಲ್ಲಿ ಕಾಣಿಸಿಕೊಳ್ಳುತ್ತಾರೆ. ಗಣೇಶ ಉತ್ಸವದಲ್ಲಿ ಇವುಗಳ ಹಾವಳಿ ವಿಪರೀತವಾಗಿರುತ್ತದೆ. ಇದರಿಂದಾಗಿ ಜನಪದ ಚಿತ್ರಕಲೆ ಮಾಯವಾಗಿ ಆಧುನಿಕ ಮನೋಸ್ಥಿತಿಯ ವಿಗ್ರಹಗಳು ತುಂಬಿಕೊಳ್ಳುತ್ತಿವೆ. ಇದು ಅಪರಿಹಾರ್ಯ ಎಂದೇ ಭಾವಿಸಲಾಗುತ್ತಿದೆ.

**ಮೇದಾರಿಕೆ :** ಮೇದಾರಿಕೆ ಸಾಮಾನ್ಯವಾಗಿ ಎಲ್ಲ ಊರುಗಳಲ್ಲಿಯೂ ಕಂಡುಬರುವಂತೆ ಧಾರವಾಡ ಜಿಲ್ಲೆಯಲ್ಲಿಯೂ ಕಂಡುಬರುತ್ತದೆ. ಬಿದಿರಿನಿಂದ ಬುಟ್ಟಿ, ಮೊರ, ಯಲ್ಲಮ್ಮನ ಪಡ್ಡಲಿಗೆ, ಜಗ, ಜಲ್ಲಿ, ಚಿಬ್ಬಲ (ರೊಟ್ಟಿ ಇಡುವ ಕೆರಸಿ) ಮತ್ತು ಹೂವಿನ ಬುಟ್ಟಿಗಳನ್ನು ಮಾಡುವ ಉಪ್ಪಿನ ಬೆಟಗೇರಿಯ ಷಣ್ಮುಖ ಮೇದಾರ ಅವರು ಬಿದರಿನಲ್ಲಿ ಅರಳಿಸುವ ಕಲೆ ಬೆರಗುಗೊಳಿಸುವಂಥದ್ದು.[೪೯] ಕಲಘಟಗಿ ತಾಲೂಕಿನ ಫಕೀರಪ್ಪ ಚನ್ನಪ್ಪ ಮೇದಾರ ಕೂಡ ಬಿದರಿನಲ್ಲಿ ಬುಟ್ಟಿ, ಚಿಬ್ಲ, ಪೆನ್‌ಸ್ಟ್ಯಾಂಡ್, ಹೇರ್‌ಪಿನ್, ಹೇರ್ ಕ್ಲಿಪ್, ಭತ್ತದ ತೆನೆಗಳಿಂದ ಬಾಗಿಲ ತೋರಣಗಳನ್ನು ತಯಾರಿಸುತ್ತಾರೆ.[೫೦]

ಕಲಘಟಗಿಯ ಗುರುಶಾಂತಪ್ಪ ಬೇವಿನಗಿಡದ ಅವರು ವಿವಿಧ ಆಕಾರಗಳ ಕುರ್ಚಿ, ಟಿಪಾಯಿ, ಅಲಂಕಾರಿಕ ಹೂ ಬುಟ್ಟಿಗಳು, ಹಕ್ಕಿಗೂಡು, ಚಾಪೆ, ಹಿಡಿಕೆಯ ಬುಟ್ಟಿ, ಬುಟ್ಟಿಯ ಮುಚ್ಚಳ, ಮೊರ, ಕೋಲು ಮೊದಲಾದವುಗಳನ್ನು ಬಿದಿರು ಮತ್ತು ಬೆತ್ತದ ಮೂಲಕ ತಯಾರಿಸುತ್ತಾರೆ. ಸುಮಾರು ಹತ್ತು ಕುಟುಂಬಗಳು ಸೇರಿಕೊಂಡು ಸಿರಸಿ, ಯಲ್ಲಾಪುರ, ಬೆಳಗಾವಿ ಮೊದಲಾದ ಕಡೆಗಳಿಂದ ಬಿದಿರನ್ನು ಖರೀದಿಸಿ ತಂದು ಈ ಉದ್ಯೋಗವನ್ನು

೪೮. ಕ್ಷೇತ್ರಕಾರ್ಯ : ಧಾರವಾಡ : ೧೮-೦೯-೨೦೧೧
೪೯. ಕ್ಷೇತ್ರಕಾರ್ಯ : ಉಪ್ಪಿನಬೆಟಗೇರಿ : ೧೧-೧೨-೨೦೧೧
೫೦. ಕ್ಷೇತ್ರಕಾರ್ಯ : ಕಲಘಟಗಿ : ೨೩-೦೨-೨೦೧೩

ಮಾಡುತ್ತೇವೆ ಎಂದು ಗುರುಶಾಂತಪ್ಪ ಬೇವಿನಗಿಡದ ಅವರು ಹೇಳುತ್ತಾರೆ.[೫೧] ಹೀಗೆ ತಯಾರಿಸಲಾದ ಗಣಪತಿ ಮೂರ್ತಿಗಳಲ್ಲಿ ಸೂಕ್ಷ್ಮ ಕೆತ್ತನೆಯ ಜೊತೆಗೆ ಸೂಕ್ಷ್ಮವಾದ ಜನಪದ ಚಿತ್ರಕಲೆ ಕೂಡ ಮೂಡಿಬರುತ್ತದೆ. ನವಿಲು ಗರಿ, ನಕ್ಷತ್ರ, ರೇಖೆ, ಸ್ವಸ್ತಿಕ, ಓಂ, ಕೆಲವು ಪಕ್ಷಿಗಳು ಈ ಮೂರ್ತಿ ತಯಾರಿಕೆಯಲ್ಲಿ ಬಿಡಿಸಲಾಗುತ್ತದೆ. ಅವುಗಳೂ ಕೂಡ ಸೂಕ್ತವಾದ ಬಣ್ಣದ ಹೊಂದಾಣಿಕೆಯಿಂದ ತುಂಬ ಸುಂದರವಾಗಿ ಕಾಣುತ್ತವೆ. ನೋಡುಗರ ಕಣ್ಮನಗಳನ್ನು ಸೆಳೆಯುತ್ತವೆ.

ನರೇಂದ್ರ ಗ್ರಾಮದ ನೀಲವ್ವ ಗಂಗಪ್ಪ ಮೇದಾರ ಅವರು ಬಿದಿರಿನಿಂದ ಬುಟ್ಟಿ, ತಟ್ಟೆ, ರೊಟ್ಟಿ ಬುಟ್ಟಿ, ಪಡ್ಡಲಗಿ, ಚಿಬ್ಲ, ಕುಚ್ಚುಕಡಬು ಮಾಡುವ ಬುಟ್ಟಿಗಳನ್ನು ತಯಾರಿಸುತ್ತಾರೆ. ಬುಟ್ಟಿ ತಯಾರಿಸಿದ ಮೇಲೆ ಕೆಲವು ಬಿದಿರು ಕಡ್ಡಿಗಳನ್ನು ಹಸಿರು, ಕೆಂಪು ಬಣ್ಣಗಳಲ್ಲಿ ಅದ್ದಿ ಬುಟ್ಟಿಯ ಅಂಚನ್ನು ಸಿಂಗರಿಸುವ ಪರಿ ನಿಜಕ್ಕೂ ಮೋಹಕವಾಗಿರುತ್ತದೆ.[೫೨] ಇಂತಹ ಬುಟ್ಟಿಗಳನ್ನು ಈಗ ಕೆಲವರು ಮನೆಗಳಲ್ಲಿ ಅಲಂಕಾರಿಕ ಸಾಧನವನ್ನಾಗಿ ಬಳಸಿಕೊಳ್ಳಲು ತೊಡಗಿದ್ದಾರೆ.

ಮೇದಾರಿಕೆಗೂ ಇಂದು ಮಾರುಕಟ್ಟೆ ಇಲ್ಲ. ಇವು ಕೂಡ ಮದುವೆ, ಹಬ್ಬ ಮೊದಲಾದ ಶುಭ ಸಂದರ್ಭದಲ್ಲಿ ಮಾತ್ರ ಬಳಸುವ ವಸ್ತುಗಳಾಗುತ್ತಿವೆ. ಮೇದಾರಿಕೆಯಿಂದ ತಯಾರಾಗುವ ವಸ್ತುಗಳ ಬದಲಿಗೆ ಪ್ಲಾಸ್ಟಿಕ್ ಮಾರಿ ಇಂದು ಎಲ್ಲರ ಮನೆಯನ್ನೂ ಸೇರಿಕೊಂಡು ವಿಜೃಂಭಿಸುತ್ತಿದೆ. ಆದರೆ ಕೆಲವರು ಹಳೆಯ ಮಾದರಿಯ ಮೇದಾರಿಕೆಯ ವಸ್ತುಗಳನ್ನೇ ಬಳಕೆ ಮಾಡುವ ಮೂಲಕ ಮೂಲಕಲೆಗೆ ಆದರವನ್ನು ಇಟ್ಟುಕೊಂಡಿದ್ದಾರೆ ಎಂಬುದು ಕೂಡ ಗಮನಾರ್ಹ ಸಂಗತಿಯೇ ಆಗಿದೆ.

**ಚಾಪೆ-ಕಸಬರಿಗೆ ತಯಾರಕರು :** ವಿಶೇಷವಾಗಿ ಚಾಪೆ, ಕಸಬರಿಗೆ ಮೊದಲಾದವುಗಳನ್ನು ತಯಾರಿಸುವ ಕಾರ್ಯವನ್ನು ಕರ್ನಾಟಕದಲ್ಲಿ ಭಜಂತ್ರಿ ಜನಾಂಗದವರು ಮಾಡುತ್ತಾರೆ. ಇವರನ್ನು ಕೊರಗರು, ಕೊರವರು, ಕೊರಚರು, ಕೊರಮರು, ವಾಲಗದವರು ಎಂದೂ ಕರೆಯಲಾಗುತ್ತದೆ. ಈಚಲು ಮರದ ಗರಿಗಳನ್ನು ಕತ್ತರಿಸಿಕೊಂಡು ಬಂದು ದಪ್ಪನೆಯ ಗರಿಗಳನ್ನೂ ಮುಳ್ಳುಗಳನ್ನೂ ಸವರಿ ಮೊದಲು ಒಣಗಿಸುತ್ತಾರೆ. ಬುಟ್ಟಿ ಹೆಣೆಯುವಾಗ ಈ ಗರಿಗಳನ್ನು ಸೀಳಿಕೊಂಡು ಬೇಕಾದ ವಿನ್ಯಾಸಗಳಲ್ಲಿ ಬುಟ್ಟಿಯನ್ನು ಹೆಣೆಯುತ್ತಾರೆ.

ಕಸ ತುಂಬುವ ಬುಟ್ಟಿ, ಕಾಳು ತುಂಬುವ ಬುಟ್ಟಿ, ಭತ್ತ ಸಂಗ್ರಹದ ಆಳೆತ್ತರದ ಬಳತ ಬುಟ್ಟಿ, ಹೊಟ್ಟು ತುಂಬುವ ಜಲ್ಲೀ ಬುಟ್ಟಿ, ತರಕಾರಿಗಳನ್ನು ಹಾಕಿಡುವ ಕಲ್ಲೀ ಬುಟ್ಟಿ ಮೊದಲಾದ

---

೫೧. ಕ್ಷೇತ್ರಕಾರ್ಯ : ಕಲಘಟಗಿ : ೨೩-೦೨-೨೦೧೩

೫೨. ಕ್ಷೇತ್ರಕಾರ್ಯ : ನರೇಂದ್ರ : ೧೩-೦೪-೨೦೧೨

ರೀತಿಯ ಬುಟ್ಟಿಗಳ ಹೆಣಿಕೆ ಇಲ್ಲಿ ಕಂಡುಬರುತ್ತದೆ. ಇವುಗಳಲ್ಲಿ ಚೌಕಾಕಾರ, ವೃತ್ತಾಕಾರ, ಉದ್ದ, ಗಿಡ್ಡ ಆಕಾರದ ಬುಟ್ಟಿಗಳಲ್ಲದೇ ತಳದಲ್ಲಿ ನಕ್ಷತ್ರ, ಚೌಕದಂತಹ ಚಿತ್ರ ವಿನ್ಯಾಸಗಳನ್ನೂ ಸೌಂದರ್ಯ ಪ್ರಜ್ಞೆಯ ಜೊತೆ ಜೊತೆಗೆ ಬಾಳಿಕೆ ಬರುವಂತೆ ತಯಾರಿಸುವುದು ಇವರ ಕಾರ್ಯವಾಗಿದೆ.

ಬಹುಮುಖ್ಯವಾಗಿ ಇವರು ಮನೆಯನ್ನು ಸ್ವಚ್ಛವಾಗಿಡುವ ಕಸಬರಿಗೆಗಳನ್ನು ತಯಾರಿಸುತ್ತಾರೆ. ಕಾಡುಗಳಲ್ಲಿ ಸಿಗುವ ಮೆದಿ ಹುಲ್ಲನ್ನು ತಂದು ಒಣಗಿಸಿ ಹುಲ್ಲಿನ ಕಸಬರಿಗೆಗಳನ್ನು ತಯಾರಿಸುತ್ತಾರೆ. ಈ ಮೆದಿ ಹುಲ್ಲು ಕೆಲವು ಕಡೆ ನದಿ, ಹಳ್ಳಗಳ ದಂಡೆಯ ದಡಗಳಲ್ಲಿಯೂ ದೊರೆಯುತ್ತದೆ. ಇದೇ ಮೆದಿ ಹುಲ್ಲಿನಿಂದ ಹಗ್ಗಗಳನ್ನು ಹೊಸೆದು ಇವುಗಳಿಂದ ನೆಲುವುಗಳನ್ನೂ, ಸಿಂಬಿಗಳನ್ನೂ ಕೂಡ ಇವರು ಹೆಣೆಯುತ್ತಾರೆ. ಈ ನೆಲುವುಗಳು ಆಹಾರ ಪದಾರ್ಥಗಳನ್ನು ಎತ್ತರದಲ್ಲಿ ಇರಿಸಲು ಸಹಕಾರಿಯಾಗಿವೆ. ಹಾಗೆಯೇ ಕೊಡ, ಬಿಂದಿಗೆ, ಹಂಡೆ ಮೊದಲಾದ ವಸ್ತುಗಳನ್ನು ಅಲುಗಾಡದಂತೆ ಇಡಲು ಸಿಂಬಿಗಳು ಸಹಕಾರಿಯಾಗಿವೆ.

ಮೆದಿ ಹುಲ್ಲಿನ ಕಸಬರಿಗೆಯನ್ನು ತುಂಬ ಅಚ್ಚುಕಟ್ಟಾಗಿ ಮಾಡುವ ಇವರು ಅವುಗಳಲ್ಲಿ ಗೌರಿಹೆಡೆ, ನಾಗರಹೆಡೆ, ಸಾದಾಹೆಡೆ ಎನ್ನುವ ವಿವಿಧ ಸುಂದರ ವಿನ್ಯಾಸಗಳಿಂದ ಮೆದಿಹುಲ್ಲನಿಂದ ಹೊಸೆದ ತೆಳುವಾದ ಹಗ್ಗದಿಂದಲೇ ಹೆಣೆಯುತ್ತ ಕಟ್ಟುತ್ತ ಹೋಗುತ್ತಾರೆ. ಹುಲ್ಲಿನಿಂದ ಮಾಡಿದ ಈ ಕಸಬರಿಗೆಗಳನ್ನು 'ಒಳಗಿನ ಕಸಬರಿಗೆ' ಎಂದೂ ಇವುಗಳನ್ನು ಒಳಮನೆ, ಅಡುಗೆಮನೆ, ದೇವರಮನೆಗಳಲ್ಲಿ ಬಳಸುತ್ತಾರೆ. ಹಾಗೆಯೇ ಮನೆ, ಗುಡಿ ಗುಂಡಾರಗಳಿಗೆ ಸುಣ್ಣ-ಬಣ್ಣ ಬಳಿಯಲು ಕುಂಚಗಳ ರೀತಿಯಲ್ಲಿ ಬಳಸುತ್ತಾರೆ. ಅದಕ್ಕೆಂದೇ ಬೇರೆ ವಿನ್ಯಾಸಗಳಲ್ಲಿಯೂ ಕಸಬರಿಗೆಗಳನ್ನು ತಯಾರಿಸುವರು. ಈಚಲು ಮರದ ಗರಿಗಳನ್ನು ಮುಳ್ಳುಸಮೇತ ಸೀಳಿ, ಒಣಗಿಸಿ ಅದರಿಂದ ತಯಾರಿಸಿದ ಕಸಬರಿಗೆಗಳನ್ನು 'ಹೊರಗಿನ ಕಸಬರಿಗೆ' ಎಂದೂ ಇವುಗಳನ್ನು ಹೊರಮನೆ, ಅಂಗಳ, ಕಟ್ಟೆಗಳ ಕಸಗುಡಿಸಲು ಬಳಸುವರು ಹಾಗೂ ಮನೆಯ ಧೂಳು ಜಾಡಿಸಲು ಕೂಡ ಬಳಸುತ್ತಾರೆ ಎಂದು ನಿಗದಿಯ ಶ್ರೀಮತಿ ಯಲ್ಲವ್ವ ಭಜಂತ್ರಿಯವರು ಹೇಳುತ್ತಾರೆ.[೫೩]

ಈ ಈಚಲುಮರದ ಗರಿಗಳನ್ನು ತಂದು ಮುಳ್ಳುಗಳನ್ನು ಸವರಿದಾಗ ದೊರೆಯುವ ತೆಳ್ಳನೆಯ ಉದ್ದವಾದ ಕಟ್ಟಿಗೆ(ಬರಲು)ಯನ್ನು ಸೀಳಿಕೊಂಡು, ಒಣಗಿಸಿ ಇದರಂದ ಬುಟ್ಟಿಗಳನ್ನು ಹೆಣೆಯುತ್ತಾರೆ. ಬುಟ್ಟಿಗಳನ್ನು ನಮ್ಮಲ್ಲಿ 'ಜಲ್ಲಿ'ಗಳೆಂದು ಕರೆಯುತ್ತಾರೆ. ಇವುಗಳನ್ನು ಹೆಣೆಯುವಾಗ ತಳದಲ್ಲಿ ನಕ್ಷತ್ರದಾಕಾರದಲ್ಲಿ ನಾಲ್ಕು, ಆರು, ಎಂಟು, ಹದಿನಾರು ಮೆಟ್ಟುಗಳನ್ನು ಹಾಕಿಕೊಳ್ಳುತ್ತಾರೆ.

೫೩. ಕ್ಷೇತ್ರಕಾರ್ಯ : ನಿಗದಿ : ೨೦-೦೨-೨೦೧೫

ಈ ಮೆಟ್ಟುಗಳ ಆಧಾರದಲ್ಲಿಯೇ ಬುಟ್ಟಿಗಳು ನಿರ್ಮಾಣವಾಗುತ್ತವೆ. ಇಂಥವುಗಳಲ್ಲಿ ಕೈಜಲ್ಲಿ(ಕೈಬುಟ್ಟಿ), ಹೊಟ್ಟಿನ ಜಲ್ಲಿ, ಮಣ್ಣಬುಟ್ಟಿ, ಗೊಬ್ಬರ ಜಲ್ಲಿ, ದುಂಡು ಬುಟ್ಟಿಗಳಲ್ಲದೇ ಧಾನ್ಯ ಸಂಗ್ರಹಿಸಲು ದೊಡ್ಡ ಗುಡಾಣದಂಥ ಬಳತ(ಸಿಲಿಂಡರ್ ಆಕಾರ)ಗಳನ್ನು ಹೆಣೆಯುತ್ತಾರೆ. ರೈತರ, ಬಳಕೆದಾರರ ಅವಶ್ಯಕತೆಗನುಗುಣವಾಗಿ ವೈವಿಧ್ಯಮಯ ವಿನ್ಯಾಸಗಳಲ್ಲಿ ಹೆಣೆದು ಕೊಡುತ್ತಾರೆ. ಬುಟ್ಟಿಗಳನ್ನು ಹೆಣೆಯುವಾಗ ಉಳಿಯುವ ಈಚಲು ಗರಿಗಳನ್ನು ಸವರಿದಾಗ ಬರುವ ಸಣ್ಣ ಸೀಳುಗಳನ್ನು ಬಳಸಿಕೊಂಡು ಚಾಪೆ ಹೆಣೆಯುತ್ತಾರೆ. ಈ ಚಾಪೆಗಳು ಒಂದು ಮಗ್ಗಲು ಮಾತ್ರ ಬಳಕೆಗೆ ಬರುತ್ತದೆ. ವಿಶ್ರಾಂತಿ ವೇಳೆಯಲ್ಲಿ ಈಚಲುಮರದ ಗರಿ(ಮುಳ್ಳು)ಗಳಿಂದ ಚಾಪೆ ಹೆಣೆಯುವುದರ ಜೊತೆಗೆ ಮಕ್ಕಳಾಟಿಕೆಯ ಒಂಟೆ, ಆನೆ, ಬೀಸಣಿಕೆ, ನಕ್ಷತ್ರ, ಹಾವು, ಸ್ವಸ್ತಿಕ ಮುಂತಾದ ಚಿತ್ರ ಕಲಾಕೃತಿಗಳನ್ನು ಹೆಣೆಯುವುದು ಇವರ ಕಲಾವಂತಿಕೆಗೆ ಸಾಕ್ಷಿ. ಇಂದು ಈಚಲು ಮರಗಳು ಕಡಿಮೆಯಾಗಿವೆ. ಹಾಗಾಗಿ ಹೊಂಗೆ ಮರ ಅಥವಾ ಗೊಬ್ಬರದ ಗಿಡದ ಉದ್ದನೆಯ ಟೊಂಗೆಗಳನ್ನು ಸೀಳಿ ಬುಟ್ಟಿಗಳನ್ನು ಹೆಣೆಯಲಾಗುತ್ತದೆ. ಆದರೆ ಇವುಗಳ ತಾಳಿಕೆ ಹೆಚ್ಚು ಕಾಲ ಇರುವುದಿಲ್ಲ. ಇವುಗಳಿಗೆ ಬೇಡಿಕೆಯೂ ಕಡಿಮೆಯಾಗಿದೆ. ಜೊತೆಗೆ ಪ್ಲಾಸ್ಟಿಕ್ ಚಾಪೆಗಳು, ಕಸಬರಿಗೆಗಳು ಮನೆಗಳನ್ನು ಇಂದು ಅಲಂಕರಿಸುತ್ತಿರುವುದರಿಂದ ಮೊದಲಿನಂತೆ ವ್ಯಾಪಾರವೂ ಅಷ್ಟಕಷ್ಟೇ ಅನ್ನಬಹುದು ಎಂದು ಅಳ್ನಾವರದ ಶ್ರೀಮತಿ ಲಕ್ಷ್ಮವ್ವ ಭಜಂತ್ರಿಯವರು ತಮ್ಮ ನೋವನ್ನು ತೋಡಿಕೊಳ್ಳುತ್ತಾರೆ.[೫೪] ಆದರೆ ಬರು ಬರುತ್ತ ಆಧುನಿಕತೆ ಯಾಂತ್ರಿಕತೆಯಿಂದ ಹೇಸಿಕೊಂಡ ಮನುಷ್ಯ ಮುಂದೊಂದು ದಿನ ಇಂತಹ ವಸ್ತುಗಳಿಗೆ ಬೇಡಿಕೆ ಇಡುತ್ತಾನೆ ಮತ್ತು ಆ ವೃತ್ತಿಯನ್ನು ಪ್ರೋತ್ಸಾಹಿಸುವ ಕಾರ್ಯ ಮಾಡುತ್ತಾನೆ ಎಂಬ ಆಶಾಭಾವನೆ ಕೂಡ ಕಂಡುಬರುತ್ತಿದೆ.

**ಉಳವಿ ಬಳೆ ತಯಾರಿಕೆ :** ಬಳೆ ತಯಾರಿಕೆಯು ಭಾರತದ ಎಲ್ಲ ಕಡೆಯೂ ನಡೆಯುತ್ತದೆ. ಆದರೆ ವಿಶಿಷ್ಟವಾದ ಉಳವಿ ಬಳೆಗಳನ್ನು ಧಾರವಾಡ ಜಿಲ್ಲೆಯಲ್ಲಿ ಮಾತ್ರ ತಯಾರಿಸಲಾಗುತ್ತದೆ. ಅಪವಾದ ಎನ್ನುವಂತೆ ಶಿವಮೊಗ್ಗದ ತರೀಕೆರೆ, ಬೆಳಗಾವಿಯ ಮುರಗೋಡಗಳಲ್ಲಿಯೂ ಇಂತಹ ಬಳೆಗಳನ್ನು ತಯಾರಿಸಲಾಗುತ್ತದೆ. ಧಾರವಾಡ ಜಿಲ್ಲೆಯಲ್ಲಿ ಸುಮಾರು ಐವತ್ತು ವರ್ಷಗಳಿಂದಲೂ ನಡೆದುಕೊಂಡು ಬಂದ ಈ ಉಳವಿ ಬಳೆ ತಯಾರಿಕೆ ಇಂದಿಗೂ ಮುಂದುವರೆದುಕೊಂಡು ಬಂದಿದೆ.

ಧಾರವಾಡದ ಅರವಟಗಿ ಗ್ರಾಮದ ಬಸಪ್ಪ ಚಿಕ್ಕೊಪ್ಪ ಮತ್ತು ಅವರ ಕುಟುಂಬ ಈ ವೃತ್ತಿಯನ್ನು ನಿರಂತರವಾಗಿ ಮಾಡಿಕೊಂಡು ಬಂದಿದೆ. ಯಾವುದೇ ಯಂತ್ರಗಳ ಸಹಾಯ ಇಲ್ಲದೆ

---

೫೪. ಕ್ಷೇತ್ರಕಾರ್ಯ : ನಿಗದಿ : ೨೦-೦೫-೨೦೧೫

ಸ್ವತಃ ಕೈಯಿಂದ ತಯಾರಿಸಲಾಗುವ ಈ ಬಳೆಗಳು ಅವುಗಳ ಮೇಲಿನ ಚಿತ್ರಗಳಿಂದ ಗಮನ ಸೆಳೆಯುತ್ತವೆ. ಹಸಿರು ಮತ್ತು ನೀಲಿ ಬಣ್ಣಗಳಲ್ಲಿ ಈ ಬಳೆಗಳನ್ನು ತಯಾರಿಸಲಾಗುತ್ತದೆ. ಬಳೆಗಳ ಮೇಲೆ ಬಸವಣ್ಣ (ಮಲಗಿರುವ ಎತ್ತು), ಶಿವಲಿಂಗ, ಗೆರೆ, ಕಚ್ಚು ಮೊದಲಾದ ಚಿತ್ರಗಳು ಗಮನ ಸೆಳೆಯುತ್ತವೆ. ನೀಲಿ ಬಣ್ಣದ ಬಳೆಗಳನ್ನು ನೀಲಮ್ಮನ ಬಳೆಗಳು ಎಂದೂ ಕರೆಯಲಾಗುತ್ತದೆ. ಬಹುಶಃ ಇದು ಬಸವಣ್ಣನ ಎರಡನೆಯ ಮಡದಿ ನೀಲಾಂಬಿಕೆ ಹೆಸರು ಇರಬಹುದು ಎಂದು ಬಸಪ್ಪನವರ ಸಹೋದರ ಲಕ್ಷ್ಮಣ ಚಿಕ್ಕೊಪ್ಪ ಅವರು ಹೇಳುತ್ತಾರೆ.[೫೫]

ಹೀಗೆ ಹಲವಾರು ತೆರನಾದ ವೃತ್ತಿಮೂಲದ ವಸ್ತುಗಳ ತಯಾರಿಕೆಯಲ್ಲಿಯೂ ಜನಪದ ಚಿತ್ರಕಲೆ ಎದ್ದು ಕಾಣುತ್ತಿದ್ದು, ನಾಡಿನ ಸಂಪ್ರದಾಯವನ್ನು ಧಾರ್ಮಿಕ ನಂಬಿಕೆಯನ್ನು ಅವು ಬಿಂಬಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಜೊತೆಗೆ ಅಲಂಕಾರಿಕವಾಗಿಯೂ ಇವು ಜನರ ಮನಸ್ಸನ್ನು ಸೆಳೆಯುತ್ತವೆ.

## ೩.೨.೨. ಹವ್ಯಾಸಿ ಜನಪದ ಚಿತ್ರಕಲೆ :

ಇದು ಕೇವಲ ಹವ್ಯಾಸಕ್ಕಾಗಿ ವಸ್ತುಗಳ ಮೇಲೆ ಚಿತ್ರಗಳನ್ನು ಬಿಡಿಸುವುದನ್ನು ಕಾಣುತ್ತೇವೆ. ಕೆಲವು ಸಲ ಇವು ವೃತ್ತಿಯಾಗಿಯೂ ಮುಂದುವರಿಯುತ್ತವೆ. ಹಸೆ, ಕಸೂತಿ, ಕೌದಿ, ಮದರಂಗಿ, ರಂಗೋಲಿ, ಹಚ್ಚೆ, ಹೆಣಿಗೆ ಮೊದಲಾದವುಗಳನ್ನು ಇಲ್ಲಿ ಗುರುತಿಸಬಹುದು.

**ಕಸೂತಿ :** ದಾರಗಳಿಂದ ಬಟ್ಟೆಯ ಮೇಲೆ ಆಕರ್ಷಕವಾದ ಚಿತ್ರಗಳ ಹೆಣಿಕೆಯನ್ನೇ ಕಸೂತಿ ಎನ್ನಲಾಗಿದೆ. ಈ ಕಸೂತಿ ಕಲೆಯೂ ತುಂಬ ಪ್ರಾಚೀನವಾಗಿದ್ದು ಜಗತ್ತಿನ ಬೇರೆ ಬೇರೆ ದೇಶಗಳಲ್ಲೂ ಕಂಡುಬರುತ್ತದೆ. ಇದನ್ನು ಒಂದು ರೀತಿಯಲ್ಲಿ ಅಲಂಕಾರಿ ಸಾಮಗ್ರಿಯನ್ನಾಗಿ ಬಳಸಲಾಗುತ್ತಿತ್ತು ಎಂದು ತಿಳಿದುಬರುತ್ತದೆ. ಇಂದಿಗೂ ಇದು ತನ್ನತನವನ್ನು ಕಾಪಾಡಿಕೊಂಡು ಬಂದಿದ್ದು, ಹೆಣ್ಣುಮಕ್ಕಳ ಕೈಯಲ್ಲಿ ಕುಸರಿಯ ಕಾರ್ಯ ಮಾಡಿಸುತ್ತಲೇ ಇದೆ.

'ವಸ್ತ್ರಕಲೆಯ ಹಾಗೂ ಬಣ್ಣದ ದಾರಗಳ ಸಂಯೋಜನಾತ್ಮಕ ಹೊಂದಾಣಿಕೆಯೇ ಕಸೂತಿ ಕಲೆಯಾಗಿದೆ. ಇದೊಂದು ಕಲಾತ್ಮಕ ಅಂಗ. ಕಸೂತಿ ಕರ್ನಾಟಕದಲ್ಲಿ ಕಸೂತಿ ಎನಿಸಿಕೊಂಡರೆ ಪಂಜಾಬದಲ್ಲಿ ಪುಲ್ಕರಿ, ಗುಜರಾತದಲ್ಲಿ ಕಥಿ, ರಾಜಸ್ಥಾನದಲ್ಲಿ ಪಿಚವಾಯಿ, ಬಂಗಾಲದಲ್ಲಿ ಕಂಥೆ, ಬಿಹಾರದಲ್ಲಿ ಕಸಿದಾ, ಒರಿಸ್ಸಾದಲ್ಲಿ ಪುರಿ, ಉತ್ತರ ಪ್ರದೇಶದಲ್ಲಿ ಚಿಕನ್, ಕಾಶ್ಮೀರದಲ್ಲಿ ಕಸೀದಾ, ಮಣಿಪುರದಲ್ಲಿ ಪಾನ್ಯೆಕ್, ಹಿಮಾಚಲ ಪ್ರದೇಶದಲ್ಲಿ ಛಂಬಾ, ಸಿಂಧ ಪ್ರಾಂತದಲ್ಲಿ ಕಚ್,

೫೫. ಕ್ಷೇತ್ರಕಾರ್ಯ : ೦೧-೦೨-೨೦೧೨

ಲಖನೌದಲ್ಲಿ ಚಿಕನ್‌ಕಾರಿ, ಮಹಾರಾಷ್ಟ್ರದಲ್ಲಿ ಕಶಿದಾ, ಫರ್ಷಿಯನ್ ಮತ್ತು ಹಿಂದಿಯಲ್ಲಿ ಕಶೀದಹ ಎಂದು ಪ್ರಾದೇಶಿಕವಾಗಿ ಬೇರೆ ಬೇರೆ ಹೆಸರುಗಳಿರುತ್ತವೆ'[೫೬] ಹೀಗೆ ಹಲವು ಭಾಷೆಗಳಲ್ಲಿ ಭಿನ್ನವಾದ ಹೆಸರನ್ನು ಹೊಂದಿರುವ ಈ ಕಸೂತಿ ಕಲೆ ಜಾಗತಿಕ ಮನ್ನಣೆ ಕೂಡ ಪಡೆದುಕೊಂಡಿದೆ.

'ನಮ್ಮಲ್ಲಿ ಕಸೂತಿ, ಹೆಣಿಕೆ, ಹೊಲಿಗೆ ಎಂಬುದಾಗಿ ಇರುವ ಮೂರು ವಿಧಾನಗಳಲ್ಲಿ ಹೆಣಿಕೆ ಎಂದೊಡನೆ ವಿವಿಧ ಬಗೆಯ ಹೆಣಿಕೆ ನೆನಪಾಗುತ್ತದೆ. ಕಸೂತಿ ಎಂದರೆ ಕನ್ನಡ ನಾಡಿನ ಕಲಾಪೂರ್ಣವಾದ, ಕ್ರಮಬದ್ಧವಾದ ಹೆಣಿಕೆ. ನಮ್ಮಲ್ಲಿ ಉಣ್ಣೆ, ನೂಲು, ರೇಶಿಮೆ, ಜರಿ ಮೊದಲಾದ ಕೆಲಸಗಳಿಗೂ ಹೆಣಿಕೆ ಎನ್ನುವುದು ರೂಢಿಯಲ್ಲಿದೆ. ಪರದೇಶಗಳಲ್ಲಿ ಉದ್ದವಾದ ಉಣ್ಣೆ ಹೆಣಿಕೆಯ ಕಡ್ಡಿಯಿಂದ ಹೆಣೆಯುವ ಹೆಣಿಕೆಗೆ (Knitting) ನಿಟ್ಟಿಂಗ ಎನ್ನುವರು. ಕೊಕ್ಕೆ ಸೂಜಿ ಅಂದರೆ ಸೂಜನ್‌ಕಡ್ಡಿಯಿಂದ ಹೆಣೆಯುವ ಹೆಣಿಕೆಗೆ (Chachet) ಕ್ರೋಷೆ ಎನ್ನುವರು. ಬಟ್ಟೆಯ ಮೇಲೆ ಹೆಣೆಯುವ ಅನೇಕ ವಿಧದ ಹೆಣಿಕೆಗಳಿಗೆ (Embroidey) ಎನ್ನುವರು'[೫೭] ಅಂದರೆ ಕೇವಲ ಹೆಣಿಕೆ ಎನ್ನುವುದೆಲ್ಲ ಕಸೂತಿ ಆಗಲಾರದು ಎನ್ನುವುದನ್ನು ಮೇಲಿನ ಮಾತು ಸ್ಪಷ್ಟಪಡಿಸುತ್ತದೆ. ಅದೊಂದು ಕ್ರಮಬದ್ಧವಾದ ಹೆಣಿಕೆಯಾಗಿದ್ದು, ಕಲಾನೈಪುಣ್ಯತೆಯಿಂದ ಬೆರಗುಗೊಳಿಸುತ್ತದೆ.

'ಕಸೂತಿ ಕಲೆಯಲ್ಲಿ ಗುಜರಾತಿನ ಕಚ್ ಪ್ರಾಂತ್ಯದ ಹಿರಿಮೆ ಹೆಚ್ಚಿನದು. ಬಲೂಚಿಸ್ಥಾನದಿಂದ ಬಹು ಹಿಂದೆ ಬಂದ ಜಾಟ್ ಜನಾಂಗ ಈ ಕಲೆಯನ್ನೂ ತಮ್ಮೊಂದಿಗೆ ಭಾರತಕ್ಕೆ ತಂದಿರಬೇಕೆಂಬುದು ವಿದ್ವಾಂಸರ ಅಭಿಪ್ರಾಯ. ಅವರ ಚಿಕ್ಕ ಚಿಕ್ಕ ಜಟಿಲ ಜಾಮಿತಿ ವಿನ್ಯಾಸದ ಹೆಣಿಗೆ ಮತ್ತು ತಂತ್ರಗಳಲ್ಲಿ ಬಲುಚಿಸ್ಥಾನದ ಪ್ರಭಾವವನ್ನು ಗುರುತಿಸಲಾಗಿದೆ. ಬಹುಶಃ ಕಸೂತಿ ಕಲೆಯ ಪರಂಪರೆಗೆ ಭಾರತದಲ್ಲಿ ನಾಂದಿ ಹಾಡಿದವರು ಕಚ್ ಚಮ್ಮಾರರು. ಹಲವಾರು ಶತಮಾನಗಳಿಂದ ತೊಗಲಿನ ಉತ್ಪನ್ನಗಳ ಮೇಲೆ ಸುಂದರವಾದ ಚಿನ್ನ ಬೆಳ್ಳಿಯ ಕಸೂತಿಯನ್ನು ಅವರು ಹಾಕುತ್ತಿದ್ದರು. ಈ ಜನಾಂಗದ ಕಸೂತಿ ಕಲೆಯನ್ನು ಕಂಡು ಬೆರಗಾಗಿ ಹದಿಮೂರನೇ ಶತಮಾನದಲ್ಲಿ ಭಾರತಕ್ಕೆ ಭೇಟಿಯನ್ನಿತ್ತ ಮಾರ್ಕಪೋಲೊ 'ಅವರ ಈ ಕೌಶಲ್ಯಕ್ಕೆ ಸರಿಸಾಟಿಯಾಗುವಂತದ್ದು ವಿಶ್ವದಲ್ಲಿಯೇ ಇಲ್ಲ' ಎಂದು ಪ್ರಶಂಸಿಸಿದ್ದಾರೆ. ಕಚ್ ಚಮ್ಮಾರರ ಚರ್ಮದ ಮೇಲಿನ ಕಲೆಯ ಪ್ರಾವೀಣ್ಯತೆಯು ಕಾಲಕ್ರಮದಲ್ಲಿ ಬಟ್ಟೆಗಳ ಮೇಲಿನ ಕಸೂತಿಗೆ

೫೬. ಕಸೂತಿ ಚಿತ್ರಕಲೆ : ಜಗತಾಪ ಮಹಾದೇವ : ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು : ೨೦೦೪ : ಪು-೧
೫೭. ಸೊಬಗಿನ ಮನೆ : ಮಾಳವಾಡ ಶಾಂತಾದೇವಿ : ಕ.ಸ. ಸಾಹಿತ್ಯ ಸಂಘ, ಧಾರವಾಡ : ೧೯೬೧ : ಪು-೧೪೦

ಪ್ರೇರಣೆಯಾಗಿರಬೇಕು. ಮುಂದೆ ಅದು ಭಾರತದ ಇತರೆ ಜನಾಂಗಗಳಿಗೂ ವ್ಯಾಪಿಸಿರಬೇಕು'[೫೮] ಭಾರತದಲ್ಲಿ ಕಚ್‌ನಲ್ಲಿ ಈ ಕಲೆ ಇಂದಿಗೂ ತನ್ನತನವನ್ನು ಉಳಿಸಿಕೊಂಡು ಬಂದಿದೆ. ಅಷ್ಟೇ ಅಲ್ಲ, ಅಲ್ಲಿಯ ಜನರು ಅದನ್ನೊಂದು ವೃತ್ತಿಯನ್ನಾಗಿಯೂ ಸ್ವೀಕರಿಸಿದ್ದು ಕಂಡುಬರುತ್ತದೆ.

'ಶಿಲಾಯುಗದಲ್ಲಿ ಎಸ್ಕಿಮೋಗಳಲ್ಲಿ ನಿಯಾಂಡರ್‌ತಾಲ, ಕ್ರೊಮ್ಯಾಗ್ನನ್, ಗುಹಾ ಮನುಷ್ಯರಲ್ಲಿ, ಡಾರ್ಡಗ್ನೆ, ತಾಗುರ್ ಲೆಂಡಾ, ಸ್ಪೇನ್‌ಗಳ ಪ್ರಾಚೀನ ಗುಹೆಯ ಚಿತ್ರಗಳಲ್ಲಿ ಕಸೂತಿಯಂತಹ ಚಿತ್ರಗಳ ಮಾದರಿಗಳಿರುವುದನ್ನು ಗುರುತಿಸಲಾಗಿದೆ. ಇದಲ್ಲದೆ ಸೂಜಿಯಿಂದ ಹೊಲಿದ ಉಡುಪುಗಳ ಅವಶೇಷಗಳೂ ದೊರೆತಿವೆ. ಇಜಿಪ್ತದ ದೇವತೆ ಹಾಗೂ ವೀರಯೋಧರ ಶಿಲ್ಪಗಳು ಉಡುಪುಗಳನ್ನು ಹಾಗೂ ಮೆಸೋಪೊಟೋಮಿಯಾದಲ್ಲಿ ಹೆಣ್ಣುಮಕ್ಕಳ ಉಡುಪುಗಳನ್ನು ಕಸೂತಿಯಿಂದ ಅಲಂಕರಿಸುತ್ತಿದ್ದದ್ದೂ ಗೊತ್ತಾಗುತ್ತದೆ.'[೫೯] ಅಂದರೆ ಕಸೂತಿ ಕಲೆಗೆ ತುಂಬ ಪ್ರಾಚೀನವಾದ ಇತಿಹಾಸವಿದೆ ಎಂಬುದು ಅರಿವಿಗೆ ನಿಲುಕುತ್ತದೆ. 'ಋಗ್ವೇದದಲ್ಲಿ ಅನೇಕ ವೃತ್ತಿಗಳ ಉಲ್ಲೇಖ ದೊರೆಯುತ್ತದೆ. ಪೂರ್ವ ವೈದಿಕ ಯುಗದಲ್ಲಿ ಬಾಳಿದ ಜನತೆಯ ಸಂಸ್ಕೃತಿ ಉಚ್ಚಮಟ್ಟದ್ದಾಗಿದ್ದು ಶೃಂಗಾರಪ್ರಿಯರಾಗಿದ್ದ ಅವರು ತಮ್ಮ ಉಡುಪುಗಳಿಗೆ ವಿಶೇಷ ಗಮನ ಕೊಡುತ್ತಿದ್ದರು. ಆ ಕಾಲದಲ್ಲಿ ಚಿಂಕೆ ಚರ್ಮ ಮತ್ತು ಉಣ್ಣೆಗಳಿಂದ ತಯಾರಾಗುತ್ತಿದ್ದ ಉಡುಪುಗಳಿಗೆ ಚಿನ್ನದ ಎಳೆಗಳಿಂದ ಕಸೂತಿ ಮಾಡುತ್ತಿದ್ದರೆಂಬುದಾಗಿ ತಿಳಿದುಬರುತ್ತದೆ. ಋಗ್ವೇದದಲ್ಲಿಯ 'ಹಿರಣ್ಯವೇಶನ್' ಶಬ್ದವನ್ನಾಧರಿಸಿ ಆ ಕಾಲದಲ್ಲಿ ಭಾರತದಲ್ಲಿ ಚಿನ್ನದ ಕಸೂತಿ ಇತ್ತೆಂದು ಹೇಳಲಾಗುತ್ತದೆ'[೬೦] ತುಂಬ ಪ್ರಾಚೀನ ಕಾಲದಿಂದಲೂ ಇರುವ ಈ ಕಸೂತಿ ಕಲೆ ಇಂದಿಗೂ ಜೀವಂತಿಕೆ ಉಳಿಸಿಕೊಂಡು ಬಂದಿರುವುದು ಅಚ್ಚರಿಯಾಗಿಯೇ ಕಾಣಿಸಿಕೊಳ್ಳುತ್ತದೆ.

'ಭಾರತದಲ್ಲಿ ಕಸೂತಿ ಸ್ಥಳದಿಂದ ಸ್ಥಳಕ್ಕೆ ವ್ಯತ್ಯಾಸಗೊಂಡಿದ್ದು ದಕ್ಷಿಣಕ್ಕಿಂತ ಉತ್ತರ ಭಾಗದಲ್ಲಿ ಹೆಚ್ಚು ಆಸ್ಪದವಿದೆ. 'ಝಿರ್ದೋಂಶಿ' ಮತ್ತು 'ಶಿಲ್ಮಾ ಶಿತಾರಾ' ಎಂಬ ಕಸೂತಿಯನ್ನು ಪುರುಷರೇ ಬೆಳೆಸುತ್ತಾ ಬಂದಿದ್ದಾರೆ. ೧೭ ಮತ್ತು ೧೮ನೇ ಶತಮಾನಗಳಲ್ಲಿ 'ಕಸೂತಿ' ಹಾಕಿದ ಉತ್ತಮ ವಸ್ತು[೬೧]ಗಳು ಭಾರತದಿಂದ ವಿದೇಶಗಳಿಗೆ ರಫ್ತಾಗುತ್ತಿದ್ದವು. ಭಾರತದ ಕಸೂತಿ ಕಲೆಯ ಮೇಲೆ ವಿದೇಶಿಯರ ಪ್ರಭಾವವೂ ಇದೆ. ಕಾಶ್ಮೀರದ ಕಸೂತಿಯು ಟಿಬೇಟಿನ ಮೂಲಕ ಚೀನಾದ ಕಸೂತಿಯಿಂದ ಪ್ರಭಾವಿತಗೊಂಡಿದ್ದು ಪಂಜಾಬಿನ ಹೂ ಕಸೂತಿಯ ಮೇಲೆ ಬಲೂಚಿಸ್ಥಾನದ ಕಸೂತಿಯ ಶೈಲಿಗಳು, ಸ್ಪೇನ್, ಜರ್ಮನಿಗಳಿಂದ ಪ್ರಭಾವಿತಗೊಂಡಿವೆ' ಕಸೂತಿ ಕಲೆ ಒಂದು

---

೫೮. ಲಂಬಾಣಿ ಸಂಸ್ಕೃತಿ : ಸಣ್ಣರಾಮ : ೧೯೯೯ : ಪು-೨೧೩-೨೧೪

೫೯. ಕಸೂತಿ ಕಲೆ : ಜಗತಾಪ ಮಹಾದೇವ ಎಂ : ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು : ೨೦೦೪ : ಪು-೨

೬೦. ಜನಪದ ಕಸೂತಿ : ವೆಂಕಾರೆಡ್ಡಿ ಮಧು : ಕನ್ನಡ ವಿಶ್ವವಿದ್ಯಾಲಯ, ಹಂಪಿ : ೨೦೦೦ : ಪು-೭

೬೧. ಜನಪದ ಕಸೂತಿ : ವೆಂಕಾರೆಡ್ಡಿ ಮಧು : ಕನ್ನಡ ವಿಶ್ವವಿದ್ಯಾಲಯ, ಹಂಪಿ : ೨೦೦೦ : ಪು-೮

ಜನಪದ ಕಲೆಯಾಗಿದ್ದರೂ ಅದು ದೇಶ-ದೇಶಗಳ ನಡುವೆ ವ್ಯಾಪಾರದ ಸರಕಾಗಿಯೂ ಬೆಳೆದು ಬಂದಿರುವುದನ್ನು ಗಮನಿಸಬೇಕಾಗುತ್ತದೆ.

'ಕರ್ನಾಟಕದಲ್ಲಿ ಕಸೂತಿ ಕಲೆಯು 'ಕರ್ನಾಟಕ ಕಸೂತಿ' ಎಂಬ ಹೆಸರಿನಿಂದ ಕರೆಯಲ್ಪಡುತ್ತದೆ. ಈ ಕಸೂತಿಯು ಹೆಚ್ಚಾಗಿ ಆಷ್ಟ್ರಿಯಾ, ಹಂಗರಿ ಹಾಗೂ ಸ್ಪೇನ್ ದೇಶಗಳ ಕಸೂತಿಯನ್ನು ಹೋಲುತ್ತದೆ. ಜನಪದ ಕಲೆ ಕರ್ನಾಟಕ ಕಸೂತಿಯ ಹಲವಂಶಗಳಲ್ಲಿ ತನ್ನದೇ ಆದ ವಿಶೇಷತೆಯನ್ನು ಹೊಂದಿದೆ'[೬೨] ಎನ್ನುವ ಮಧು ವೆಂಕಾರೆಡ್ಡಿಯವರು, 'ಯಾವುದೇ ವಸ್ತ್ರವಿರಲಿ ಭಾರತೀಯ ಕಸೂತಿ ಕ್ಷೇತ್ರದಲ್ಲಿ ಕರ್ನಾಟಕ ಕಸೂತಿಗೆ ವಿಶಿಷ್ಟ ಸ್ಥಾನವಿದೆ. ಈ ಕಸೂತಿಯು ಉತ್ತರ ಕರ್ನಾಟಕದ ಒಂದು ಶುದ್ಧ ಜನಪದ ಕಲೆಯಾಗಿದ್ದು ಹೆಚ್ಚಾಗಿ ಧಾರವಾಡ ಜಿಲ್ಲೆಯ ಸುತ್ತಮುತ್ತ ಕಾಣಬಹುದಾದುದರಿಂದ ಇದು 'ಧಾರವಾಡ ಕಸೂತಿ' ಎಂದೂ ಪ್ರಸಿದ್ಧಿ ಪಡೆದಿದೆ'[೬೩] ಎನ್ನುತ್ತಾರೆ. ಜಾಗತಿಕ ಮಟ್ಟದಲ್ಲಿ ಕರ್ನಾಟಕದ ಕಸೂತಿಗೆ ವಿಶಿಷ್ಟವಾದ ಸ್ಥಾನವಿದೆ ಎಂದು ಗ್ರಹಿಸಿರುವ ಅವರು ಧಾರವಾಡ ಜಿಲ್ಲೆಯಲ್ಲಿ ಈ ಕಲೆ ಹೆಚ್ಚಾಗಿ ಕಂಡುಬರುತ್ತಿರುವುದರಿಂದ ಇದನ್ನು 'ಧಾರವಾಡ ಕಸೂತಿ' ಎಂದು ಗುರುತಿಸಬಹುದಾದಷ್ಟು ಚಿರಪರಿಚಿತವಾಗಿದೆ ಎಂದು ತಿಳಿಸುತ್ತಾರೆ. ಅಂದರೆ ಧಾರವಾಡದ ಕಸೂತಿ ವಿಶೇಷವಾಗಿ ಒಡಮೂಡಿದ್ದು ನಾವೀನ್ಯತೆಯಿಂದ ಮನ ಸೆಳೆಯುತ್ತದೆ.

ಈ ಕಸೂತಿಯಲ್ಲಿ ವಿವಿಧ ಬಗೆಯ ಚಿತ್ರಗಳನ್ನು ಬಿಡಿಸಲಾಗುತ್ತದೆ. ವಿವಿಧ ನಮೂನೆಗಳು ಕಸೂತಿ ಕಲೆಯನ್ನು ಮತ್ತಷ್ಟು ಅಂದಗೊಳಿಸುತ್ತವೆ. 'ದೇವಾಲಯ, ಮೂರ್ತಿ ಶಿಲ್ಪಗಳಿಂದ ಹಿಡಿದು ಎಳೆಯ ಮಗುವಿಗೆ ಆಶ್ರಯ ಕೊಡುವ ತೊಟ್ಟಿಲವರೆಗೆ, ಆನೆಯಿಂದ ಅಳಿಲಿನವರೆಗೆ ಜನಪದ ಕಸೂತಿ ಕಲೆಯ ಚಿತ್ರ ವಿನ್ಯಾಸಗಳು ಹರಡಿಕೊಂಡಿವೆ. ತಾಯಿ ತನ್ನ ದಿನದ ದುಡಿಮೆಯ ನಂತರ ಬಿಡುವಿನ ವೇಳೆಯಲ್ಲಿ ಮಕ್ಕಳು ತೊಡುವ ಬಟ್ಟೆಯ ಮೇಲೆ ಅವುಗಳಿಗೆ ಪ್ರಿಯವಾದ ಮುದ ನೀಡುವ ಹೂ, ದ್ರಾಕ್ಷಿ, ತೊಂಡೆ ಬಳ್ಳಿಗಳು, ಗಿಳಿ, ಆನೆ, ಹಸು ಹೀಗೆ ವಿವಿಧ ಪ್ರಾಣಿ ಪಕ್ಷಿಗಳ ಚಿತ್ರಗಳನ್ನು ಕಸೂತಿಯಲ್ಲಿ ಬಿಡಿಸುತ್ತಿದ್ದರು. ಮನಸ್ಸು ಮತ್ತು ಪ್ರಕೃತಿಯ ಗಾಢ ಸಂಬಂಧದ ಕಲ್ಪನೆಯನ್ನು ಕಲೆಯಲ್ಲಿ ಮೂಡಿಸುವ ಅವಳ ಜಾಣ್ಮೆ ಮೆಚ್ಚುವಂಥದ್ದು. ದೇವ-ದೇವತೆಗಳೊಂದಿಗಿನ ಗ್ರಾಮೀಣರ ಒಲವು ಅವರ ಕಸೂತಿಯಲ್ಲಿನ ದೇವಾಲಯ, ರಥ ಮೊದಲಾದ ವಿನ್ಯಾಸಗಳಲ್ಲಿ ಸ್ಪಷ್ಟವಾಗಿದೆ. ಹಲವು ಬಗೆಯ ರೂಪು-ರೇಷೆಗಳು ಕಸೂತಿ ನಕ್ಷೆಗಳಲ್ಲಿ ಪ್ರತಿಬಿಂಬಿತಗೊಂಡಿವೆ. ಗೋಪುರ, ಆಕಾಶ, ತುಳಸಿ ಕಟ್ಟೆ, ಕಾಳಿನ ತೆನೆಗಳನ್ನು ಬಟ್ಟೆ

---

೬೨. ಜನಪದ ಕಸೂತಿ : ವೆಂಕಾರೆಡ್ಡಿ ಮಧು : ಕನ್ನಡ ವಿಶ್ವವಿದ್ಯಾಲಯ, ಹಂಪಿ : ೨೦೦೦ : ಪು-೧೪

೬೩. ಜನಪದ ಕಸೂತಿ : ವೆಂಕಾರೆಡ್ಡಿ ಮಧು : ಕನ್ನಡ ವಿಶ್ವವಿದ್ಯಾಲಯ, ಹಂಪಿ : ೨೦೦೦ : ಪು-೧೫

ಮಾಧ್ಯಮದಲ್ಲಿ ಮೂಡಿಸುವ ಕಲೆ ಅವಳಿಗೆ ಕರಗತವಾಗಿದೆ. ಈ ಎಲ್ಲ ಚಿತ್ರ ವಿನ್ಯಾಸಗಳು ಹೆಂಗಳೆಯರ ಮನಸ್ಸಿನ ಕೋಮಲ ಅಭಿವ್ಯಕ್ತಿಯಾಗಿರುವುದರಿಂದ ಗ್ರಾಮೀಣ ಸಂಸ್ಕೃತಿಯ ಸ್ಪಷ್ಟ ನೋಟವೂ ಓದುಗರಿಗೆ ದಕ್ಕುತ್ತದೆ.'[೬೪] ಹೀಗೆ ವಿವಿಧ ತೆರನಾಗಿ ಕಸೂತಿಯಲ್ಲಿ ಜನಪದ ಚಿತ್ರಕಲೆ ಕಂಡುಬರುತ್ತದೆ.

ಕಸೂತಿ ಕಲೆಗೆ ಮುಖ್ಯವಾಗಿ ಕಟ್ಟಿಗೆ ಅಥವಾ ಕಬ್ಬಿಣ ಅಥವಾ ಸ್ಟೀಲ್ ರಿಂಗಗಳು, ಕೊಳವೆ ಸೂಜಿ, ಕೊಕ್ಕೆ ಸೂಜಿ, ಕತ್ತರಿ, ವಿವಿಧ ಬಗೆಯ (ಉಲನ್, ರೇಷ್ಮೆ, ಸಾದಾರಣ) ದಾರಗಳು, ಅಂಗುಸ್ಥಾನ, ಚಿತ್ರದ ರೇಖೆ ಮೂಡಿಸಲು ಪೆನ್ಸಿಲ್, ಕೆಲವು ಮಣಿಗಳು, ಪೈಪು, ಗುಂಡಿಗಳು. ಇಷ್ಟಲ್ಲದೆ ಕೇವಲ ರಿಂಗಗಳು ಮತ್ತು ಕೊಳವೆ ಸೂಜಿ ಇದ್ದರೆ ಯಾವುದೇ ಬಟ್ಟೆಯ ಮೇಲೆ ಕಸೂತಿಯನ್ನು ಬಿಡಿಸಬಹುದಾಗಿದೆ. ಕಸೂತಿಯನ್ನು ಹಾಕುವಾಗ ಆವಾಗಲೇ ಮನಸ್ಸಿನಲ್ಲಿ ಮೂಡಿಬರುವ ಚಿತ್ರಗಳನ್ನು ಅದರಲ್ಲಿ ಬಿಡಿಸಬಹುದಾಗಿದೆ. ಹೀಗಾಗಿ ಯಾವುದೇ ಬಟ್ಟೆಯ ಮೇಲೆ ಕಸೂತಿಯ ಕಲೆ ಅರಳಿ ನಿಲ್ಲಬಲ್ಲದು. ತೀರ ಇತ್ತೀಚಿನವರಿಗೆ ಕೈ ವಸ್ತ್ರಗಳ ಮೇಲೆ ಮುದ್ದಾಗಿ ಹೂವುಗಳನ್ನು ಬಿಡಿಸಿ ಅದನ್ನು ಕಾಣಿಕೆಯಾಗಿ ನೀಡುವ ಪರಿಪಾಠ ಜಿಲ್ಲೆಯಲ್ಲಿ ಇತ್ತು.

ಕಸೂತಿಯಲ್ಲಿ ಮೊದಲಿಗೆ ಉಡುಗೊರೆ ರೂಪದ ಭಾವ ಇತ್ತು. ಬಂಧುಗಳಿಗೆ, ನೆಂಟರು, ಇಷ್ಟರಿಗೆ ಉಡುಗೊರೆ ನೀಡಲು ಚೆಂದದ ಚಿತ್ರ ಹಾಕಿದ ಕಸೂತಿಯ ಬಟ್ಟೆಯನ್ನು ನೀಡಲಾಗುತ್ತಿತ್ತು. ಇಷ್ಟೇ ಅಲ್ಲದೆ ಧಾರ್ಮಿಕವಾಗಿ ಕಾಣಿಸಿಕೊಳ್ಳುವ ಚಿತ್ರಗಳೂ ಇಲ್ಲಿರುತ್ತವೆ. ದೇವತೆಗಳ ಚಿತ್ರ, ರಾಮಾಯಣ-ಮಹಾಭಾರತದ ಚಿತ್ರ, ಧಾರ್ಮಿಕ ಕ್ಷೇತ್ರಗಳ ಚಿತ್ರ, ಪೌರಾಣಿಕ ಪ್ರಸಂಗ ಮತ್ತು ವ್ಯಕ್ತಿಗಳ ಚಿತ್ರ, ಐತಿಹಾಸಿಕ ಪ್ರಸಂಗ ಮತ್ತು ವ್ಯಕ್ತಿಗಳ ಚಿತ್ರ, ಸಾಮಾಜಿಕ ಬದುಕಿನ ಚಿತ್ರಣ ಮೊದಲಾದವುಗಳನ್ನು ಕಸೂತಿಯಲ್ಲಿ ಕಾಣಬಹುದು. ವಿಶೇಷವಾಗಿ ಪ್ರಕೃತಿ ರಮ್ಯ ಚಿತ್ರಣಗಳು ಕಸೂತಿ ಕಲೆಯಲ್ಲಿ ಅರಳಿ ನಿಂತಿರುತ್ತವೆ.

'ಶಾರ್ಟ್ ಆಂಡ್ ಲಾಂಗ್ ಸ್ಟಿಚ್ ಕಸೂತಿಯ ಬಗ್ಗೆ ಹೇಳುತ್ತ, 'ಈ ಕಸೂತಿ ನೆಳಲು ಬೆಳಕಿನ ಪ್ರಭಾವದಿಂದ ತನ್ನ ಕ್ಷೇತ್ರವನ್ನು ಇನ್ನೂ ವ್ಯಾಪಿಸಿಕೊಳ್ಳಹತ್ತಿದೆ. ಧಾರವಾಡದ ಮರಾಠಾ ಕಾಲನಿಯಲ್ಲಿ ಕಳೆದ ಅರ್ಧ ಶತಮಾನದ ಹಿಂದೆ ಜೀವಿತಾವಸ್ಥೆಯ ಬಾಳ ಸಂಜೆಗಳನ್ನು ಶ್ರೀಮತಿ ರುದ್ರವ್ವ ಸಿದ್ರಾಮಯ್ಯ ಮಠದ ಅವರು ದೇಶೀಯ ಕಸೂತಿಯಿಂದಲೇ ಆಸಕ್ತಿ ಬೆಳೆಸಿಕೊಂಡವರು; ಮುಂದುವರಿದು ಮೆಂತೆ, ಗಮಟೆ ಹೆಣಿಕೆ, ಸಿಂಧಿ ಮೊದಲಾದ ಕಸೂತಿಗಳನ್ನು ಮಾಡುತ್ತಾ ಸಾದಾ ಬಟ್ಟೆಯ ಮೇಲೆ ಅತೀ ಸೂಕ್ಷ್ಮವಾದ ಸೂಜಿಯನ್ನು ಬಳಸಿ ತಿಳಿಯಾದ ಬಣ್ಣದ ಬಟ್ಟೆಯ

೬೪. ಜನಪದ ಕಸೂತಿ : ವೆಂಕಾರೆಡ್ಡಿ ಮಧು : ಕನ್ನಡ ವಿಶ್ವವಿದ್ಯಾಲಯ, ಹಂಪಿ : ೨೦೦೦ : ಪು-೨೦

ಮೇಲೆ ದಟ್ಟ ವರ್ಣಗಳ ದಾರಗಳನ್ನು ಬಳಸಿ ಮನಮೋಹಕವಾದ ಕಸೂತಿಗಳನ್ನು ನಿರ್ಮಿಸಹತ್ತಿದರು.

ಲಕ್ಷ್ಮಿ, ಗಣಪತಿ, ಸರಸ್ವತಿಯರ ಕಸೂತಿ ನೋಡಿದಾಗ ಇದರ ಚಿತ್ತಾರವನ್ನು ಚೆನ್ನಾಗಿ ಬಲ್ಲವರ ಸಹಾಯದಿಂದ ಚಿತ್ರಿಸಿಕೊಂಡು ತದನಂತರ ತಾಳ್ಮೆಯಿಂದ ದಾರಗಳನ್ನು ತುಂಬಿದ್ದಾರೆ. ಲಕ್ಷ್ಮಿಗೆ ದಟ್ಟ ಕೆಂಪುವರ್ಣವನ್ನು ಬಳಸಿದ್ದಾಗಿದೆ. ಸರಸ್ವತಿಗೆ ತಿಳಿನೀಲಿ ಬಣ್ಣವನ್ನು ಬಳಸಿ ವರ್ಣ ಸಂಯೋಜನೆಯ ಪ್ರೌಢತೆಯನ್ನು ಮೆರೆದು ಲಕ್ಷ್ಮಿಯ ಚಂಚಲತೆ, ಸರಸ್ವತಿಯ ಶಾಂತ ಹಾಗೂ ವಿಶಾಲತೆಯ ಭಾವ ಅದರಲ್ಲಿ ಗೋಚರಿಸುತ್ತದೆ. ಮಧ್ಯದಲ್ಲಿ ಬಳಸಿದ ಗಣಪತಿಯ ಚಿತ್ರದಲ್ಲಿ ಕೇಸರಿ ಬಳಸಿರುವುದು ನೋಡಿದರೆ ತ್ಯಾಗದ ಪ್ರತೀಕ ಇದಾಗಿದೆ. ಎಲ್ಲಾ ಆಭರಣಗಳಿಗೆ ಸರಿಯಾಗಿ ಚಿತ್ರಿಸಿ ಸುವರ್ಣದ ಭಾವ ಕೊಡುವ ಹಳದಿ, ಕೇಸರಿಯಿಂದ ಪೂರ್ಣಗೊಳಿಸಿದ್ದಾರೆ.'[೬೫] ಈಗ ಶ್ರೀಮತಿ ರುದ್ರವ್ವ ದಿವಂಗತರಾಗಿದ್ದಾರೆ. ಆದರೆ ಅವರು ಮೆಂತೆ ಹೆಣಿಕೆಯಲ್ಲಿ ಚಿತ್ರಿಸಿದ ಪ್ರಾಣಿ–ಪಕ್ಷಿಗಳ ಚಿತ್ರಗಳು ಇಂದಿಗೂ ಗಮನ ಸೆಳೆಯುತ್ತವೆ. ಹಾಗೆಯೇ ಧಾರವಾಡದ ಶ್ರೀಮತಿ ಜಮುನಾ ಚೆನ್ನು ಮಠದ ಅವರು ಕೂಡ ನಿಸರ್ಗ ರಮ್ಯ ಚಿತ್ತಾರಗಳನ್ನು ಕಸೂತಿ ಕಲೆಯ ಮೂಲಕ ಸಂಯೋಜಿಸಿ ಚಿತ್ರಿಸಿದ್ದಾರೆ. ಇವರ ಕಸೂತಿ ಕಲೆಯ ಪ್ರದರ್ಶನ ದೆಹಲಿಯಲ್ಲಿಯೂ ಪ್ರದರ್ಶನಗೊಂಡಿದೆ. ಕಂದಿ ಅಥವಾ ಕಪ್ಪು ಬಟ್ಟೆಯ ಮೇಲೆ ಇವರು ಕಸೂತಿಯನ್ನು ಹೆಣೆಯುತ್ತಾರೆ. ಧಾರವಾಡದ ಹೊಸಯಲ್ಲಾಪುರದ ಶ್ರೀ ವೆಂಕಟೇಶ ದೇವಾಲಯದ ಬಳಿ ಇರುವ ಶ್ರೀಮತಿ ಲೀಲಾವತಿ ರಾಘವೇಂದ್ರರಾವ್ ದೇಶಪಾಂಡೆಯವರು ಕೂಡ ಸುಮಾರು ವರ್ಷಗಳಿಂದ ಕಸೂತಿ ಕಲೆಯನ್ನು ಬೆಳೆಸುತ್ತಿದ್ದಾರೆ. ಇವರು ನೂಲಿನ ತಟ್ಟಿನ ಮೇಲೆ ಕ್ರಾಸ್ ಸ್ಟಿಚ್ (ಕತ್ತರಿ ಹೆಣಿಕೆ)ಯಲ್ಲಿ ಪ್ರಸಿದ್ಧರಾಗಿದ್ದಾರೆ.

'ಹುಬ್ಬಳ್ಳಿಯ ಜ್ಯೋತಿ ಮಡಿವನ್, ಧಾರವಾಡದ ಕು. ಸುಮಂಗಲಾ ಮೂಲಿಮನಿ, ಶ್ರೀಮತಿ ರತ್ನಾ ಧೂಳಿಕೊಪ್ಪ, ಶ್ರೀಮತಿ ಮಧುಮತಿ ಹುಯಿಲಗೋಳ ಮೊದಲಾದವರು ಕಸೂತಿ ಸೀರೆಗಳ ಪ್ರದರ್ಶನವನ್ನು ಮಾಡಿದ್ದಾರೆ. ಹಾಗೆಯೇ ನರೇಂದ್ರದ ಅಜ್ಜಿ ಗಂಗವ್ವ ದೃಷ್ಟಿ ಮಂಜಾಗಿದ್ದರೂ ಕಸೂತಿ ಬಿಡಿಸುತ್ತಿದ್ದು, ತಾವು ಬಿಡಿಸಿದ ನಕ್ಷೆಗಳಿಗೆ ಫ್ರೇಮ್ ಹಾಕಿಸಿ ಮನೆಯ ಗೋಡೆಗೆ ಇಳಿ ಬಿಟ್ಟಿದ್ದಾರೆ. ಧಾರವಾಡದ ಕೊಪ್ಪದಕೇರಿಯ ಶ್ರೀ ಎಸ್.ಜಿ. ಪಾಟೀಲರು ೧೯೦೪ರಲ್ಲಿ ತಮ್ಮ ಅಕ್ಕ ಬಿಡಿಸಿದ ದೊಡ್ಡ ಜಮಖಾನೆಯ ಮೇಲಿನ ಕಸೂತಿಯನ್ನು ಇಂದಿಗೂ ಕಾಯ್ದಿಟ್ಟುಕೊಂಡಿದ್ದಾರೆ. ಈ ಜಮಖಾನೆಗೆ ರಾಷ್ಟ್ರೀಯ ಮಟ್ಟದಲ್ಲಿ ಆರೇಳು ಸಲ ಪ್ರಶಸ್ತಿ ಕೂಡ

---

೬೫. ಕರ್ನಾಟಕದ ಜನಪದ ಚಿತ್ತಾರಗಳು ಹಾಗೂ ಶಿಲ್ಪಗಳು : ಜಗತಾಪ ಮಹದೇವ : ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು : ೨೦೦೪ : ಪು–೭೮

ದೊರೆತಿದೆ. ಅದರಲ್ಲಿ ಭಗವದ್ಗೀತೆಯ ಶ್ಲೋಕಗಳು, ಪ್ರಾಣಿ–ಪಕ್ಷಿಗಳ ಚಿತ್ರಗಳು ಮೋಹಕವಾಗಿವೆ. ಹಾಗೆಯೇ ಹುಬ್ಬಳ್ಳಿಯ ಶ್ರೀಮತಿ ಮಾಳೆಯವರ ಕಸೂತಿ ಕಲೆಯು ತುಂಬ ಮೆಚ್ಚುವಂತದ್ದು.'[೬೬] ಹೀಗಾಗಿ ಧಾರವಾಡದ ಕಸೂತಿ ಇಂದಿಗೂ ತನ್ನ ನಾವೀನ್ಯತೆಯನ್ನು ಉಳಿಸಿಕೊಂಡು ಬಂದಿದೆ. 'ಧಾರವಾಡದ ಶ್ರೀಮತಿ ಲಕ್ಷ್ಮೀ ಕೇಸರಕರ ದೇಶೀ ಕಸೂತಿಯಲ್ಲಿ ನಿಪುಣರಾಗಿದ್ದರು ಎಂದು ತಿಳಿದುಬರುತ್ತದೆ. ಧಾರವಾಡದ ಹೊಸಯಲ್ಲಾಪುರ ನಿವಾಸಿ ಶ್ರೀಮತಿ ಬಾಯಕ್ಕ ಇಂಗಳೆಯವರು ಕೂಡ ಆಕರ್ಷಕವಾದ ಕಸೂತಿ ಕಲೆಯಲ್ಲಿ ಪರಿಣಿತರಾಗಿದ್ದರು. ಲಕ್ಷ್ಮೀ ಕೇಸರಕರ ಅವರ ವೀಣಾಧಾರಿ ಸರಸ್ವತಿ ಮತ್ತು ಬಾಯಕ್ಕ ಇಂಗಳೆಯವರ ಕಮಲದ ಮೇಲಿರುವ ಲಕ್ಷ್ಮಿಯ ಕಸೂತಿ ಚಿತ್ರಗಳು ಗಮನ ಸೆಳೆಯುತ್ತವೆ.'[೬೭] ಹಾಗೆಯೇ 'ಧಾರವಾಡದ ಕಾಮನಕಟ್ಟಿಯ ನಿವಾಸಿ ದಿವಂಗತ ಈರವ್ವ ಅವರು ಕಂಬಳಿಗಳ ಮೇಲೆ ಕಸೂತಿಯನ್ನು ಬಿಡಿಸಿದ್ದಾರೆ. ಪಕ್ಷಿಗಳ ಸಾಲು, ತೇರುಗಳು, ಮನೆಗಳು, ಈಶ್ವರಲಿಂಗ, ಕಳಸ, ಜಿಂಕೆ, ಎತ್ತು, ಹಗ್ಗದಟದ ಹುಡುಗಿ, ತೆರ ತೆರನಾದ ಹೂವುಗಳು ಕಂಬಳಿಯ ಮೇಲೆ ಅರಳಿ ನಿಂತಿವೆ. ಹಾಗೆಯೇ ಧಾರವಾಡದ ಗುಲಗುಂಜಿಕೊಪ್ಪದ ಕಾಶೀಬಾಯಿ ಹಿರೇಮಠ ಅವರು ರಟ್ಟಿನ ಮೇಲೆ ಕಸೂತಿ ಕಲೆಯನ್ನು ಬಿಡಿಸಿದ್ದು ಅದರಲ್ಲಿರುವ ಪ್ರಾಣಿ, ಪಕ್ಷಿ, ಹೂವುಗಳ ಕಸೂತಿ ಚಿತ್ರ ಗಮನ ಸೆಳೆಯುತ್ತದೆ.'[೬೮] ಇಲ್ಲಿ ದಾಖಲಾದ ಧಾರವಾಡ ಜಿಲ್ಲೆಯ ಕಸೂತಿ ಕಲೆಯ ವಿವರಣೆ ಇಂದಿಗೂ ಮುಂದುವರೆದುಕೊಂಡು ಬಂದಿದೆ.

ಉಪ್ಪಿನ ಬೆಟಗೇರಿಯ ೩೭ ವಯಸ್ಸಿನ ಶ್ರೀಮತಿ ಮಹಾದೇವಿ ನೀಲವಾಣಿಯವರು ಸೂಸನ್ ಕಡ್ಡಿ[೬೯]ಯಿಂದ ಸಿಂಧಿ ಟಾಕಿ ಕಸೂತಿ ಪ್ರಕಾರದದಲ್ಲಿ ಚಿತ್ರ ಬಿಡಿಸಿರುವುದು ಕಂಡುಬರುತ್ತದೆ. ಅವರು ಬಾಗಿಲು ಪರದೆ, ಕೈಚೀಲ, ಕೈ ವಸ್ತ್ರ ಮೊದಲಾದವುಗಳ ಮೇಲೆ ಕಸೂತಿ ಕಲೆಯನ್ನು ಅರಳಿಸಿ ಪ್ರಾಣಿ–ಪಕ್ಷಿ, ಗಿಡ–ಮರ, ಹೂವು–ಬಳ್ಳಿ, ಹಣ್ಣು–ಕಾಯಿ ಚಿತ್ರಗಳನ್ನು ಬಿಡಿಸಿದ್ದಾರೆ. ಕೆಲವು ಕಡೆ ದೇವರ ಚಿತ್ರಗಳನ್ನೂ ಬಿಡಿಸಲಾಗಿದ್ದು, ಅವುಗಳಿಗೆ ಇಂದಿಗೂ ಬೇಡಿಕೆ ಕಡಿಮೆಯಾಗಿಲ್ಲ ಎಂದು ಶ್ರೀಮತಿ ಮಹಾದೇವಿಯವರು ಹೇಳುತ್ತಾರೆ.[೭೦]

ಧಾರವಾಡದ ೫೫ ವಯಸ್ಸಿನ ಶ್ರೀಮತಿ ಸುಲೋಚನಾ ಪೋತದಾರ ಅವರೂ ಕಸೂತಿ ಕಲೆಯಲ್ಲಿ ನಿಪುಣರಾಗಿದ್ದು, ಟೇಲರಿಂಗ್ ಡಿಪ್ಲೋಮಾ ಮುಗಿಸಿದ್ದಾರಲ್ಲದೆ ಎಂಬ್ರಾಯಡರಿ

---

೬೬. ನೋಡಿ : ಕನ್ನಡ ನಾಡಿನ ಕಸೂತಿ : ಹಿರೇಮಠ ವಿಜಯಾ ಮತ್ತು ಮಹಾಲೆ ಗೀತಾ : ಸಮಾಜ ಪುಸ್ತಕಾಲಯ, ಧಾರವಾಡ : ೧೯೯೩

೬೭. ನೋಡಿ : ಕಸೂತಿ ಚಿತ್ರಕಲೆ : ಜಗತಾಪ ಮಹದೇವ ಎಂ : ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು : ೨೦೦೪

೬೮. ನೋಡಿ : ಕಸೂತಿ ಚಿತ್ರಕಲೆ : ಜಗತಾಪ ಮಹದೇವ ಎಂ : ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು : ೨೦೦೪

೬೯. ವಿಮಾನವನ್ನು ಆವಿಷ್ಕರಿಸಿದ ರೈಟ್ ಸಹೋದರರ ತಾಯಿ ಸೂಸನ್ ಎನ್ನುವಾಕೆ ಮೊದಲ ಬಾರಿಗೆ ಕಸೂತಿ ಹಾಕಲು ತಂತಿಯನ್ನು ಬಳಸಿದ್ದಳೆಂದು ಹೇಳಲಾಗುತ್ತಿದೆ. ಹಾಗಾಗಿ ಆ ತಂತಿಯನ್ನು ಇಂದಿಗೂ 'ಸೂಸನ್ ಕಡ್ಡಿ' ಎಂದೇ ಕರೆಯಲಾಗುತ್ತದೆ.

೭೦. ಕ್ಷೇತ್ರಕಾರ್ಯ : ೧೧–೧೨–೨೦೧೧

ಪೇಟಿಂಗ್ ಕೋರ್ಸ್‌ನ್ನೂ ಪಡೆದುಕೊಂಡಿದ್ದಾರೆ. ಇವರು ಕಸೂತಿ ಕಲೆಯಲ್ಲಿ ವಿವಿಧ ಬಗೆಯ ಆಧುನಿಕ ಬಗೆಯ ಚಿತ್ರಗಳನ್ನು ಬಿಡಿಸುತ್ತಾರೆ. ಸೀರೆಗಳ ಮೇಲೆ ಮಾತ್ರವಲ್ಲದೇ ಕುರ್ತಾ, ಜೀನ್ಸ್ ಪ್ಯಾಂಟ್‌ಗಳ ಮೇಲೆಯೂ ಇವರ ಕಸೂತಿ ಕಲೆ ಅರಳುತ್ತದೆ. ಟೇಲರಿಂಗ್‌ನಲ್ಲಿ ತಾವು ತಯಾರಿಸಿದ ಬಟ್ಟೆ-ಬರೆಗಳ ಮೇಲೆ ಕಸೂತಿ ಕಲೆಯನ್ನು ಬಿಡಿಸಿ ಮಾರಾಟಕ್ಕೂ ಅವರು ಪೋತದಾರ ಗಾರ್ಮೆಂಟ್ಸ್ ಎನ್ನುವ ಅಂಗಡಿಯನ್ನೇ ತೆರೆದಿದ್ದಾರೆ.[೭೧]

ಹುಬ್ಬಳ್ಳಿಯ ಅಶೋಕ ನಗರದಲ್ಲಿ ಇರುವ ಶ್ರೀಮತಿ ಭಾರತಿ ವಾಲಿ ಎನ್ನುವವರು ಟೇಲರಿಂಗ್ ಮಾಡುತ್ತಿದ್ದು, ಕಸೂತಿ ಕಲೆಯನ್ನೂ ಮೈಗೂಡಿಸಿಕೊಂಡಿದ್ದಾರೆ. ಕಸೂತಿಯಲ್ಲಿ ತೇರು, ಆನೆ, ರಥ, ಗೋಪುರ, ನಕ್ಷತ್ರ ಮೊದಲಾದವುಗಳನ್ನು ಚಿತ್ರಿಸುತ್ತಾರೆ. ಸುಮಾರು ಇಪ್ಪತ್ತು ವರ್ಷಗಳಿಂದ ಈ ಕಾಯಕದಲ್ಲಿ ತೊಡಗಿಕೊಂಡಿರುವ ಇವರು ಧಾರವಾಡ, ನವಲೂರು, ಶ್ರೀನಗರ ಮೊದಲಾದ ಕಡೆಗಳಲ್ಲಿ ತಮ್ಮದೇ ಆದ ಗ್ರಾಹಕರನ್ನು ಹೊಂದಿದ್ದು ಸೀರೆಗಳ ಮೇಲೆ ಕಸೂತಿ ಕಲೆಯನ್ನು ಬಿಡಿಸಿರುವುದಾಗಿ ಹೇಳಿದ್ದಾರೆ.[೭೨]

ಹವ್ಯಾಸಿ ಕಲೆಯಾಗಿದ್ದ ಕಸೂತಿಯನ್ನು ವೃತ್ತಿಯನ್ನಾಗಿ ಮಾಡಿಕೊಂಡಿರುವವರಲ್ಲಿ ಶ್ರೀಮತಿ ಭಾರತಿ ಅವರೂ ಒಬ್ಬರಾಗಿದ್ದಾರೆ. ಹುಬ್ಬಳ್ಳಿಯಲ್ಲಿ ವಾಲಿ ಸೆಲೆಕ್ಷನ್ ಎಂಬ ಮಾರಾಟ ಮಳಿಗೆಯನ್ನೂ ಹೊಂದಿರುವ ಅವರು ಮೊದಲೆಲ್ಲ ಬೆಂಗಳೂರು ಮೊದಲಾದ ರಾಜ್ಯದ ಪಟ್ಟಣಗಳಿಗೆ ತಮ್ಮ ವಹಿವಾಟನ್ನು ವಿಸ್ತರಿಸಿಕೊಂಡಿದ್ದರು. ಅಷ್ಟೇ ಅಲ್ಲದೇ ಮಹಾರಾಷ್ಟ್ರದಲ್ಲೂ ಅವರ ಕಸೂತಿ ಕಲೆಗೆ ಬೇಡಿಕೆ ಇತ್ತು. ಧಾರವಾಡದಲ್ಲಿಯೂ ಶ್ರೀಮತಿ ಸುಲೋಚನಾ ಪೋತದಾರ ಅವರು ಪೋತದಾರ ಗಾರ್ಮೆಂಟ್ ಎನ್ನುವ ಸಣ್ಣ ಅಂಗಡಿಯನ್ನು ಆರಂಭಿಸಿ ಚೂಡಿದಾರ್, ಕುಪ್ಪಸ, ಕುರ್ತಾ, ಜೀನ್ಸ್ ಟಾಪ್, ಜೀನ್ಸ್ ಪ್ಯಾಂಟ್, ಸಲ್ವಾರ ಕಮೀಜ್, ಮಕ್ಕಳ ಬಟ್ಟೆಗಳ ಮೇಲೆ ಕಸೂತಿ ಕಲೆಯನ್ನು ಅರಳಿಸಿ ಮಾರಾಟ ಮಾಡುತ್ತಾರೆ. ಹಾಗೆಯೇ ಕಸೂತಿ ಹಾಕಲಾದ ಬಟ್ಟೆಗಳನ್ನು ಮಾರಲು ಧಾರವಾಡದ ಕೆಲಗೇರಿಯಲ್ಲಿ ಸೊಸೈಟಿ ಫಾರ್ ಎಂಪವರಮೆಂಟ್ & ಮೊಬೈಲೈಜೇಷನ್ ಆಫ್ ಆರ್ಟಿಸನ್ಸ್ (SEMA), ಮೆಹ್ತಾ ಸ್ಟೋರ್ಸ್ ಹಾಗೂ ಹುಬ್ಬಳ್ಳಿಯ ನವನಗರದ ಶ್ರೀದೇವಿ ಕಸೂತಿ ವರ್ಕ್ಸ್ ಉಪ್ಪಿನ ಬೆಟಗೇರಿಯ ವಿಶ್ವಭಾರತಿ ಸ್ವಸಹಾಯ ಸಂಘಗಳಂಥ ಹಲವಾರು ಸ್ವಸಹಾಯ ಸಂಘಗಳಿಂದ ಕಸೂತಿ ಹಾಕಲಾದ ವಸ್ತುಗಳನ್ನು ತರಿಸಿಕೊಂಡು ಇಲ್ಲಿ ವ್ಯಾಪಾರ ಮಾಡಲಾಗುತ್ತಿದೆ.

---

೭೧. ಕ್ಷೇತ್ರಕಾರ್ಯ : ೧೦-೦೩-೨೦೧೩
೭೨. ಕ್ಷೇತ್ರಕಾರ್ಯ : ೨೩-೧೨-೨೦೧೩

ಇದಿಷ್ಟೇ ಅಲ್ಲದೇ ತ್ವರಿತವಾಗಿ ಬಟ್ಟೆಗಳ ಮೇಲೆ ಕಸೂತಿ ಕಲೆಯನ್ನು ಬಿಡಿಸಲು ಸಾಧ್ಯವಾಗುವಂತೆ ಯಂತ್ರಗಳನ್ನೂ ಐದಾರು ವರ್ಷಗಳಿಂದ ಬಳಕೆ ಮಾಡಲಾಗುತ್ತಿದೆ. ಹುಬ್ಬಳ್ಳಿಯ ಸುಪ್ರಿಯಾ ಫ್ಯಾಶನ್ ಡಿಸೈನಿಂಗ್ ಸಂಸ್ಥೆ ಚೀನಾದಿಂದ ಕಂಪ್ಯೂಟರೀಕೃತ ಡಿಸೈನ್ ಯಂತ್ರವನ್ನು ತರಿಸಿಕೊಂಡು ಕಾರ್ಯ ಮಾಡುತ್ತಿದೆ. ಇಲ್ಲಿ ತಯಾರಾಗುವ ಕಸೂತಿ ಕಲೆಯ ಬಟ್ಟೆಗಳಿಗೆ ಬೆಂಗಳೂರು, ಚೆನ್ನೈ, ಸೇಲಂ ಮಾತ್ರವಲ್ಲದೇ ಆಸ್ಟ್ರೇಲಿಯಾ ದೇಶದಿಂದಲೂ ಬೇಡಿಕೆ ಬಂದಿರುವಾಗಿ ಫ್ಯಾಶನ್ ಡಿಸೈನರ್ ಸುನೀತಾ ದಿವಟೆಯವರು ಹೇಳುತ್ತಾರೆ.[೭೩] ಇಲ್ಲಿ ಹಿಂದಿಗಿಂತಲೂ ಉತ್ತಮ ರೀತಿಯಲ್ಲಿ ವಿವಿಧ ನಮೂನೆಯ ಚಿತ್ರಗಳನ್ನು ಒಳಗೊಂಡ ಕಸೂತಿಯನ್ನು ಬಿಡಿಸಲಾಗುತ್ತಿದೆ.

ಸಾಂಸ್ಕೃತಿಕವಾಗಿ ಶ್ರೀಮಂತ ಪರಂಪರೆಯನ್ನು ಹೊಂದಿರುವ ಬಂಜಾರಾ (ಲಂಬಾಣಿ) ಸಮುದಾಯವು ಜಿಲ್ಲೆಯ ಕಲಘಟಗಿ ಹಾಗೂ ಕುಂದಗೋಳ ತಾಲೂಕಿನ ಸುತ್ತಮುತ್ತಲ ಗ್ರಾಮಗಳಲ್ಲಿ ಕಂಡುಬರುತ್ತಾರೆ. ಇವರು ಮೂಲತಃ ಅಲೆಮಾರಿ ಸಮುದಾಯದವರಾಗಿದ್ದು, ಕಳೆದ ಒಂದು ಶತಮಾನದಿಂದೀಚೆಗೆ ಇವರಲ್ಲೇ ಕೆಲವರು ಕೃಷಿಗೆ ಹೊಂದಿಕೊಂಡು ಒಂದೆಡೆ ನೆಲೆ ಕಂಡುಕೊಳ್ಳುವ ಪ್ರಯತ್ನ ಮಾಡುತ್ತಿದ್ದಾರೆ. ಆರ್ಥಿಕವಾಗಿ ತೀರಾ ಹಿಂದುಳಿದವರಾದರೂ ಇವರು ಸಾಂಸ್ಕೃತಿಕವಾಗಿ ಶ್ರೀಮಂತರು. ಇವರ ಪ್ರದರ್ಶನ ಕಲೆ, ವೇಷ ಭೂಷಣ, ಮೌಖಿಕ ಸಾಹಿತ್ಯ, ಆಧುನೀಕರಣದ ಭರಾಟೆಯಲ್ಲಿ ಕಳೆಗುಂದುತ್ತಿದೆ.

ಗುಂಪು ಗುಂಪಾಗಿ ವಾಸಿಸುವ ಲಂಬಾಣಿಗರು ತಮ್ಮದೇ ಆದ ಊರು-ಕೇರಿಗಳನ್ನು ನಿರ್ಮಿಸಿಕೊಂಡಿರುತ್ತಾರೆ. ಇವುಗಳಿಗೆ 'ತಾಂಡಾ'ಗಳೆನ್ನುವರು. ಇವರ ಉಡುಗೆ-ತೊಡುಗೆಗಳು ವಿಶಿಷ್ಟವಾಗಿದ್ದು, ಇವರು ಶೃಂಗಾರ ಪ್ರಿಯರೂ, ಕಲಾ ಪ್ರಿಯರೂ ಹಾಗೂ ಆಭರಣ ಪ್ರಿಯರಾಗಿರುವರು. ಹೆಣ್ಣು ಮಕ್ಕಳು ಕಸೂತಿ ಇಲ್ಲದ ಉಡುಪನ್ನು ಧರಿಸುವುದೇ ಇಲ್ಲ ಎಂದರೆ ಅತಿಶಯೋಕ್ತಿಯಾಗಲಾರದು. ತಮ್ಮ ಉಡುಪನ್ನು ತಾವೇ ಕೈಯಾರೆ ತಯಾರಿಸಿಕೊಳ್ಳುವರು. ಅವುಗಳಿಗೆ ಕಲಾತ್ಮಕ ರಂಗು ರಂಗಿನ ದಾರಗಳಿಂದ ತುಂಡು ತುಂಡು ಬಟ್ಟೆಗಳನ್ನು ಹಚ್ಚಿ ಹೊಲೆದು, ಗಾಜು, ನಾಣ್ಯ, ಮಣಿ, ಟಿಕಳಿ, ಕವಡೆ, ಕಪ್ಪೆಚಿಪ್ಪು, ಗುಂಡಿಗಳನ್ನು ದಾರದಿಂದ ಬಂಧಿಸಿ, ಆಕರ್ಷಕ ಕಸೂತಿ ಹಾಕುತ್ತಾರೆ.

ಫೇಟಿಯಾ (ಲಂಗ), ಚಾಂಟಿಯಾ (ತಲೆ ಮೇಲಿನ ಬಟ್ಟೆ), ಕಾಂಚಳಿ (ಕುಪ್ಪಸ), ಕೋತಳಿ ಎನ್ನುವ ವಿವಿಧ ವಿನ್ಯಾಸದ ಮಹಿಳೆಯರ ಉಡುಪುಗಳನ್ನು ಸ್ವತಃ ತಾವೇ ತಯಾರಿಸುತ್ತಾರೆ.

---

೭೩. ಆಕರ : ಸಂಜೆವಾಣಿ, ಹುಬ್ಬಳ್ಳಿ ಆವೃತ್ತಿ : ೧೩-೦೫-೨೦೧೨

ಉಡುಪುಗಳಲ್ಲಿ ಪ್ರಮುಖವಾಗಿ ಕೆಂಪು ಬಣ್ಣದ ಬಟ್ಟೆಯನ್ನೇ ಬಳಸುವ ಇವರಿಗೆ ಕೆಂಪು ಶುಭ ಸೂಚಕವಾಗಿದ್ದು ಹಸಿರು, ಕಂದು ಬಣ್ಣದ ಬಟ್ಟೆಗಳನ್ನು ಸಹ ಬಳಸುತ್ತಾರೆ ಎಂದು ಕಂದ್ಲಿ ಗ್ರಾಮದ ಲಕ್ಷ್ಮೀಭಾಯಿ[೭೪] ಅವರು ಹೇಳುತ್ತಾರೆ. ದೇಹದ ಅಂಗಾಂಗಗಳಾದ ತಲೆ, ಕಿವಿ, ಮೂಗು, ಕೈಕಾಲುಗಳು, ಬೆರಳುಗಳನ್ನು ವಿಭಿನ್ನ ರೀತಿಯ ಆಕರ್ಷಕ ಆಭರಣಗಳಿಂದ ಅಲಂಕರಿಸಿಕೊಳ್ಳುತ್ತಾರೆ. ಒಟ್ಟಿನಲ್ಲಿ ಇವರ ಈ ಕಲಾಭಿರುಚಿಗೆ, ಸೌಂದರ್ಯ ಪ್ರಜ್ಞೆಗೆ ಪ್ರಕೃತಿಯೇ ಪ್ರೇರಣೆಯಾಗಿದೆ.

**ಹೆಣಿಕೆ :** ಹೆಣಿಕೆಯನ್ನು ಕೆಲವರು ಕಸೂತಿಯಲ್ಲೇ ಸೇರಿಸಿ ಬಿಡುತ್ತಾರೆ. ಆದರೆ ಕಸೂತಿ ಒಂದು ರೀತಿಯ ಹೆಣಿಕೆಯೇ ಆಗಿದ್ದರೂ ಹೆಣಿಕೆಯೇ ಕಸೂತಿಯಲ್ಲ. ಉಣ್ಣೆ, ನೂಲು, ಜರಿ, ಎಳೆ ಮೊದಲಾದವುಗಳಿಂದ ಮಾಡುವ ಕೆಲಸವನ್ನೂ ಹೆಣಿಕೆ ಎನ್ನಲಾಗುತ್ತದೆ. ಆದರೆ ಕಲಾತ್ಮಕವಾಗಿ ಕಡ್ಡಿಯಿಂದ ಹೆಣೆಯುವಿಕೆಯನ್ನು ಇಲ್ಲಿ ಹೇಳಲಾಗಿದೆ. ಕಸೂತಿ, ಹೆಣಿಕೆ, ಹೊಲಿಗೆ ಎಂಬ ಮೂರು ವಿಧಗಳಲ್ಲಿ ಹೆಣಿಕೆಯನ್ನು ಇಂಗ್ಲೀಷಿನಲ್ಲಿ ನಿಟ್ಟಿಂಗ್ (Knitting) ಎನ್ನಲಾಗುತ್ತದೆ. ಬಟ್ಟೆಯ ಮೇಲೆ ಹೆಣೆಯುವುದಕ್ಕೆ ಎಂಬ್ರಾಯಡೀ (Embroidey) ಎನ್ನಲಾಗುತ್ತದೆ. ಹೀಗಾಗಿ ಹೆಣಿಕೆ ಎನ್ನುವುದನ್ನು ಇಲ್ಲಿ ಕಡ್ಡಿಯಿಂದ ಹೆಣೆಯುವ ನಿಟ್ಟಿಂಗ್ ಎಂಬ ಅರ್ಥದಲ್ಲಿ ಬಳಸಲಾಗಿದೆ. ಈ ಹೆಣಿಕೆಯಲ್ಲಿ ಅಂಚಿನ ಹೆಣಿಕೆ, ಕಡ್ಡಿಯ ಹೆಣಿಕೆ, ಎಳಿಯ ಹೆಣಿಕೆ, ಸ್ಯಾಟಿನ್ ಹೆಣಿಕೆ, ನಕ್ಷತ್ರದ ಹೆಣಿಕೆ, ಉದ್ದ-ಗಿಡ್ಡ ಹೆಣಿಕೆ, ಬಾಣದ ತುದಿಯ ಹೆಣಿಕೆ, ಎಲೆಯ ಹೆಣಿಕೆ, ಗರಿ ಹೆಣಿಕೆ, ಸರಪಳಿ ಹೆಣಿಕೆ, ಜೋಡು ಸರಪಳಿ ಹೆಣಿಕೆ, ಅಂಕು-ಡೊಂಕಾದ ಸರಪಳಿ ಹೆಣಿಕೆ, ಮುರಿಗೆಯ ಸರಪಳಿ ಹೆಣಿಕೆ, ಗರಿಯ ಸರಪಳಿ ಹೆಣಿಕೆ, ಚೋಳಿನ ಕೊಂಡಿಯ ಹೆಣಿಕೆ, ಗಂಟಿನ ಹೆಣಿಕೆ, ಗುಂಡಿ ಮನೆಯ ಹೆಣಿಕೆ, ಮೆಂತೆದ ಹೆಣಿಕೆ, ಹೂವಿನ ಹೆಣಿಕೆ ಎಂಬುದಾಗಿ ೧೮ ರೀತಿಯಲ್ಲಿ ಶಾಂತಾದೇವಿ ಮಾಳವಾಡ ಅವರು ಗುರುತಿಸುತ್ತಾರೆ.[೭೫]

ಈ ಹೆಣಿಕೆ ಎನ್ನುವುದು ಒಂದು ಜನಪದ ಕಲೆಯಾಗಿದೆ. ಗ್ರಾಮೀಣ ಪ್ರದೇಶದಲ್ಲಿಯ ಜನರು ತಮಗೆ ಅವಶ್ಯಕವಾದ ವಸ್ತುಗಳನ್ನು ತಾವೇ ತಯಾರಿಸಿಕೊಳ್ಳುತ್ತಿದ್ದರು. ಅಂತಹ ಸಂದರ್ಭದಲ್ಲಿ ಹಗ್ಗ, ನೂಲು ಮೊದಲಾದವುಗಳಿಂದ ಹೆಣಿಕೆಯನ್ನೂ ಅವರು ಬಳಸುತ್ತಿದ್ದರು. ಆನಂತರದಲ್ಲಿ ನಗರ ಪ್ರದೇಶಗಳಲ್ಲಿ ನೈಲಾನ ಎಳೆಗಳಿಂದ ಹೆಣಿಕೆ ಸುರುವಾಯಿತು. ಅದು ನಿಟ್ಟಿಂಗ್ ಮಾದರಿಯದ್ದಾಗಿದೆ. ರೈತರು ಎತ್ತು, ಹಸು, ಎಮ್ಮೆ ಮೊದಲಾದ ಪ್ರಾಣಿಗಳಿಗೆ ಬಾಯಿಗೆ ಬಲೆಯನ್ನು ಹಾಕುತ್ತಾರೆ. ಯಾಕೆಂದರೆ ಹೊಲದಲ್ಲಿ ಕೆಲಸ ಮಾಡುವಾಗ ಅವು ಬೆಳೆಯನ್ನು

[೭೪] ವಕ್ತೃ : ಲಕ್ಷ್ಮೀಭಾಯಿ ಚವ್ಹಾಣ : ವಯಸ್ಸು-೪೬ : ಕಂದ್ಲಿ : ೨೮-೦೫-೨೦೧೩

೭೫. ಆಕರ : ಸೊಬಗಿನ ಮನೆ : ಮಾಳವಾಡ ಶಾಂತಾದೇವಿ : ಕನ್ನಡ ಸಾಹಿತ್ಯ ಸಂಘ, ಧಾರವಾಡ : ೧೯೬೧

ತಿನ್ನದಿರಲಿ ಎಂದು ; ಜೊತೆಗೆ ಅವುಗಳ ಮೈಗೆ ಔಷಧಿ ಹಚ್ಚಿದಾಗ ಅವು ತಮ್ಮ ಮೈಯನ್ನು ತಾವೇ ನೆಕ್ಕದಿರಲಿ ಎಂದು ಈ ಕುಕ್ಕೆಯನ್ನು ಅವುಗಳ ಬಾಯಿಗೆ ಬಿಗಿಯಲಾಗುತ್ತದೆ. ಅದರಲ್ಲಿ ಕುಕ್ಕೆ ಕೂಡ ಒಂದು. ಈ ಕುಕ್ಕೆಯನ್ನು ಹಳ್ಳ, ಕಾಡುಗಳಲ್ಲಿ ಸಿಗುವ ಕರಮಂಟನ ಬಳ್ಳಿಯಿಂದ ತಯಾರಿಸುತ್ತಾರೆ. ಬಳ್ಳಿಯಿಂದ ಕುಕ್ಕೆಯನ್ನು ಹೆಣೆಯುವಾಗ ಚೌಕ, ವೃತ್ತ, ನಕ್ಷತ್ರ ಮೊದಲಾದ ವಿನ್ಯಾಸಗಳನ್ನು ಅವರು ಬಳಸುತ್ತಾರೆ.

ಧಾರವಾಡ ಜಿಲ್ಲೆಯಲ್ಲಿ ಕೂಡ ಇದು ಈ ಹಿಂದೆ ಇದು ತುಂಬ ಪ್ರಚಲಿತವಾಗಿತ್ತು. ಆದರೆ ಮಾರುಕಟ್ಟೆಯಲ್ಲಿ ಈಗ ರೆಡಿಮೇಡ್ ಆಗಿ ಇವುಗಳು ಸಿಗುವುದರಿಂದ ಅವುಗಳನ್ನು ರೈತರು ಕೊಂಡುಕೊಳ್ಳುತ್ತಾರೆ. ಮೊದಲಾದರೆ ಅವುಗಳನ್ನು ತಾವೇ ತಯಾರಿಸುತ್ತಿದ್ದರು. ಕುಕ್ಕೆಯಂತೆಯೇ ಬಾಗಿಲು ಪರದೆ, ಹೂಕುಂಡ, ಕೈ ಚೀಲಗಳ ಹೆಣಿಕೆ ಕೂಡ ಕಂಡುಬರುತ್ತದೆ. ಅವುಗಳಲ್ಲಿಯೇ ಪ್ರಾಣಿ-ಪಕ್ಷಿ, ಹೂ-ಗಿಡ-ಬಳ್ಳಿಗಳನ್ನು ಚಿತ್ರಿಸಲಾಗುತ್ತದೆ. ರೊಟ್ಟಿಗವಾಡದ ಶ್ರೀಮತಿ ರೇಣುಕಾ ಬರದ್ವಾಡ ಅವರು ಬಾಗಿಲು ಪರದೆ, ಕೈ ಚೀಲಗಳಲ್ಲಿ ಹೆಣಿಕೆ ಕಾರ್ಯವನ್ನು ಮಾಡಿ ಅವುಗಳಲ್ಲಿ ಜನಪದ ಕಲೆಗಳನ್ನು ಅರಳಿಸುತ್ತಾರೆ.[೭೬] ಅದೇ ಊರಿನ ದ್ಯಾಮವ್ವ ಬರದ್ವಾಡ, ವಿಶಾಲಾಕ್ಷಿ ಹಿರೇಮಠ ಅವರೂ ಕೂಡ ನೆಲುವು, ಬಾಗಿಲು ಪರದೆ, ಕುಂಡಲ, ಟವೆಲ್, ಎಡೆವಸ್ತ್ರ, ಗೊಂಬೆ, ಬಾಸ್ಕೇಟ್ ಮೊದಲಾದವುಗಳನ್ನು ಹೆಣಿಕೆ ಮಾಡುತ್ತಾರೆ.[೭೭]

‘ಹೆಣಿಕೆಯಲ್ಲಿ ಅನೇಕ ರೀತಿಯ ಹೆಣಿಕೆಗಳನ್ನು ಕಲಿಯುವುದು ಮುಖ್ಯವಲ್ಲ. ಬಟ್ಟೆಗೆ ಒಪ್ಪುವಂತಹ ರೇಶಿಮೆಯ ದಾರವನ್ನು ಆಯ್ದುಕೊಳ್ಳುವುದು ಮಹತ್ವದ್ದಾಗಿದೆ. ಹೆಣಿಕೆಯನ್ನು ಪ್ರಾರಂಭಿಸುವ ಗೃಹಿಣಿ ವರ್ಣಸಮನ್ವಯವನ್ನು ಅಭ್ಯಾಸ ಮಾಡಿದರೆ, ಹೆಣಿಕೆಯ ಕಲೆಗೆ ಸಹಾಯಕವಾಗುತ್ತದೆ. ಕಲಾಶಾಲೆಗಳಲ್ಲಿ ಕ್ರಮಬದ್ಧವಾಗಿ ವರ್ಣಚಿತ್ರಗಳ, ವರ್ಣಸಮನ್ವಯಗಳ ಅಭ್ಯಾಸ ಮಾಡಿದರೆ ಹೆಣಿಕೆಯ ಕಲೆಗೆ ಅನುಕೂಲ. ಆ ರೀತಿ ಅಭ್ಯಾಸ ಮಾಡುವ ಅನುಕೂಲವಿಲ್ಲದ ಸೋದರಿಯರು ಸೃಷ್ಟಿದೇವಿಯ ಮೊರೆ ಹೋಗಬೇಕಾಗುವದು. ಸೃಷ್ಟಿದೇವಿಯ ಮಡಿಲಲ್ಲಿರುವ ಬಣ್ಣ ಬಣ್ಣದ ಹೂವುಗಳನ್ನು, ಎಲೆಗಳನ್ನು ಸೂಕ್ಷ್ಮವಾಗಿ ಅವಲೋಕಿಸಿ ಸರಿಯಾದ ಬಣ್ಣಗಳನ್ನು, ಸ್ವಾಭಾವಿಕವಾಗಿ ಕಾಣುವ ಬಣ್ಣಗಳನ್ನು ಹೂವು, ಎಲೆಗಳಿಗೆ ಆಯ್ದುಕೊಳ್ಳಬೇಕು. ಹೆಣಿಕೆಯನ್ನು ನೋಡಿದೊಡನೆ ಹೂವು, ಎಲೆ, ದೇಟುಗಳ ಬಣ್ಣ ಸ್ವಾಭಾವಿಕವಾಗಿ ಕಾಣಬೇಕು’[೭೮] ಎಂದು ಶಾಂತಾದೇವಿ ಮಾಳವಾಡ ಅವರು ಹೇಳುತ್ತಾರೆ. ಅವರ

---

೭೬. ಕ್ಷೇತ್ರಕಾರ್ಯ : ೨೦-೦೨-೨೦೧೧

೭೭. ಕ್ಷೇತ್ರಕಾರ್ಯ : ೨೦-೦೨-೨೦೧೧

೭೮. ಸೊಬಗಿನ ಮನೆ : ಮಾಳವಾಡ ಶಾಂತಾದೇವಿ : ಕನ್ನಡ ಸಾಹಿತ್ಯ ಸಂಘ, ಧಾರವಾಡ : ೧೯೬೧ : ಪು-೧೩೬

ವಿಚಾರದಲ್ಲಿ ಈ ಹೆಣಿಕೆಯ ಸೊಬಗು ಮೂಡಿಬರಬೇಕಾದರೆ ಕಲಿಕೆ ತುಂಬ ಮಹತ್ವ ಪಡೆದುಕೊಳ್ಳುತ್ತದೆ ಎಂಬ ಇಶಾರೆ ಇದೆ. ಜೊತೆಗೆ ಪ್ರಕೃತಿಯನ್ನು ನೋಡಿ ಕಲಿಯುವುದರಿಂದಲೂ ಈ ಪ್ರಯೋಗ ಯಶಸ್ವಿಯಾಗುತ್ತದೆ ಎಂಬ ಮಾತೂ ಇದೆ. ಆದರೆ ಕೆಲವರಿಗೆ ಜನ್ಮಜಾತವಾಗಿ ಇಂತಹ ಕಲೆ ಅಂಟಿಕೊಂಡು ಬಂದಿರುತ್ತದೆ.

ಹೆಣಿಕೆಯನ್ನು ಕೆಲವರು ನೋಡಿ ಕಲಿಯುತ್ತಾರೆ. ಕೆಲವರು ಕಲಿತುಕೊಂಡು ಹೆಣೆಯುತ್ತಾರೆ. ಇನ್ನೂ ಕೆಲವರು ಸಹಜವಾಗಿಯೇ ಈ ಹೆಣಿಕೆಯ ಕಲೆಯನ್ನು ಕರಗತ ಮಾಡಿಕೊಂಡಿರುತ್ತಾರೆ. ಆದರೆ ಸೂಕ್ತವಾದ ಬಟ್ಟೆ ಮತ್ತು ಬಣ್ಣಗಳ ಅರಿವು ಇರಬೇಕಾಗುತ್ತದೆ ಎಂಬ ಮಾತಂತೂ ಸತ್ಯ. ತಲೆದಿಂಬು, ಸೋಫಾ ದಿಂಬು, ಬಾಗಿಲು-ಕಿಟಕಿಗಳ ಪರದೆ, ಟೇಬಲ್‌ಕ್ಲಾಥ್, ನೈವೇದ್ಯ ಅರ್ಪಿಸುವ ತಟ್ಟೆಗೆ ಮುಚ್ಚುವ ಪರದೆ, ಶಾಲು, ಸ್ಕಾರ್ಪ್, ಕೈ ವಸ್ತ್ರ, ಕೈ ಚೀಲ, ಕುಪ್ಪಸ ಮೊದಲಾದವುಗಳನ್ನು ಈ ಹೆಣಿಕೆಯಿಂದ ಸಿಂಗರಿಸಬಹುದಾಗಿದೆ. ಈ ಹೆಣಿಕೆಯಿಂದ ಅವು ತುಂಬ ಸುಂದರವಾಗಿ ಕಾಣುತ್ತವೆ.

ಇಲ್ಲಿ ಜನಪದ ಚಿತ್ರಕಲೆಯೇ ಬಹುಮುಖ್ಯ ಪಾತ್ರವಹಿಸಿದರೂ ಆಧುನಿಕ ಪರಿಕರಗಳು ಬೇಕಾಗುತ್ತವೆ ಎಂಬುದನ್ನು ನಾವು ಲಕ್ಷ್ಯದಲ್ಲಿ ಇಡಬೇಕಾಗುತ್ತದೆ. 'ಹೆಣಿಕೆಯನ್ನು ಪ್ರಾರಂಭಿಸುವಾಗ ವಿವಿಧ ಕ್ಲಾರ್ಕ್ ಹಾಗೂ ಡಿ.ಎಂ.ಸಿ. ರೇಶಿಮೆಯ ಲಡಿಗಳನ್ನು ಸಂಗ್ರಹಿಸಬೇಕು. ಹೆಣಿಕೆಗೆ ೬-೮-೧೦ನೆಯ ನಂಬರಿನ ಸೂಜಿಗಳು ಉಪಯುಕ್ತವಾಗುತ್ತವೆ. ಹೆಣಿಕೆಗೆ ಉದ್ದವಾಗಿ ತುದಿ ಚೂಪಾಗಿರುವ, ಉದ್ದ ಹೆಜ್ಜದ ಸಣ್ಣ ಸೂಜಿಗಳೇ ಯೋಗ್ಯ. ಚೂಪಾದ ಮೊನೆಯ ಸಣ್ಣ ಕತ್ತರಿ ಇರಬೇಕು. ೪-೮-೧೨ ಇಂಚಿನ ಕಟ್ಟಿಗೆಯ ರಿಂಗುಗಳು ಬೇಕು. ಇನ್ನು ಬಟ್ಟೆಯ ಮೇಲೆ ಚಿತ್ರಗಳನ್ನು ಮೂಡಿಸಲು ಕಾರ್ಬನ್ ಪೇಪರ್, ಪೆನ್ಸಿಲ್‌ಗಳನ್ನು ತೆಗೆದುಕೊಳ್ಳಬೇಕು. ಯಾವ ಬಟ್ಟೆಯ ಮೇಲೆ ಚಿತ್ರವನ್ನು ಮೂಡಿಸುವುದಿರುತ್ತದೆಯೋ ಆ ಬಟ್ಟೆಯನ್ನು ಇಸ್ತ್ರಿ ಕಲ್ಲಿನಿಂದ ತಿಕ್ಕಿ, ಅದರ ಮೇಲೆ ಕಾರ್ಬನ್ ಪೇಪರ್ ಇಟ್ಟು, ಚಿತ್ರವಿರುವ ಕಾಗದವನ್ನಿಟ್ಟು, ನಾಲ್ಕೂ ಬದಿಗೆ ಡ್ರಾಯಿಂಗ್ ಪಿನ್ ಕೂಡ್ರಿಸಿ ಚಿತ್ರವನ್ನು ಪೆನಸಿಲಿನಿಂದ ತೀಡಬೇಕು. ಹೆಣಿಕೆಯನ್ನು ಪ್ರಾರಂಭಿಸುವಾಗ ಬಟ್ಟೆಯ ಆಯ್ಕೆಗೂ ಗಮನ ಕೊಡುವುದವಶ್ಯ. ಹೆಣಿಕೆಯ ಶ್ರಮದ ಸಾರ್ಥಕವಾಗಬೇಕಾದರೆ ಬಾಳಿಕೆ ಬರುವ ಬಟ್ಟೆಗಳನ್ನೇ ಆಯ್ದುಕೊಳ್ಳಬೇಕು'[೭೯] ಎಂಬ ಸಲಹೆಯನ್ನು ನೀಡಿದ್ದು, ಇದೊಂದು ರೀತಿಯಲ್ಲಿ ಮಾಡರ್ನ್ ಆರ್ಟ್ ಎಂಬಂತೆ ಗೋಚರವಾಗುತ್ತದೆ. ಇಷ್ಟೆಲ್ಲ ತಯಾರಿ ಮಾಡಿಕೊಳ್ಳುವಿಕೆ ಪರಿಪೂರ್ಣ ಕಲೆಗಾರಿಕೆ ಎನಿಸುತ್ತದೆ.

---

೭೯. ಸೊಬಗಿನ ಮನೆ : ಮಾಳವಾಡ ಶಾಂತಾದೇವಿ : ಕನ್ನಡ ಸಾಹಿತ್ಯ ಸಂಘ, ಧಾರವಾಡ : ೧೯೬೧ : ಪು-೧೩೬-೧೩೭

ಆದರೆ ಅದರಲ್ಲಿ ಮೂಡುವ ಚಿತ್ರಗಳು ಜನಪದ ಮೂಲದಿಂದ ಬಂದಿರುವಂಥವುಗಳೇ ಆಗಿರುತ್ತವೆ ಎಂಬುದನ್ನು ಮರೆಯುವಂತಿಲ್ಲ.

ಕೇವಲ ರೇಷ್ಮೆಯ ದಾರಗಳಿಂದ ಮಾತ್ರವಲ್ಲದೇ ಊಲನ್, ಉಣ್ಣೆ ಮೊದಲಾದವುಗಳಿಂದ ಕೂಡ ಹೆಣಿಕೆಯನ್ನು ಮಾಡಲಾಗುತ್ತದೆ. ಇವುಗಳಲ್ಲಿ ಚಿತ್ರಕಲೆ ಹೆಚ್ಚಾಗಿ ಕಂಡುಬರದಿದ್ದರೂ ಅವು ಚಳಿಗಾಲದಲ್ಲಿ ಮೈಯನ್ನು ಬೆಚ್ಚಗೆ ಇಡುತ್ತವೆ ಎಂಬ ಕಾರಣದಿಂದ ಧರಿಸುವ ಬಟ್ಟೆಗಳನ್ನಾಗಿ ಹೆಣಿಕೆ ಮಾಡಲಾಗುತ್ತದೆ. ಸ್ವೆಟರ್, ಕಾಲುಚೀಲ, ಸ್ಕಾರ್ಫ್ ಮೊದಲಾದವುಗಳನ್ನು ಈ ಹೆಣಿಕೆಯಿಂದ ಮಾಡಲಾಗುತ್ತದೆ.

ಧಾರವಾಡ ಜಿಲ್ಲೆಯಲ್ಲಿಯೂ ಕೂಡ ಈ ಹೆಣಿಕೆ ಒಂದಾನೊಂದು ಕಾಲದಲ್ಲಿ ಬಹು ಪ್ರಸಿದ್ಧಿಯನ್ನು ಪಡೆದುಕೊಂಡಿತ್ತು. ಅವುಗಳನ್ನು ಧರಿಸುವುದು ಪ್ರತಿಷ್ಠೆಯ ಸಂಕೇತವಾಗಿತ್ತು. ಆದರೆ ಕಾಲ ಉರುಳಿದಂತೆ ರೆಡಿಮೇಡ್ ಹೆಣಿಕೆಯ ಬಟ್ಟೆಗಳು ಬಂದು ಈ ಮೂಲ ಹೆಣಿಕೆಯ ವಸ್ತುಗಳ ಸ್ಥಳವನ್ನು ಆಕ್ರಮಿಸಿಕೊಂಡಿವೆ. ಶ್ರೀಮತಿ ಶಾಂತಾದೇವಿ ಮಾಳವಾಡ ಅವರಲ್ಲದೇ ಅವರ ಬಳಗದ ಬಹಳಷ್ಟು ಹೆಂಗಳೆಯರು ಧಾರವಾಡದಲ್ಲಿ ಇಂತಹ ಕಾರ್ಯಗಳನ್ನು ಮಾಡುತ್ತಿದ್ದರು. ಪರಿಚಯದ ಹೆಣ್ಣುಮಕ್ಕಳಿಗೆ ಅವುಗಳ ಬಗ್ಗೆ ತಿಳಿಸಿ ಹೇಳಿ, ಆ ವಸ್ತುಗಳನ್ನು ತಯಾರು ಮಾಡುವಲ್ಲಿ ಪ್ರಯತ್ನಶೀಲರಾಗಿರುತ್ತಿದ್ದರು.

**ಕೌದಿ :** ಗ್ರಾಮೀಣರಲ್ಲಿ ಅದರಲ್ಲೂ ಉತ್ತರ ಕರ್ನಾಟಕದಲ್ಲಿ ಹಾಸಿಗೆ-ಹೊದಿಕೆಗಳಲ್ಲಿ ಕೌದಿ ಅತ್ಯಂತ ಪ್ರಮುಖ ಪಾತ್ರ ವಹಿಸಿದೆ. ವಿಧ ವಿಧವಾದ ನಮೂನೆಯ ಕೌದಿಗಳನ್ನು ಹಿಂದಿನ ಕಾಲದಲ್ಲಿ ಬಳಸಲಾಗುತ್ತಿತ್ತು. ಇದನ್ನೇ ವೃತ್ತಿಯನ್ನಾಗಿ ಮಾಡಿಕೊಂಡವರೂ ಇದ್ದಾರೆ. ಆದರೆ ಕಾಲಘಟ್ಟಕ್ಕೆ ಅನುಗುಣವಾಗಿ ಇಂದು ಕೌದಿ ತನ್ನ ಮಹತ್ವವನ್ನು ಕಳೆದುಕೊಂಡಿದೆ. ಹಾಸಿಗೆ-ಹೊದಿಕೆಗಳಲ್ಲಿ ವಿಧವಿಧವಾದ ನಮೂನೆಗಳು ಇಂದು ಮಾರುಕಟ್ಟೆಯಲ್ಲಿ ಲಭ್ಯವಾಗುತ್ತವೆ. ಗ್ರಾಮೀಣ ಪ್ರದೇಶದಲ್ಲಿ ಇಂದಿಗೂ ಕೆಲವು ಕಡೆ ಈ ಕೌದಿಯನ್ನು ಬಳಸಲಾಗುತ್ತಿದ್ದರೂ ಕೂಡ ಅವು ತುಂಬ ವಿರಳ. ಧಾರವಾಡ ಜಿಲ್ಲೆಯಲ್ಲಿಯೂ ಪರಿಸ್ಥಿತಿ ಇದಕ್ಕಿಂತ ಭಿನ್ನವಾಗಿಯೇನೂ ಇಲ್ಲ. ಧಾರವಾಡದ ಚೆನ್ನದಾಸರು ಮಾಡುತ್ತಿದ್ದ ಕೌದಿಗಳು ಇಂದು ಕಣ್ಮರೆಯಾಗಿವೆ. ಅವುಗಳ ಬದಲಿಗೆ ಹೊಸ ವಿನ್ಯಾಸದ ಕಾರ್ಖಾನೆಯಲ್ಲಿ ತಯಾರಾಗುವ ರಜಾಯಿ, ಚಾದರ ಮೊದಲಾದವುಗಳು ಬಂದು ಸೇರಿಕೊಂಡಿವೆ. ಗ್ರಾಮೀಣ ಸೊಗಡಿನ ಕೌದಿಗಳು ಇಂದು ಹೊಸ ಶೈಲಿಯಲ್ಲಿ ಮತ್ತೇ 'ರಜಾಯಿ' ಎಂಬ ಹೆಸರು ಧರಿಸಿ ನಮ್ಮ ಮುಂದೆ ಬಂದಿವೆ.

ಕೌದಿಯ ಮೂಲವನ್ನು ಕೆದಕುತ್ತ ಹೋದಂತೆ ಅದು ಅತ್ಯಂತ ಪ್ರಾಚೀನವಾದ ಕಾಲದಲ್ಲಿ ಬಳಕೆಯಾಗುತ್ತಿದ್ದ ಹಾಸಿಗೆ, ಹೊದಿಕೆಯಾಗಿರುವುದು ಕಂಡುಬರುತ್ತದೆ. 'ಕೌದಿಗೆ ತುಂಬ ಪ್ರಾಚೀನವಾದ ಇತಿಹಾಸವಿದೆ ಕನ್ನಡದ ಕವುಂದಿ > ಕವದಿ > ಕವುದಿ > ಕೌಂದಿ ರೂಪಾಂತರದೊಂದಿಗೆ ಈಗ ಆಡುಭಾಷೆಯಲ್ಲಿ ಕೌದಿ ಎಂದೇ ಹೆಸರಾಗಿದೆ. ಈ ಕೌದಿಯ ಪ್ರಸ್ತಾಪ ಪ್ರಾಚೀನ ಕನ್ನಡ ಸಾಹಿತ್ಯದ ೧೧೪೫ ರ II ನೇ ನಾಗವರ್ಮ, ೧೩೯೮ ರ ಅಭಿನವ ಮಂಗರಾಜ, ೧೫೫೭ ರತ್ನಾಕರವರ್ಣಿಯವರ ಕಾವ್ಯಗಳಲ್ಲಿ ಪ್ರಸ್ತಾಪಿಸಲ್ಪಟ್ಟಿದೆ.'[೮೦] ಅಂದರೆ ಹನ್ನೆರಡನೇ ಶತಮಾನದಲ್ಲಿಯೇ ಕೌದಿ ಎಲ್ಲರ ಮನೆಯಲ್ಲಿ ಇರುತ್ತಿತ್ತು. ಶಾಸನೋಕ್ತ ಈ ವಿಚಾರದಿಂದ ಈ ವಿಷಯ ತಿಳಿದುಬರುವುದರಿಂದ ಅದಕ್ಕಿಂತಲೂ ಮುಂಚೆಯೇ ಕೌದಿ ಪ್ರಚಲಿತದಲ್ಲಿ ಇತ್ತು ಎಂಬುದನ್ನು ನಾವು ಒಪ್ಪಿಕೊಳ್ಳಲೇಬೇಕಾಗುತ್ತದೆ.

'ಶಬ್ದಕೋಶಗಳಲ್ಲಿ ಕೌದಿ ಪದಕ್ಕೆ ಕಂತೆ, ಹಳೆಯ ಅರಿವೆಯ ಹೊಸ ಹೊದಿಕೆ, ತುಂಡುಬಟ್ಟೆಗಳನ್ನು ಕೂಡಿಸಿ ಹೊಲಿದ ಹಚ್ಚಡವೆಂದು ಅರ್ಥಗಳಿವೆ. ಕರ್ನಾಟಕದಲ್ಲಿ ಕೌದಿಯನ್ನು ಕವುಂದಿ, ಕವುದಿ, ಕೌಂದಿ, ಕಂತೆ ಎಂದು ಕರೆಯುತ್ತಾರೆ. ಕೌದಿ ತಮಿಳಿನಲ್ಲಿ ಕವನ್ದಿ, ಕವನ್ದಿಗೆ ; ಮಲೆಯಾಳಿದಲ್ಲಿ ಕವಿಯನ್, ಮರಾಠಿಯಲ್ಲಿ ಕಂಥಾ ಎಂಬ ಹೆಸರಿನಿಂದ ಪ್ರಸಿದ್ಧಿ ಪಡೆದಿದೆ'[೮೧] ಹೀಗೆ ವಿವಿಧ ಭಾಷೆಗಳಲ್ಲಿ ಬೇರೆ ಬೇರೆ ಹೆಸರುಗಳಿಂದ ಕರೆಯಿಸಿಕೊಳ್ಳುವ ಕೌದಿ ಕನ್ನಡದಲ್ಲಿ ಮಾತ್ರ ಹೆಚ್ಚಾಗಿ ಕೌದಿ ಎಂದೇ ಬಳಕೆಯಾಗಿರುವುದು ಕಂಡುಬರುತ್ತದೆ. ಕೆಲವು ಜನಪದ ಹಾಡುಗಳಲ್ಲಿ ಕೌದಿಯ ಜೊತೆಗೆ ಹಚ್ಚಡ ಎಂಬ ಪದವೂ ಬಳಕೆಯಾಗಿರುವುದು ಕಂಡುಬರುತ್ತದೆ.

'ಒಂದು ಸಣ್ಣ ಕೌದಿ ತಯಾರಿಸಲು ಸುಮಾರು ೪ ಹರಿದ ಸೀರೆಗಳು ಬೇಕು. ಅವುಗಳು ಹೊಲಸಾಗಿದ್ದರೆ ತೊಳೆದು ಸ್ವಚ್ಛಗೊಳಿಸುತ್ತಾರೆ. ಹಿಂದಿನ ರಾತ್ರಿ ನೀರಿನಲ್ಲಿ ನೆನೆಯಲು ಇಟ್ಟು, ತಮ್ಮದೇ ಆದ ದಾರದಿಂದ ಮೊದಲು ಮನೆಯ ಒಳಗೆ ಈ ಹರಿದ ಸೀರೆ ಇತ್ಯಾದಿ ಬಟ್ಟೆಗಳ ತುಂಡುಗಳನ್ನು ಜೋಡಿಸಿ ಹೊಲಿದುಕೊಂಡು ಹೊರಗೆ ತಂದು ಅಂಗಳದಲ್ಲಿ ಹಾಕಿ ೪ ರಿಂದ ೫ ಪದರಗಳುಳ್ಳ ಕೌದಿಯನ್ನು ಸೂಜಿ ಹಿಡಿದು ದೃಷ್ಟಿ ಕದಲಿದೇ ಹೊಲಿಯುತ್ತಾರೆ... ... ಅದರೊಂದಿಗೆ ಅನೇಕ ತುಂಡುಗಳುಳ್ಳ ಕಲಾತ್ಮಕತೆಯಿಂದ ಕೂಡಿದ ಕೆಲವು ವಿಶೇಷ ಪ್ರಾವೀಣ್ಯತೆಯನ್ನು ಕೌದಿಯ ಮಧ್ಯದಲ್ಲಿ ಹೊಂಡ, ಪಗಡಿ, ತೇರು, ಬಾಸಿಂಗ ಇತ್ಯಾದಿಗಳನ್ನು ಕೂಡಿಸಿ ಹೊಲಿಯುವುದರ ಮೂಲಕ ಇಲ್ಲಿ ತೋರಿಸುತ್ತಾರೆ. ಆಗ ಕೌದಿ ಸಿದ್ಧ'[೮೨] ಅಂದರೆ

---

೮೦. ಜಾನಪದ ಲೇಖನಗಳು :ಸಂ–ಕುಂಬಾರ ಮಲ್ಲಿಕಾರ್ಜುನ :ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು : ೨೦೧೦ : ಪು–೭

೮೧. ಕರ್ನಾಟಕದ ಜನಪದ ಚಿತ್ರಕಲೆ : ಪಾಟೀಲ ಎಸ್.ಸಿ : ವೀರಶೈವ ಅಧ್ಯಯನ ಸಂಸ್ಥೆ, ಗದಗ : ೧೯೯೩ : ಪು–೧೨೯

೮೨. ಜಾನಪದ ಲೇಖನಗಳು : ಸಂ–ಕುಂಬಾರ ಮಲ್ಲಿಕಾರ್ಜುನ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು : ೨೦೧೦ : ಪು–೭

ಒಂದು ಕೌದಿ ತಯಾರಾಗಲು ಸುಮಾರು ನಾಲ್ಕು ಹಳೆಯ ಸೀರೆಗಳು ಬೇಕಾಗುತ್ತವೆ. ಇದು ಅಚ್ಚುಕಟ್ಟಿನ ಕೌದಿ ತಯಾರಿಕೆಯ ಪ್ರಮಾಣ. ಆದರೆ ಕೆಲವು ಕಡೆ ಸೀರೆಯ ಜೊತೆ ಗಂಡುಮಕ್ಕಳು ತೊಡುವ ಧೋತಿಗಳೂ ಟವೆಲ್ಲುಗಳೂ, ಇನ್ನಿತರ ಹಳೆಯ ಬಟ್ಟೆಬರೆಗಳು ಕೌದಿ ತಯಾರಿಕೆಯಲ್ಲಿ ಬಳಕೆಯಾಗುತ್ತವೆ.

ಕೌದಿಯನ್ನು ಹಾಸಲೂ ಹೊದೆಯಲೂ ಬಳಸುತ್ತಾರೆ. ಹೊದ್ದುಕೊಂಡಾಗ ಮೇಲೆ ಕಾಣಿಸುವಂತೆ ವಿವಿಧ ನಮೂನೆಯ ಚಿತ್ರಗಳನ್ನು ಬಿಡಿಸಲಾಗುತ್ತದೆ. ರಾಮಾಯಣ, ಮಹಾಭಾರತ, ಐತಿಹಾಸಿಕ ವ್ಯಕ್ತಿ ಅಥವಾ ಪ್ರಸಂಗ, ದೇವಾನುದೇವತೆಗಳು, ಸಾಮಾಜಿಕ ಬದುಕಿನ ಚಿತ್ರಣ, ನಿಸರ್ಗರಮ್ಯ ಚಿತ್ರಗಳು ಮತ್ತು ಅಲಂಕಾರಿಕ ಚಿತ್ರಗಳನ್ನು ದಾರದಿಂದ ಬಿಡಿಸಲಾಗಿರುತ್ತದೆ. ಇದೊಂದು ರೀತಿಯಲ್ಲಿ ಕಸೂತಿ ಕಲೆಯೇ ಇದ್ದಂತೆ. ಇಂದಿಗೂ ಹುಬ್ಬಳ್ಳಿಯ ಸಿದ್ಧಾರೂಢರ ಮಠದಲ್ಲಿ ಕೌದಿ ಹರಕೆ ಮತ್ತು ಕೌದಿ ಪೂಜೆ ಇಂದಿಗೂ ನಡೆಯುತ್ತದೆ.

'ಗೊಂದಲಿಗರ ಮಹಿಳೆಯರು ವರ್ಷವಿಡೀ ಹಳೆಯ ಸೀರೆ, ಬಟ್ಟೆಗಳನ್ನು ಸಂಗ್ರಹಿಸಿ ಆಕರ್ಷಕವಾದ ಕೌದಿಗಳನ್ನು ಹೊಲಿದು ಮಾರುತ್ತಾರೆ. ಕೌದಿ ಹೊಲಿಯುವುದು ಒಂದು ಕಲೆ. ಇದು ಎಲ್ಲ ಋತುಮಾನಗಳಲ್ಲಿ ಹಾಸಲು-ಹೊದೆಯಲು ಉಪಯುಕ್ತವಾಗಿರುತ್ತದೆ. ದೊಡ್ಡವರು ಹೊದಿಯುವ ಕೌದಿ ನೂರು-ನೂರಾ ಐವತ್ತು ರೂಪಾಯಿಗೆ ಸಿಗುತ್ತದೆ. ಮಕ್ಕಳ ಕೌದಿಗೆ ಮೂವತ್ತು ರೂಪಾಯಿ ಬೀಳುತ್ತದೆ. ಮಕ್ಕಳ ಕೌದಿಗೆ ಒಪ್ಪಟಿ ಎನ್ನುವರು.'[೮೩] ಇದು ಸುಮಾರು ಹಿಂದಿನ ಮಾತಾಯಿತು. ಈಗ ಕೌದಿಯ ಬದಲಿಗೆ ಹೊಸ ಪರಿಕರಗಳು ಬಂದಿವೆ. ಮಕ್ಕಳ ಕೌದಿಗೆ ಮೊದಲು ದುಪ್ಪಟಿ, ದುಪಟಿ ಎನ್ನುತ್ತಿದ್ದರು. ಇಂದು ಅದೂ ಕಾಣಸಿಗುತ್ತಿಲ್ಲ. ಸಿದ್ಧಗೊಂಡ ಹಾಸಿಗೆಗಳು ನಾನಾ ನಮೂನೆಯ ಮಕ್ಕಳ ಹಾಸಿಗೆಗಳು ಇಂದು ಮಾರುಕಟ್ಟೆಯಲ್ಲಿ ಕಂಡುಬರುತ್ತವೆ.

'ಧಾರವಾಡ ಜಿಲ್ಲೆಯ ಗಜೇಂದ್ರಗಡದಲ್ಲಿ ಸುಮಾರು ೪೦-೫೦ ಮನೆತನಗಳ ೧೦೦-೧೫೦ ಜನರು ಈ ಉದ್ಯೋಗ ಮಾಡುತ್ತಿದ್ದಾರೆ.'[೮೪] ಎಂಬುದನ್ನು ಕಂಡಾಗ ಗಜೇಂದ್ರಗಡ ಕೌದಿ ತಯಾರಿಕೆಯಲ್ಲಿ ನಿಪುಣತೆಯನ್ನು ಹೊಂದಿತ್ತು ಎಂಬುದು ತಿಳಿದು ಬರುತ್ತದೆ. ಆದರೆ ಜಿಲ್ಲೆಯನ್ನು ವಿಭಾಗಿಸಿದ ನಂತರದಲ್ಲಿ ಗಜೇಂದ್ರ ಗಡ ಇಂದು ಗದಗ ಜಿಲ್ಲೆಯಲ್ಲಿ ಸೇರಿಕೊಂಡಿದೆ.

---

೮೩. ಗ್ರಾಮೀಣ ಉಡುಗೆ ತೊಡಗೆಗಳು : ಸಂ-ಹಕಾರಿ ದೇವೇಂದ್ರಕುಮಾರ - ಸಂಧ್ಯಾರೆಡ್ಡಿ ಕೆ.ಆರ್ : ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು : ೨೦೦೦ : ಪು-೪೩

೮೪. ಜಾನಪದ ಲೇಖನಗಳು : ಸಂ-ಕುಂಬಾರ ಮಲ್ಲಿಕಾರ್ಜುನ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು : ೨೦೧೦ : ಪು-೮

‘ನೂಲಿನ ಸೀರೆಗಳನ್ನು ಕೌದಿ ಹೊಲಿಯಲು ಬಳಸುವರು. ಕೌದಿ ಹೊಲಿಯಲು ಬುಧವಾರ ಇಲ್ಲವೆ ಶನಿವಾರ ಒಳ್ಳೆಯ ದಿನವೆಂದು ಇವರು ಭಾವಿಸುವರು. ಅಂಬಾದೇವಿಯನ್ನು ಸ್ಮರಿಸಿ ಕೌದಿ ಹೊಲಿಯಲು ಪ್ರಾರಂಭಿಸುವರು. ಮೊದಲು ಸೀರೆಗಳನ್ನು, ಆರೇಳು ಪದರ ಮಡಿಸಿಕೊಳ್ಳುವರು. ಕೌದಿ ಸಾಮಾನ್ಯವಾಗಿ ಐದು ಆರು ಮೊಳ ಉದ್ದವಾಗಿರುತ್ತದೆ. ಇದಕ್ಕೆ ‘ತಳಾಸಿಗೆ ಎನ್ನುವರು. ನಂತರ ಸುತ್ತಲೂ ಸೀರೆಯ ದಡಿ ಕಟ್ಟುವರು. ನಂತರ ಬಣ್ಣ ಬಣ್ಣದ ಚೌಕ ಅರಿವೆ ತುಂಡುಗಳನ್ನು ಜೋಡಿಸಿ ಹೊಲಿಯುತ್ತ ಹೋಗುವರು. ಇದಕ್ಕೆ ಲ್ಯಾವಿ ಹಚ್ಚುವುದು ಎನ್ನುತ್ತಾರೆ. ಇದನ್ನು ಮುಗಿಸುವಾಗ ಇದರ ಹೊಟ್ಟೆಯಲ್ಲಿ ಜೋಳದ ಕಾಳು ಇಲ್ಲವೆ ರೊಟ್ಟಿ ತುಂಡುಗಳನ್ನು ಇಟ್ಟು ಅರಿಷಿನ ಕುಂಕುಮ ಹಾಕಿ ಪೂಜೆ ಮಾಡಿ ಮುಗಿಸುವರು. ಮಳೆಗಾಲ–ಚಳಿಗಾಲದಲ್ಲಿ ಇದು ಬೆಚ್ಚಗಾಗುತ್ತದೆ. ಬೇಸಿಗೆಯಲ್ಲಿ ದೇಹದ ಉಷ್ಣವನ್ನು ಹೀರಿಕೊಳ್ಳುತ್ತದೆ. ಶ್ರೀ ಸಿದ್ಧಾರೂಢ ಮಠದಲ್ಲಿ ಸಿದ್ಧಾರೂಢರಿಗೆ ಬಡ ಭಕ್ತರು ಕೌದಿಗಳನ್ನು ಅರ್ಪಿಸಿದ್ದಾರೆ. ಅನೇಕ ಮನೆತನಗಳಲ್ಲಿ ಇಂದಿಗೂ ವರ್ಷಕ್ಕೊಮ್ಮೆ ಕೌದಿ ಪೂಜೆ ನಡೆಯುತ್ತದೆ.’[೮೫] ಎಂದು ಡಾ. ಮಂದಾಕಿನಿ ಪುರೋಹಿತ ಹೇಳುತ್ತಾರೆ. ಸಾಂಪ್ರದಾಯಿಕವಾಗಿ ತಯಾರಿಸುವ ಕೌದಿಗೆ ಇಥ ಸಮ್ಮಾನಗಳು ಮೊದಲು ಇರುವುದು ಕಂಡುಬರುತ್ತದೆ. ಹಳ್ಳಿಗಳಲ್ಲಿ ಇಂತಹ ಪ್ರಥಾಗಳಿಗೆ ಹೆಚ್ಚಿನ ಮಹತ್ವ ಉಂಟು. ಕೆಲವು ಸಲ ಮನೆಯವರೇ ಕೌದಿಗಳನ್ನು ತಯಾರಿಸಿದರೂ ಲ್ಯಾವಿ ಹಚ್ಚಲು ಮಾತ್ರ ನುರಿತವರೇ ಬೇಕಾಗುತ್ತದೆ ಎಂಬುದನ್ನು ಈ ಸಂದರ್ಭದಲ್ಲಿ ಮರೆಯುವಂತಿಲ್ಲ. ಯಾಕೆಂದರೆ ಲ್ಯಾವಿಯೇ ಕೌದಿಯ ಮೂಲ ಆಧಾರಸ್ತಂಭವಾಗಿದೆ. ಅದು ಹೆಚ್ಚು ಕಡಿಮೆಯಾದರೆ ಇಡೀ ಕೌದಿಯ ಆಕಾರ ಕೆಟ್ಟು ಹೋಗುತ್ತದೆ.

‘ಕೌದಿಯಲ್ಲಿ ರಾಮಾಯಣ, ಮಹಾಭಾರತ, ಐತಿಹಾಸಿಕ, ಧಾರ್ಮಿಕ, ಸಾಮಾಜಿಕ, ನೈಸರ್ಗಿಕ, ಅಲಂಕಾರಿಕ ಮುಂತಾದ ರೀತಿಯ ಚಿತ್ರಗಳನ್ನು ಕಾಣಬಹುದು. ಕೌದಿಯ ಚಿತ್ರಗಳು ಆಕಾರ ಪಡೆಯುವುದು ಎರಡು ರೀತಿಯಿಂದ. ಒಂದು ದಾರದ ರೇಖಾ ವಿನ್ಯಾಸಗಳಿಂದಾದ ಚಿತ್ರಗಳು, ಇನ್ನೊಂದು ವಿವಿಧ ಆಕಾರದ ಬಣ್ಣದ ಅರಿವೆಯ ತುಕಡಿಗಳ ಸಂಯೋಜನಾ ಚಿತ್ರಗಳು. ಸುಳುಹು, ಪಶು, ಪಕ್ಷಿ, ಹೂ, ಎಲೆ, ಸೂರ್ಯ, ಚಂದ್ರ, ನಕ್ಷತ್ರದಂತಹ ಹಲವಾರು ವಿನ್ಯಾಸಗಳು ದಾರದಿಂದ ರೇಖೆಯ ರೂಪ ಪಡೆದರೆ. ಕೌದಿಯ ಸರ್ವ ಸಮಗ್ರ ಸೌಂದರ್ಯವಿರುವುದು ಬಣ್ಣದ ವಿನ್ಯಾಸದ ಚಿತ್ರಗಳಲ್ಲಿ. ಬಣ್ಣದ ಅರಿವೆಯ ತುಕಡಿಗಳ ಚೌಕಾಕೃತಿ, ತ್ರಿಕೋನಾಕೃತಿ, ಆಯತಾಕೃತಿ, ಜಾಮಿತ್ರೀಯ ಆಕೃತಿಗಳು ಇಲ್ಲಿ ಹೆಚ್ಚಾಗಿ ಕಾಣಿಸುತ್ತವೆ. ಹೊಲಿಗೆ

---

೮೫. ಗ್ರಾಮೀಣ ಉಡುಗೆ ತೊಡಗೆಗಳು : ಸಂ–ಹಕಾರಿ ದೇವೇಂದ್ರಕುಮಾರ – ಸಂಧ್ಯಾರೆಡ್ಡಿ ಕೆ.ಆರ್ : ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು : ೨೦೦೦ : ಪು–೪೩

ಮುಗಿದ ಮೇಲೆ ಈ ಬಣ್ಣದ ಪಟ್ಟಿಗಳು ಕೌದಿಯ ಮೇಲೆ ಬಣ್ಣ ಮೂಡಿದಂತೆ ಕಾಣಿಸುತ್ತವೆ. ಇಲ್ಲಿ ಜನಪದ ಕಲಾವಿದರ ಸೌಂದರ್ಯಪ್ರಜ್ಞೆಯನ್ನು ವಿಶೇಷವಾಗಿ ಕಾಣಬಹುದು. ಕೌದಿಯ ಚಿತ್ರ ನಿರ್ಮಾಣಕಾರರು ಹೆಚ್ಚಾಗಿ ಸ್ತ್ರೀಯರೇ ಇರುವುದು ವೈಶಿಷ್ಟ್ಯ. ಮುಸ್ಲಿಂ ಜನಾಂಗದವರ ಕೌದಿಗಳಲ್ಲಿ ಅರ್ಧ ಚಂದ್ರಾಕೃತಿ, ನಕ್ಷತ್ರಗಳಿದ್ದರೆ ಹಿಂದೂಗಳ ಕೌದಿಗಳಲ್ಲಿ ಪಾಂಡವರ ಪಗಡೆಯಾಟ, ಕೊಳಬಾಯಿ, ಸೀತೆಯ ಸೆರಗು, ಈಶ್ವರ, ಹನುಮಂತ ಮುಂತಾದ ದೇವರ ಚಿತ್ರಗಳು ಇದ್ದು, ಕ್ರೈಸ್ತರ ಮನೆಯ ಕೌದಿಗಳಲ್ಲಿ ಶಿಲುಬೆಯಾಕೃತಿಗಳು. ಹೀಗೆ ವಿವಿಧ ಧರ್ಮದ ಜನರ ಧಾರ್ಮಿಕ ಹಿನ್ನೆಲೆಯ ಚಿತ್ರಗಳು ವಿಶೇಷವಾಗಿ ಕಂಡುಬರುತ್ತವೆ'[೮೬] ಹೀಗೆ ವಿಭಿನ್ನ ಜಾತಿ–ಜನಾಂಗದವರ ನಂಬಿಕೆ, ಇಚ್ಛೆಗೆ ಅನುಗುಣವಾಗಿ ಕೌದಿಗಳಲ್ಲಿ ಚಿತ್ರಗಳನ್ನು ಅರಳಿಸಲಾಗುತ್ತಿತ್ತು. ಬೇಕಾದ ವಿನ್ಯಾಸಗಳಲ್ಲಿ ಕೂಡ ಕೌದಿಯ ತಯಾರಿಕೆ ನಡೆಯುತ್ತಿತ್ತು. ಒಂದು ರೀತಿಯಲ್ಲಿ ಹೊಸ ಕೌದಿ ಹೊಲಿಸಿದರೆ ಹಬ್ಬದಲ್ಲಿ ಹೊಸ ಬಟ್ಟೆ ಕೊಂಡಷ್ಟೇ ಖುಷಿಯಾದ ಕ್ಷಣಗಳನ್ನು ಇಂದಿಗೂ ಹಳೆಯ ತಲೆಮಾರಿನ ಜನರು ನೆನಪಿಸಿಕೊಳ್ಳುತ್ತಾರೆ. ಬೇಸಿಗೆಯಲ್ಲಿ ತಂಪಾಗಿಯೂ ಚಳಿಯಲ್ಲಿ ಬಿಸಿಯಾಗಿಯೂ ನಮ್ಮ ದೇಹವನ್ನು ರಕ್ಷಿಸುವ ಕಾರ್ಯವನ್ನು ಈ ಕೌದಿ ಮಾಡುತ್ತದೆ.

ಕೌದಿ ತಯಾರಿಕೆ ಹವ್ಯಾಸಿ ಕಾರ್ಯವಾಗಿದ್ದರೂ ಮೊದ ಮೊದಲು ಅದೊಂದು ವೃತ್ತಿಯೇ ಆಗಿತ್ತು ಎಂಬುದನ್ನು ಮೊದಲೇ ಹೇಳಲಾಗಿದೆ. ಹುಬ್ಬಳ್ಳಿಯಲ್ಲಿ ಇರುವ ಸುಗತೆ, ವಾಗ್ಮೋಡೆ, ಶಿಂಧೆ, ಪಾರಗಿ ಮೊದಲಾದ ಕುಟುಂಬಗಳು ಈ ವೃತ್ತಿಯಲ್ಲಿ ತೊಡಗಿಕೊಂಡಿದ್ದವು. ಅನೇಕ ಗ್ರಾಮಗಳಿಗೆ ತೆರಳಿ ಮೊದಲು ಹಳೆಯ ಬಟ್ಟೆಗಳನ್ನು ಸಂಗ್ರಹಿಸಲಾಗುತ್ತಿತ್ತು. ಅನಂತರ ಆ ಬಟ್ಟೆಗಳನ್ನು ಸ್ವಚ್ಛವಾಗಿ ತೊಳೆದು, ಒಣಗಿಸಲಾಗುತ್ತಿತ್ತು. ನಂತರ ಆಕಾರಕ್ಕೆ ತಕ್ಕಂತೆ ಅವುಗಳನ್ನು ಕತ್ತರಿಸಿ ಲ್ಯಾವಿ ಹಚ್ಚಲಾಗುತ್ತಿತ್ತು. ಅಂದರೆ ಮೂಲ ಆಧಾರವನ್ನು (ಬೇಸ್) ಸಿದ್ಧಪಡಿಸಿಕೊಂಡ ನಾಲ್ಕಾರು ದಿನಗಳಲ್ಲಿ ಸೂಜಿಯ ಮೂಲಕ ಕೌದಿಯನ್ನು ಸಿದ್ಧಪಡಿಸುವ ಕೆಲಸವನ್ನು ಮಾಡಲಾಗುತ್ತಿತ್ತು ಎಂದು ಹುಬ್ಬಳ್ಳಿಯ ಎಂಬತ್ತು ವರ್ಷಕ್ಕಿಂತಲೂ ಹೆಚ್ಚು ವಯಸ್ಸಾದ ಯಲ್ಲಮ್ಮ ಮತ್ತು ಲಕ್ಷ್ಮಿಬಾಯಿ ಸುಗತೆ ಹಳೆಯ ಕಾಲವನ್ನು ನೆನಪಿಸಿಕೊಳ್ಳುತ್ತಾರೆ.[೮೭]

ಕೌದಿಗಳಲ್ಲಿ ಗುಬ್ಬಿ ಕಾಲು, ತ್ರಿಕೋನ ಆಕಾರದ ಚಿತ್ರ, ಚೌಕಾಗಿರುವ ಬಣ್ಣದ ಸಣ್ಣ ಪಟ್ಟಿಕೆಗಳ ಚಿತ್ರ, ಕತ್ತರಿ (X) ಆಕಾರ ಚಿತ್ರಗಳನ್ನು ಬಿಡಿಸಲಾಗುತ್ತಿತ್ತು ಎಂದು ಹುಬ್ಬಳ್ಳಿಯ ಎಂಬತ್ತೈದರ ಇಳಿವಯಸ್ಸಿನಲ್ಲಿರುವ ಗಾಳೆಮ್ಮ ವಾಗ್ಮೋಡೆ ಅವರು ಹೇಳುತ್ತಾರೆ.[೮೮] ತಮ್ಮ

---

೮೬. ಜನಪದ ಕಲೆ : ಪಾಟೀಲ ಎಸ್.ಸಿ : ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು : ೧೯೯೫ : ಪು–೧೦–೧೧

೮೭. ಕ್ಷೇತ್ರಕಾರ್ಯ : ೨೫–೦೧–೨೦೧೫

೮೮. ಕ್ಷೇತ್ರಕಾರ್ಯ : ೨೫–೦೧–೨೦೧೫

ಮುತ್ತಾತನ ಕಾಲದಿಂದಲೂ ಅಂದರೆ ಸರಿ ಸುಮಾರು ಆರು ತಲೆಮಾರುಗಳಿಂದ ಕೌದಿ ತಯಾರಿಕೆಯನ್ನು ವೃತ್ತಿಯನ್ನಾಗಿ ಮಾಡಿಕೊಂಡು ಬದುಕು ನಡೆಸಿರುವುದನ್ನು ಹುಬ್ಬಳ್ಳಿಯ ಅರವತ್ತೈದು ವಯಸ್ಸಿನ ದ್ಯಾಮವ್ವ ಪಾರಗಿ ಹೇಳಿಕೊಳ್ಳುತ್ತಾರೆ.[೮೯]

ಮೂಲತಃ ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರದಿಂದ ಬಂದು ಧಾರವಾಡ ಜಿಲ್ಲೆಯಲ್ಲಿ ತಳವೂರಿ ಕೌದಿಯನ್ನು ಹೊಲೆಯುವ ಕಾಯಕದಲ್ಲಿ ತೊಡಗಿಸಿಕೊಂಡ ಕೆಲವರು ಇಂದು ಆ ವೃತ್ತಿಯನ್ನು ಬಿಟ್ಟಿದ್ದಾರೆ. ಯಾಕೆಂದರೆ ಕೌದಿಗೆ ಈಗ ಮೊದಲಿನ ಮಾರುಕಟ್ಟೆಯಿಲ್ಲ. ಆದರೆ ಹವ್ಯಾಸಕ್ಕಾಗಿ ಇಂದಿಗೂ ಅಲ್ಲಲ್ಲಿ ಕೌದಿಗೆ ಹೊಲೆಯಲು ಕರೆ ಬಂದಾಗ ಹೋಗುವುದಾಗಿ ಹುಬ್ಬಳ್ಳಿಯ ಅರವತ್ತೆರಡು ವಯಸ್ಸಿನ ಪಿರಗಮ್ಮ ಶಿಂಧೆ ಹೇಳುತ್ತಾರೆ.[೯೦] ಕೌದಿ ಹೊಲೆಯುವಾಗ ಹಾಡುಗಳನ್ನು ಹೇಳುತ್ತ ಕಾಯಕವನ್ನು ತುಂಬ ಉತ್ಸಾಹದಿಂದ ಮಾಡುತ್ತಿದ್ದುದ್ದನ್ನೂ ಇವರು ಹೇಳುತ್ತಾರೆ.

ಯಂತ್ರಗಳ ಆಗಮನದ ನಂತರ ಕೌದಿ ತನ್ನ ಮಹತ್ವವನ್ನು ಕಳೆದುಕೊಂಡಿದ್ದು ಕೌದಿ ಹೊಲೆಯುವವರ ಮಕ್ಕಳು ಈಗ ಆ ವೃತ್ತಿಯನ್ನು ಬಿಟ್ಟು ಶಿಕ್ಷಣ ಪಡೆದುಕೊಂಡು ಬೇರೆ ಬೇರೆ ವೃತ್ತಿಗಳಲ್ಲಿ ತೊಡಗಿಕೊಂಡಿದ್ದಾರೆ. ಆದರೂ ಅಲ್ಲಲ್ಲಿ ಹವ್ಯಾಸಕ್ಕಾಗಿ ಇಂದಿಗೂ ಕೌದಿ ಹೊಲೆಯವುದು ಕಂಡುಬರುತ್ತದೆ. ಆದರೆ ಮೊದಲಿನ ಕಲಾಕುಸರಿ ಇಂದು ಕಾಣಸಿಗುವುದಿಲ್ಲ.

**ಮದರಂಗಿ :** ಮದರಂಗಿ ಭಾರತದಲ್ಲಿ ತುಂಬ ಪ್ರಾಚೀನವಾದ ಪರಂಪರೆಯನ್ನು ಹೊಂದಿದೆ. ಮನುಷ್ಯನ ಸೌಂದರ್ಯ ಪರಿಕಲ್ಪನೆಯಲ್ಲಿ ಇದೂ ಒಂದಾಗಿದೆ. ಸುಂದರವಾಗಿ ಕಾಣಿಸಿಕೊಳ್ಳಬೇಕು ಎನ್ನುವ ಕಾರಣಕ್ಕಾಗಿ ಮದರಂಗಿಯನ್ನು ತಮ್ಮ ಕೈ ಕಾಲುಗಳ ಮೇಲೆ ವಿವಿಧ ಬಗೆಯ ಚಿತ್ರಿಕೆಗಳ ಮೂಲಕ ಬಿಡಿಸಿಕೊಳ್ಳಲಾಗುತ್ತಿದೆ. ವಿಶೇಷವಾಗಿ ಇದನ್ನು ಮೊದಲು ಹೆಣ್ಣುಮಕ್ಕಳೇ ಹೆಚ್ಚಾಗಿ ಬಳಸುತ್ತಿದ್ದರು. ಈಗೀಗ ಅದು ಗಂಡಸರ ಸೌಂದರ್ಯವರ್ಧಕವಾಗಿಯೂ ಕಾಣಿಸಿಕೊಳ್ಳುತ್ತಿದೆ.

'ಮದರಂಗಿಯೂ ಭಾರತದಲ್ಲಿ ಬಹು ಪ್ರಾಚೀನ ಕಾಲದಿಂದಲೂ ಬಳಕೆಯಲ್ಲಿದ್ದಿತೆಂಬುದನ್ನು 'ಸುಶ್ರುತ ಸಂಹಿತೆ', 'ಮೃಚ್ಛಕಟಿಕ', 'ವೇಣೀ ಸಂಹಾರ' ಮೊದಲಾದ ಪ್ರಾಚೀನ ಗ್ರಂಥಗಳು ಉಲ್ಲೇಖಿಸುತ್ತವೆ. ಅನಾದಿ ಕಾಲದಿಂದಲೂ ಸೌಂದರ್ಯ ಪರಂಪರೆಯ ಸಂಕೇತವಾಗಿ, ಸುಮಂಗಲೆಯರ ಸೌಭಾಗ್ಯ ಸಂಕೇತವಾಗಿ, ಸ್ತ್ರೀಯರ ಅಂಗಾಂಗಗಳನ್ನು ಅಲಂಕರಿಸುವ ಜನಪದ ಚಿತ್ರಕಲೆಯಾಗಿ ಜನಜೀವನದಲ್ಲಿ ಹಾಸು ಹೊಕ್ಕಾಗಿ ಬೆಳೆದು ಬಂದ

೮೯. ಕ್ಷೇತ್ರಕಾರ್ಯ : ೨೫-೧೧-೨೦೧೫
೯೦. ಕ್ಷೇತ್ರಕಾರ್ಯ : ೨೫-೧೧-೨೦೧೫

ಸಂಪ್ರದಾಯವಾಗಿದೆ'[೯೧] ತುಂಬ ಪ್ರಾಚೀನವಾದ ಈ ಕಲೆಯನ್ನು 'ಸಂಸ್ಕೃತ ಭಾಷೆಯಲ್ಲಿ ಮದಯಂತಿಕಾ, ಹಿಂದಿಯಲ್ಲಿ ಮೆಹಂದಿ, ಮರಾಠಿಯಲ್ಲಿ ಮಂದಿಯಾಚೆ, ತೆಲುಗಿನಲ್ಲಿ ಗೌರಿಂಟಾಡು, ಇಂಗ್ಲೀಷಿನಲ್ಲಿ ಹೆನ್ನಾ, ಪರ್ಶಿಯನ್‌ದಲ್ಲಿ ಹಿನಾ ಎಂದು ಮದರಂಗಿಯನ್ನು ಕರೆಯುತ್ತಾರೆ'[೯೨] ಹೀಗೆ ವಿವಿಧ ಭಾಷೆಗಳಲ್ಲಿ ಬೇರೆ ಬೇರೆ ಹೆಸರುಗಳಿಂದ ಜನಮನ್ನಣೆ ಗಳಿಸಿರುವ ಮದರಂಗಿಯು ಇಂದಿಗೂ ತನ್ನ ಅಸ್ಮಿತೆಯನ್ನು ಉಳಿಸಿಕೊಂಡು ಬಂದಿದೆ.

'ಕ್ರಿ.ಪೂ. ೩ನೆಯ ಶತಮಾನದ 'ಸುಶ್ರುತ ಸಂಹಿತಾ' ಗ್ರಂಥದಲ್ಲಿ ಕಂಡುಬರುವ 'ಹರೀತಕೀಚೂರ್ಣಂ ಅರಿಷ್ಟಪತ್ರಂ ಚೂತತ್ವಚಂ ದಾಡಿಂಪುಷ್ಪವೃಂತಕಂ, ಪತ್ರಂ ಚ ದದ್ಯಾತ್ ಮದಯಂತಿ ಕಾಯಾ ಲೇಪೋ ಅಂಗರಾಗೋ ನರದೇವ ಯೋಗ್ಯಾಹಃ ಈ ಶ್ಲೋಕದಲ್ಲಿ ಅರಳಿಕಾಯಿ ಚೂರ್ಣ, ರಿಟ್ಟ ತಪ್ಪಲ (ಅರಿಷ್ಟ ಪತ್ರ), ಮಾವಿನ ತೊಟೆ, ದಾಳಿಂಬ ಹೂವಿನ ಕೆಳಭಾಗ (Calyx), ಮದರಂಗಿಯ ತೊಪ್ಪಲುಗಳನ್ನು ಶರೀರಕ್ಕೆ ಹಚ್ಚಿಕೊಳ್ಳುವ ವಿಷಯ ನಿರೂಪಿತವಾಗಿದೆ. ಆಯುರ್ವೇದಿಯ ಶಬ್ದಕೋಶದಲ್ಲಿ 'ಅಂಗರಾಂಗ'ವೆಂದರೆ ಗಾತ್ರ ರಂಜನ ಅಂದರೆ ಅವಯವಗಳಿಗೆ ಬಣ್ಣ ಕೊಡುವುದು ಎಂಬ ಅರ್ಥವಿದೆ. ಸಂಸ್ಕೃತ ನಿಘಂಟಿನಲ್ಲಿ ಅಂಗರಾಂಗಕ್ಕೆ 'Application of unguments of or of the body cosmatics' ಎಂದು ಹೇಳಲಾಗಿದೆ. ವಾತ್ಸಾಯನ ಹೇಳುವ ೬೪ ಕಲೆಗಳಲ್ಲಿ ಐದನೆಯದಾದ 'ವಿಶೇಷಕ ಛೇದ್ಯ' ಎಂಬ ಪದಕ್ಕೆ ಹಣೆಗೆ ತಿಲಕವಿಡುವುದು ; ಮುಖ ಮತ್ತು ದೇಹದ ಇತರ ಭಾಗಗಳನ್ನು ಚಂದನ, ಶ್ರೀಗಂಧ, ಕೇಸರಿ, ಗೋರೋಜನ್, ಕಸ್ತೂರಿ ಮೊದಲಾದ ಸುಗಂಧ ದ್ರವ್ಯ ಮತ್ತು ವರ್ಣಗಳಿಂದ ಅಲಂಕರಿಸುವುದು ; ಕಿವಿಯ ಹತ್ತಿರ ಬಣ್ಣ ಹಚ್ಚುವುದು ಎಂದು ಅರ್ಥೈಸಲಾಗಿದೆ. ಶೂದ್ರಕ ಕವಿಯ ಮೃಚ್ಛಕಟಿಕ, ಭಟ್ಟನಾರಾಯಣನ ವೇಣಿ ಸಂಹಾರ ಕೃತಿಗಳಲ್ಲಿ 'ವಿಶೇಷಕ' ಎಂಬ ಪದ ಬಳಕೆಯಿದೆ. ಈ ಪದಕ್ಕೆ ಅವಯವಗಳ ಮೇಲೆ ವರ್ಣಚಿತ್ರಗಳ ಲೇಪನ ಎಂಬ ಅರ್ಥವಿದೆ'[೯೩] ಅಂದರೆ ಮದರಂಗಿಯನ್ನು ತಯಾರಿಸುವ ಮತ್ತು ಬಳಸುವ ವಿಧಾನಗಳ ಬಗ್ಗೆ ವಿವಿಧ ಆಕರಗಳು ಬಹು ಹಿಂದಿನಿಂದಲೂ ದೊರೆಯುತ್ತವೆ.

ಮದರಂಗಿ ಕಲೆಯನ್ನು ಧಾರ್ಮಿಕ ಮತ್ತು ಧಾರ್ಮಿಕೇತರ ಎಂದು ವರ್ಗೀಕರಣವನ್ನು ಮಾಡಲಾಗುತ್ತದೆ. 'ಧಾರ್ಮಿಕ ಮದರಂಗಿ ಚಿತ್ರವಿನ್ಯಾಸದಲ್ಲಿ ಮದುವೆ, ಹಬ್ಬ, ಉತ್ಸವ, ಜಾತ್ರೆಗಳ

---

೯೧. ಕರ್ನಾಟಕದ ಚಿತ್ರಕಲೆಯಲ್ಲಿ ಬಣ್ಣದ ಬಳಕೆ : ಕಾಳೆ ಕೆ.ವಿ : ಕನ್ನಡ ವಿಶ್ವವಿದ್ಯಾಲಯ, ಹಂಪಿ : ೨೦೦೦ : ಪು-೮೩

೯೨. ಕರ್ನಾಟಕದ ಜನಪದ ಚಿತ್ರಕಲೆ : ಪಾಟೀಲ ಎಸ್.ಸಿ : ವೀರಶೈವ ಅಧ್ಯಯನ ಸಂಸ್ಥೆ, ಗದಗ : ೧೯೯೩ : ಪು-೧೧೨

೯೩. ಕರ್ನಾಟಕದ ಜನಪದ ಚಿತ್ರಕಲೆ : ಪಾಟೀಲ ಎಸ್.ಸಿ : ವೀರಶೈವ ಅಧ್ಯಯನ ಸಂಸ್ಥೆ, ಗದಗ : ೧೯೯೩ : ಪು-೧೧೩

ಸಂದರ್ಭವನ್ನು ಸೂಚಿಸಿದರೆ, ಧಾರ್ಮಿಕೇತರ ಮದರಂಗಿ ಚಿತ್ರವಿನ್ಯಾಸದಲ್ಲಿ ಭೂಮಿತಿ ಆಕೃತಿ ಪ್ರಧಾನ ಚಿತ್ರವಿನ್ಯಾಸ ಮತ್ತು ವಲ್ಲರಿ ಆಕೃತಿ ಪ್ರಧಾನ ಚಿತ್ರವಿನ್ಯಾಸಗಳು ಬರುತ್ತವೆ.[೯೪]

ಸುಳುವು, ವಿವಿಧ ಬಗೆಯ ಹೂವು, ಬಳ್ಳಿ, ಸ್ವಸ್ತಿಕ, ಸೂರ್ಯ, ಚಂದ್ರ, ನಕ್ಷತ್ರ, ತ್ರಿಕೋನಾಕೃತಿ, ತ್ರಿಶೂಲ, ಶಂಖ, ಚಕ್ರ, ದೇವರ ಪಾದ, ವಿವಿಧ ಬಗೆಯ ಪಕ್ಷಿಗಳು, ಕಳಸ, ಕುಂಭ, ಪಲ್ಲಕ್ಕಿ, ಹಾವು, ಚೇಳು, ದೇವತೆಗಳ ಚಿತ್ರಗಳು ಧಾರ್ಮಿಕ ಮದರಂಗಿಯಲ್ಲಿ ಕಂಡುಬಂದರೆ, ತ್ರಿಕೋನ, ವರ್ತುಳ, ಅರ್ಧವೃತ್ತ, ಚೌಕ, ಆಯತ, ಚೌರಸಗಳು, ಕೋನಗಳಲ್ಲಿ ವೃತ್ತಗಳು, ಹೂವುಗಳು, ಬಳ್ಳಿಗಳು, ಎಲೆ, ಹಣ್ಣು, ಕಾಯಿ, ಮೊದಲಾದ ಚಿತ್ರವಿನ್ಯಾಸಗಳು ಧಾರ್ಮಿಕೇತರ ಮದರಂಗಿಯಲ್ಲಿ ಕಂಡುಬರುತ್ತವೆ. ಕೆಲವು ಸಂದರ್ಭಗಳಲ್ಲಿ ವಿವಿಧ ಹೆಸರುಗಳು, ಧಾರ್ಮಿಕ ಸಂಕೇತಾಕ್ಷರಗಳ ಚಿತ್ರವಿನ್ಯಾಸಗಳೂ ಕಂಡುಬರುತ್ತವೆ.

ಇತ್ತೀಚೆಗೆ ಮದರಂಗಿ ಕಲೆ ಒಂದು ಫ್ಯಾಶನ್ ಆಗಿದ್ದು, ತಾತ್ಕಾಲಿಕವಾಗಿ ದೇಹ ಸೌಂದರ್ಯವನ್ನು ಹೆಚ್ಚಿಸುವಲ್ಲಿ ಬಹುಮುಖ್ಯ ಪಾತ್ರವಹಿಸಿವೆ. ಆಧುನಿಕ ಯುಗದಲ್ಲಿ ಪ್ರಾಚೀನವಾದ ಜಾನಪದ ಕಲೆಯೊಂದು ಹೊಸ ಸಾಧ್ಯತೆಗಳೊಂದಿಗೆ ಮರುಕಳಿಸಿದೆ.

**ರಂಗವಲ್ಲಿ :** ರಂಗೋಲಿ ಅಥವಾ ರಂಗವಲ್ಲಿಗೆ ಭಾರತದದಲ್ಲಿ ಭವ್ಯ ಪರಂಪರೆ ಇದೆ. ಸಂಪ್ರದಾಯಸ್ತ ಮನೆಗಳಲ್ಲಿ ನಸುಕಿನಲ್ಲಿ ಎಚ್ಚರಗೊಳ್ಳುವ ಹೆಣ್ಣುಮಕ್ಕಳು ಸ್ನಾನ ಮಾಡಿಕೊಂಡು, ಹೊರಗಿನ ಅಂಗಳವನ್ನು ಗುಡಿಸಿ, ನೀರು ಚಿಮುಕಿಸಿ ರಂಗೋಲಿ ಬಿಡಿಸಿ ಆನಂತರ ಪೂಜೆಗೆ ಅಣಿಯಾಗುತ್ತಿದ್ದರು. ಕೆಲವು ಕಡೆ ಸಂಜೆ ಕೂಡ ರಂಗೋಲಿ ಬಿಡಿಸುವ ಪರಿಪಾಠ ಇರುವುದು ಕಂಡುಬರುತ್ತದೆ. ಹಬ್ಬ-ಹರಿದಿನಗಳಲ್ಲಿಯಂತೂ ರಂಗೋಲಿಗೆ ವಿಶೇಷವಾದ ಸ್ಥಾನವಿದೆ. ವಿವಿಧ ಬಗೆಯಲ್ಲಿ ರಂಗೋಲಿಯನ್ನು ಮನೆ, ದೇವಾಲಯ, ಪ್ರಾಂಗಣಗಳಲ್ಲಿ ಹಾಕಲಾಗುತ್ತದೆ. ಅದರಲ್ಲಿ ವಿವಿಧ ಬಗೆಯ ಚಿತ್ರಗಳನ್ನು ಬಿಡಿಸಲಾಗುತ್ತದೆ. ವಿಶೇಷವಾಗಿ ಧಾರ್ಮಿಕತೆಗೆ ಇಲ್ಲಿ ಹೆಚ್ಚು ಒತ್ತು ನೀಡಲಾಗುತ್ತದೆ. ದೇವರ ಚಿತ್ರಗಳು, ಧಾರ್ಮಿಕ ಲಾಂಛನಗಳು ಇಲ್ಲಿ ವಿಜ್ರಂಭಿಸುತ್ತವೆ. ಭಾರತದಲ್ಲಿ ಹೆಚ್ಚಾಗಿ ಧಾರ್ಮಿಕ ಭಾವನೆಗಳೇ ಬಹುತೇಕ ಜನರ ನಂಬಿಕೆಗಳಾಗಿವೆ.

'ಭಾರತದ ಎಲ್ಲ ಭಾಗದಲ್ಲೂ ಕಾಣಬರುವ ಜನಪದ ಕಲೆ ರಂಗವಲ್ಲಿ. ರಂಗೋಲಿ ಕಲೆ ಆಯಾ ಪ್ರಾಂತ್ಯದ ವಿವಿಧ ಶೈಲಿಯನ್ನು ಹೊಂದಿದೆ. ರಂಗು ಎಂದರೆ ಬಣ್ಣ ಮತ್ತು ವಲ್ಲಿ ಗಿಡದ ಬಳ್ಳಿ. ಇದರಿಂದ ರಂಗೋಲಿ ಆಗಿದೆ. ನೆಲದ ಮೇಲಿನ ವಿವಿಧ ನಮೂನೆಗಳ ಚಿತ್ತಾರ ಎಂತಲೂ ಇದನ್ನು ಕರೆಯಲಾಗುತ್ತದೆ. ರಂಗೋಲಿ ವೇದ ಕಾಲದಿಂದ ಬಂದ ಕಲೆಯಾಗಿದೆ. ಕಾಮಸೂತ್ರದ

---

೯೪. ನೋಡಿ : ಕರ್ನಾಟಕದ ಜನಪದ ಚಿತ್ರಕಲೆ : ಪಾಟೀಲ ಎಸ್.ಸಿ : ವೀರಶೈವ ಅಧ್ಯಯನ ಸಂಸ್ಥೆ, ಗದಗ : ೧೯೯೩ : ಪು-೧೧೯

೬೪ ಕಲೆಗಳಲ್ಲಿ ರಂಗೋಲಿ ಒಂದು ಕಲೆ. ಹಿಂದೂಗಳಲ್ಲದವರೂ ರಂಗೋಲಿ ಕಲೆ ಬಳಸುತ್ತಾರೆ. ಮುಖ್ಯವಾಗಿ ರಂಗವಲ್ಲಿಯ ಕಲೆ ನಮ್ಮ ಗರತಿಯರ ಕಲಾಪ್ರತಿಭೆಗೆ ಸಾಕ್ಷಿಯಾಗಿದೆ. ಬೆಳಗಿನ ವೇಳೆ ಸಗಣಿ ನೀರು ಹಾಕಿ, ರಂಗವಲ್ಲಿಯನ್ನು ಬಿಡುತ್ತಾರೆ. ಎಲ್ಲೆಲ್ಲೂ ಈ ಕಲೆ ಕಂಡುಬರುತ್ತದೆ’[೯೫] ಎಂದು ತಿಪ್ಪೇಸ್ವಾಮಿಯವರು ಹೇಳುವುದು ಅಚ್ಚರಿಯ ಸಂಗತಿಯೇನಲ್ಲ ; ಅದು ಇಡೀ ಭಾರತ ದೇಶದಲ್ಲಿ ಕಂಡುಬರುವ ಪ್ರಕ್ರಿಯೆಯೇ ಆಗಿದೆ.

‘ರಂಗೋಲಿ ಭಾರತದ ಅತ್ಯಂತ ಪ್ರಾಚೀನ ಜನಪದ ಕಲೆ. ಬದುಕಿನ ಖುಷಿಯನ್ನು, ಸೌಭಾಗ್ಯ ಮಂಗಳಕರ ಪ್ರಸನ್ನತೆಯನ್ನು, ಶುಭ ಸನ್ನಿವೇಶವನ್ನು ಹೇಳುವ ಲಾಲಿತ್ಯಪೂರ್ಣ ಕಲಾಕೌಶಲ್ಯವೇ ರಂಗವಲ್ಲಿ. ಇಲ್ಲಿಯ ಜನಪದ ಚಿತ್ರಕಲೆಗಳಲ್ಲೊಂದಾದ ಈ ಕಲೆಯಲ್ಲಿ ಶ್ರೇಷ್ಠ ಕಲೆಯ ಲಕ್ಷಣಗಳೆಲ್ಲವು ಇದವೆ. ಇದು ಅಲಂಕಾರಿಕ ಮಾತ್ರವಲ್ಲ, ಮಂಗಲಕರವೂ ಆಗಿದೆ. ರಂಗೋಲಿ ಭಾರತದ ಹಳ್ಳಿ ಮೂಲೆಗಳಲೆಲ್ಲ ತುಂಬಿರುವ ಸೌಂದರ್ಯಪ್ರಜ್ಞೆಯ ದ್ಯೋತಕ. ದೇವರನ್ನು ಒಲಿಸಿಕೊಳ್ಳುವ ಮಾರ್ಗ. ಈ ಕಲೆ ತಮಿಳುನಾಡಿನಲ್ಲಿ ಕೋಲಂ, ಆಂಧ್ರದಲ್ಲಿ ಮುಗ್ಗಲು, ಮರಾಠಿಯಲ್ಲಿ ರಂಗೋಳಿ, ಗುಜರಾತದಲ್ಲಿ ಸಾಥ, ಬಂಗಾಳದಲ್ಲಿ ಅಲ್ಪನಾ, ಓರಿಸ್ಸಾದಲ್ಲಿ ಚಿತಾ, ರಾಜಸ್ಥಾನದಲ್ಲಿ ಮಾಂಡನಾ, ಉತ್ತರಪ್ರದೇಶದಲ್ಲಿ ಸಾಂಝ್ ಎಂದು ಪ್ರಖ್ಯಾತಿ ಹೊಂದಿದೆ. ರಂಗೋಲಿ ಕಲೆಯ ಮೂಲ ಆಶಯ ಮಾತ್ರ ಎಲ್ಲ ಪ್ರದೇಶಗಳಲ್ಲಿಯೂ ಒಂದೇ ಆಗಿದೆ’[೯೬] ಹೀಗೆ ರಂಗೋಲಿ ಅಥವಾ ರಂಗವಲ್ಲಿ ವಿವಿಧ ಪ್ರದೇಶಗಳಲ್ಲಿ ಭಿನ್ನ ಭಿನ್ನ ಹೆಸರುಗಳಿಂದ ಪ್ರಚಲಿತದಲ್ಲಿದೆ. ‘ರಂಗೋಲಿಯನ್ನು ಕರ್ನಾಟಕದಲ್ಲಿ ರಂಗವಾಲಿ, ರಂಗವಲಿ, ರಂಗವಲ್ಲಿ, ರಂಗವಳಿ, ರಂಗವಾಲೆ, ರಂಗಾಲೆ, ರಂಗಾ ಹಾಕುವುದು, ಮಂಡಲ ಬರೆಯುವುದು, ಶೇಡಿ ಬರೆಯುವುದು, ಜೋಕೋ ಬರೆಯುವುದು ಎಂದು ಹಲವು ರೀತಿಯಾಗಿ ಕರೆಯುತ್ತಾರೆ’[೯೭] ಎಂಬುದು ಕೂಡ ಗಮನಿಸತಕ್ಕ ವಿಷಯವಾಗಿದೆ. ಕರ್ನಾಟಕದಲ್ಲೇ ರಂಗೋಲಿಯನ್ನು ವಿವಿಧ ಹೆಸರಿನಿಂದ ಕರೆಯಲಾಗುತ್ತದೆ. ರಂಗಾಲೆ, ಮಂಡಲ, ಶೇಡಿ, ಜೋಕೋ ಎನ್ನುವ ಪದಗಳು ರಂಗೋಲಿಗೆ ಅನ್ವಯಿಸಿದರೂ ಉತ್ತರ ಕರ್ನಾಟಕದಲ್ಲಿ ರಂಗೋಲಿ ಅಥವಾ ರಂಗವಲ್ಲಿ ಎಂದೇ ಇದು ಪ್ರಸಿದ್ಧಿಯನ್ನು ಪಡೆದುಕೊಂಡಿದೆ ಎನ್ನುವುದನ್ನು ಮರೆಯುವಂತಿಲ್ಲ.

‘ರಂಗೋಲಿ ಇತ್ತೀಚಿನದ್ದಲ್ಲ. ಬದಲಾಗಿ ಆದಿಮಾನವರ ಕಾಲದಿಂದ ಬಳುವಳಿಯಾಗಿ ಬಂದಿದೆ. ಹಬ್ಬ, ಹುಣ್ಣಿಮೆ, ಮದುವೆ ಸಂಭ್ರಮಕ್ಕೆ ಗೋಡೆಗಳ ಮೇಲೆ, ಗಿಡ–ಮರಗಳ ಮೇಲೆ

---

೯೫. ಜಾನಪದ ಆನ್ವಯಿಕತೆ : ಸಂ– ಡಾ. ಜಿ.ಆರ್. ತಿಪ್ಪೇಸ್ವಾಮಿ– ಕೋಡಿರಾಂಪುರ ರಂಗಾರೆಡ್ಡಿ : ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು : ೨೦೦೩ : ಪು–೧೬೪

೯೬. ಕರ್ನಾಟಕದ ಜನಪದ ಚಿತ್ರಕಲೆ : ಪಾಟೀಲ ಎಸ್.ಸಿ : ವೀರಶೈವ ಅಧ್ಯಯನ ಸಂಸ್ಥೆ, ಗದಗ : ೧೯೯೩ : ಪು–೨೧೯

೯೭. ಕರ್ನಾಟಕದ ಜನಪದ ಚಿತ್ರಕಲೆ : ಪಾಟೀಲ ಎಸ್.ಸಿ : ವೀರಶೈವ ಅಧ್ಯಯನ ಸಂಸ್ಥೆ, ಗದಗ : ೧೯೯೩ : ಪು–೨೨೦–೨೨೧

ಮಡಿಕೆ-ಕುಡಿಕೆಗಳ ಮೇಲೆ ಚಿತ್ತಾರಗೊಳ್ಳುವ ಕಲೆ ಹಾಡು-ಹಸೆ ಮೂಲಕ ಸಾಕ್ಷಿಯಾಗಿತ್ತು. ಇತ್ತೀಚಿನ ದಿನಗಳಲ್ಲಿ ಹಾಲಕ್ಕಿ, ದೀವರು, ಗೊಂಡರ ಮನೆಗಳ ಗೋಡೆಗಳ ಮೇಲೆ ಅಕ್ಕಿ ಹಿಟ್ಟು, ಜೇಡಿ ಮಣ್ಣಿನ ಸಂದೇಶದ ರೇಖಾ ಚಿತ್ರಗಳು ಈಗ ರಂಗೋಲಿ ರೂಪ ಪಡೆದಿವೆ'[೯೮] ಎಂದು ಡಾ. ಭಾರತಿ ಮರವಂತೆಯವರು ಹೇಳುತ್ತಾರೆ. ಅಂದರೆ ಹಸೆ ಚಿತ್ರಗಳು ಕೂಡ ಇಂದು ರಂಗೋಲಿ ರೂಪವನ್ನು ಪಡೆದುಕೊಂಡಿದ್ದು ರಂಗೋಲಿಯ ಮಹತ್ವವನ್ನು ತಿಳಿಸುತ್ತದೆ.

ಈ ರಂಗೋಲಿ ಬಿಡಸುವುದಕ್ಕೆ ಕೆಲವು ವಿಶಿಷ್ಟ ಕಾರಣಗಳೂ ಕಂಡುಬರುತ್ತವೆ. ಅವು ಧಾರ್ಮಿಕ ನೆಲೆಯಲ್ಲಿ ಮೂಡಿ ಬಂದ ಅಭಿಪ್ರಾಯಗಳು. '...ಕೆಲವು ವಿಶಿಷ್ಟವಾದ ಸಂದರ್ಭಗಳಲ್ಲಿ ಬಿಡಿಸುವ ರಂಗೋಲಿಗಳಿಗೆ ಅವುಗಳ ಸಂದರ್ಭಗಳ ಹೆಸರನ್ನು ಕೊಟ್ಟಿದ್ದಾರೆ. ನಾಗಮಂಡಲ, ಆರತಿ ರಂಗೋಲಿ, ಮದುವೆ ರಂಗೋಲಿ, ವ್ಯಾಧಿ ನಿವಾರಣೆ ರಂಗೋಲಿ, ಭೂತ ಬಿಡಿಸುವ ರಂಗೋಲಿ, ಮಣೆ ರಂಗೋಲಿ ಮುಂತಾದ ಕೆಲವು ವಿಧಗಳು ಈ ರಂಗೋಲಿಯಲ್ಲಿವೆ. ರಂಗೋಲಿಯನ್ನು ಬಿಡುವ ಉದ್ದೇಶ ಮುಖ್ಯವಾಗಿ ಸೌಂದರ್ಯಕ್ಕೆ ಸಂಬಂಧಪಟ್ಟಿರುವುದಾದರೂ ಅದನ್ನೂ ಮೀರಿದ ಇನ್ನೊಂದು ಉದ್ದೇಶವಿದೆ. ಅದು ಶುಭದ ಸಂಕೇತ ಎಂಬ ಧಾರ್ಮಿಕ ಭಾವ. ರಂಗೋಲಿಯನ್ನು ದಾಟಿ ಪ್ರೇತಗಳು ಬರುವುದಿಲ್ಲ ಎನ್ನುವ ನಂಬಿಕೆ ಇದೆ.'[೯೯] ಧಾರ್ಮಿಕ ನಂಬಿಕೆಯ ಪರಿಣಾಮವಾಗಿ ರಂಗೋಲಿ ಕರ್ನಾಟಕದ ಕೆಲವು ಭಾಗಗಳಲ್ಲಿ ಪ್ರಸಿದ್ಧಿ ಪಡೆದಿದೆ. ಮಂಗಳೂರು, ಉಡುಪಿ, ಕಾರವಾರ ಉತ್ತರ ಕನ್ನಡ ಮೊದಲಾದ ಕಡೆ ಈ ರೀತಿಯ ನಂಬಿಕೆಗಳು ಕಂಡುಬರುತ್ತವೆ.

'ಎಲ್ಲಾ ಧಾರ್ಮಿಕ ಕಾರ್ಯಕ್ರಮಗಳ ಆರಂಭವಾಗುವುದು ರಂಗೋಲಿಯಿಂದ ; ಮಂಡಲಗಳಿಂದ. ವ್ರತ ರತ್ನಾಕರದಲ್ಲಿ ಚಿನ್ನ, ಬೆಳ್ಳಿ ಮುಂತಾದವುಗಳಿಂದ ಮೂರ್ತಿ ಮಾಡಿಸಿ ಪೂಜಿಸುವ ಯಾ ದಾನ ಕೊಡುವ ಶಕ್ತಿ ಇಲ್ಲದವರು ರಂಗೋಲಿ ಬರೆದು ಪೂಜಿಸಬಹುದು. ಅಮೂಲ್ಯ ವಸ್ತು ದಾನ ಮಾಡಿದಷ್ಟೇ ಫಲ ಲಭಿಸುತ್ತದೆ ಎಂದು ಹೇಳಿದೆ. ಮಂಡಲಗಳಿಗೆ ವೃತ್ತ, ಅಲಂಕಾರ ಎಂಬ ಅರ್ಥಗಳಿವೆ. ನಕ್ಷತ್ರ, ಗಣಪತಿ, ಪದ್ಮ ಮುಂತಾದ ಮಂಡಲಗಳ ತುದಿಗಳನ್ನು ಸೇರಿಸಿದರೆ ಹೊರಗಿನಿಂದ ವೃತ್ತಾಕಾರಗಳಾಗುತ್ತದೆ. ವೇದ ಮಂತ್ರಗಳಲ್ಲಿ 'ಅಗ್ನಿದೇವನೇ ! ನಿನ್ನ ಚಿತ್ರ ಬರೆಯುವೆ, ಪ್ರಸನ್ನನಾಗು' ಎಂದು ಹೇಳಿದುದುಂಟು. ಕ್ರಮೇಣ ಮಂಡಲಗಳು ಬಂದಿರಬಹುದು. ಮಹಿಳೆಯರು ಅದಕ್ಕೆ ಅಲಂಕಾರಗಳನ್ನು ಸೇರಿಸಿ ರಂಗೋಲಿಗಳ

---

೯೮. ವಿಜಯ ಕರ್ನಾಟಕ : ಲವಲವಿಕೆ : ೨೨-೦೬-೨೦೧೬

೯೯. ಬಂಡಾಯ ಜಾನಪದ : ಕೋಡಿರಾಂಪುರ ರಂಗಾರೆಡ್ಡಿ : ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು : ೧೯೯೫ : ಪು-೧೬೦

ಆರಂಭವಾಗಿರಬಹುದು.'[೧೦೦] ಎಂದು ಚಿತ್ರಕುಟೀರ ಅವರ ಅಭಿಪ್ರಾಯವಾಗಿದೆ. ಈ ಮಾತನ್ನು ಗಮನಿಸಿದಾಗ ಧಾರ್ಮಿಕವಾಗಿ ರಂಗೋಲಿ ಪಡೆದುಕೊಂಡ ಮಹತ್ವದ ಅರಿವಾಗುತ್ತದೆ. ಆದರೆ ಸಾಮಾನ್ಯವಾಗಿ ಈ ನಂಬಿಕೆ ಕರ್ನಾಟಕದ ಎಲ್ಲ ಕಡೆಗಳಲ್ಲಿಯೂ ಇಲ್ಲ. ಉತ್ತರ ಕರ್ನಾಟಕದಲ್ಲಿಯಂತೂ ಇದು ತುಂಬ ವಿರಳ.

'ಮಂಡಲಗಳನ್ನು ಬರೆದು ಪೂಜಾ ನಂತರ ಅವುಗಳ ಮೇಲೆ ಕೈಯಾಡಿಸಿ ಹಾಳು ಮಾಡಿ ಬಿಡುತ್ತಾರೆ. ಆಗ ಅವುಗಳ ಪೂಜ್ಯತ್ವ ಮುಗಿಯುತ್ತದೆ. ಅನಂತರ ಕಸಬರಿಗೆಯಿಂದ ಗುಡಿಸಿ ತೆಗೆಯಬಹುದು. ರಂಗೋಲಿಯು ಮರುದಿನ ಗೃಹ ಶುಚೀಕರಣದ ತನಕವೂ ಮನೆಗೆ ಮಂಗಲ ಹಾಗೂ ಅಲಂಕಾರವಾಗಿ ಉಳಿಯುತ್ತದೆ'[೧೦೧] ಇವೆಲ್ಲ ಕರ್ನಾಟಕದ ಕರಾವಳಿ ಭಾಗದಲ್ಲಿ ಕಂಡುಬರುತ್ತವೆಯೇ ವಿನಃ ಉತ್ತರ ಕರ್ನಾಟಕದಲ್ಲಿ ಇಂತಹ ನಂಬಿಕೆಗಳುನ ಹೆಚ್ಚಾಗಿ ಕಂಡುಬರುವುದಿಲ್ಲ. ಉತ್ತರ ಕರ್ನಾಟಕದಲ್ಲಿ ರಂಗೋಲಿ ಒಂದು ವಿಶೇಷ ಸಂದರ್ಭವನ್ನು ವ್ಯಕ್ತಪಡಿಸುವ ಸಂಭ್ರಮದ ಕಲೆಯಾಗಿಯೇ ಬೆಳೆದುಕೊಂಡು ಬಂದಿದೆ.

ಧಾರವಾಡ ಜಿಲ್ಲೆಯಲ್ಲಿಯೂ ರಂಗೋಲಿ ಕಲೆ ಪಾರಂಪರಿಕ ಕಲೆಯಾಗಿಯೇ ಮುಂದುವರೆದುಕೊಂಡು ಬಂದಿದೆ. ಜಿಲ್ಲೆಯ ಎಲ್ಲ ಭಾಗಗಳಲ್ಲಿ ಊರು-ಕೇರಿಗಳನ್ನೂ ಸೇರಿಸಿಯೇ ರಂಗೋಲಿ ಬಿಡಿಸುವಿಕೆ ಕಂಡುಬರುತ್ತದೆ. ಆದರೂ ಧಾರ್ಮಿಕ ಎನ್ನಿಸುವ ದೇವತೆಗಳ ಚಿತ್ರ, ಧಾರ್ಮಿಕ ಮೂಲದ ಲಾಂಛನಗಳಾದ ಸ್ವಸ್ತಿಕ, ಓಂ, ಹ್ರೀಂ ಮೊದಲಾದವುಗಳು ಇಲ್ಲಿ ಕಂಡುಬರುತ್ತವೆ. ಜೊತೆಗೆ ಪ್ರಕೃತಿಮೂಲದ ಮರ-ಗಿಡ, ಹೂವು-ಬಳ್ಳಿ, ಪ್ರಾಣಿ-ಪಕ್ಷಿಗಳನ್ನೂ ಇಲ್ಲಿ ಕಾಣಬಹುದಾಗಿದೆ. ಇಲ್ಲಿ ನಂಬಿಕೆಯ ಪ್ರಶ್ನೆಯೇ ಬರುವುದಿಲ್ಲ. ಆಯಾ ಸಂದರ್ಭಕ್ಕೆ ತಕ್ಕಂತೆ ರಂಗೋಲಿಯನ್ನು ಬಿಡಿಸಲಾಗುತ್ತದೆ. ಹಬ್ಬ-ಹರಿದಿನಗಳಲ್ಲಿ ವಿಶೇಷವಾಗಿ ರಂಗೋಲಿ ಹಾಕುವುದು ಸಾಮಾನ್ಯವಾಗಿ ಕಂಡುಬರುವ ಸಂಗತಿಯಾಗಿದೆ. ಇನ್ನುಳಿದಂತೆ ಮನೆಯನ್ನು ಅಲಂಕರಿಸುವ, ಒಪ್ಪ-ಓರಣಗೊಳಿಸುವ ಸಂದರ್ಭದಲ್ಲೂ ರಂಗೋಲಿ ಮಹತಿಯನ್ನು ಪಡೆದುಕೊಂಡಿದೆ.

ಮೂಲತಃ ಬೆಳಗಾವಿ ಜಿಲ್ಲೆಯ ಬೈಲಹೊಂಗಲದವರಾದ ಮತ್ತು ಸದ್ಯ ಹುಬ್ಬಳ್ಳಿಯ ರಹವಾಸಿ ಆಗಿರುವ ಶಿವಲಿಂಗಪ್ಪ ಬಡಿಗೇರ ಅವರು ಈ ರಂಗೋಲಿ ಬಿಡಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಇವರು ಬಿಡಿಸುವ ರಂಗೋಲಿ ಒಂದು ಚಿತ್ರಕಲೆಯಂತೆಯೇ ಭಾಸವಾಗುತ್ತದೆ. ಕನ್ನಡದ ಪ್ರಮುಖ ಕವಿಗಳಾದ ಡಿ.ಎಸ್. ಕರ್ಕಿ, ಕುವೆಂಪು, ಬೇಂದ್ರೆ ಮೊದಲಾದವರೊಂದಿಗೆ

---

೧೦೦. ಚಿತ್ರಕಲಾ ಪ್ರಪಂಚ : ಸಂ- ತಿಪ್ಪೇಸ್ವಾಮಿ ಪಿ.ಆರ್ : ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು : ೨೦೦೮ (ದ್ವಿ.ಮು.) : ಪು-೨೨೯

೧೦೧. ಚಿತ್ರಕಲಾ ಪ್ರಪಂಚ : ಸಂ- ತಿಪ್ಪೇಸ್ವಾಮಿ ಪಿ.ಆರ್ : ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು : ೨೦೦೮ (ದ್ವಿ.ಮು.) : ಪು-೨೩೧

ಗಂಗಪ್ಪ ವಾಲಿ, ಪಾಟೀಲ ಪುಟ್ಟಪ್ಪ, ಗೋರುಚ, ಸ್ವಾಮಿ ವಿವೇಕಾನಂದ, ಗಾಂಧಿ, ನೆಹರು, ಮಲ್ಲಿಕಾರ್ಜುನ ಮನ್ಸೂರು, ಗಂಗೂಬಾಯಿ ಹಾನಗಲ್ಲ ಮೊದಲಾದವರ ಚಿತ್ರಗಳನ್ನು ಇವರು ರಂಗೋಲಿಯಲ್ಲಿ ಸಾಕಾರಗೊಳಿಸುತ್ತಾರೆ.[೧೦೨]

ಬಿಳಿಯ ಬಣ್ಣದ ರಂಗೋಲಿಗೆ ವಿಧವಿಧವಾದ ಬಣ್ಣಗಳನ್ನು ಸೇರಿಸಿ, ನಿಜವಾದ ವರ್ಣಚಿತ್ರಗಳು ಎನ್ನುವಂತೆಯೇ ಬಡಿಗೇರ ಅವರು ರಂಗೋಲಿಯನ್ನು ಬಿಡಿಸುತ್ತಾರೆ. ಇಲ್ಲಿ ಯಾವುದೇ ಕೃತಕತೆ ಇರುವುದಿಲ್ಲ. ವ್ಯಕ್ತಿಗಳ ಚಿತ್ರಗಳ ಜೊತೆಗೆ ಪ್ರಕೃತಿ ಮತ್ತು ಪ್ರಾಣಿ–ಪಕ್ಷಿಗಳ ಚಿತ್ರಣವನ್ನೂ ರಂಗೋಲಿಯಲ್ಲಿ ಅವರು ಬಿಡಿಸಿ ನೋಡುಗರನ್ನು ಬೆರಗುಗೊಳಿಸುತ್ತಾರೆ. ರಂಗೋಲಿಯ ಮಹತ್ವ ಮತ್ತು ವಿಸ್ತಾರತೆ ಎಷ್ಟು ಎಂದರೆ ಕೇವಲ ರಂಗೋಲಿ ಕಲೆಯ ಕುರಿತಾಗಿಯೇ ಸಂಶೋಧನೆ ಮಾಡಿ, ಮೈಸೂರು ವಿಶ್ವವಿದ್ಯಾಲಯದಿಂದ ಡಾ. ಭಾರತಿ ಮರವಂತೆಯವರು ಹಾಗೂ ರಂಗೋಲಿ ಮತ್ತು ಹಸೆ ಕಲೆಗಳ ಕುರಿತು ತೌಲನಿಕ ಅಧ್ಯಯನ ಮಾಡಿ ಕರ್ನಾಟಕ ವಿಶ್ವವಿದ್ಯಾಲಯದಿಂದ ಡಾ. ವಿಜಯಲಕ್ಷ್ಮೀ ಗೇಟಿಯವರ ಅವರು ಪಿಎಚ್.ಡಿ. ಪದವಿ ಗಳಿಸಿದ್ದಾರೆ.

**ಹಚ್ಚೆ ಕಲೆ :** ಹಚ್ಚೆ ಕಲೆ ಕೂಡ ತುಂಬ ಪ್ರಾಚೀನವಾದ ಜಾನಪದ ಕಲೆಯಾಗಿದೆ. ಹಚ್ಚೆಯಲ್ಲಿ ಅರಳುವ ಚಿತ್ರಕಲೆ ಅಮೋಘವಾಗಿ ಇರುತ್ತದೆ. ಭಾರತದಲ್ಲಿ ಹಚ್ಚೆಯನ್ನು ವಿಶೇಷವಾಗಿ ಮೊದಲು ಒಂದು ಸಮುದಾಯದ ನಂಬಿಕೆಯಾಗಿ ಹಾಕಲಾಗುತ್ತಿತ್ತು. ಹಚ್ಚೆ ಹಾಕಿಸಿಕೊಂಡರೆ ಸುಂದರವಾಗಿ ಕಾಣುವುದಲ್ಲದೇ ವಿವಿಧ ದೋಷಗಳಿಂದ ಮುಕ್ತವಾಗಬಹುದು ಎಂಬ ನಂಬಿಕೆಯೂ ಇತ್ತು.

'ಮಾನವನು ನಗ್ನಾವಸ್ಥೆಯಲ್ಲಿರುವಾಗಲೇ ಜನ್ಮ ತಾಳಿದ ಅತಿ ಪ್ರಾಚೀನವಾದ ಕಲೆ ಹಚ್ಚೆ. ಆದಿಮಾನವನು ತನ್ನ ಬೆತ್ತಲೆ ದೇಹದ ಸೌಂದರ್ಯವನ್ನು ಹೆಚ್ಚಿಸಿಕೊಳ್ಳಲು ಅನೇಕ ಪ್ರಯತ್ನಗಳನ್ನು ನಡೆಸಿದ್ದಾನೆ. ಆ ಪ್ರಯತ್ನಗಳ ಫಲವಾಗಿ ಹಚ್ಚೆ ಉಗಮವಾಯಿತು ಎಂಬುದು ಮಾನವಶಾಸ್ತ್ರಜ್ಞರ ಅಭಿಪ್ರಾಯ. ಮಾನವನು ದೇಹಸೌಂದರ್ಯಕ್ಕೆ ವಸ್ತ್ರಗಳನ್ನು ಬಳಸಿಕೊಳ್ಳುವ ಮುನ್ನ ಬಂದ ಕಲೆ ಹಚ್ಚೆ. ದುರದೃಷ್ಟವಶಾತ್ ಅದರ ಪ್ರಾಚೀನತೆಯ ಬಗೆಗೆ ಪ್ರಾಗೈತಿಹಾಸಿಕ ದಾಖಲೆಗಳು ನಮಗೆ ಸಿಗುವುದಿಲ್ಲ. ದೇಹದ ಸೌಂದರ್ಯ ವರ್ಧನೆಗಾಗಿ ಜಾಣ್ಮೆಯಿಂದ ದೇಹಕ್ಕೆ ಅಳಿಸಲಾಗದಂತೆ ಬಣ್ಣವನ್ನು ತುಂಬಿಕೊಳ್ಳುವ ಕಲೆ ಅತೀ ಪ್ರಾಚೀನ ಕಾಲದಲ್ಲಿಯೇ ಪ್ರಾರಂಭವಾಗಿರಬೇಕು ಎಂಬುದು ವಿದ್ವಾಂಸರ ಅಭಿಮತ'[೧೦೩] ಅಂದರೆ ಮೊಟ್ಟ ಮೊದಲಿಗೆ

೧೦೨. ಕ್ಷೇತ್ರಕಾರ್ಯ : ೧೨–೦೨–೨೦೧೪

೧೦೩. ಲಂಬಾಣಿ ಸಂಸ್ಕೃತಿ : ಸಣ್ಣರಾಮ : ೧೯೯೯ : ಪು–೨೦೭

ದೇಹದ ಸೌಂದರ್ಯವನ್ನು ಹೆಚ್ಚಿಸಿಕೊಳ್ಳಲೆಂದೇ ಈ ಹಚ್ಚೆ ಕಲೆ ಹುಟ್ಟಿಕೊಂಡಿತು. ಪ್ರಾಗೈತಿಹಾಸಿಕ ದಾಖಲೆಗಳು ದೊರೆಯದಿದ್ದರೂ ಅದು ತುಂಬ ಪ್ರಾಚೀನ ಎಂಬುದು ವಿದ್ವಾಂಸರ ಅಭಿಮತವಾಗಿದೆ.

'ವೆಟ್ಸ್ ಗಾರ್ಡೆಂಟ್ಸ್ ಮತ್ತು ಇತರರು ಹಚ್ಚೆಯು ಧರ್ಮದ ಸಂಕೇತವಾಗಿ ಉಗಮವಾಗಿದೆ ಎಂದು ಅಭಿಪ್ರಾಯಪಡುತ್ತಾರೆ. ಜೋಸ್ಟ್ ಮತ್ತು ವೆಸ್ಟರ್ ಮಾರ್ಕ್ ಎಂಬುವರು ಹಚ್ಚೆ ಹಾಕಿಸಿಕೊಳ್ಳುವುದು ದೇಹವನ್ನು ಶೃಂಗರಿಸಿಕೊಳ್ಳುವುದಕ್ಕಾಗಿ ಎಂದು ನಿರೂಪಿಸಿದ್ದಾರೆ. ಹಚ್ಚೆ ಹಾಕಿಸಿಕೊಳ್ಳುವುದು ಧರ್ಮ ಮತ್ತು ಶೃಂಗಾರದ ಕಾರಣಗಳ ಹೊರತಾಗಿ ಎಲ್ಲ ಕಡೆಯಲ್ಲೂ ಇದೆ. ದಕ್ಷಿಣ ದ್ವೀಪಗಳ ಪರಿಶೋಧನೆಯಲ್ಲಿದ್ದಾಗ ಅಲ್ಲಿಯ ಜನಗಳು ಹಚ್ಚೆ ಹಾಕಿಸಿಕೊಳ್ಳುವುದು ಧರ್ಮಕ್ಕೆ ಸಂಬಂಧಪಟ್ಟಿರಲಿಲ್ಲ. ಗಂಡು ಹೆಣ್ಣುಗಳು ಶೃಂಗಾರ ಮಾಡಿಕೊಳ್ಳುವುದು, ಅಂಗಹೀನ ಮಾಡಿಕೊಳ್ಳುವುದು ಮತ್ತು ಬಣ್ಣ ಹಚ್ಚಿಕೊಳ್ಳುವುದು ಸ್ತ್ರೀ–ಪುರುಷರನ್ನು ಆಕರ್ಷಿಸಲು ಎಂಬುದನ್ನು ವೆಸ್ಟರ್ ಮಾರ್ಕ್ ಅಲ್ಲಗಳೆದ. ಇದು ಅನುಮಾನಕ್ಕಿಂತಲೂ ಬಹಳ ದೂರವಿರುವುದೆಂದು ಹೇಳುತ್ತಾನೆ. ಇದಕ್ಕೆ ಬದಲಾಗಿ ಉಂಡಟ್ಟನು ಗುರುತು ಮಾಡುವುದು ಮೂಲತಃ ದುಷ್ಟಶಕ್ತಿಯನ್ನು ನಿಯಂತ್ರಿಸಲು ಮಾಡಿದ ಪ್ರಯತ್ನವಾಗಿದೆ. ಆದರೆ ಕಾಲ ಕ್ರಮೇಣ ಇದು ಶೃಂಗಾರ ಸಾಧನವಾಗಿ ಬದಲಾವನೆಯಾಯಿತು. ಅಲ್ಲದೆ ಹಚ್ಚೆ ಧರಿಸಿಕೊಂಡವರ ಸೌಂದರ್ಯ ಎದ್ದು ಕಾಣುವಂತಾಗಲು ಸಹಾಯವಾಯಿತೆಂದು ಸೂಚಿಸುತ್ತಾನೆ'[೧೦೪] ಇಲ್ಲಿ ಎರಡು ತೆರನಾದ ಚಿಂತನೆಗಳು ಕಂಡುಬರುತ್ತವೆ. ಧಾರ್ಮಿಕ ಕಾರಣಗಳಿಂದಲೇ ಹಚ್ಚೆ ಬೆಳೆದು ಬಂತು ಎನ್ನುವ ವಿಚಾರ ಒಂದು ಕಡೆಯಾದರೆ ಶೃಂಗಾರದ ಅಭೀಪ್ಸೆಯಿಂದ ಸೌಂದರ್ಯವರ್ಧಕವಾಗಿ ಹಚ್ಚೆಯನ್ನು ಹಾಕಿಸಿಕೊಳ್ಳಲಾಗುತ್ತಿತ್ತು ಎಂಬುದು ಇನ್ನೊಂದು ವಿಚಾರ ಕಾಣಿಸಿಕೊಂಡಿದೆ. ಇವರೆಡೂ ಒಪ್ಪಿಕೊಳ್ಳುವ ವಿಚಾರಗಳೇ ಆಗಿವೆ. ಕೆಲವು ಕಡೆ ಧಾರ್ಮಿಕ ಕಾರಣಗಳಿದ್ದರೆ, ಇನ್ನೂ ಕೆಲವು ಕಡೆ ಸೌಂಧರ್ಯವರ್ಧಕ ಕಾರಣಗಳು ಕಂಡುಬರುತ್ತವೆ.

'ಹಚ್ಚೆ ಹಾಕಿಸಿಕೊಳ್ಳುವ ಪದ್ಧತಿಯು ಪ್ರಪಂಚದ ಅನೇಕ ಬುಡಕಟ್ಟುಗಳಲ್ಲಿ ಕಂಡುಬರುತ್ತದೆ. ಎನ್‌ಸೈಕ್ಲೋಪೀಡಿಯಾ ಆಫ್ ರಿಲಿಜಿಯನ್ ಆಂಡ್ ಎತಿಕ್ ಗ್ರಂಥದಲ್ಲಿ That no race or people exists that has not had the custom of either painting or tatuing the body ಎಂಬುದಾಗಿ ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಇವರ ಮಾತಿನಲ್ಲಿ ಪ್ರಪಂಚದ ಎಲ್ಲಾ ಬುಡಕಟ್ಟುಗಳಲ್ಲಿಯೂ ಹಚ್ಚೆಯು ಒಂದು ಜನಪ್ರಿಯ ಕಲೆಯಾಗಿದೆ ಎಂಬುದರ

೧೦೪. ಲಂಬಾಣಿ ಸಂಸ್ಕೃತಿ : ಸಣ್ಣರಾಮ : ೧೯೯೯ : ಪು–೨೦೭–೨೦೮

ಸೂಚನೆಯಿದೆ.'[೧೦೫] ಜಗತ್ತಿನ ಎಲ್ಲ ಕಡೆಯೂ ಅದರಲ್ಲೂ ಬುಡಕಟ್ಟು ಜನಾಂಗಗಳಲ್ಲಿ ಈ ಹಚ್ಚೆ ಹಾಕಿಸಿಕೊಳ್ಳುವ ಪರಿಪಾಠ ಹೆಚ್ಚಾಗಿದೆ ಎಂಬ ಇಲ್ಲಿಯ ಮಾತು ಇಂದು ಹುಸಿ ಹೋಗಿ ನಗರದ ಜನರೂ ಇದಕ್ಕೆ ಮಾರು ಹೋಗಿದ್ದು, ಹೊಸ ರೀತಿಯಲ್ಲಿ ಹಚ್ಚೆ ಕಲೆ ಮೂಡಿಬರುತ್ತಿದೆ. ಆಧುನಿಕ ಯುಗದಲ್ಲಿ ಯುವಕ-ಯುವತಿಯರಲ್ಲಿ ಈ ಪರಿಪಾಠ ಹೆಚ್ಚಾಗಿ ಕಂಡುಬರುತ್ತಿರುವುದು ಗಮನೀಯ.

ಕಿಟೆಲ್ ಕೋಶದಲ್ಲಿ ಹಚ್ಚೆ ಎನ್ನುವ ಪದಕ್ಕೆ ಅಚ್ಚೆ, ಪಚ್ಚೆ, ಹೆಚ್ಚೆ ಎಂಬ ಅರ್ಥಗಳನ್ನು ನೀಡಲಾಗಿದೆ.[೧೦೬] ಇಂಗ್ಲೀಷಿನಲ್ಲಿ ಇದನ್ನು ಟ್ಯಾಟೂ (Tattoo) ಎಂದು ಕರೆಯಲಾಗುತ್ತದೆ. 'ದೇಹದ ಬೇರೆ ಬೇರೆ ಭಾಗಗಳ ಮೇಲೆ ಬಿಡಿಸಿಕೊಂಡ ಚಿತ್ರ-ಚಿತ್ತಾರ ಮತ್ತು ಬರೆಯಿಸಿಕೊಂಡ ಅಕ್ಷರಗಳಿಗೆ ಹಣಚಿ ಎಂಬ ಹೆಸರಿದೆ'[೧೦೭] ಮರಾಠಿ ಭಾಷೆಯಲ್ಲಿ ಹಚ್ಚೆಯನ್ನು ಗೋಂದನ್ ಎಂದೂ ತೆಲುಗಿನಲ್ಲಿ ಮಚ್ಚಾ ಎಂದೂ ತುಳುವಿನಲ್ಲಿ ಕೈಕಾ ಪಾಡ್ಲಾ ಎಂದೂ ಕೊಂಕಣಿಯಲ್ಲಿ ಹಚ್ಚಿ ಬಟ್ಟಾ ಎಂದೂ ತೆಲುಗಿನಲ್ಲಿ ಗೋದನಾ ಎಂದೂ ಮಲೆಯಾಳಂ ಭಾಷೆಯಲ್ಲಿ ಪಚ್ಚ ಕುತ್ತುಕ ಎಂದೂ ಕರೆಯಲಾಗುತ್ತದೆ. ಧಾರವಾಡ ಜಿಲ್ಲೆಯಲ್ಲಿ ಇದನ್ನು ಹಚ್ಚೆ, ಹಂಚಿಬಟ್ಟು, ಹಚ್ಚಿ ಎಂಬುದಾಗಿ ಕರೆಯಲಾಗುತ್ತದೆ. ಸುಮಾರು ಕ್ರಿ.ಪೂ. ೪೫೦ ಕ್ಕಿಂತಲೂ ಮೊದಲಿನಿಂದಲೇ ಹಚ್ಚೆ ಕಲೆ ಬೆಳೆದು ಬಂದಿದೆ.

'ಆಂಗ್ಲ ಭಾಷೆಯಲ್ಲಿರುವ 'Tattoo' ಎಂಬ ಪದದ ಮೂಲವನ್ನು ಕುರಿತು ವಿದ್ವಾಂಸರು ಹೀಗೆ ಹೇಳಿದ್ದಾರೆ, The word Tatu or Tatoo means to mark or puncture the skin, is derived from the Tahitian word tatau, reduplicated from of the rootta to strike. It was used by captain cook in the account of his visit to Tahiti. ಹೀಗೆ ಕುಕ್ಕನು ಬಳಸಿದ ಪದವು ಮುಂದೆ ಪ್ರಪಂಚದಾದ್ಯಂತ ಬಳಕೆಗೆ ಬಂದಿತು. ಆಂಗ್ಲ ಭಾಷೆಯ ಟಾಟೂ ಪದಕ್ಕೆ ಪರ್ಯಾಯವಾಗಿ ಕನ್ನಡದಲ್ಲಿ ಹಚ್ಚೆ ಪದವು ಬಳಕೆಯಲ್ಲಿದೆ'[೧೦೮] ಹಚ್ಚೆಯನ್ನು ಇಂದು ಟ್ಯಾಟೂ ಎಂದು ಕರೆಯಲಾಗುತ್ತಿದೆ. ಒಂದು ಹವ್ಯಾಸವಾಗಿ ಬೆಳೆದುಕೊಂಡು ಬಂದಿದ್ದ ಈ ಹಚ್ಚೆ ಕಲೆ ದೊಡ್ಡ ದೊಡ್ಡ ನಗರಗಳಲ್ಲಿ ಇದು ಇಂದು ವೃತ್ತಿಯಾಗಿ ಮಾರ್ಪಟ್ಟಿದೆ. ಇದರಲ್ಲಿ ಶಾಶ್ವತ ಹಚ್ಚೆ ಮತ್ತು ತಾತ್ಕಾಲಿಕ ಹಚ್ಚೆ ಎಂಬ ಪ್ರಕಾರಗಳೂ ಕಂಡುಬರುತ್ತವೆ.

---

೧೦೫. ಲಂಬಾಣಿ ಸಂಸ್ಕೃತಿ : ಸಣ್ಣರಾಮ : ೧೯೯೯ : ಪು-೨೦೮

೧೦೬. A Kannada English Dictionary : Rev. F. Kittel : Pp-1622

೧೦೭. ಉತ್ತರ ಕರ್ನಾಟಕದ ಜನಪದ ಪದ್ಯ ಸಾಹಿತ್ಯ : ಕಲಬುರ್ಗಿ ಎಂ.ಎಂ : ಸಮಾಜ ಪುಸ್ತಕಾಲಯ, ಧಾರವಾಡ : ೧೯೭೮ : ಪು-೬೮

೧೦೮. ಲಂಬಾಣಿ ಸಂಸ್ಕೃತಿ : ಸಣ್ಣರಾಮ : ೧೯೯೯ : ಪು-೨೦೮-೨೦೯

ಸಿ.ವಿ. ಮೆಹಂದಳೆಯವರು, 'Ta meaning 'to strike' or 'knock'. Tahitians introduced pigment in the skin by tapping it with a fine pointed instrument made of bone… … Tatooing is the marking of the body with in delible colour designs. It is a very old and wide spread custom and tattooed individuals can be found at all levels of society'[೧೦೯] ಎಂದು ಹೇಳಿದ್ದಾರೆ. ಹಾಗೆಯೇ ಸ್ಟೇನಲ್ ಜೇಮ್ಸ್ ಜೋನ್ ಎನ್ನುವ ವಿದ್ವಾಂಸರು ಕೂಡ, 'Tattooing or decorating the body by puncturing the skin and rubbing in pigment, and sacrification or cicatrization in which the ornamentation is produced by cutting the skin and causing permanent scars or weals are widely spredead practices among primitive people'[೧೧೦] ಎಂದಿದ್ದಾರೆ. ಅಂದರೆ ದೇಹದ ಮೇಲೆ ಸೂಜಿಗಳಿಂದ ಚುಚ್ಚಿ ಈ ಹಚ್ಚೆಯನ್ನು ಬಿಡಿಸಲಾಗುತ್ತದೆ.

'ವಿದೇಶಿ ಪ್ರವಾಸಿಗನಾದ ನಿಕಲೊ ಕೊಂತಿ ತಾವರನೊ ಅವರ ಪ್ರವಾಸಿ ಬರೆಹಗಳಲ್ಲಿ ಕರ್ನಾಟಕದ ಹಚ್ಚೆಯ ಪ್ರಸ್ತಾಪ ಬರುತ್ತದೆ. ಕ್ರಿ.ಶ. ೧೬೪೧–೧೬೬೭ ರಲ್ಲಿ ಭೆಟ್ಟಿ ನೀಡಿದ ತಾವರನ್ನೊ 'ಹೆಂಗಸರು ಸೊಂಟದ ಮೇಲ್ಭಾಗವನ್ನು ಬಗೆಬಗೆಯ ಹೂಗಳಂತೆ ಹಚ್ಚೆ ಹೊಯ್ಸಿ ಅಲಂಕಾರ ಮಾಡಿಕೊಂಡಿರುತ್ತಾರೆ. ಆ ಹೂವಿನ ಹಚ್ಚೆಗೆ ಯಾವುದೋ ಬೇರಿನ ರಸದಿಂದ ವಿಧ ವಿಧವಾದ ಬಣ್ಣ ಹಾಕುತ್ತಾರೆ. ಆಗ ಅವರ ಚರ್ಮವು ಹೂವನ್ನು ನೇಯ್ದ ಬಟ್ಟೆಯಂತೆ ಕಾಣುತ್ತದೆ' ಎಂದಿದ್ದಾನೆ. ಕ್ರಿ.ಶ. ೧೪೪೪ ರಲ್ಲಿ ಭಾರತಕ್ಕೆ ಬಂದು ವಿಜಯನಗರಕ್ಕೆ ಭೆಟ್ಟಿ ನೀಡಿದ ನಿಕಲೊ ಕೊಂತಿ 'ಇಲ್ಲಿ ಹೆಂಗಸರು ಗಂಡಸರೆಂಬ ಭೇದವಿಲ್ಲದೆ ಹಚ್ಚೆ ಹಾಕಿಸಿಕೊಳ್ಳುತ್ತಾರೆ' ಎಂದು ಬರೆದಿದ್ದಾನೆ'[೧೧೧] ಅಂದರೆ ನಿಕಲೊ ಕೊಂತಿಯ ಅಭಿಪ್ರಾಯದಲ್ಲಿ ಹಚ್ಚೆ ಹಾಕಿಸಿಕೊಳ್ಳುವುದು ಭಾರತದಲ್ಲಿ ಸೌಂದರ್ಯವನ್ನು ಇಮ್ಮಡಿಗೊಳಿಸುವ ಒಂದು ಸೌಂದರ್ಯವರ್ಧಕ ಸಾಧನವಾಗಿದೆ ಎಂಬ ಅರ್ಥ ಇಲ್ಲಿ ಹೊಳೆಯುತ್ತದೆ.

'ಹಚ್ಚೆ ಹುಯ್ಯುವುದರಲ್ಲಿ ಬುಡಕಟ್ಟು ಜನಾಂಗದವರು ಪ್ರವೀಣರು. ಕೊರಮ ಬುಡಕಟ್ಟಿಗೆ ಸೇರಿದ ಕೊರವಂಜಿಯರು ಈ ಕಲೆಯಲ್ಲಿ ಪ್ರವೀಣರು. ಮುಂಗೈ, ತೋಳು, ಕೆನ್ನೆ, ಗಲ್ಲ, ಹಣೆಯ ಮೇಲೆ ಹಚ್ಚೆ ಬಿಡುವ ಕಲೆ ಇವರಿಗೆ ಪರಂಪರಾಗತವಾಗಿ ಬಂದಿದೆ. ಹೆಚ್ಚಾಗಿ ಹೆಂಗಸರು ಹಣೆಯ

೧೦೯. ಉಲ್ಲೇಖ : ಕರ್ನಾಟಕದ ಜನಪದ ಚಿತ್ರಕಲೆ : ಪಾಟೀಲ ಎಸ್.ಸಿ : ವೀರಶೈವ ಅಧ್ಯಯನ ಸಂಸ್ಥೆ, ಗದಗ : ೧೯೯೩

೧೧೦. ಉಲ್ಲೇಖ : ಕರ್ನಾಟಕದ ಜನಪದ ಚಿತ್ರಕಲೆ : ಪಾಟೀಲ ಎಸ್.ಸಿ : ವೀರಶೈವ ಅಧ್ಯಯನ ಸಂಸ್ಥೆ, ಗದಗ : ೧೯೯೩

೧೧೧. ಉಲ್ಲೇಖ : ಕರ್ನಾಟಕದ ಜನಪದ ಚಿತ್ರಕಲೆ : ಪಾಟೀಲ ಎಸ್.ಸಿ : ವೀರಶೈವ ಅಧ್ಯಯನ ಸಂಸ್ಥೆ, ಗದಗ : ೧೯೯೩

ಮಧ್ಯೆ, ಕೆನ್ನೆ ಮತ್ತು ಗಲ್ಲದ ಮೇಲೆ ಚುಕ್ಕೆಗಳನ್ನು ಹಾಕಿಸಿಕೊಳ್ಳುತ್ತಾರೆ. ಗಮಡಸರು ಮುಂಗೈ ಮತ್ತು ತೋಳುಗಳ ಮೇಲೆ ವಿವಿಧ ಚಿತ್ತಾರಗಳನ್ನು ಬಿಡಿಸಿಕೊಳ್ಳುತ್ತಾರೆ.

ಚರ್ಮದ ಮೇಲ್ಪದರದ ಮೇಲೆ ಸೂಜಿಯಿಂದ ಚುಚ್ಚಿಸಿಕೊಂಡು ಅದರ ಮೇಲೆ ಒಂದು ಬಗೆಯ ಸಸ್ಯದ ರಸವನ್ನು ಲೇಪಿಸುವುದು ಹಚ್ಚೆ. ಪಚ್ಚೆ ಎಂದರೆ ಹಸಿರು. ಪಚ್ಚೆ ಹುಯಿಸಿಕೊಳ್ಳುವುದು ಎಂಬುದು ಕಾಲಾಂತರದಲ್ಲಿ ಹಚ್ಚೆ ಹುಯಿಸಿಕೊಳ್ಳುವುದು ಎಂಬುದಾಗಿ ಬದಲಾವಣೆ ಹೊಂದಿದೆ. ಹಿಂದೆ ಹಸಿರು ಬಣ್ಣವನ್ನೇ ಹುಯಿಸಿಕೊಳ್ಳಲಾಗುತ್ತಿತ್ತು. ಅದಕ್ಕಾಗಿ ವಿಳ್ಯದ ರಸ, ಅಡಿಕೆ ರಸ, ಹಸಿರುಂಡೆ ಮಿಶ್ರಣಗಳನ್ನು ಬಳಸಲಾಗುತ್ತಿತ್ತು. ಕಾಡಿಗೆಯನ್ನು ಕೂಡಾ ಬಳಸಲಗುತ್ತಿತ್ತು.'[೧೧೨] ಎನ್ನುವ ಮಾತುಗಳನ್ನು ಗಮನಿಸಿದಾಗ ಹಚ್ಚೆಯನ್ನು ಹಾಕಿಸಿಕೊಳ್ಳುವ ಪ್ರಕ್ರಿಯೆ ಮತ್ತು ಅದಕ್ಕೆ ಬೇಕಾದ ಸೂಕ್ತ ಪರಿಕರಗಳನ್ನು ಇಲ್ಲಿ ತಿಳಿಸಿಕೊಡಲಾಗಿದೆ.

'ಭಾರತದಲ್ಲಿ ಹಚ್ಚೆ ಹಾಕುವ ಚಿತ್ರಕಲೆಯು ಬಹುಭಾಗದಲ್ಲಿ ಕಂಡುಬರುತ್ತದೆ. ಅದು ಬುಡಕಟ್ಟು ಸಮುದಾಯಗಳಲ್ಲಿ ಹೆಚ್ಚಾಗಿ ಇಂದಿಗೂ ಉಳಿದು ಬಂದಿದೆ. ... ... ಇಂತಹ ಕಲೆಯನ್ನು ಬಳ್ಳಾರಿ ಜಿಲ್ಲೆಯ ಕಿಳ್ಳೆಕ್ಯಾತ ಸಮುದಾಯದ ಹೆಣ್ಣುಮಕ್ಕಳು ಹಚ್ಚೆ ಹುಯ್ಯುವ ಕಲೆಯನ್ನು ರೂಢಿಗತಗೊಳಿಸಿಕೊಂಡಿದ್ದಾರೆ. ಇದು ಅವರಿಗೆ ಕುಲಕಸುಬಾಗಿದೆ. ಹಚ್ಚೆ ಹುಯ್ಯುವ ಕಲೆಗೆ ಆದಿವಾಸಿಗಳು ಕೊಟ್ಟಷ್ಟು ಮಹತ್ವ ಬೇರಾವುದಕ್ಕೂ ಕೊಟ್ಟಿಲ್ಲವೆಂದು ತೋರುತ್ತದೆ. ಹಚ್ಚೆ ಅವರ ಬಾಳಿನ ಸಂಗಾತಿ. ಮನುಷ್ಯ ಏನೇ ದುಡಿದರು, ಸಂಪಾದಿಸಿದರೂ ಕೊನೆಯಲ್ಲಿ ಅವನು ಏನು ತನ್ನ ಜೊತೆಯಲ್ಲಿ ಹುಯ್ಯುವುದಿಲ್ಲ. ಆದರೆ ಹಚ್ಚೆ ಚಿತ್ರಗಳು ತಮ್ಮ ಜೊತೆಯಲ್ಲಿಯೇ ಬರುತ್ತವೆ ಎಂಬ ನಂಬಿಕೆ ಇದೆ. ಕಿಳ್ಳೆಕ್ಯಾತ ಸಮುದಾಯದ ಮಹಿಳೆಯರು ಹಚ್ಚೆ ಒಯ್ಯಲು ಬೇಕಾದ ಸಲಕರಣೆಗಳನ್ನು ತವೇ ತಯಾರು ಮಾಡುತ್ತಾರೆ. ವಿವಿಧ ಜಾತಿಯ ಎಲೆಗಳಿಂದ ರಸವನ್ನು ತೆಗೆದು ಅದನ್ನು ಬಟ್ಟಿ ಇಳಿಸಿ ಕವಳೆ ಹಣ್ಣಿನ ಗಾತ್ರದ ಕರಿ ಬಣ್ಣದ ಚಿಕ್ಕ ಚಿಕ್ಕ ಕಾಡು ಹಣ್ಣುಗಳನ್ನು ಕುದಿಸಿ ಬಟ್ಟಿ ಇಳಿಸಿದ ರಸದಲ್ಲಿ ಸೇರಿಸಿ ಪಾಕ ಮಾಡಿಕೊಳ್ಳುತ್ತಾರೆ. ಇದಕ್ಕೆ ಹಚ್ಚೆ ರಸ ಎಂದು ಕರೆಯುತ್ತಾರೆ. ಇದನ್ನು ಅವರು ಗುಟ್ಟಾಗಿ ಇಟ್ಟಿರುತ್ತಾರೆ. ಯಾವ ಕಾರಣಕ್ಕೂ ಹಚ್ಚೆರಸ ತಯಾರಿಕಾ ವಿಧಾನವನ್ನು ಯಾರಿಗೂ ಹೇಳುವುದಿಲ್ಲ... ... ... ... ... ಬಳ್ಳಾರಿ ಜಿಲ್ಲೆಯಲ್ಲಿ ಹಚ್ಚೆ ಮಸಿ ತಯಾರಿಸುವ ಮತ್ತೊಂದು ವಿಧಾನವಿದ್ದು, ಇದಕ್ಕೆ ಹಚ್ಚೆಯ ಕಪ್ಪು ತಯಾರಿಸುವುದು ಎನ್ನುತ್ತಾರೆ. ಹಚ್ಚೆಯ ಕಪ್ಪು ಬಣ್ಣವನ್ನು ಸಿದ್ಧಗೊಳಿಸುವ ರೀತಿ ಹೀಗಿದೆ. ಹೊಸ ಗಡಿಗೆಯನ್ನು ತಂದು ಅದರ ಕಂಟ ಒಡೆದು ಗಡಿಗೆಯನ್ನು ಕಂಟರಹಿತಗೊಳಿಸುವರು. ನಂತರ

---

೧೧೨. ಜಾನಪದ ಮಿನದನ : ಅಚಾರ್ ಪಾಲ್ತಾಡಿ ರಾಮಕೃಷ್ಣ : ಸುಪ್ರಿಯಾ ಪ್ರಕಾಶನ, ಪುತ್ತೂರು : ೧೯೯೭ : ಪು-೭೭-೭೮

ಹಚ್ಚೆ ಸೊಪ್ಪು, ಒಣ ಅಂಚರಕಿ ಸೊಪ್ಪು, ಅರಿಷಿಣಗಳನ್ನು ಸಮನಾಗಿ ಕೂಡಿಸಿ, ಕುಟ್ಟಿ, ನೀರು ಬೆರೆಸಿ ರಸ ಮಾಡುತ್ತಾರೆ. ಈ ರಸವನ್ನು ಆ ಹೊಸ ಗಡಿಗೆಯ ಒಳ ಬದಿಗೆ ಲೇಪಿಸುತ್ತಾರೆ. ಇದಾದ ಮೇಲೆ ಅರ್ಧ ಕಿಲೋ ಒಳ್ಳೆ ಎಣ್ಣೆ, ಔಡಲ ಎಣ್ಣೆಯನ್ನು ಪಣತಿಯಲ್ಲಿ ಹಾಕಿ ಒಂಬತ್ತು ಬತ್ತಿಗಳು ಪಣತಿಯಲ್ಲಿ ಉರಿಯುವಂತೆ ಮಾಡಿ, ಅದನ್ನು ಆ ಹೊಸ ಗಡಿಗೆಯಲ್ಲಿ ಇಡುತ್ತಾರೆ. ಆ ಗಡಿಗೆಯ ಮೇಲೆ ಡಬ್ಬಿಯೊಂದನ್ನು ಮುಚ್ಚುತ್ತಾರೆ. ಸಮಾನಾಂತರದಲ್ಲಿ ಬತ್ತಿಗಳು ರಾತ್ರಿ ಇಡಿ ಉರಿಯುತ್ತವೆ. ಬೆಳಗ್ಗೆ ಮುಚ್ಚಳ ತೆಗೆದಾಗ ದೀಪದ ಕಪ್ಪು ಹಚ್ಚೆಯ ಸೊಪ್ಪಿನ ಒಣ, ಅಂಚರಕಿ ಸೊಪ್ಪಿನ, ಅರಿಷಿನ ಮಿಶ್ರಣದ ರಸದೊಂದಿಗೆ ಸರಿ ಬೆರಕೆಯಾಗಿರುತ್ತದೆ. ಈ ಕಪ್ಪನ್ನು ಸಣ್ಣ ಕುಡಿಕೆಯಲ್ಲಿ ತಮಗೆ ಬೇಕಾದಷ್ಟು ಸಂಗ್ರಹಿಸಿಕೊಂಡು ಹಚ್ಚೆ ಹುಯ್ಯಲು ಬಳಸುತ್ತಾರೆ.'[೧೧೩] ಅಂದರೆ ನೈಸರ್ಗಿಕ ಬಣ್ಣಗಳನ್ನು ಉಪಯೋಗಿಸಿ ಹಚ್ಚೆ ಹಾಕುವುದರಿಂದ ದೇಹಕ್ಕೆ ಯಾವುದೇ ತೊಂದರೆಯಾಗುವುದಿಲ್ಲ ಎಂದು ಇವರು ನಂಬುತ್ತಾರೆ.

ಬಳ್ಳಾರಿ ಜಿಲ್ಲೆಯಲ್ಲಿ ಹಚ್ಚೆ ಕಲೆಯ ಬಗ್ಗೆ ಹೇಳುವಾಗ ಇಲ್ಲಿ ಇಡೀ ಹಚ್ಚೆ ಕಲೆಯ ಒಂದು ಮುಖವನ್ನು ಕುರಿತಾಗಿ ಹೇಳಲಾಗಿದೆ. ಇಲ್ಲಿಯ ಹಚ್ಚೆ ಹಾಕುವ ವೃತ್ತಿ ಮಾಡುವವರು ಒಂದು ನಿರ್ದಿಷ್ಟ ಜನಾಂಗಕ್ಕೆ ಸೇರಿದವರು ಎಂಬ ಮಾತು ಗಮನೀಯ. ಅಷ್ಟೇ ಅಲ್ಲದೇ ಹಚ್ಚೆ ಹಾಕಲು ಯಾವ ರೀತಿಯ ತಯಾರಿಗಳು ಇರುತ್ತವೆ ಎಂಬ ಬಗ್ಗೆಯೂ ಸವಿವರವಾಗಿ ಹೇಳಲಾಗಿದೆ. ಇಲ್ಲಿ ಹೇಳಿರುವ ಹಚ್ಚೆ ಹಾಕುವ ಪರಿಕ್ರಮ ಎಲ್ಲ ಕಡೆಯೂ ಒಂದೇ ರೀತಿ ಇರುತ್ತದೆ ಎಂದು ಹೇಳಲಾಗುವುದಿಲ್ಲ. ಅದು ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿರುತ್ತದೆ. ಬಳಸುವ ವಸ್ತುಗಳು ಕೂಡ ಕೆಲವು ಸಲ ಬದಲಾಗುತ್ತವೆ. ಬೆಳಗಾವಿ ಭಾಗದಲ್ಲಿ ಒಂದು ರೀತಿಯ ಹಚ್ಚೆ ಕಲೆಯು ಕಂಡುಬರುತ್ತಿದ್ದರೆ, ಕರಾವಳಿ ಭಾಗದಲ್ಲಿ ಒಂದು ತೆರನಾದ ಹಚ್ಚೆ ಕಂಡುಬರುತ್ತದೆ. ಹಾಗೆಯೇ ಬಳ್ಳಾರಿಯ ಹಚ್ಚೆ ಕಲೆಯ ವಿವರ ಒಂದು ರೀತಿಯದ್ದಾಗಿದ್ದರೆ, ಧಾರವಾಡ ಜಿಲ್ಲೆಯ ಹಚ್ಚೆಯ ಪ್ರಕಾರ ಮತ್ತೊಂದು ತೆರನಾಗಿ ಕಂಡುಬರುತ್ತದೆ. ಈ ಧಾರವಾಡ ಜಿಲ್ಲೆಯ ಹಚ್ಚೆಯ ಬಗ್ಗೆ ಮುಂದೆ ಹೇಳಲಾಗುವುದು.

'ಹಚ್ಚೆ ಹೊಯ್ಯುವುದೂ ಜನಪದ ಚಿತ್ರಕಲೆಯಲ್ಲಿ ಗಮನಿಸಬಹುದಾದ ಸಂಗತಿ. ಗ್ರಾಮೀಣ ಬದುಕಿನಲ್ಲಿ ಹಚ್ಚೆ ಹೊಯ್ಯಿಸುವ ಪದ್ಧತಿ ಹಿಂದಿನಿಂದನಲೂ ರೂಢಿಯಲ್ಲಿದೆ. ಆಪ್ತರು ತಮಗೆ ಬೇಕಾದವರಿಗೆ ವಿಶ್ವಾಸ ಪ್ರೀತಿಯ ಸಂಕೇತವಾಗಿ ಹಚ್ಚೆಯನ್ನು ಹಾಕಿಸುವುದುಂಟು. ಕೆಲವೇ ಜನಾಂಗಗಳಲ್ಲಿ ಈ ಕಲೆ ಉಳಿದಿದೆ. ಸಾಮಾನ್ಯವಾಗಿ ಬುರುಡೆ ಬೆಸ್ತರು ಅಥವಾ ಕೊರಮಶೆಟ್ಟರ

೧೧೩. ಬಳ್ಳಾರಿ ಜಿಲ್ಲೆಯ ಚಿತ್ರಕಲೆ : ಬಸವರಾಜಪ್ಪ ಎಚ್.ಈ : ಕನ್ನಡ ವಿಶ್ವವಿದ್ಯಾಲಯ, ಹಂಪಿ : ೨೦೦೬ : ಪು-೩೨-೩೩

ವನಿತೆಯರು ಹಚ್ಚೆ ಹೊಯ್ಯುವ ಕಲೆಯಲ್ಲಿ ಹೆಸರು ಗಳಿಸಿದ ಜನಾಂಗ. ಗೇರು ಬೀಜದ ಮಸಿಯನ್ನು ಸೀಮೆ ಎಣ್ಣೆಯ ದೀಪದ ಕಾಡಿಗೆಯಲ್ಲಿ ಕಲಸಿ (ಹಸಿರು) ಚಿತ್ತಾರ ರಚಿಸಲು ಸಿದ್ಧ ಮಾಡಿಕೊಳ್ಳುವುದು ಒಂದು ರೀತಿ. ಉರಿಯುವ ಸೀಮೆ ಎಣ್ಣೆ ಬುಟ್ಟಿಯಿಂದ ಬರುವ ಮಸಿಯನ್ನು ಎರೆದು ಎದೆ ಹಾಲಿನಲ್ಲಿ ಕಲಸಿ ಹಚ್ಚೆಮಸಿ ಮಾಡಿಕೊಳ್ಳುವುದು ಮತ್ತೊಂದು ವಿಧ. ... ... ... ... ... ತಾಳೀಮರದ ತೆಳುಕಡ್ಡಿಯನ್ನು ಚಿತ್ರರಚನೆಗೆ ಬಳಸಲಾಗುತ್ತದೆ. ಯಾವ ಭಾಗಕ್ಕೆ ಚಿತ್ರ ತರಬೇಕೋ ಆ ಭಾಗದಲ್ಲಿ ಕಲ್ಪಿಸಿಕೊಂಡ ಚಿತ್ರವನ್ನು ತಾಳೆಕಡ್ಡಿಯನ್ನು ಮಸಿಗೆ ಅದ್ದಿ ಬಿಡಿಸಲಾಗುತ್ತದೆ. ಅನಂತರ ಜೋಳದಂಟಿನ ಸಿಪ್ಪೆಯಿಂದ ಸುತ್ತಿ ದಾರದಿಂದ ಬಿಗಿದ ಸೂಜಿಗಳನ್ನು ಮೂಸೆಯಿಂದ ಚಿತ್ರಿಸಿಕೊಂಡ ರೇಖೆಗಳ ಮೇಲೆ ಚುಚ್ಚುತ್ತಾ ಹೋಗುತ್ತಾರೆ. ... ... ... ... ಮೂರು-ನಾಲ್ಕು ದಿನಗಳಲ್ಲಿ ಹಚ್ಚೆ ಹೊಯ್ದ ಭಾಗ ಊದಿಕೊಂಡು ನಂತರ ಮಾದು ಹಸಿರು ವರ್ಣದ ಚಿತ್ತಾರ ಗೋಚರವಾಗುತ್ತದೆ.'[೧೧೪] ಎಂದು ತಿಪ್ಪೇಸ್ವಾಮಿಯವರು ಹೇಳುತ್ತಾರೆ. ಇದು ಕರಾವಳಿ ಭಾಗದ ಹಚ್ಚೆ ಕಲೆಯ ಬಗ್ಗೆ ಹೇಳಿದ ಮಾತಾಗಿದ್ದು ಬಳ್ಳಾರಿ ಹಚ್ಚೆ ಕಲೆಗಿಂತಲೂ ಒಂದಿಷ್ಟು ಭಿನ್ನವಾದ ರೀತಿ ಕಂಡುಬರುತ್ತದೆ. ಇಲ್ಲಿ ಹಚ್ಚೆ ಹಾಕುವವರು ಬುರುಡೆ ಬೆಸ್ತರು ಅಥವಾ ಕೊರಮಶೆಟ್ಟರ ಹೆಣ್ಣುಮಕ್ಕಳು ಎನ್ನುವುದನ್ನು ಗಮನಿಸಬೇಕು. ಇದು ವೃತ್ತಿಯೋ ಹವ್ಯಾಸವೋ ಎಂಬ ಗೊಂದಲ ಕೆಲವು ಕಡೆ ಕಾಡುತ್ತದೆ.

'ಕರ್ನಾಟಕದಲ್ಲಿ ಹಚ್ಚೆ ಹಾಕುವುದು ಕೆಲವು ಜನರ ಕುಲಕಸುಬಾಗಿದೆ. ಸಾಮಾನ್ಯವಾಗಿ ಕೆಳವರ್ಗದ ಜನರು ಈ ಕಸಬನ್ನು ಮಾಡಿಕೊಂಡು ಬಂದಿರುವುದನ್ನು ಕಾಣುತ್ತೇವೆ. ಹೆಚ್ಚಾಗಿ ಕೊರವಂಜಿಗರು, ಗೊಲ್ಲರು, ದೊಂಬರು, ಜಾತಗಾರರು, ವೇಷಗಾರರು, ಕೊರವರು, ಕಟಬರು, ಬೆಸ್ತರು, ಗುಂಡೆಬೆಸ್ತರು, ಕಿಳ್ಳೆಕ್ಯಾತರು, ಒಡ್ಡರು ಈ ಮೊದಲಾದ ಜನರು ಹಚ್ಚೆ ಹಾಕುವ ಕಸಬನ್ನು ಪರಂಪರೆಯಿಂದ ಮಾಡಿಕೊಂಡು ಬಂದಿರುತ್ತಾರೆ. ಸಾಮಾನ್ಯವಾಗಿ ಈ ಬುಡಕಟ್ಟಿನ ಜನರು ಅಲೆಮಾರಿಗಳಾಗಿದ್ದು, ಹೊಟ್ಟೆಪಾಡಿಗಾಗಿ ಊರೂರು ಸಂಚರಿಸಿ ಈ ಕಸಬನ್ನು ಮಾಡುತ್ತಾರೆ. ಆದ್ದರಿಂದ ಹಚ್ಚೆ ಕಲೆ ಈ ಜನರಿಗೆ ಒಂದು ರೀತಿಯಿಂದ ಜನಪದ ಕಲೆಯೂ ಹಾಗೂ ಕುಲಕಸಬೂ ಆಗಿದೆ'[೧೧೫] ಎನ್ನುವ ಮಾತುಗಳನ್ನು ಗಮನಿಸಿದಾಗ ಹಚ್ಚೆ ಹಾಕುವಿಕೆ ಆರಂಭದಲ್ಲಿ ಹವ್ಯಾಸವಾಗಿಯೇ ಬೆಳೆದುಕೊಂಡು ಬಂದಿದ್ದರೂ ಆನಂತರದಲ್ಲಿ ಅದು ವೃತ್ತಿಯ ಸ್ವರೂಪ ಪಡೆಯಿತು ಅಥವಾ ಕುಲಕಸುಬಾಗಿ ಮುಂದುವರಿಯಿತು ಎನ್ನಬಹುದು. ಆದರೆ ಇದನ್ನು ಕುಲಕಸುಬು ಎಂದು ಹೇಳಲು ಬರುವುದಿಲ್ಲ. ಹಚ್ಚೆ ಹಾಕುವುದನ್ನು ಕಲಿಸುವುದಕ್ಕಾಗಿಯೇ ಕೆಲವು

---

೧೧೪. ಜಾನಪದ ಆನ್ವಯಿಕತೆ : ಸಂ-ತಿಪ್ಪೇಸ್ವಾಮಿ ಜಿ.ಆರ್ - ಕೋಡಿರಾಂಪುರ ರಂಗಾರೆಡ್ಡಿ : ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು : ೨೦೦೩ : ಪು-೧೬೩

೧೧೫. ಜಾನಪದ ಮುನ್ನೋಟ : ಖಂಡೋಬಾ ಪಿ.ಕೆ : ಸಂಗೀತಾ ಪಬ್ಲಿಕೇಷನ್ಸ್, ಗುಲಬರ್ಗ : ೧೯೯೩ : ಪು-೧೩೧

ಕೇಂದ್ರಗಳು ಇಂದು ಕಂಡುಬರುತ್ತವೆ. ಇದಕ್ಕೆ ಮೂಲ ಕಾರಣ ಹಚ್ಚೆ ಎನ್ನುವುದು ಧಾರ್ಮಿಕ ಎಲ್ಲೆಯನ್ನು ಮೀರಿ ಒಂದು ಫ್ಯಾಶನ್ ಆಗಿ ಇಂದು ಪರಿವರ್ತನೆಯಾಗಿದೆ.

'ಅರಿಶಿನದ ಪುಡಿ, ಅಗಸೇ ಗಿಡದ ಎಲೆಗಳನ್ನು ಅರೆದು ಲೇಪ ಮಾಡಿ ಅದನ್ನು ತೆಳುವಾದ ಬಟ್ಟೆಯ ಮೇಲೆ ಹರಡಿ ಅನಂತರ ಅದನ್ನು ಬತ್ತಿಯಂತೆ ಸುತ್ತಿ, ಹರಳೆಣ್ಣೆ ದೀಪದ ಮೇಲೆ ಹಿಡಿದು ಬಟ್ಟೆಗೆ ಬೆಂಕಿ ಸೋಕಿಸುತ್ತಾರೆ. ಯಾವುದಾದರೂ ಪಾತ್ರೆಗೆ ದೀಪದ ಕಪ್ಪನ್ನು ಕೆರೆದು ತೆಗದುಕೊಂಡು ಎದೆಹಾಲು ಅಥವಾ ನೀರಿನಲ್ಲಿ ಬೆರಸುತ್ತಾರೆ. ಇದೇ ಹಚ್ಚೆ. ಅಗಸೆಯ ಸೊಪ್ಪು ಮಾತ್ರವಲ್ಲದೆ ಕುರುವೆಪ್ಪಿಲ, ಸರಿಸಾರಂಗನ್ನಿ ಮೊದಲಾದ ಎಲೆಗಳನ್ನು ಬಳಸುತ್ತಾರೆ. ಬರಗರಾನ ಸೊಪ್ಪು, ಹೊನ್ನಗೊನೆ, ಎದೆಹಾಲಿನ ಸೊಪ್ಪು, ಮರವರಿಕೆ ಸೊಪ್ಪು, ಮಣಿಯುವರೆ ಸೊಪ್ಪು, ತುಂಬೆ ಸೊಪ್ಪು, ತಿರುಗೋಣಿ ಸೊಪ್ಪು ಮೊದಲಾದುವೆಲ್ಲ ಹಚ್ಚೆಯ ಸೊಪ್ಪುಗಳೇ'[೧೧೬] ಇಲ್ಲಿ ಕರಾವಳಿ ಭಾಗದ ಹಚ್ಚೆಯನ್ನು ಹಾಕಲು ತಯಾರಿಸುವ ಪ್ರಕ್ರಿಯೆಗಳನ್ನು ಹೇಳಲಾಗಿದೆ. ಇದು ಎಲ್ಲ ಕಡೆಗಳಿಗಿಂತಲೂ ಒಂದಿಷ್ಟು ಭಿನ್ನ ಎನ್ನಬೇಕಾಗುತ್ತದೆ. ಉತ್ತರ ಕರ್ನಾಟಕದಲ್ಲಿ ಅಥವಾ ಧಾರವಾಡ ಜಿಲ್ಲೆಯಲ್ಲಿ ಈ ಹಚ್ಚೆ ಹಾಕುವಾಗ ತಯಾರಿಸುವ ಸಾಮಗ್ರಿಗಳು ಭಿನ್ನವಾಗಿ ಇರುತ್ತವೆ. ಅದು ಪ್ರದೇಶವಾರು ಸಸ್ಯಮೂಲ ಮತ್ತು ಹಚ್ಚೆ ಹಾಕುವವರ ಎಣಿಕೆಯನ್ನು ಅವಲಂಬಿಸಿರುತ್ತದೆ ಎನ್ನಲೇ ಬೇಕಾಗುತ್ತದೆ.

'ಹಚ್ಚೆಯಲ್ಲಿ ಮುತ್ತಿನ ಆರತಿ, ರಾಮದೇವರ ತೊಟ್ಟಿಲು, ಸೀತೆ ಸೊತ್ತು, ಅಕ್ಕತಂಗಿಯರ ಸಾಲು, ಜೋಗಿ ಜಡೆ, ತೇರು ಸೇವಂತಿಗೆ ಹೂ, ತಾವರೆ ಹೂ, ಗಿಂಡಿ, ಟಗರು ಮೊದಲಾದ ಆಕೃತಿಗಳ ಚಿತ್ತಾರಗಳನ್ನು ಕಾಣಬಹುದು. ಹೆಂಗಸರ ಎಡ ಮುಂಗೈನಲ್ಲಿ ಹೆಬ್ಬೆರಳ ಬುಡದಲ್ಲಿ ಮೂರು ಚುಕ್ಕೆ ಇದ್ದರೆ ಲಕ್ಷ್ಮಿ ಎಂದು ಭಾವಿಸುತ್ತಾರೆ. ಮುಖದಲ್ಲಿ, ಹಣೆಯಲ್ಲಿ ಟಗರು ಚಿಹ್ನೆ, ಕೆನ್ನೆ ಗಲ್ಲದಲ್ಲಿ ಒಂದೊಂದು ಚುಕ್ಕೆ ಇದ್ದರೆ ನೋಡಲು ಸೊಗಸು ಎಂಬ ಭಾವನೆ ಅವರದು. ಹಚ್ಚೆ ಹಾಕುವಾಗ ಇವರು ಬಳಸುವ ಸೂಜಿಗಳು ೨ ಇಂಚು ಉದ್ದ ಇರುತ್ತವೆ. ಸೂಜಿಗಳಲ್ಲಿ ನಾಲ್ಕು ಕಟ್ಟು, ಮೂರು ಕಟ್ಟು, ಎರಡು ಕಟ್ಟು ಎಂದು ಮೂರು ವಿಧ. ಸೂಜಿ ಮೊನೆಗಳನ್ನು ಸಮನಾಗಿ ಹಿಡಿದು ದಂಟಿನ ಶಿಬಿರವನ್ನು ಸುತ್ತಿ ದಾರದಿಂದ ಸುತ್ತಿ ಕಟ್ಟಿರುತ್ತಾರೆ'[೧೧೭] ಎಂದು ತಿಪ್ಪೇಸ್ವಾಮಿಯವರು ಹೇಳುತ್ತಾರೆ. ಸೂಜಿಗಳ ವಿಷಯದಲ್ಲಿ ಕೂಡ ಪ್ರದೇಶಕ್ಕೆ ತಕ್ಕಂತೆ ಅಥವಾ ವಯೋಮಾನಕ್ಕೆ ತಕ್ಕಂತೆ ಬದಲಾವಣೆಗಳಿರುತ್ತವೆ. ಕೆಲವು ಕಡೆ ಕಬ್ಬಿಣದ ಸೂಜಿಯನ್ನು

---

೧೧೬. ಬಂಡಾಯ ಜಾನಪದ : ಕೋಡಿರಾಂಪುರ ರಂಗಾರೆಡ್ಡಿ : ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು : ೧೯೯೫ : ಪು-೧೫೬-೧೫೭

೧೧೭. ಜಾನಪದ ಆನ್ವಯಿಕತೆ : ಸಂ-ತಿಪ್ಪೇಸ್ವಾಮಿ ಜಿ.ಆರ್- ಕೋಡಿರಾಂಪುರ ರಂಗಾರೆಡ್ಡಿ : ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು : ೨೦೦೩ : ಪು-೧೬೩-೧೬೪

ಬಳಸಿದರೆ ಇನ್ನೂ ಕೆಲವು ಕಡೆ ಮುಳ್ಳುಗಳನ್ನು ಬಳಸುವುದು ಕಂಡುಬರುತ್ತದೆ. ಆದರೆ ಅದರಲ್ಲಿ ಮೂಡುವ ಚಿತ್ರಕಲೆ ಅಮೋಘವಾದದ್ದು ಎಂಬುದು ಮಾತ್ರ ಎಲ್ಲ ಕಡೆ ಒಂದೇ ರೀತಿಯ ಭಾವನೆಗಳನ್ನು ಹುಟ್ಟು ಹಾಕುತ್ತದೆ.

'ಹಚ್ಚೆ ಧಾರ್ಮಿಕ ವಿಧಿವಿಧಾನಗಳ ಹಿನ್ನೆಲೆಯಲ್ಲಿ ಉಳಿದುಕೊಂಡು ಬಂದಿರುವ ಒಂದು ಪ್ರಾಚೀನ ಕಲೆ. ನಾಗರ ಹೆಡೆ, ಜೋಗಿ ಜಡೆ, ಹುಲಿಯುಗುರು, ತ್ರಿಪುಂಡ, ತ್ರಿಶೂಲ, ಲಿಂಗ, ಗರುಡ, ಚಕ್ರಾಂಕ ಮೊದಲಾದ ದೇವರ ಸಂಕೇತಗಳ ಹಚ್ಚೆ ಹುಯ್ಯಿಸಿಕೊಳ್ಳುವಲ್ಲಿ ಜನಪದರ ದೈವೀ ಆರಾದನಾ ಮನೋಭಾವವೇ ಪ್ರಕಟಗೊಳ್ಳುತ್ತದೆ. ಆಶ್ಚರ್ಯದ ಸಂಗತಿಯೆಂದರೆ ಉತ್ತರ ಕರ್ನಾಟಕದ ಲಂಬಾಣಿಗರಲ್ಲಿ ಹೆಣ್ಣು ಮೈ ನೆರೆಯುವ ಮುಂಚೆ ಹಚ್ಚೆ ಹಾಕಿಸಿಕೊಂಡರೆ 'ಧರ್ಮಮುದ್ರೆ'ಯಾದರೆ ಮೈನೆರೆತ ನಂತರದಲ್ಲಿ ಹಾಕಿಸಿಕೊಂಡರೆ 'ಪಾಪದ ಮುದ್ರೆ'ಯಾಗಿದೆ. ಮುಸ್ಲಿಂ ಮತೀಯರಲ್ಲಿ ಹಚ್ಚೆ ಪಾಪದ ಮುದ್ರೆಯಾಗಿರುವುದರಿಂದ ಅವರಲ್ಲಿ ಯಾರೂ ಹಚ್ಚೆ ಹಾಕಿಸಿಕೊಳ್ಳುವುದಿಲ್ಲ.'[೧೧೮] ಧಾರ್ಮಿಕ ಮೂಲವಾಗಿ ಹಚ್ಚೆ ಹಾಕಿಸಿಕೊಳ್ಳುವ ಪ್ರಕ್ರಿಯೆಯಲ್ಲಿ ಇದು ಸಹಜ ಕೂಡ. ಆದರೆ ಹಚ್ಚೆ 'ಹಚ್ಚೆ ಮೂಲತಃ ಸೌಂದರ್ಯದ ಪ್ರತೀಕವಾಗಿದೆ. ಅದು ಧಾರ್ಮಿಕ ಸಂಕೇತವೂ ವೈಯಕ್ತಿಕ ಲೈಂಗಿಕ ಕ್ರಿಯೆಗೆ ಕರೆಯೂ ಆಗಿದೆ. ಆದಿಮಾನವನಲ್ಲಿ ಹಚ್ಚೆ ದೈಹಿಕ ಆಕರ್ಷಣೆಯ ಜೊತೆಗೆ ಲೈಂಗಿಕ ಆಕರ್ಷಣೆಯ ದೃಷ್ಟಿಯಿಂದ ಬೆಳೆದು ಬಂದಿರುವ ಸಾಧ್ಯತೆಗಳಿವೆ. ಏಕೆಂದರೆ ಅನೇಕ ಬುಡಕಟ್ಟಿನವರಲ್ಲಿ ಹಚ್ಚೆ ಶೀಲ, ಚಾರಿತ್ರ್ಯ ಹಾಗೂ ಧರ್ಮರಕ್ಷಣೆಯ ಹಿನ್ನೆಲೆಯಲ್ಲಿ ಬೆಳೆದು ಬಂದಿರುವುದನ್ನು ಕಾಣುತ್ತೇವೆ'[೧೧೯] ಎನ್ನುವ ಮಾತುಗಳನ್ನು ಲಕ್ಷಿಸಿದಾಗ ಹಚ್ಚೆ ಕಲೆ ಬೆಳೆದು ಬಂದ ಗತಿಯನ್ನು ಗುರುತಿಸಬಹುದಾಗಿದೆ. ಈ ಹಚ್ಚೆಯಲ್ಲಿ ಸೂರ್ಯ, ಚಂದ್ರ, ಅರ್ಧಚಂದ್ರ, ನಕ್ಷತ್ರ, ನಾಮಗಳು, ಶಿಲುಬೆ, ಗಿಂಡಿ, ದೃಷ್ಟಿಬೊಟ್ಟು, ಕಮಲ, ಶಂಖ, ಗೋದಿಕಾಳು, ನವಣೆಕಾಳು, ನವಿಲು, ಮುಡಿ, ಹೆಜ್ಜೆ ಮೀನು, ಅಡ್ಡಗೆರೆಗಳು, ಆಭರಣದ ಚಿತ್ರಗಳು, ತೋಳಚಪ್ಪರ, ಮುತ್ತಿನ ಬೊಟ್ಟು, ಮುತ್ತಿನ ಮಲಕು, ತೊಂಡೆಚಪ್ಪರ, ಗೌರಿ ಗದ್ದಿಗೆ, ಸೀತೆಯ ಸೆರಗು, ಕುಬುಸದ ಹಚ್ಚೆ, ದುರ್ಗಿ, ಲಕ್ಷ್ಮಿ, ಕೃಷ್ಣ, ಗಣಪತಿ, ಈಶ್ವರ, ನಂದಿ, ಹನುಮ, ಶಿಲುಬೆ, ಸ್ವಸ್ತಿಕ, ಜೋಗಿ ಜಡೆ, ತಾವರೆ ಹೂವು, ಗಾಲಿ, ತೇರು, ರಥ, ಗೆಳೆಯ, ಗೆಳತಿಯರು, ಬಂಧು-ಬಳಗ, ವಿವಿಧ ಬಗೆಯ ಬಳ್ಳಿಗಳು, ನಂದಿಕೋಲು, ಚೇಳು, ಗಿಳಿ, ಪಾರಿಜಾತದ ಹೂವು, ಹಾವು, ನೋಣದ ಕಾಲು, ಪ್ರಿಯವಾದ ವ್ಯಕ್ತಿಗಳ ಹೆಸರು, ಗಿಳಿ, ಪದ್ಮ, ಯಾಲಕ್ಕಿ ಸಾಲು, ನಾಣ್ಯಗಳ ಸಾಲು, ನವಗ್ರಹಗಳು, ಏಳುಮಕ್ಕಳ ತಾಯಿ, ಅಡ್ಡಣಿಗೆ, ಕೂರಿಗೆ ದಂಡು, ರೇಲ್ವೆ ಗಾಡಿ,

---

೧೧೮. ಜಾನಪದ ಮುನ್ನೋಟ : ಖಂಡೋಬಾ ಪಿ.ಕೆ : ಸಂಗೀತಾ ಪಬ್ಲಿಕೇಷನ್ಸ್, ಗುಲಬರ್ಗ : ೧೯೯೩ : ಪು-೭೯
೧೧೯. ಜಾನಪದ ಮುನ್ನೋಟ : ಖಂಡೋಬಾ ಪಿ.ಕೆ : ಸಂಗೀತಾ ಪಬ್ಲಿಕೇಷನ್ಸ್, ಗುಲಬರ್ಗ : ೧೯೯೩ : ಪು-೧೩೦

ಶಿವನ ಗುಡಿ, ಬಿಲ್ವ ಪತ್ರೆ, ಬಾಳೆಯ ಗಿಡ, ಮುತ್ತಿನ ಆರತಿ, ಜೋಡು ಎತ್ತು, ಕಂಚಿ ತೊಟ್ಟಿಲು, ಹುಲಿ ಉಗುರು, ವಿವಿಧ ಬಗೆಯ ಆಯುಧಗಳು, ಬಾಸಿಂಗ, ಪಗಡಿ ಸಾಲು, ತುಳಸಿ ಕಟ್ಟೆ, ತೊಟ್ಟಿಲು, ಹೊನ್ನೆ ಮರ, ಅಧಿಕ ಚಿಹ್ನೆ, ಅಷ್ಟಕೊಳ, ಚಕಾರದಾನಿ, ಕಡ್ಲಿ ಬೇಳೆಯ ಚಿತ್ರ, ಕತ್ತರಿ ಚಿಹ್ನೆ, ರಾಮಾಯಣ-ಮಹಾಭಾರತ ಸನ್ನಿವೇಶಗಳ ಚಿತ್ರಗಳು ಮೊದಲಾದ ಚಿತ್ರಗಳನ್ನು ದೇಹದ ವಿವಿಧ ಭಾಗಗಳ ಮೇಲೆ ಹಾಕಿಕೊಳ್ಳಲಾಗುತ್ತದೆ.

ಧಾರವಾಡದ ರವಿವಾರ ಪೇಟೆಯಲ್ಲಿರುವ ಸಿಗ್ಗಾವಿ ಎಂಬವರ ಮನೆಯಲ್ಲಿ ಬ್ರಾಹ್ಮಣ ಹೆಂಗಸೊಬ್ಬರು ಬ್ರಾಹ್ಮಣರಿಗೆ ಹಚ್ಚೆ ಹಾಕುತ್ತಾಳೆ. 'ನಮ್ಮ ಜಾತಿಯಲ್ಲಿ ಮಡಿಹುಡಿ ಬಹಳ. ಹಚ್ಚೆ ಹಾಕುವವರು ಕೆಳವರ್ಗದವರು ಇರುವುದರಿಂದ ನಾವು ಹಚ್ಚೆ ಹಾಕಿಸಿಕೊಳ್ಳುವುದಿಲ್ಲ. ಸುಮ್ಮನೆ ಚಾಜಕ ಹಣೆಗೆ ಕೈಗೆ ಒಂದೆರಡು ಚುಕ್ಕಿ ಹಚ್ಚಿ ನಾನೇ ಹಾಕುತ್ತೇನೆ' ಎಂಬ ಅಭಿಪ್ರಾಯ ವ್ಯಕ್ತ ಮಾಡಿದರು[೧೨೦] ಎಂದು ಡಾ. ಎಸ್.ಸಿ. ಪಾಟೀಲರು ಹೇಳಿಕೊಳ್ಳುತ್ತಾರೆ. ಇಲ್ಲಿ ಮೇಲ್ಜಾತಿ ಮತ್ತು ಕೆಳಜಾತಿಯ ಮಡಿಮೈಲಿಗೆ ಹೆಚ್ಚು ಪ್ರಚಲಿತವಿದ್ದ ಸಂದರ್ಭಗಳಲ್ಲಿ ಈ ಮಾತು ಸಾಮಾನ್ಯವಾಗಿ ಕಂಡುಬರುವಂಥದ್ದೇ ಆಗಿದೆ.

'ಹುಬ್ಬಳ್ಳಿಯಲ್ಲಿ ಟಿ.ಎನ್. ವಾಜ್ ಅವರ ಹತ್ತಿರ ತಾವೇ ತಯಾರಿಸಿದ ಹಚ್ಚೆ ಉಪಕರಣವಿದೆ. ಪೆಟ್ಟಿಗೆ ವಾಯರಿನಿಂದ ಚಿಕ್ಕದಾದ ಮತ್ತೊಂದು ಪೆಟ್ಟಿಗೆಗೆ ವಾಯರ್ ಜೋಡಿಸಲಾಗಿದೆ. ಇದರಿಂದ ಹಚ್ಚೆ ಚುಚ್ಚುವ ಸೂಜಿಗೆ ಕರೆಮಟ್ ಬರುವಂತೆ ವ್ಯವಸ್ಥೆ ಮಾಡಲಾಗಿದೆ. ಆಗಾಗ ಮುಂದಿನ ಸಣ್ಣ ಸೂಜಿಯಿಂದ ಚಿಕ್ಕ ಬಾಟಲಿಯಲ್ಲಿ ಮೊದಲೇ ಸಂಗ್ರಹಿಸಿದ ಬಣ್ಣದಲ್ಲಿ ಸೂಜಿಯನ್ನು ಅದ್ದಿ ಚಿತ್ರ ಬಿಡಿಸಲಾಗುತ್ತದೆ. ಈ ಆಧುನಿಕ ವಿಧಾನದಿಂದ ಸೂಜಿ ಚರ್ಮದಲ್ಲಿ ಅಷ್ಟು ಆಳವಾಗಿ ಹೋಗುವುದಿಲ್ಲ. ರಕ್ತವೂ ಬಹಳ ಬರುವವುದಿಲ್ಲ. ಎಲ್ಲಕ್ಕಿಂತ ಮಿಗಿಲಾಗಿ ನೋವು ಬರುವುದಿಲ್ಲ. ಜನರಿಗೆ ಪ್ರಿಯವಾಗುವ ಹಚ್ಚೆಯ ಚಿತ್ರಗಳನ್ನು ಈತ ಹಾಕುತ್ತಾನೆ. ಇದಕ್ಕಾಗಿ ೫ ರೂಪಾಯಿಯಿಂದ ೧೫೦ ರೂಪಾಯಿಯವರೆಗೆ ಸಂಭಾವನೆ ಪಡೆಯುತ್ತಾನೆ. ಆದರೂ ಹಚ್ಚೆ ಹಾಕುವ ನಕ್ಷೆಗಳಿಗೆ ಬೇರೆ ಬೇರೆ ದರಗಳಿವೆ. ಈತನು ಪಾರಂಪರಿಕ ಚಿತ್ರಗಳೊಂದಿಗೆ ಡ್ರಾಗನ್ ಮಾದರಿಯ ಚಿತ್ರವಿನ್ಯಾಸ ಹಾಗೂ ಚಲನಚಿತ್ರ ನಟನಟಿಯರ, ಆಟಗಾರರ ಚಿತ್ರಗಳ ಹಚ್ಚೆ ಹಾಕುತ್ತಾನೆ'[೧೨೧]

---

೧೨೦. ಕರ್ನಾಟಕದ ಜನಪದ ಚಿತ್ರಕಲೆ : ಪಾಟೀಲ ಎಸ್.ಸಿ : ವೀರಶೈವ ಅಧ್ಯಯನ ಸಂಸ್ಥೆ, ಗದಗ : ೧೯೯೩ : ಪು-೧೧೦- ಅಡಿ ಟಿಪ್ಪಣಿ

೧೨೧. ಕರ್ನಾಟಕದ ಜನಪದ ಚಿತ್ರಕಲೆ : ಪಾಟೀಲ ಎಸ್.ಸಿ : ವೀರಶೈವ ಅಧ್ಯಯನ ಸಂಸ್ಥೆ, ಗದಗ : ೧೯೯೩ : ಪು-೯೭

ಇವೆಲ್ಲವುಗಳಿಂತ ಮಿಗಿಲಾಗಿ ಇಂದು ಹಚ್ಚೆ ಕಲೆ ಎನ್ನುವುದು ಒಂದು ಫ್ಯಾಶನ್ ಆಗಿದೆ ಎನ್ನುವುದನ್ನು ಈಗಾಗಲೇ ಹೇಳಿಯಾಗಿದೆ. 'ಹಳ್ಳಿಯಲ್ಲಿ ನಡೆಯುವ ಜಾತ್ರೆಯಲ್ಲಿ ಹೆಚ್ಚಿನ ಜನ ತಮ್ಮ ಮನೆದೇವರು ಅಥವಾ ತಂದೆ ತಾಯಿ ಹೆಸರಿನ ಹಚ್ಚೆಯನ್ನು ಕೈ ಮೇಲೆ ಹಾಕಿಸಿಕೊಳ್ಳುತ್ತಿದ್ದರು. ಇನ್ನುಳಿದಂತೆ ವಿವಾಹಿತ ಮಹಿಳೆ ಗಂಡನ ಹೆಸರು ಹಾಕಿಸಿಕೊಂಡರೆ, ಗಂಡ ಹೆಂಡತಿಯ ಹೆಸಸರನ್ನು ಹಾಕಿಸಿಕೊಳ್ಳುವ ಪರಿಪಾಠವಿತ್ತು. ಕೆಲವು ಗ್ರಾಮೀಣ ಪ್ರದೇಶಗಳಲ್ಲಿ ಇಂದಿಗೂ ಈ ರೂಢಿ ಚಾಲ್ತಿಯಲ್ಲಿದೆ. ಆದರೆ ಮಹಾನಗರಗಳಲ್ಲಿ ಹಚ್ಚೆ ಬಗೆಗಿನ ಪರಿಕಲ್ಪನೆ ಸಂಪೂರ್ಣವಾಗಿ ಭಿನ್ನ. ಯುವಜನತೆಯ ಬದಲಾದ ಮನಸ್ಥಿತಿ ಒಂದು ಕಾರಣವಾದರೆ, ಎಲ್ಲವನ್ನೂ ವಾಣೀಜ್ಯೀಕರಣಗೊಳಿಸುವ ಹುನ್ನಾರವೂ ಇದರ ಹಿಂದೆ ಅಡಗಿದೆ ಎಂಬುದರಲ್ಲಿ ಎರಡು ಮಾತಿಲ್ಲ. ಮಹಾನಗರಗಳಲ್ಲಂತೂ ಹಚ್ಚೆ, ಉದ್ಯಮದ ಸ್ವರೂಪ ಪಡೆದುಕೊಂಡಿದೆ. ಉದಾಹರಣೆಗೆ ಬೆಂಗಳೂರಿನ ಪ್ರಮುಖ ಮಾಲ್‌ಗಳಲ್ಲಿ 'ಟ್ಯಾಟೂ' ಸ್ಟೋರ್‌ಗಳು ತಲೆ ಎತ್ತಿರುವುದು. ಹಚ್ಚೆ ಬೆಲೆ ೨೦೦ ರೂಪಾಯಿಯಿಂದ ೧೦ ಸಾವಿರ ರೂಪಾಯಿಯವರೆಗೂ ಇದೆ. ಹಿಂದೆ ಕೇವಲ ಕಪ್ಪು ಬಣ್ಣದ ಹಚ್ಚೆ ಮಾತ್ರ ಹಾಕಲಾಗುತ್ತಿತ್ತು. ಆದರೆ ಇಮದು ಹಲವು ಬಣ್ಣಗಳಲ್ಲಿ ಹಚ್ಚೆ ಹಾಕಿಸಿಕೊಳ್ಳಬಹುದು'[೧೨೨] ಎಂದು ಶಶಿಕಾಂತ ಎಸ್. ಶೆಂಬಳ್ಳಿ ಅಭಿಪ್ರಾಯ ಪಡುತ್ತಾರೆ.

ಇಂದಿಗೂ ಈ ಹಚ್ಚೆ ಕಲೆ ತನ್ನ ಛಾಪನ್ನು ಉಳಿಸಿಕೊಂಡು ಬಂದಿದೆ. ಕೆಲವು ಬದಲಾವಣೆಗಳೂ ಆಗಿವೆ. 'ಹಚ್ಚೆಯಲ್ಲಿ ಬದಲಾವಣೆಯಾಗಿರುವಂತೆ ಹಚ್ಚೆ ಹಾಕಿಸಿಕೊಳ್ಳುವವರ ಆಸಕ್ತಿಯೂ ಬದಲಾಗಿದೆ. ಹಚ್ಚೆ ಇಂದು ಹಣೆ, ಗಲ್ಲಕ್ಕೆ ಮಾತ್ರ ಸೀಮಿತವಾಗಿಲ್ಲ. ತೋಳು, ಬೆನ್ನು ಮತ್ತು ಕತ್ತಿನ ಹಿಂಭಾಗ, ಎದೆ ಹಾಗೂ ನಾಭಿ ಸುತ್ತಲೂ ಹಚ್ಚೆ ಹಾಕಿಸಿಕೊಂಡಿರುವುದನ್ನು ಕಾಣುತ್ತೇವೆ. ಹಚ್ಚೆ ಹುಚ್ಚು ಪಡ್ಡೆ ಹುಡುಗರಿಗೆ ಮಾತ್ರವಲ್ಲ ಸಿನಿಮಾ ನಟ-ನಟಿಯರು ಹಾಗೂ ಇನ್ನಿತರ ಕ್ರೀಡಾಪಟುಗಳಿಗೂ ಇದೆ. ಕತ್ತು ಹಾಗೂ ಬೆನ್ನಿನ ಹಿಂಭಾಗದ ಅರ್ಧ ಭಾಗ ಕೂಡ ಹಚ್ಚೆ ಹಾಕಿಸಿಕೊಳ್ಳಲಾಗುತ್ತದೆ. (ಅಷ್ಟೇ) ಯಾಕೆ ದೇಹವಿಡೀ ಹಚ್ಚೆಯಿಂದಲೇ ಆವೃತವಾಗಿರುವ ವ್ಯಕ್ತಿಗಳೂ ಕಾಣಸಿಗುತ್ತಾರೆ. ಯುವಜನತೆಯಲ್ಲಿರುವ ಹಚ್ಚೆ ಬಗೆಗಿನ ಉತ್ಸಾಹವು ಅದನ್ನು ಹಾಕಿಸಿಕೊಳ್ಳುವಾಗಿನ ನೋವನ್ನು ಮರೆಮಾಚುತ್ತದೆ'[೧೨೩] ಎಂದು ಶಶಿಕಾಂತ ಶೆಂಬಳ್ಳಿ ಅವರು ಹೇಳುತ್ತಾರೆ.

---

೧೨೨. ಪ್ರಜಾವಾಣಿ : ವಾಣಿಜ್ಯ-ಯುವಜನ ವಿಭಾಗ : ೧೪-೦೯-೨೦೧೧

೧೨೩. ಪ್ರಜಾವಾಣಿ : ವಾಣಿಜ್ಯ-ಯುವಜನ ವಿಭಾಗ : ೧೪-೦೯-೨೦೧೧

ಅಂದರೆ ಇಂದಿಗೂ ಹಚ್ಚೆಯ ವ್ಯಾಮೋಹ ಕಡಿಮೆಯಾಗಿಲ್ಲ. ಅದು ಹೆಚ್ಚಾಗುತ್ತಲೇ ಸಾಗಿದೆ ಎನ್ನುವ ಅರ್ಥ ಇಲ್ಲಿ ಕಾಣಿಸಿಕೊಳ್ಳುತ್ತದೆ. ಹಚ್ಚೆಯ ಧಾರ್ಮಿಕ ಕಾರಣಗಳು ಮಾಯವಾಗಿ ಇಂದು ಅದು ಒಂದು ಫ್ಯಾಶನ್ ಆಗಿ ಮಾರ್ಪಾಡಾಗಿದೆ. ಈ ಹಚ್ಚೆ ಹವ್ಯಾಸವಾಗಿ ಬೆಳೆದು ಬಂದಿದ್ದರೂ ಇಂದು ಅದು ವೃತ್ತಿಯ ಸ್ವರೂಪ ಪಡೆದುಕೊಂಡಿದೆ. ಹಚ್ಚೆ ಕಲಿಕೆಗೆ ಇಂದು ಅನೇಕ ನಗರಗಳಲ್ಲಿ ತರಬೇತಿ ಕೇಂದ್ರಗಳನ್ನು ನಡೆಸಲಾಗುತ್ತಿದೆ. ಅಲ್ಲಿ ಕಲಿತವರು ಹಚ್ಚೆ ಹಾಕುವ ಮೂಲಕ ಹೆಚ್ಚಿನ ಲಾಭವನ್ನು ಗಳಿಸುತ್ತಿದ್ದಾರೆ. ಇದರಲ್ಲಿ ಸಾಂಪ್ರದಾಯಿಕ ಹಚ್ಚೆಯೂ ಸೇರಿದಂತೆ ತಾತ್ಕಾಲಿಕ ಹಚ್ಚೆಗಳನ್ನೂ ಇತ್ತೀಚೆಗೆ ಅಳವಡಿಸಿಕೊಳ್ಳಲಾಗುತ್ತಿದೆ.

ಈ ರೀತಿಯಲ್ಲಿ ಕಂಡುಬರುವ ಹವ್ಯಾಸಿ ಜನಪದ ಚಿತ್ರಕಲೆಯ ಉಪಕ್ರಮಗಳು ಇಂದು ವೃತ್ತಿಯ ಸ್ವರೂಪವನ್ನೂ ಪಡೆದುಕೊಂಡಿವೆ. ಯಾಕೆಂದರೆ ಗ್ರಾಮೀಣ ಸಂಸ್ಕೃತಿ ಇಂದು ಹೇಳ ಹೆಸರಿಲ್ಲದಂತೆ ಹಾಳಾಗುತ್ತಿದೆ. ಗ್ರಾಮಗಳೂ ಆಧುನಿಕತೆಯ ಸ್ಪರ್ಷಕ್ಕೆ ಸಿಲುಕಿಕೊಂಡಿವೆ. ಇಲ್ಲಿ ಏನೇ ಮಾಡಿದರೂ ಲಾಭದ ನಿರೀಕ್ಷೆ ಸಹಜವಾಗಿರುತ್ತದೆ. ಹಾಗಾಗಿ ಇಲ್ಲಿ ಹವ್ಯಾಸಿ ಎಂದು ಹೆಸರು ನೀಡಿದ್ದು ಮೂಲವನ್ನು ಆಧರಿಸಿ ಎಂಬುದನ್ನು ತಿಳಿದುಕೊಳ್ಳಬೇಕು.

## ೩.೨.೩. ಇತರೆ ಜನಪದ ಚಿತ್ರಕಲೆ :

ಈ ಭಾಗದಲ್ಲಿ ಭಿತ್ತಿಚಿತ್ರಗಳು, ಗಾಜು, ಕಾಗದ, ದಂತ, ಕಲ್ಲು ಮೊದಲಾದವುಗಳ ಮೇಲೆ ಬಿಡಿಸಲಾಗುವ ಜನಪದ ಚಿತ್ರಗಳನ್ನು ಗುರುತಿಸಲಾಗಿದೆ. ಜೊತೆಗೆ ಹಲವಾರು ಬಗೆಯ ಜಾನಪದ ಚಿತ್ರಕಲೆಯನ್ನೂ ಇಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ. 'ಜಾನಪದ ಚಿತ್ರಕಲೆ ಹಿಂದಿನ ಕಾಲದಲ್ಲಿ ಭಿತ್ತಿ ಮತ್ತು ಫಲಕಗಳ ಮೇಲೆ ಅಲ್ಲದೆ ಓಲೆಗರಿ ಹಾಗೂ 'ದುಕುಳಿ' (ಬಟ್ಟೆ)ದ ಮೇಲೆ ರಚಿಸಲಾಗುತ್ತಿತ್ತು. ಓಲೆಗರಿ ಇಲ್ಲವೆ ಕಾಗದದ ಮೇಲೆ ಇಲ್ಲವೆ ಬಟ್ಟೆಯ ಮೇಲೆ ಇಲ್ಲವೆ ಗಾಜಿನ ಮೇಲೆ ಜಲವರ್ಣ ಅಥವಾ ತೈಲವರ್ಣಗಳಲ್ಲಿ ರಾಜಮಹಾರಾಜರ ರೂಪಚಿತ್ರಗಳನ್ನು ದೇವದೇವತೆಯರ ಹಾಗೂ ಅನೇಕ ಪೌರಾಣಿಕ ಸನ್ನಿವೇಶಗಳ ಸಂಯೋಜನ ಚಿತ್ರಗಳನ್ನು ರಚಿಸುವುದು ವಿಶೇಷವಾಗಿತ್ತು. ಕೃತಿಗಳು ಪೂಜಾ ಚಿತ್ರಗಳಾದುದರಿಂದ ಗ್ರಾಮೀಣ ಚಿತ್ರಕಾರರ ಹೆಸರು ಇವುಗಳಲ್ಲಿ ಸಾಮಾನ್ಯವಾಗಿ ಕಂಡುಬರುವುದಿಲ್ಲ'[೧೨೪] ಎಂಬುದು ತಿಪ್ಪೇಸ್ವಾಮಿಯವರ ಅಭಿಪ್ರಾಯ. ಅಂದರೆ ಚಿತ್ರ ರಚಿಸಿದವರು ಯಾರು ಎಂಬ ಬಗ್ಗೆ ಇಲ್ಲಿ ಯಾವುದೇ ಮಾಹಿತಿ ಇರುವುದಿಲ್ಲ. ವಿಶೇಷವಾಗಿ ಪೌರಾಣಿಕ ಚಿತ್ರಗಳೇ ಇಲ್ಲಿ ಬಹುಮುಖ್ಯ ಪಾತ್ರವಹಿಸುತ್ತಿದ್ದವು ಎಂದು

---

೧೨೪. ಜಾನಪದ ಆನ್ವಯಿಕತೆ : ಸಂ–ತಿಪ್ಪೇಸ್ವಾಮಿ ಜಿ.ಆರ್ – ಕೋಡಿರಾಂಪುರ ರಂಗಾರೆಡ್ಡಿ : ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು : ೨೦೦೩ : ಪು–೧೭೦

ತಪ್ಪೇಸ್ವಾಮಿಯವರು ಹೇಳಿದರೂ ಕೂಡ ಅಲ್ಲಲ್ಲಿ ಕೆಲವು ಕಡೆ ಜಾನಪದ ಶೈಲಿಯ ಕಿರುಚಿತ್ರಗಳೂ ಅವುಗಳಲ್ಲಿ ಸ್ಥಾನ ಪಡೆದಿರುವುದನ್ನು ಗುರುತಿಸಲು ಸಾಧ್ಯವಿದೆ.

**ಭಿತ್ತಿ ಚಿತ್ರಗಳು :** ಮನುಷ್ಯ ಬದುಕನ್ನು ಕಟ್ಟಿಕೊಂಡು ಬದುಕತೊಡಗಿದ ದಿನಗಳಿಂದಲೂ ಭಿತ್ತಿ ಚಿತ್ರಗಳು ಜಗತ್ತಿನಾದ್ಯಂತ ಕಂಡುಬಂದಿವೆ. ಸುಮಾರು ಕ್ರಿ.ಪೂ ೨೫೦೦ ರಲ್ಲಿದ್ದ ಬುಡಕಟ್ಟು ಜನಾಂಗದವರು ತಮ್ಮ ಸಂಸ್ಕೃತಿ, ಸಂಪ್ರದಾಯ, ಭಾವನೆ, ನಂಬಿಕೆ ಮೊದಲಾದವುಗಳನ್ನು ಜೀವಂತವಾಗಿಡಲು ತಮ್ಮ ವಾಸಸ್ಥಾನದ ಗೋಡೆಗಳ ಒಳಗೂ ಹೊರಗೂ ಚಿತ್ರಗಳನ್ನು ಬಿಡಿಸಿಕೊಳ್ಳುತ್ತಿದ್ದರು ಎಂಬ ಮಾತು ಕೇಳಿದ್ದೇವೆ. ಆದರೆ ಅದಕ್ಕೂ ಮೊದಲೇ ಈ ಭಿತ್ತಿ ಚಿತ್ರಗಳು ಕಾಣಿಸಿಕೊಳ್ಳುತ್ತಿದ್ದು, ಇದನ್ನು ಸಂಪರ್ಕ ಮಾಧ್ಯಮವನ್ನಾಗಿ ಹಿಂದಿನವರು ಬಳಸುತ್ತಿದ್ದರು. ಈ ಕಲೆಯನ್ನು ವರ್ಲಿ ಕಲೆ ಎಂದೂ ಕೂಡ ಕರೆಯಲಾಗುತ್ತದೆ. ಯಾಕೆಂದರೆ ಮಹಾರಾಷ್ಟ್ರದ ವಾರ್ಲಾ ಪ್ರದೇಶದಲ್ಲಿ ಬುಡಕಟ್ಟು ಜನಾಂಗಗಳಲ್ಲಿ ಇದು ಕಂಡು  ಬಂದಿರುವುದರಿಂದ ಇದನ್ನು ವಾರ್ಲಿ ಕಲೆ ಎನ್ನಲಾಗುತ್ತದೆ. ಇದು ಸಹಜವಾಗಿ ಮೂಡಿ ಬರುವ ಒಂದು ರೀತಿಯ ರೇಖಾಚಿತ್ರದ ಮಾದರಿಯಲ್ಲಿ ಇರುತ್ತಿತ್ತು. ಜಗತ್ತಿನ ಪ್ರಾಚೀನ ಪರಂಪರೆಗಳ ಮೂಲದಲ್ಲಿಯೂ ಈ ಕಲೆ ಕಾಣಿಸಿಕೊಳ್ಳುತ್ತದೆ. ಹಾಗೆಯೇ ಭಾರತದಲ್ಲಿಯೂ ಈ ಕಲೆ ತುಂಬ ಪ್ರಾಚೀನವಾದ ಇತಿಹಾಸವನ್ನು ಹೊಂದಿದೆ.

ಕರ್ನಾಟಕದ ಜನಪದ ಚಿತ್ರಕಲೆಯಲ್ಲಿ ಪ್ರಮುಖವಾಗಿ ಗುರುತಿಸಲ್ಪಡುವ ಭಿತ್ತಿ ಚಿತ್ರಗಳು ಮೊದಲೆಲ್ಲ ಮನೆ, ಮಠಗಳನ್ನು ಅಂದಗೊಳಿಸುತ್ತಿದ್ದವು. ಆಧುನಿಕ ಯುಗದ ಇಂದಿನ ದಿನಮಾನದಲ್ಲಿ ಇವುಗಳ ಬಳಕೆ ಕಡಿಮೆಯಾಗಿದೆ. ಎಲ್ಲೋ ಹಬ್ಬಗಳು, ಉತ್ಸವಗಳು ನಡೆದಾಗ ರಸ್ತೆ ಬದಿಯ ಗೋಡೆಗಳ ಮೇಲೆ ಇವುಗಳನ್ನು ಈಗ ಬಿಡಿಸಲಾಗುತ್ತದೆ. ಹಾಗೆ ನೋಡಬೇಕಾದರೆ ಭಿತ್ತಿ ಚಿತ್ರಗಳು ತುಂಬ ಪ್ರಾಚೀನ ಇತಿಹಾಸವಿದೆ. ಧಾರವಾಡ ಜಿಲ್ಲೆಯಲ್ಲಿ ಕೂಡ ಇದು ಬಹು ಹಿಂದಿನಿಂದಲೂ ಜನಪ್ರಿಯತೆಯನ್ನು ಪಡೆದುಕೊಂಡಿತ್ತು.

‘೧೮೭೫ ರಲ್ಲಿ ಕಟ್ಟಲ್ಪಟ್ಟ ನರಗುಂದದ ಶ್ರೀ ಗುಂಡಪ್ಪ ಹಸಬಿಯವರ ಮನೆ ಎರಡಂತಸ್ತಿನದು. ಎರಡನೆಯ ಅಂತಸ್ತಿನ ಮಹಡಿ ಬಿದ್ದಿದ್ದು, ಮೊದಲನೆಯ ಮಹಡಿಯ ಹೊರಭಾಗದ ಚಾವಡಿಯಲ್ಲಿ ಕಟ್ಟಿಗೆಯ ಹಲಗೆಗಳ ಮುಚ್ಚಿಗೆಯಲ್ಲಿ ಮಾತ್ರ ಕೆಲವು ಭಿತ್ತಿ ಚಿತ್ರಗಳು ಉಳಿದುಕೊಂಡಿವೆ. ಬಿಸಿಲಿಗೆ ತೆರೆದುಕೊಂಡಿರುವುದರಿಂದ, ಮುಚ್ಚಿಗೆಯ ಹಲಗೆಗಳಲ್ಲಿ ಕೆಲವು ಮುರಿದು ಕುಸಿದಿರುವುದರಿಂದ ಬಣ್ಣ ಉದುರಿ ಬಹುಪಾಲು ಚಿತ್ರಗಳು ಹಾಳಾಗಿರುತ್ತವೆ.’[೧೨೫] ಇಲ್ಲಿ

೧೨೫. ಕರ್ನಾಟಕದ ಜನಪದ ಚಿತ್ರಕಲೆ : ಪಾಟೀಲ ಎಸ್.ಸಿ : ವೀರಶೈವ ಅಧ್ಯಯನ ಸಂಸ್ಥೆ, ಗದಗ : ೧೯೯೩ : ಪು–೫೦

ರಾಮಾಯಣದ ಪ್ರಸಂಗಗಳು, ಕೃಷ್ಣನ ರಾಸಲೀಲೆಗಳು, ಪೇಶ್ವೆ ಕಾಲದ ಕುದುರೆ ಸವಾರರು, ಮನುಷ್ಯ ಶರೀರ ಪಕ್ಷಿಯ ಮುಖ, ಎಂಟು ಕೈ ಹೊಂದಿರುವ ಗಂಡಭೇರುಂಡ ಪಕ್ಷಿ ಮತ್ತು ಇನ್ನಿತರ ವಿಚಿತ್ರ ಎನ್ನಿಸುವ ಕಾಲ್ಪನಿಕ ಚಿತ್ರಗಳು ಕಂಡುಬರುತ್ತವೆ.

'...ನರಗುಂದದ ಚಿತ್ರಗಳು ಮೈಸೂರಿನ ಸಾಂಪ್ರದಾಯಿಕ ಭಿತ್ತಿಚಿತ್ರಗಳನ್ನು ಹೋಲುತ್ತವೆ. ನರಗುಂದದ ವಾಡೆ ರಾಮದುರ್ಗದ ಭಾವೆ ಸಂಸ್ಥಾನದ ಆಡಳಿತಕ್ಕೆ ಒಳಪಟ್ಟಿರುವ ಒಂದು ಸುಂದರ ಭವ್ಯ ಕಟ್ಟಡ. ಇದರಲ್ಲಿ ಸುಂದರ ಕಟ್ಟಿಗೆಯ ಕಲೆ ; ಚಿತ್ತಾರಗಳಿವೆ. ಸಧ್ಯ ಇದು ನರಗುಂದದ ನಗರ ಸಭೆಯ ಕಾರ್ಯಾಲಯವಾಗಿದೆ.'[೧೨೬] ಇಲ್ಲಿರುವ ಮೂರು ಗೋಡೆಗಳ ಮೇಲೆ ರಾಮಾಯಣ, ರಾಜ-ಮಹಾರಾಜರ ಪರಿವಾರ, ಋಷಿಮುನಿಗಳ, ಶಿವ-ಪಾರ್ವತಿಯರ, ವಿಷ್ಣು, ಕೃಷ್ಣನ ರಾಸಲೀಲೆ, ಕೃಷ್ಣನ ಮೆರವಣಿಗೆ, ರಾಕ್ಷಸರ ಠೇಂಕಾರ, ಭೋಗ ವಿಲಾಸದ ಚಿತ್ರಗಳು ಕಂಡುಬರುತ್ತವೆ.

'ಪ್ರಾಯಶಃ ಹದಿನೇಳನೆಯ ಶತಮಾನದ ಅವಧಿಯಲ್ಲಿ ಶ್ರೀಮಂತ ವರ್ಗದ ಜನರು ವಾಸ್ತುಶಿಲ್ಪಕಲೆಯನ್ನು (ಮನೆಯ ಕಟ್ಟಡಗಳನ್ನು) ಚಿತ್ರಕಲಾ ಕೋಣೆಯೊಂದಿಗೆ ನಿರ್ಮಿಸುತ್ತಿದ್ದರು. ಆ ಕಲಾ ಕೋಣೆಯಲ್ಲಿ ದೊಡ್ಡವರು, ಮಧ್ಯಮರು, ಚಿಕ್ಕಪುಟ್ಟ ಪುಟಾಣಿಗಳು ನೋಡಿ ಆನಂದಿಸುವ ಕಲಾಕೃತಿಗಳೂ ಅಲ್ಲಿರುತ್ತವೆ. ಈ ನರಗುಂದದ ಚಿತ್ರಕೃತಿಗಳು ಜಾನಪದ ಶೈಲಿ ಎಂದು ಹೇಳಲಿಕ್ಕಾಗದು. ಶಿಷ್ಟವೆಂದೂ ನಿಖರವಾಗಿ ಹೇಳಲಿಕ್ಕಾಗದು. ಇವು ಜಾನಪದ ಹಾಗೂ ಶಿಷ್ಟದ ಮಧ್ಯದ ಕೊಂಡಿ ಎಂದು ಹೇಳಬಹುದು. ಇವುಗಳಲ್ಲಿ ಬಳಸಿದ ರೇಖಾವಿನ್ಯಾಸ, ರೇಖಾ ಸೂಕ್ಷ್ಮತೆ ನೋಡಿದರೆ ಗ್ರಂಥಗಳಲ್ಲಿಯ ಕಿರುರೂಪಿ ಚಿತ್ರಗಳನ್ನು ಮೀರಿಸುತ್ತವೆ. ಅವುಗಳ ಹಿನ್ನೆಲೆಯನ್ನು ಕಂದಿ ಅಥವಾ ತಿಳಿನೀಲಿ ಹಸಿರುಗಳಿಂದ ಪೂರ್ತಿ ಮಾಡಿದ್ದಾರೆ. ಈ ಲಕ್ಷಣಗಳು ಹಾಗೂ ಅಮೂರ್ತತೆಯ ಮತ್ತು ಸಾಂಕೇತಿಕತೆಯ ಆಕಾರಗಳನ್ನು ನೊಡಿದಾಗ ಶಿಷ್ಟಕೃತಿಗಳನ್ನು ಮೀರಿಸುವ ಕೃತಿಗಳು ಇವಾಗಿವೆ. ಇವುಗಳಲ್ಲಿಯ ಮಾನವಾಕೃತಿಯ ಪ್ರಮಾಣಬದ್ಧತೆ ವಾಸ್ತವೀಕರಣ ಹಾಗೂ ಎಡಬಲಕ್ಕೆ ಕೈ ಕಾಲುಗಳನ್ನು ಪರೀಕ್ಷಿಸಿದಾಗ ತಪ್ಪುಗಳು ಎದ್ದು ಕಾಣುತ್ತವೆ. ಇವುಗಳಿಂದ ಜಾನಪದಗಳೆಂದು ಹೇಳಬಹುದು'[೧೨೭] ಇಲ್ಲಿ ರಾಮಾಯಣ-ಮಹಾಭಾರತಕ್ಕೆ ಸಂಬಂಧಿಸಿದಂತೆ ಹಲವಾರು ಚಿತ್ರಗಳಿದ್ದು, ಕೃಷ್ಣನ ರಾಸಲೀಲೆಗಳ ಚಿತ್ರಗಳೂ ಕಂಡುಬರುತ್ತವೆ. ಜೊತೆಗೆ ಆ ಕಾಲದ ಅರಸರ ದರ್ಬಾರು, ಸೈನಿಕರು, ರಾಣಿಯ ಅಂತಃಪುರ,

---

೧೨೬. ಕರ್ನಾಟಕದ ಜನಪದ ಚಿತ್ತಾರಗಳು ಹಾಗೂ ಶಿಲ್ಪಗಳು : ಜಗತಾಪ ಮಹದೇವ : ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು : ೨೦೦೪ : ಪು-೧೧

೧೨೭. ಕರ್ನಾಟಕದ ಜನಪದ ಚಿತ್ತಾರಗಳು ಹಾಗೂ ಶಿಲ್ಪಗಳು : ಜಗತಾಪ ಮಹದೇವ : ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು : ೨೦೦೪ : ಪು-೧೫

ಕಾವಲುಗಾರರು, ಸೇವಕ–ಸೇವಕಿಯರು, ರಾಜನ ಆಟೋಟಗಳು, ಗ್ರಾಮೀಣ ಜನರ ಬದುಕು ಮೊದಲಾದವುಗಳೊಂದಿಗೆ ಹಲವಾರು ದೇವ–ದೇವತೆಗಳ ಚಿತ್ರಗಳೂ ಇಲ್ಲಿ ಕಂಡುಬರುತ್ತವೆ.

ಇದೇ ನರಗುಂದದ ವೆಂಕಟೇಶ್ವರ ದೇವಸ್ಥಾನದಲ್ಲಿಯೂ ಭಿತ್ತಿ ಚಿತ್ರಗಳು ಇದ್ದು, ದಕ್ಷಿಣದ ಭಿತ್ತಿ ಚಿತ್ರಗಳ ಶೈಲಿಯನ್ನು ಇಲ್ಲಿ ಕಾಣಬಹುದು. ವೆಂಕಟೇಶ, ಲಕ್ಷ್ಮಿ, ಪದ್ಮಾವತಿ, ಹನುಮ, ಗರುಡ ಚಿತ್ರಗಳು ವಿಶೇಷ ಗಮನ ಸೆಳೆಯುತ್ತವೆ. ಹೊರಭಾಗದಲ್ಲಿ ದ್ವಾರಪಾಲಕರ ಚಿತ್ರಗಳೂ ಇವೆ. 'ಧಾರವಾಡ ತಾಲೂಕಿನ ಉಪ್ಪಿನ ಬೆಟಗೇರಿ ಗ್ರಾಮದ ಯಲ್ಲಮ್ಮ ದೇವಸ್ಥಾನದಲ್ಲಿ ಹಿಂದೆ ಹಲವಾರು ವರ್ಣಚಿತ್ರಗಳಿದ್ದವು. ಇತ್ತೀಚೆಗೆ ದೇವಾಲಯದ ಬಹುಪಾಲು ಕಟ್ಟಡ ಕುಸಿದು ಬಿದ್ದು, ಹೊರಗಡೆ ಮಾತ್ರ ಕೆಲವು ಚಿತ್ರ ಗೋಚರಿಸುತ್ತವೆ. ಬಿಸಿಲು, ಮಳೆ, ಗಾಳಿಗಳಿಂದ ಇಲ್ಲಿಯ ಬಹಳಷ್ಟು ಚಿತ್ರಗಳು ಅಂದಗೆಟ್ಟಿವೆ. ಇಲ್ಲಿಯ ಕಟ್ಟಿಗೆಯ ಫಲಕಗಳಲ್ಲಿ ಭೂಮಿತಿ ಆಕೃತಿಯ ವಿವಿಧ ವರ್ತುಳ, ಚೌಕಾಕಾರದ ಸುಳುವುಗಳು, ವಿವಿಧ ಪ್ರಾಣಿ ಪಕ್ಷಿಗಳು, ತಳಕು ಹಾಕಿದ ಹಾವುಗಳ ಕಲಾತ್ಮಕ ವರ್ಣಚಿತ್ರಗಳನ್ನು ಬಿಡಿಸಲಾಗಿದೆ'[೧೨೮] ಇಲ್ಲಿ ನೋಡುಗರ ಕಣ್ಮನ ಸೆಳೆಯುವಂತೆ ರಚಿತವಾಗಿದ್ದು ಸೂಕ್ಷ್ಮವಾದ ಚಿತ್ರಗಳು ರಚನೆಯಾಗಿವೆ.

ಭಾರತದ ಪಂಚಪೀಠಗಳಲ್ಲಿ ಒಂದಾಗಿರುವ ಕಾಶಿಪೀಠದ ಶಾಖಾಮಠ ನವಲಗುಂದದಲ್ಲಿ ಪಂಚಗೃಹ ಹಿರೇಮಠ ಎಂದು ಪ್ರಸಿದ್ಧಿಯನ್ನು ಪಡೆದುಕೊಂಡಿದೆ. ನಗರದ ಮಧ್ಯಭಾಗದಲ್ಲಿರುವ ರೇಣುಕಾಚಾರ್ಯ ನಗರದಲ್ಲಿ ಸ್ಥಾಪನೆಯಾಗಿರುವ ಈ ಮಠವು ಸುಮಾರು ಆರುನೂರು ವರ್ಷಗಳ ಇತಿಹಾಸವನ್ನು ಹೊಂದಿದೆ. ಇಲ್ಲಿ ಕಾಷ್ಠದಲ್ಲಿ ಕೆತ್ತಿರುವ ಕಲಾಕುಸುರಿ ನೋಡುಗರ ಮನ ಸೆಳೆಯುತ್ತದೆ. ಈ ಮಠದ ಶಿವದೀಕ್ಷಾ ಮಂಟಪದ ಪಕ್ಕದ ಕೋಣೆಯಲ್ಲಿ ಕಟ್ಟಿಗೆಯಿಂದ ತಯಾರಿಸಲಾದ ಪಲ್ಲಕ್ಕಿ ಮತ್ತು ಒಡವೆ–ವಸ್ತ್ರಗಳನ್ನು ಇಡಲು ಮಂಚಗಳು ಇವೆ. 'ಈ ಸಭಾಂಗಣವನ್ನು ನಿರ್ಮಿಸಲು ಬಳಸಿರುವ ಮರದ ಕಂಬಗಳು, ಜಂತಿ, ತೊಲೆಗಳು ಕೆತ್ತನೆಯಿಂದ ಅಲಂಕೃತಗೊಂಡಿವೆ. ಬೇರೆ ಎಲ್ಲಿಯೂ ಸಿಗದಂತಹ ಕೆತ್ತನೆಯ ಕುಸುರಿ ಕೆಲಸ ಬಹಳ ನಾಜೂಕಾಗಿ ನಿರ್ಮಿಸಲ್ಪಟ್ಟಿದೆ. ಚೌಕಾಕಾರದ ಮಂಟಪದ ಕಂಬಗಳಿಗೆ ಹೊಂದಿಕೊಂಡು ಐದು ಸಾಲಿನ ಅಡ್ಡ ತೊಲೆ ಪಟ್ಟಿಕೆಗಳನ್ನು ಜೋಡಿಸಿದ್ದು ಅದನ್ನು ಮಂಡಲವೆನ್ನುತ್ತಾರೆ. ಅದರ ಎಂಟು ದಿಕ್ಕುಗಳಿಗೆ ಅಷ್ಟ ದಿಕ್ಪಾಲಕರ ವಿಗ್ರಹಗಳಿದ್ದು, ತಲಾ ಒಂದೊಂದು ದಿಕ್ಪಾಲಕರ ಬದಿಗಳಲ್ಲಿ ಮೂರು ಮೂರು ವಿವಿಧ ದೇವ–ದೇವತೆ, ಋಷಿ ಮುನಿಗಳು ಮತ್ತು ನೃತ್ಯಗಾರ್ತಿಯರ ವಿಗ್ರಹಗಳನ್ನು ಕೆತ್ತಲಾಗಿದೆ. ಪೂರ್ವಕ್ಕೆ ಪೂರ್ವನಾಥ, ಆಗ್ನೇಯಕ್ಕೆ ಹೊನ್ನೊಪಾವಕಲೋಚನ, ದಕ್ಷಿಣಕ್ಕೆ ಯಮ,

---

೧೨೮. ಕರ್ನಾಟಕದ ಜನಪದ ಚಿತ್ರಕಲೆ : ಪಾಟೀಲ ಎಸ್.ಸಿ : ವೀರಶೈವ ಅಧ್ಯಯನ ಸಂಸ್ಥೆ, ಗದಗ : ೧೯೯೩ : ಪು–೫೫

ನೈಋತ್ಯಕ್ಕೆ ಸರ್ಪಭೂಷಣ, ಪಶ್ಚಿಮಕ್ಕೆ ವಾಮದೇವ, ವಾಯುವ್ಯಕ್ಕೆ ಕಾಮಸಾಂಧರ, ಉತ್ತರಕ್ಕೆ ವಿರೂಪಾಕ್ಷ, ಈಶಾನ್ಯಕ್ಕೆ ಬಂಗಿ ಈ ರೀತಿ ಎಂಟು ದಿಕ್ಕಿಗೂ ದೇವತೆಗಳನ್ನು ಸೃಷ್ಟಿಸಿ ಒಂದೊಂದು ದಿಕ್ಕಿನ ಒಂದೊಂದು ಪಟ್ಟಿಯಲ್ಲಿ ವಿವಿಧ ದೇವರುಗಳನ್ನು ಕಲಾತ್ಮಕವಾಗಿ ಸೃಷ್ಟಿಸಲಾಗಿದೆ.'[೧೨೯] ಮರಗಳಿಂದಲೇ ಕೆತ್ತಲಾದ ಇಲ್ಲಿಯ ಚಿತ್ರಕಲೆಯಲ್ಲಿ ಜಾನಪದ ಜೀವಾಳ ಅಡಗಿದೆ. ಈ ರೀತಿಯ ಮಠಗಳ ಆವರಣದಲ್ಲಿ ಬಿಡಿಸಲಾಗುವ ಚಿತ್ರಗಳು ಬಹುತೇಕ ಆಯಾ ಧರ್ಮದ ನಂಬಿಕೆ ಮತ್ತು ದೈವಗಳನ್ನು ಕುರಿತಾಗಿಯೇ ಇರುತ್ತವೆ. ಜೊತೆಗೆ ನಿಸರ್ಗದಲ್ಲಿ ಕಂಡುಬರುವ ಹಲವಾರು ವೈವಿಧ್ಯಮಯ ಸನ್ನಿವೇಶಗಳೂ ಇಲ್ಲಿ ಕಾಣಿಸಿಕೊಳ್ಳುತ್ತವೆ.

ಇವೆಲ್ಲವುಗಳಿಗೆ ಕಲಶವಿಟ್ಟಂತೆ ಬ್ರಹ್ಮ, ವಿಷ್ಣು, ಮಹೇಶ್ವರ, ಯಮ, ಇಂದ್ರ, ಕುಬೇರ ಮೊದಲಾದ ದೇವತಾ ವರ್ಗವನ್ನು ಸೂಕ್ಷ್ಮ ಕುಸುರಿಯಲ್ಲಿ ಕೆತ್ತನೆ ಮಾಡಲಾಗಿದೆ. 'ವಿಶಾಲವಾದ ಮೊಗಸಾಲೆಯಲ್ಲಿರುವ ತೊಲೆಗಳಲ್ಲಿ ಮಿಥುನ, ಪ್ರಾಣಿ, ಇಷ್ಟಲಿಂಗ ಉಪಾಸಕರು, ದೇವ–ದೇವತೆಯರು ಹಾಗೂ ಕಥಾನಕ ವಿಷಯವುಳ್ಳ ಚಿತ್ರಗಳು ವೈವಿಧ್ಯಮಯವಾಗಿ ರೂಪುಗೊಂಡಿವೆ. ಒಟ್ಟು ೧೦೧ ಅಂಕಣದ ಈ ಬೃಹತ್ತಾದ ಮಠವು ಕಲಾಕೌಶಲ್ಯವನ್ನು ಮೈತುಂಬಿಕೊಂಡು ನಿಂತಿದೆ.'[೧೩೦] ಹೀಗಾಗಿ ಇಂದಿಗೂ ಈ ಮಠವು ಭಕ್ತಿಯ ಹಿರಿಮೆಯಂತೆಯೇ ಜನರ ಪ್ರೇಕ್ಷಣಿಯ ಸ್ಥಳವಾಗಿ ಪರಿಗಣಿಸಲ್ಪಟ್ಟಿದೆ. ಇವಗಳ ಅವಲೋಕನಕ್ಕೆ ತುಂಬ ಜಾಣ್ಮೆ ಬೇಕಾಗುತ್ತದೆ. ಸೌಂದರ್ಯವನ್ನು ಆಸ್ವಾದಿಸುವುದು ಒಂದು ರೀತಿಯಾದರೆ, ಅವುಗಳ ಗಮನಿಕೆಯಿಂದ ಅಧ್ಯಯನ ಮಾಡುವುದು ಇನ್ನೊಂದು ರೀತಿಯದ್ದಾಗಿರುತ್ತದೆ. ಸೂಕ್ಷ್ಮವಾದ ಕುಸರಿ ಕೆಲಸಗಳು ಇಲ್ಲಿ ಎಡೆ ಪಡೆದಿರುವುದರಿಂದ ಚಿತ್ರಕಲೆಯ ಬಗ್ಗೆ ಒಂದಿಷ್ಟು ಮಾಹಿತಿ ಕೂಡ ಇದ್ದರೆ ಅಧ್ಯಯನಕಾರರಿಗೆ ಹೆಚ್ಚು ಅನುಕೂಲವಾಗುತ್ತದೆ.

ಧಾರವಾಡ ಜಿಲ್ಲೆಯ ಕೆಲವೊಂದು ಹಳ್ಳಿಗಳಲ್ಲಿ ಗರಡಿಮನೆಗಳು ಕಂಡುಬರುತ್ತವೆ. ಈ ಗರಡಮನೆಗಳು ಮನೆಗೊಬ್ಬ ಪೈಲವಾನ್‌ನನ್ನು ತಯಾರು ಮಾಡುವ ವ್ಯಾಯಾಮ ಶಾಲೆಗಳಾಗಿದ್ದವು. ಇಂಥ ವ್ಯಾಯಾಮ ಶಾಲೆ (ಗರಡಿ ಮನೆ)ಗಳನ್ನು ಕಲಾವಂತಿಕೆಯಿಂದ ಕಟ್ಟಿರುವುದು ಹಾಗೂ ಹೊರಗೋಡೆಗಳನ್ನು ಉಬ್ಬು ಶಿಲ್ಪಗಳಿಂದ, ಬಣ್ಣದಿಂದ ಚಿತ್ರಗಳನ್ನು ಚಿತ್ರಿಸುವ ಮುಖಾಂತರ ಸುಂದರಗೊಳಿಸಲಾಗಿದೆ.

ಗರಗದಲ್ಲಿ ಕಂಡು ಬರುವ ಒಂದು ಗರಡಿ ಮನೆಯು ಕ್ರಿ.ಶ. ೧೯೫೧ ರಲ್ಲಿ ನಿರ್ಮಾಣವಾಗಿದ್ದು, ಈಗಲೂ ನೋಡಲು ಮನಮೋಹಕವಾಗಿದೆ. ಇದನ್ನು ಮಾದೇವಪ್ಪಾ

---

೧೨೯. ಪ್ರಜಾವಾಣಿ : ಮೆಟ್ರೋ : ಚಿರಂತಯ್ಯ ಹಿರೇಮಠ : ೨೭-೧೨-೨೦೧೧

೧೩೦. ಪ್ರಜಾವಾಣಿ : ಮೆಟ್ರೋ : ಚಿರಂತಯ್ಯ ಹಿರೇಮಠ : ೨೭-೧೨-೨೦೧೧

ಗಡಾದವರ ಕಟ್ಟಿಸಿದರೆಂದು ಬಾಗಿಲ ಮೇಲೆ ಬರೆದಿರುವ ಉಬ್ಬು ಅಕ್ಷರಗಳು ಸಾಕ್ಷಿ ಒದಗಿಸುತ್ತವೆ. ಇದು ಹಿಂದೂ-ಮುಸ್ಲಿಂ ಭಾವೈಕ್ಯತೆಯನ್ನು ಸಾರುವ ವಾಸ್ತು ಪ್ರಕಾರದಿಂದ ಕೂಡಿದ್ದು, ಮೇಲೆ ಗುಮ್ಮಟ, ಗೋಪುರ, ಸಿಂಹಗಳ ಮುಖ, ನವಿಲು ಹಾಗೂ ಗರಡಿಮನೆಯ ಬಾಗಿಲ ಎರಡೂ ಬದಿಯ ಗೋಡೆಯ ಮೇಲೆ ಹುಲಿಯೊಡನೆ ಸೆಣೆಸುತ್ತಿರುವ ಪೈಲವಾನ್, ಹಾಗೂ ಕುಸ್ತಿ ಹಿಡಿದಿರುವ ಪೈಲವಾನರ ಉಬ್ಬುಚಿತ್ರಗಳನ್ನು ಕಾಣಬಹುದು.[೧೩೧] ಇವುಗಳಿಗೆ ಹಚ್ಚಿದ ಬಣ್ಣ ಇನ್ನೂ ಮಾಸದಿರುವುದು ಜನಪದರ ಕಲಾವಂತಿಕೆಯನ್ನು ಮೆರೆಸುತ್ತದೆ.

ಬೆಳ್ಳಿಗಟ್ಟಿಯಲ್ಲಿ ಕಂಡುಬರುವ ಇನ್ನೊಂದು ಗರಡಿಮನೆಯ ಹೊರ ಗೋಡೆಯ ಮೇಲೆ ಬಣ್ಣದಿಂದ ರಚಿಸಿದ ಸುಮಾರು ವರ್ಷ ಹಳೆಯದಾದ ಚಿತ್ರಗಳನ್ನು ಗಮನಿಸಬಹುದು. ಇವುಗಳಲ್ಲಿ ರಣರಂಗದಲ್ಲಿ ಕರ್ಣನ ರಥದ ಗಾಲಿ ಕೆಸರಲ್ಲಿ ಸಿಲುಕಿರುವ ಚಿತ್ರ, ಶಿವನು ಅರ್ಜುನನಿಗೆ ಪಾಶುಪತಾಸ್ತ್ರ ನೀಡುತ್ತಿರುವ ಚಿತ್ರವನ್ನು ಕಾಣಬಹುದು. ಅಲ್ಲದೇ ಲೋಕೂರು ಗ್ರಾಮದ ಗರಡಿಮನೆಯ ಬಾಗಿಲ ಇಕ್ಕೆಲಗಳಲ್ಲಿ ಮೆಕ್ಕಾದ ಮಸೀದಿ ಚಿತ್ರ, ಹುಲಿ ಜೊತೆ ಸೆಣೆಸುತ್ತಿರುವ ಟಿಪ್ಪುವಿನ ಚಿತ್ರ, ಹನುಮಂತ ಬೆಟ್ಟವನ್ನು ಎತ್ತಿರುವ ಚಿತ್ರ, ಕುಸ್ತಿ ಪೈಲವಾನರ ಕುಸ್ತಿಯಾಟದ ಚಿತ್ರಗಳನ್ನು ಬಹು ಸುಂದರವಾಗಿ ಚಿತ್ರಸಿರುವುದನ್ನು ಕಾಣಬಹುದು. ಈ ಚಿತ್ರಗಳನ್ನು ಯಾವಾಗ ಯಾರು ಬಿಡಿಸಿದರೆಂದು ತಮಗೂ ತಿಳಿದಿಲ್ಲ ಎನ್ನುತ್ತಾರೆ ಸಿದ್ದಪ್ಪ ಕಲ್ಯಾಣಿಯವರು.[೧೩೨] ಈ ಚಿತ್ರಗಳನ್ನು ಜನಪದರೇ ತಮ್ಮ ಕೈಯಾರೆ ಚಿತ್ರಿಸಿರುವುದು ಅವರ ಸೃಜನಶೀಲತೆಗೆ ಸಾಕ್ಷಿ.

ಧಾರವಾಡದ ಒಂದು ದೇವಸ್ಥಾನದ ಗೋಡೆಯ ಮೇಲೆ ಸಕಲ ಪ್ರಾಣಿಗಳ ಜೊತೆಯಲ್ಲಿ ಅರಣ್ಯ ಸಂಚಾರ ಮಾಡುತ್ತಿರುವ ಶಿವಶರಣೆ ಅಕ್ಕಮಹಾದೇವಿಯ ಚಿತ್ರ, ಆತ್ಮಲಿಂಗವನ್ನು ಕೊಟ್ಟು ಸ್ನಾನಕ್ಕೆ ಹೊರಟ ರಾವಣನ ಚಿತ್ರ, ಕುದುರೆ ಏರಿ ಹೊರಟಿರುವ ಬಸವೇಶ್ವರರ ಚಿತ್ರ, ತಪೋ ನಿರತ ಸಿದ್ಧಲಿಂಗ ಯತಿಗಳ ಬಣ್ಣದಿಂದ ಚಿತ್ರಿಸಿದ ಚಿತ್ರಗಳನ್ನು ಕಾಣಬಹುದಾಗಿದ್ದು, ಇವು ಇಂದಿಗೂ ಹೊಸತನದಿಂದ ನಳನಳಿಸುತ್ತಿವೆ.

ಹಲವಾರು ದೇವಸ್ಥಾನಗಳ ಹೊರ ಬದಿಯಲ್ಲಿ ಖಡ್ಗ, ಭರ್ಚಿ, ಚಾಮರ ಹಿಡಿದು ನಿಂತ ದ್ವಾರಪಾಲಕರ ಚಿತ್ರಗಳು ಮತ್ತು ಉಬ್ಬು ಶಿಲ್ಪಗಳು, ಈಶ್ವರ, ಎರಡೂ ಕೈಯಲ್ಲಿ ಸರ್ಪಗಳನ್ನು ಹಿಡಿದಿರುವ ಕೃಷ್ಣ, ಗಿಳಿ, ನವಿಲು, ಬಾತುಕೋಳಿ, ಸಿಂಹ, ಹುಲಿ, ಆನೆ, ಕುದುರೆ, ಎತ್ತುಗಳು, ಓಂ,

---

೧೩೧ . ಕ್ಷೇತ್ರಕಾರ್ಯ : ೩೦-೦೪-೨೦೧೫

೧೩೨ . ವಕ್ತೃ : ಸಿದ್ದಪ್ಪ ಕಲ್ಯಾಣಿ : ವಯಸ್ಸು-೬೫ : ಬೆಳ್ಳಿಗಟ್ಟಿ : ೧೨-೦೧-೨೦೧೬

ಶ್ರೀ, ಸ್ವಸ್ತಿಕ, ಕುಂಭ, ಈಶ್ವರ, ನಾಗರಹಾವು ಹಾಗೂ ಬಾಹುಬಲಿಯ ಚಿತ್ರಗಳನ್ನು ಬಣ್ಣಗಳಿಂದ ಮತ್ತು ಉಬ್ಬು ಶಿಲ್ಪಗಳಿಂದ ಸಿಂಗರಿಸಲಾಗಿದೆ.

ಧಾರವಾಡದ ಅಮ್ಮಿನಭಾವಿ ಮಠದ ಬಗ್ಗೆ 'ಕರ್ನಾಟಕದ ಅನೇಕ ಕಡೆಗಳಲ್ಲಿ ಕಾಣಸಿಗುವ ಅವಿಭಕ್ತ ಕುಟುಂಬ ಆನಂದದಿಂದ ಜೀವಿಸುವ 'ಚೌಸಪ್ಪಿ' ಮನೆಯನ್ನೇ ಹೋಲುವ ಬೃಹತ್ ಗಾತ್ರದ ಒಂದು ವಾಸ್ತುಶಿಲ್ಪವಿದೆ. ಈ ಚೌಸಪ್ಪಿ ಮನೆಯು ನೂರಾರು ಜನರುಗಳಿರುವ ಅವಿಭಕ್ತ ಕುಟುಂಬ ವಾಸಿಸುವಂತಿದೆ. ಈ ಕಟ್ಟಡಕ್ಕೆ ಮೆರಗು ಕೊಡುವಲ್ಲಿ ಹಲಗೆಯ ಮೇಲೆ, ತಗಡಿನ ಮೇಲೆ ಹಾಗೂ ಗೊಡೆಯ ಮೇಲಿನ ಚಿತ್ರಗಳು ಮುಖ್ಯ ಪಾತ್ರವಹಿಸಿವೆ. ಸಧ್ಯ ಇದು ಪಂಚ ಪೀಠದಲ್ಲಿ ಒಂದೆನಿಸಿಕೊಂಡ ರಂಭಾಪುರಿ (ಬಾಳೆ ಹೊನ್ನೂರು) ಶಾಖಾಮಠವಾಗಿದೆ.'[೧೩೩] ಹಲಗೆ, ತಗಡುಗಳ ಮೇಲೆ ಚಿತ್ರ ಬಿಡಿಸುವುದಷ್ಟೇ ಅಲ್ಲ ; ಗೋಡೆಗಳ ಮೇಲೆಯೂ ಚಿತ್ರಗಳನ್ನು ಬಿಡಿಸಿ ಅವುಗಳಿಗೆ ಬಣ್ಣ ತುಂಬಿರುವುದು ಜನಪದೀಯ ಚಿತ್ರಕಲೆಯ ಮಹತ್ವವನ್ನು ಸಾರುತ್ತದೆ.

'ಪ್ರಾಯಶಃ ಹದಿನೇಳನೆಯ ಶತಮಾನದಲ್ಲಿ ವಾಸ್ತು-ಕಲೆ, ಮರದ ಕೆಲಸ, ಮೇಲ್ಛಾವಣಿಯ ಚಿತ್ರಗಳು ಏಕಕಾಲದಲ್ಲಿಯೇ ಆಗಿವೆ ಎಂದು ಊಹಿಸಬಹುದು'[೧೩೪] ಎನ್ನುವ ಮಹಾದೇವ ಜಗತಾಪ ಅವರು, 'ಹೆಚ್ಚಾಗಿ ಕಂದಿ ಬಣ್ಣದ ಹಿನ್ನೆಲೆಯನ್ನು ಹೊಂದಿದ ಈ ಚಿತ್ರಗಳು ಜನಪದ ಜಾಡಿನ ಕೊನೆಯ ಹಾಗೂ ಶಿಷ್ಟ ಕಲಾಕೃತಿಗಳ ಪ್ರಾರಂಭದ ಕಾಲದ ಕಲಾಕೃತಿಗಳೆಂದು ಹೇಳಬಹುದು. (ಇಲ್ಲಿನ ಕಲಾಕೃತಿಗಳು ವಾಸ್ತುಶಿಲ್ಪದ ಅಲಂಕಾರದ ವಸ್ತುವಾಗಿ ಮಾತ್ರ ಉಳಿದಿಲ್ಲ. ಶೈವ ಹಾಗೂ ವೈಷ್ಣವ (ಹರಿ, ಹರ) ಏಕತೆಯ ಭಾವೈಕ್ಯತೆಯ ಸಂಕೇತಗಳಾಗಿವೆ. ಐತಿಹಾಸಿಕ, ಪೌರಾಣಿಕ ವಿಷಯವನ್ನಾಧರಿಸಿ ರಚಿಸಿದ ಚಿತ್ರಕೃತಿಗಳಿವೆ) ಇಲ್ಲಿಯೂ ಯಾವ ಕಲಾವಿದರ ಹೆಸರುಗಳು ಕಂಡುಬರುತ್ತಿಲ್ಲ. ಅನಾಮಧೇಯ ಕಲಾವಿದರಿರಬಹುದು. ಹೆಸರುಗಳಿರದೇ ಹೋಗಿರುವುದಕ್ಕೆ ಇವುಗಳನ್ನು ಜಾನಪದ ಜಾಡಿನ ಕೊನೆಯ ಚಿತ್ರಗಳೆಂದೂ ಸೌಂದರ್ಯ ಹಾಗೂ ಧಾರ್ಮಿಕವಾಹಕದ ರೂವಾರಿ, ಚಿತ್ರಕಲಾವಿದ ಮಾತ್ರ ಆಗಿದ್ದಾನೆಂಬ ವಿಶಾಲತೆಯನ್ನೂ ಬೀರುವುದಕ್ಕೆ (ಅಥವಾ ರಾಜರ ಆಶ್ರಯದ ಕಲಾವಿದನಾಗಿದ್ದ ಕಾರಣಕ್ಕಾಗಿ ಹೆಸರಿಸದೇ ಹೋಗಿರಲಿಕ್ಕೂ ಸಾಕು'[೧೩೫] ಎನ್ನುತ್ತಾರೆ. ಇಲ್ಲಿಯ ಮೇಲ್ಛಾವಣಿ ಚಿತ್ರಗಳಲ್ಲಿ ಸರಸ್ವತಿ, ಗಣಪತಿ, ಹದಿನೆಂಟು ಭುಜಗಳ ದೇವಿ, ಕೃಷ್ಣಲೀಲೆ,

---

೧೩೩. ಉತ್ತರ ಕರ್ನಾಟಕದ ಪ್ರಾಚೀನ ಚಿತ್ತಾರಗಳು: ಜಗತಾಪ ಎಂ.ಎಂ : ಕರ್ನಾಟಕ ಇತಿಹಾಸ ಸಂಶೋಧನ ಮಂಡಲ, ಧಾರವಾಡ : ೨೦೦೮ : ಪು-೫೯-೬೦

೧೩೪. ಕರ್ನಾಟಕದ ಜನಪದ ಚಿತ್ತಾರಗಳು ಹಾಗೂ ಶಿಲ್ಪಗಳು : ಜಗತಾಪ ಮಹದೇವ : ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು : ೨೦೦೪ : ಪು-೭

೧೩೫. ಕರ್ನಾಟಕದ ಜನಪದ ಚಿತ್ತಾರಗಳು ಹಾಗೂ ಶಿಲ್ಪಗಳು : ಜಗತಾಪ ಮಹದೇವ : ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು : ೨೦೦೪ : ಪು-೭

ಚೌಕಿದಾರರು, ಜಮದಗ್ನಿ–ಕಾರ್ತವೀರ್ಯ, ಶಿವನ ಒಡ್ಡೋಲಗ, ಶಿವ, ಪಾರ್ವತಿ, ನಾರದ, ಭೃಂಗಿ, ಆಕಳುಮುಖದ ವ್ಯಕ್ತಿ, ಟಗರಿನ ಮುಖದ ವ್ಯಕ್ತಿ, ಮೃದಂಗ ಬಾರಿಸುವವನು, ತಾಳ ಬಾರಿಸುವವನು, ಶೇಷಶಯನ ವಿಷ್ಣು, ರಾಮ, ಸೀತೆ, ಹನುಮ, ಕೃಷ್ಣನ ರಾಸಲೀಲೆ ಮೊದಲಾದ ಚಿತ್ರಗಳಲ್ಲದೇ ವಿಚಿತ್ರವಾದ ಆಕರಗಳನ್ನು ಪಡೆದಕೊಂಡ ಪ್ರಾಣಿ–ವ್ಯಕ್ತಿಗಳ ಚಿತ್ರಗಳೂ ಇವೆ. ಹಾಗೆಯೇ ಬ್ರಿಟಿಷರ ದಬ್ಬಾಳಿಕೆ, ಸಾಮಾನ್ಯ ಜನರು ಅನುಭವಿಸುವ ಶಿಕ್ಷೆ ಮೊದಲಾದ ಚಿತ್ರಗಳೂ ಕಂಡುಬರುತ್ತವೆ.

ಮಠದ ಹೊರಾಂಗಣದ ಮೇಲ್ಛಾವಣಿಯಲ್ಲಿ ದೇವ–ದೇವಿಯರ ಚಿತ್ರಗಳಿವೆ. ಶೈವ–ವೈಷ್ಣವ ಪಂಥದ ಚಿತ್ರಗಳೂ ಇಲ್ಲಿದ್ದು, ಗಿರಿಜಾ ಕಲ್ಯಾಣದ ದೊಡ್ಡಾಟದ ಚಿತ್ರಗಳೂ ಇಲ್ಲಿ ಕಾಣಸಿಗುತ್ತವೆ. ತ್ರಿಪುರ ಸಂಹಾರ ಕತೆಯನ್ನು ಬಿತ್ತರಿಸುವ ಚಿತ್ರಮಾಲಿಕೆಯೂ ಕರ್ಣಾರ್ಜುನರ ಕದನ, ಕುಮಾರ ಸಂಭವ ಮೊದಲಾದ ಚಿತ್ರಗಳೂ ಇಲ್ಲಿವೆ. 'ಮಠದಲ್ಲಿನ ಚಿತ್ರಗಳು ಅದ್ಭುತವಾಗಿದ್ದು ನೂರಾರು ವರ್ಷಗಳ ಹಿಂದಿನ ಕಾಲದ ಬಣ್ಣದ ಬಳಕೆಯನ್ನು ಕಾಣಬಹುದು. ಇನ್ನೂ ಬಣ್ಣ ಮಾಸದೇ ಇರುವುದು ಆ ಕಾಲದ ಉತ್ಕೃಷ್ಟ, ಸಾಂಪ್ರದಾಯಿಕ, ಪ್ರಾಕೃತಿಕ ಬಣ್ಣದ ಬಳಕೆಯನ್ನು ಪರಿಚಯಿಸುತ್ತದೆ'[೧೩೬] ಎಂದು ಅಮ್ಮಿನಭಾವಿಯ ಪಂಚಗೃಹ ಹಿರೇಮಠದ ಸ್ವಾಮಿಜಿಗಳಾದ ಶ್ರೀ ಶಾಂತಲಿಂಗ ಮಹಾಸ್ವಾಮಿಗಳು ಅಭಿಪ್ರಾಯಪಡುತ್ತಾರೆ.

ಮಠದಲ್ಲಿ ಕಟ್ಟಿಗೆಯಲ್ಲಿ ಮಾಡಿದ ಭಿತ್ತಿ ಚಿತ್ರಗಳು ಒಂದು ವಿಶೇಷವಾದ ಆಕರ್ಷಣೆಯನ್ನು ಹೊಂದಿದ್ದು, ಒಂದೊಂದು ಚಿತ್ರಗಳು ಒಂದೊಂದು ಕತೆಯನ್ನು ಹೇಳುತ್ತವೆ ಎಂಬುದಾಗಿ ಅಮ್ಮಿನಭಾವಿಯ ಯುವ ರೈತ ಗೂಳಪ್ಪ ಮುಂದಿನಮನಿ ಅವರು ಹೇಳುತ್ತಾರೆ.[೧೩೭] ಇವರು ತಮ್ಮ ಅಜ್ಜ–ಮುತ್ತಜ್ಜನ ಕಾಲದಿಂದಲೂ ಈ ಪರಂಪರೆಯನ್ನು ಕೇಳಿ, ತಿಳಿದುಕೊಂಡು ನೋಡುತ್ತ ಬಂದಂಥವರು. ಮೊದಲಿನ ವೈಭವವನ್ನು ಕಂಡುಕೊಂಡವರು. ಹೀಗಾಗಿ ಸಹಜವಾಗಿಯೇ ಅವರು ಈ ಭಿತ್ತಿಚಿತ್ರಗಳ ಬಗ್ಗೆ ಉತ್ಸಾಹದಿಂದಲೇ ಮಾತನಾಡುತ್ತಾರೆ.

ಆಧುನಿಕ ಕಾಲಘಟ್ಟದಲ್ಲಿಯೂ ಈ ಭಿತ್ತಿ ಚಿತ್ರಗಳ ಪರಂಪರೆ ಉಳಿದುಕೊಂಡು ಬಂದಿದ್ದು, ಗ್ರಾಮೀಣ ಪ್ರದೇಶಗಳಲ್ಲಿ ಇದನ್ನು ಇನ್ನೂ ಜೀವಂತವಾಗಿ ಇಟ್ಟುಕೊಂಡು ಬರಲಾಗುತ್ತಿದೆ. ಧಾರವಾಡ–ಹುಬ್ಬಳ್ಳಿ ಮಹಾನಗರಗಳಲ್ಲಿ ರಸ್ತೆ ಬದಿಗಳಲ್ಲಿ ಇರುವ ಗೋಡೆಗಳ ಮೇಲೆ ಇಂದಿಗೂ ಭಿತ್ತಿ ಚಿತ್ರಗಳನ್ನು ಕಾಣಬಹುದು. ಆದರೆ ಇವು ಶಾಶ್ವತವಾಗಿ

---

೧೩೬. ಕ್ಷೇತ್ರಕಾರ್ಯ : ೩೦–೦೮–೨೦೧೩
೧೩೭. ಕ್ಷೇತ್ರಕಾರ್ಯ : ೩೦–೦೮–೨೦೧೩

ಉಳಿಯುವಂಥವುಗಳಲ್ಲ. ಭಿತ್ತಿ ಚಿತ್ರಗಳು ಇಂದು ವೃತ್ತಿಯ ಸ್ವರೂಪ ಪಡೆದುಕೊಳ್ಳುತ್ತಿವೆ. ಅಷ್ಟೇ ಅಲ್ಲ, ಸಾಮಾಜಿಕ ಸಂದೇಶ, ಪರಂಪರೆಗಳನ್ನು ಹೇಳುವಲ್ಲಿಯೂ ಪ್ರಮುಖ ಪಾತ್ರ ವಹಿಸುತ್ತಿವೆ.

**ಬಾಸಿಂಗ ತಯಾರಿಕೆ :** ಹಿಂದೂ ಧರ್ಮದ ಮದುವೆ ಸಂದರ್ಭಗಳಲ್ಲಿ ಬಾಸಿಂಗಕ್ಕೆ ತುಂಬ ಮಹತ್ವವಾದ ಸ್ಥಾನವಿದೆ. ಮದುಮಗ ಮತ್ತು ಮದುಮಗಳಿಗೆ ಬಾಸಿಂಗವನ್ನು ಕಟ್ಟಿ ಮದುವೆ ಮಾಡಲಾಗುತ್ತದೆ. ಬಹುಶಃ ಇದು ನವ ದಾಂಪತ್ಯಕ್ಕೆ ಕಾಲಿಡುವ ನವ ಜೋಡಿಗಳು ರಾಜ-ರಾಣಿಯರಂತೆ ಕಂಗೊಳಿಸಲಿ ಎನ್ನುವ ಉದ್ದೇಶವನ್ನು ಇಟ್ಟುಕೊಂಡು ಮೂಡಿಬಂದಿರುವ ಪರಿಕಲ್ಪನೆ ಆಗಿರುವ ಸಂದರ್ಭವನ್ನು ಅಲ್ಲಗಳೆಯುವಂತಿಲ್ಲ. ಈ ಬಾಸಿಂಗ ತಯಾರಿಕೆಯೂ ಒಂದು ಜನಪದ ಕಲೆಯೇ ಆಗಿದೆ. ಬಾಸಿಂಗವನ್ನು ತಯಾರಿಸುವಾಗ ಹುಲಿಬೆಂಡು, ಬಣ್ಣದ ಹಾಳೆಗಳು, ಮುತ್ತು-ಮಣಿಗಳು, ವಿವಿಧ ಬಣ್ಣಗಳು, ಮಿಂಚು, ಜರೀಪಟ್ಟಿ, ದಾರ ಮೊದಲಾದವುಗಳನ್ನು ಸೇರಿಸಿ, ಕೆಲವು ಕಡೆ ದಾರದಿಂದ ಹೊಲಿದು, ಕೆಲವು ಕಡೆ ಅಂಟಿನಿಂದ ಮೆತ್ತಿಸಿ ಬಾಸಿಂಗವನ್ನು ಮಾಡಲಾಗುತ್ತದೆ.

ಬಾಸಿಂಗದಲ್ಲಿ ಬುಟ್ಟಿ ಬಾಸಿಂಗ, ಮೊರದ ಬಾಸಿಂಗ, ಬನವಾಸಿ ಬಾಸಿಂಗ, ಕಾಮಣ್ಣನ ಬಾಸಿಂಗ, ಜೋಕುಮಾರನ ಬಾಸಿಂಗ ಎಂಬುದಾಗಿ ಹಲವು ವಿಧಗಳು ಕಂಡುಬರುತ್ತವೆ. ಬುಟ್ಟಿ ಬಾಸಿಂಗವನ್ನು ಸಾಮಾನ್ಯವಾಗಿ ಎಲ್ಲ ಮತ-ಧರ್ಮ, ಜಾತಿ-ಜನಾಂಗದವರೂ ಬಳಸುತ್ತಾರೆ. ಆದರೆ ಬನವಾಸಿ ಬಾಸಿಂಗವನ್ನು ಕೇವಲ ಹವ್ಯಕ ಬ್ರಾಹ್ಮಣರು ಮಾತ್ರ ಬಳಸುತ್ತಾರೆ ಎಂಬುದು ಗಮನೀಯ.

ಬಾಸಿಂಗದಲ್ಲಿ ಬಳಸುವ ಹುಲಿಬೆಂಡಿಗೆ[೧೩೮]ಯಲ್ಲಿ ಹಲವಾರು ನಮೂನೆಯ ಚಿತ್ರಗಳನ್ನು ಬಿಡಿಸಲಾಗುತ್ತದೆ. ಜೊತೆಗೆ ಈ ಹುಲಿಬೆಂಡಿಗೆ ಮುತ್ತುಗಳಿಂದ ಹೆಣೆದು, ಮನೆದೇವರ ಚಿತ್ರವನ್ನು ಹಾಕಿ, ಏಳು ಹೆಡೆಯ ನಾಗದೇವತೆಯನ್ನು ಚಿತ್ರಿಸಲಾಗುತ್ತದೆ. ನಾಗದೇವತೆಯ ಒಂದೊಂದು ಹೆಡೆಗೂ ಗೂಳಪ್ಪನನ್ನು ಹೆಣೆದು, ವರನ ವೃತ್ತಿಗೆ ಅನುಗುಣವಾಗಿ ಚಿತ್ರಗಳನ್ನು ಬಿಡಿಸಲಾಗುತ್ತದೆ. ಮರೇವಾಡದ ವಿದ್ಯಾರಣ್ಯ ಹೂಗಾರ ಅವರು ಇಂದಿಗೂ ವಿನೂತನವಾದ ಬಾಸಿಂಗವನ್ನು ತಯಾರಿಸುವ ಕಾಯಕದಲ್ಲಿ ನಿರತರಾಗಿದ್ದಾರೆ. ಮೊದಲು 'ಅಂಕುಶ' ಎಂಬ ಪತ್ರಿಕೆಯಲ್ಲಿ ಉಪಸಂಪದಾಕರಾಗಿ ಸೇವೆ ಸಲ್ಲಿಸುತ್ತಿದ್ದ ಅವರು ಪತ್ರಿಕೆ ನಿಂತು ಹೋದ ಮೇಲೆ ಬಾಸಿಂಗ ತಯಾರಿಕೆಯಲ್ಲಿ ತಮ್ಮನ್ನು ತೊಡಗಿಸಿಕೊಂಡು ಬದುಕು ನಡೆಯಿಸಿಕೊಂಡು ಬಂದಿದ್ದಾರೆ.[೧೩೯]

---

೧೩೮. ಮಲೆನಾಡಿನಲ್ಲಿ ನೀರಿನಲ್ಲಿ ಬೆಳೆಯುವ ಸಸ್ಯ ಪ್ರಬೇಧಕ್ಕೆ ಸೇರಿದ ಒಂದು ಪೊದೆಯಿಂದ ಮೀನುಗಾರರು ಇದನ್ನು ಶೇಖರಿಸಿ ಇಟ್ಟಿರುತ್ತಾರೆ. ಅದರ ಸಿಪ್ಪೆ ಸುಲಿದು ಒಣಗಿಸಿ ಬಾಸಿಂಗ ತಯಾರಿಕೆಯಲ್ಲಿ ಬಳಸಲಾಗುತ್ತದೆ.

೧೩೯. ಕ್ಷೇತ್ರಕಾರ್ಯ : ಮರೇವಾಡ : ೨೯-೧೨-೨೦೧೫

ಸುತ್ತಮುತ್ತಲಿನ ಊರುಗಳಲ್ಲಿ ಮದುವೆ ಕಾರ್ಯ ನಡೆಯಬೇಕಾದರೆ ಮೊದಲು ಇವರನ್ನು ಸಂಪರ್ಕಿಸಿಲಾಗುತ್ತದೆ. ಹೀಗಾಗಿ ಬದುಕು ನಿರಾಂತಕವಾಗಿ ನಡೆದಿದೆ.

ಹಾಗೆಯೇ ಹುಬ್ಬಳ್ಳಿಯ ಅಕ್ಕಿಹೊಂಡದ ಭೂಸಪೇಟದ ಮಲ್ಲೇಶಪ್ಪ ವಾಲಿಶೆಟ್ಟರ ಕೂಡ ಬಾಸಿಂಗ ತಯಾರಿಕೆಯಲ್ಲಿ ಪ್ರಸಿದ್ಧರಾಗಿದ್ದಾರೆ. ಬಾಸಿಂಗದಲ್ಲಿ ಗಣಪತಿ, ಬಸವಣ್ಣ, ದೇವರ ಗುಡಿ, ಕುಂಭ, ಹೂವು, ಕಳಸ, ಪ್ರಾಣಿ–ಪಕ್ಷಿ, ತೊಂಡಲ ಮೊದಲಾದ ಆಕರ್ಷಕ ಚಿತ್ರಗಳನ್ನು ಇವರು ರಚಿಸುತ್ತಾರೆ. ಅತಿ ನಾಜೂಕಾಗಿ ತಯಾರಿಸುವ ಒಂದು ಬಾಸಿಂಗಕ್ಕೆ ಕನಿಷ್ಟ ಮೂರು ದಿನಗಳಾದರೂ ಬೇಕಾಗುತ್ತದೆ ಎಂದು ಅವರು ಹೇಳುತ್ತಾರೆ.[೧೪೦]

**ಹೂವು ಕಟ್ಟುವಿಕೆ :** ಹೂವು ಕಟ್ಟುವಿಕೆ ಮೊದ ಮೊದಲು ಹವ್ಯಾಸಕ್ಕಾಗಿಯೇ ಆರಂಭವಾದ ಕಾರ್ಯವಾಗಿದ್ದು ಇಂದಿಗೆ ಅದು ವೃತ್ತಿರೂಪ ಪಡೆದುಕೊಂಡಿದೆ. ಕೆಲವರು ಇದನ್ನು ಇಂದಿಗೂ ಹವ್ಯಾಸವನ್ನಾಗಿ ಬೆಳೆಸಿಕೊಂಡು ಬಂದಿದ್ದಾರೆ. ವಿಶೇಷವಾಗಿ ಹೂಗಾರರು ಈ ಕಾರ್ಯವನ್ನು ಮುಂದುವರಿಸಿಕೊಂಡು ಬಂದಿದ್ದಾರೆ. ದೇವರ ಪೂಜಾ ಕಾರ್ಯಗಳಿಗೆ, ವಿಶೇಷ ಸಂದರ್ಭಗಳ ಕಾರ್ಯಕ್ರಮಗಳಿಗೆ ಇವರು ಹೂವುಗಳನ್ನು ಒಪ್ಪ ಓರಣವಾಗಿ ಜೊಡಿಸಿ ಮಾಲೆ ಮಾಡಿ, ಅದಲ್ಲಿಯೇ ಕೆಲವು ಚಿತ್ರಗಳನ್ನು ಬಿಡಿಸುವುದನ್ನೂ ರೂಡಿಸಿಕೊಂಡಿದ್ದಾರೆ.

ಮದುವೆಯ ಸಂದರ್ಭದಲ್ಲಿ ಹೂಗಾರರಿಗೆ ಹೆಚ್ಚಿನ ಕಾರ್ಯಗಳು ಇರುತ್ತವೆ. ವಿವಾಹದ ಅಕ್ಕಿಗಂಟು ಕಾರ್ಯದ ಹಾರ, ನಿಶ್ಚಿತಾರ್ಥದ ಹಾರ, ಮದುಮಕ್ಕಳು ಧರಿಸುವ ದಪ್ಪವಾದ ಹಾರ ಮತ್ತು ವಧುವಿಗೆ ಒಪ್ಪುವ ಜಡೆವೇಣಿಯನ್ನೂ ಇವರು ಸುಂದರವಾಗಿ ಮಾಡಿ ಕೊಡುತ್ತಾರೆ. ಈ ಹೂವಿನ ಹಾರದಲ್ಲಿಯೂ ಬಾಸಿಂಗವನ್ನು ಮಾಡುವ ಕೌಶಲ್ಯವನ್ನು ಇವರು ಹೊಂದಿದ್ದಾರೆ. ಅವುಗಳಲ್ಲಿ ಗದ್ದಿಗೆ ಬಾಸಿಂಗ, ಕಿರೀಟ ಬಾಸಿಂಗ, ಮುತ್ತಿನ ಬಾಸಿಂಗ, ಮಧುಕೇಶ್ವರ ಬಾಸಿಂಗ, ಅಮರನಾಥ ಬಾಸಿಂಗ, ಬುಟ್ಟಿ ಬಾಸಿಂಗ, ಎಲೆ ಬಾಸಿಂಗ, ಬಾಗಿಲ ಬಾಸಿಂಗ, ಚಕ್ರಧಾರಿ ಬಾಸಿಂಗ, ಮುಂಡೋಳಿ ಬಾಸಿಂಗ, ಮಹಾಭಾರತ ಬಾಸಿಂಗ, ವೈಭವ ಬಾಸಿಂಗ ಮೊದಲಾದವುಗಳನ್ನು ತುಂಬ ಕಲಾತ್ಮಕವಾಗಿ ಇವರು ತಯಾರಿಸುತ್ತಾರೆ.

ಧಾರವಾಡ ಜಿಲ್ಲೆಯಲ್ಲಿ ಸಾಮಾನ್ಯವಾಗಿ ಹೂಗಾರರು ಕಂಡುಬರುತ್ತಿದ್ದು, ಇಂಥ ವಿಶೇಷ ಕಾರ್ಯ ಮಾಡುವುದರಲ್ಲಿ ಹುಬ್ಬಳ್ಳಿ, ಉಣಕಲ್ಲು, ಭೈರದೇವರಕೊಪ್ಪ, ಅಂಚಟಗೇರಿ, ರಾಯನಾಳ, ಗೋನಕೊಪ್ಪದ ಹೂಗಾರರು ಪ್ರಸಿದ್ಧಿ ಪಡೆದಿದ್ದಾರೆ. ಮಲಕಾಜಪ್ಪ ಹೂಗಾರ, ಸಿದ್ಲಿಂಗಪ್ಪ ಮದ್ಲಿ, ಶಿವಪ್ಪ ಹೂಗಾರ, ಬಸವಂತಪ್ಪ ಹೂಗಾರ ಮೊದಲಾದ ಕುಟುಂಬದವರು ಈ ಕಾರ್ಯವನ್ನು

---

೧೪೦. ಕ್ಷೇತ್ರಕಾರ್ಯ : ೨೦-೦೩-೨೦೧೨

ಮಾಡುತ್ತಾರೆ. ವಿವಾಹದ ಸಂದರ್ಭಗಳಲ್ಲಿ ಮಾತ್ರ ವಿಶೇಷ ಬಾಸಿಂಗಗಳನ್ನು ಮಾಡುವ ಇವರು ಉಳಿದ ಸಂದರ್ಭಗಳಲ್ಲಿ ಅಂದರೆ ಹಬ್ಬ-ಹರಿದಿನಗಳಲ್ಲಿ, ವಿಶೇಷ ಕಾರ್ಯಕ್ರಮದಲ್ಲಿ ಹೂವಿನಿಂದ ವಿವಿಧ ರೀತಿಯ ಅಲಂಕಾರಗಳನ್ನೂ ಮಾಡುತ್ತಾರೆ. ದಸರಾ, ದೀಪಾವಳಿಗಳಲ್ಲಿ ಇವರು ತಯಾರಿಸುವ ಘಟಮಾಲೆ ಬೃಹತ್ತಾದ ಘಂಟೆಯಾಕಾರದಲ್ಲಿ ಇರುತ್ತಿದ್ದು, ಅದರಲ್ಲಿ ಹಲವಾರು ರೀತಿಯ ಜನಪದ ಚಿತ್ರಕಲೆಗಳು ಕಂಡುಬರುತ್ತವೆ.

**ಬೆಳದಿಂಗಳ ಚಿತ್ರ :** ಉತ್ತರ ಕರ್ನಾಟಕದಲ್ಲಿ ಭಾರತ ಹುಣ್ಣಿಮೆ ತುಂಬ ಮಹತಿಯನ್ನು ಪಡೆದುಕೊಂಡಿದೆ. ಒಂದು ರೀತಿಯಲ್ಲಿ ಅದೊಂದು ಹಬ್ಬದ ಸಂಭ್ರಮ. ಸವದತ್ತಿ ಯಲ್ಲಮ್ಮನ ಜಾತ್ರೆ, ಉಳವಿ ಚೆನ್ನಬಸವೇಶ್ವರ ಜಾತ್ರೆ, ಮೈಲಾರಲಿಂಗನ ಜಾತ್ರೆ ಇದೇ ದಿನ ಜರುಗುತ್ತವೆ. ಹೀಗಾಗಿ ಪ್ರತಿ ಮನೆಯಲ್ಲೂ ಹಬ್ಬದ ವಾತಾವರಣ ಇರುತ್ತದೆ. ಮನೆಯನ್ನು ಸಾರಣೆ ಮಾಡಿ, ಸುಣ್ಣ, ಕೆಮ್ಮಣ್ಣು (ಹುಲಮಂಜು) ಬಳಸಿ ಗೋಡೆಗಳನ್ನು ಅಂದಗೊಳಿಸುತ್ತಾರಲ್ಲದೇ ಅದರಲ್ಲಿ ವಿವಿಧ ರೀತಿಯ ಚಿತ್ರಗಳನ್ನು ಬಿಡಿಸಿ ಖುಷಿ ಪಡುತ್ತಾರೆ. ಚುಕ್ಕೆಗಳಿಂದ ತೇರಿನ ಚಿತ್ರ, ಚಂದ್ರ, ಬಸವಣ್ಣ, ಆನೆ, ಶಿವ, ಪಾರ್ವತಿ, ಗೌರಿ, ಹುಚ್ಚಯ್ಯ, ಚೇಳು, ಹಾವು ಮೊದಲಾದ ಚಿತ್ರಗಳನ್ನು ತಮಗೆ ತೋಚಿದಂತೆ ರಚಿಸುತ್ತಾರೆ. ಇಲ್ಲಿ ನಂಬಿಕೆಗಳೂ ಎಡೆ ಪಡೆದುಕೊಂಡಿವೆ. ಮದುವೆಯಾಗದವರು ಬೆಳದಿಂಗಳ ಚಿತ್ರ ಬಿಡಿಸಿದರೆ ಬೇಗ ಮದುವೆಯಾಗುತ್ತದೆ ; ಮದುವೆಯಾದ ಹೆಣ್ಣುಮಕ್ಕಳು ತೇರಿನ ಚಿತ್ರ ಬಿಡಿಸಿದರೆ ಬಹುಬೇಗ ಮಕ್ಕಳಾಗುತ್ತವೆ, ಮುತ್ತೈದಿತನ ಗಟ್ಟಿಯಾಗಿ ಉಳಿಯುತ್ತದೆ ಹಾಗೂ ಜೀವನದಲ್ಲಿ ಯಾವಾಗಲೂ ಸುಖ-ಶಾಂತಿ-ನೆಮ್ಮದಿ ಲಭಿಸುತ್ತದೆ ಎಂದು ಬಲವಾಗಿ ನಂಬಲಾಗುತ್ತದೆ ಎಂದು ಮನಸೂರಿನ ಕರೆಮ್ಮ ಹಡಪದ ಅವರು ತಿಳಿಸುತ್ತಾರೆ.[೧೪೧]

ಪುಷ್ಯ-ಮಾಘ ಮಾಸದಲ್ಲಿ ಬರುವ ಭಾರತ ಹುಣ್ಣಿಮೆಯಲ್ಲಿ ಐದು ದಿನಗಳನ್ನು ಹೆಣ್ಣುಮಕ್ಕಳು ತಮ್ಮ ಸೌಭಾಗ್ಯದ ಪ್ರತೀಕವಾಗಿ ಆಚರಿಸುತ್ತಾರೆ. ಇದು ಕರ್ನಾಟಕದ ತುಂಬೆಲ್ಲ ಬಹು ವಿಧವಾಗಿ ನಡೆದುಕೊಂಡು ಬಂದಿದೆ. ಈ ಐದು ದಿನಗಳ ಕಾಲ ವಿಭಿನ್ನ ಚಿತ್ರಗಳನ್ನು ಬಿಡಿಸುವ ಮೂಲಕ ಹೆಣ್ಣುಮಕ್ಕಳು ಸಕಲ ಸೌಭಾಗ್ಯವನ್ನು ಪಡೆಯುವ ಕನಸು ಕಾಣುತ್ತಾರೆ. ಧಾರವಾಡ ಜಿಲ್ಲೆಯಲ್ಲಿಯೂ ಈ ಚಿತ್ರಕಲೆ ಕೆಲವು ಕಡೆ ತನ್ನತನವನ್ನು ಉಳಿಸಿಕೊಂಡು ಬಂದಿರುವುದನ್ನು ಕೆಲವು ಗ್ರಾಮಗಳಲ್ಲಿ ಕಾಣಬಹುದಾಗಿದೆ.

---

೧೪೧. ಕ್ಷೇತ್ರಕಾರ್ಯ : ೧೫-೧೦-೨೦೧೧

ಹುಲಮಂಜು ಅಥವಾ ಕೆಂಪು ಮಣ್ಣು ಮತ್ತು ಸುಣ್ಣದಿಂದ ಈ ಬೆಳದಿಂಗಳ ಚಿತ್ರಗಳನ್ನು ಬಿಡಿಸಲಾಗುತ್ತದೆ. ಭಾರತ ಹುಣ್ಣಿಮೆಯ ಆರಂಭದ ಐದು ದಿನಗಳಲ್ಲಿ ಐದು ತೆರನಾದ ಚಿತ್ರಗಳನ್ನು ಹೆಂಗಳೆಯರು ಬಿಡಿಸುತ್ತಾರೆ. ಮನೆಯ ಹೊರಗಿನ ಒಂದು ಗೋಡೆಯ ಮೇಲೆ ಕೆಮ್ಮಣ್ಣಿನಿಂದ ಮೊದಲು ಬಳಿಯಲಾಗುತ್ತದೆ. ಆನಂತರ ಸುಣ್ಣದ ದ್ರಾವಣದಲ್ಲಿ ಕೈಬೆರಳುಗಳನ್ನು ಅದ್ದಿ ಚುಕ್ಕಿಗಳನ್ನಿಡುವ ಮೂಲಕ ಚಿತ್ರಗಳನ್ನು ಬಿಡಿಸಿ, ಅದಕ್ಕೆ ಪೂಜೆ ಸಲ್ಲಿಸುತ್ತಾರೆ.

ಆರಂಭದ ಮೊದಲ ದಿನದಂದು ಸೂರ್ಯ ಮತ್ತು ಚಂದ್ರರ ಚಿತ್ರಗಳನ್ನು ಚಿತ್ರಿಸುತ್ತಾರೆ. ಎರಡನೆಯ ದಿನ ಸೂರ್ಯ-ಚಂದ್ರರೊಂದಿಗೆ ಹೆಡೆ ಎತ್ತಿ ನಿಂತು ನಾಲಿಗೆ ಚಾಚಿದ ಸರ್ಪದ ಚಿತ್ರವನ್ನೂ ಬರೆಯುತ್ತಾರೆ. ಮೂರನೆಯ ದಿನ ರಾಮನ ತೊಟ್ಟಿಲು ಎಂದುಕೊಂಡು ಚೌಕಾಕಾರದ ಚಿತ್ರವನ್ನು ರಚಿಸಿ ಅದರಲ್ಲಿ ಕೆಲವು ಚುಕ್ಕಿಗಳನ್ನು ಇಟ್ಟು ಸಂಭ್ರಮಿಸುತ್ತಾರೆ. ನಾಲ್ಕನೆಯ ದಿನ ಮರ-ಗಿಡ-ಬಳ್ಳಿ-ಎಲೆ-ಹೂವುಗಳ ಚಿತ್ರವನ್ನು ಬಿಡಿಸಲಾಗುತ್ತದೆ. ಜೊತೆಗೆ ಅವುಗಳ ನಡುವೆ ನಾಗರ ಹಾವುಗಳ ಚಿತ್ರ ಮತ್ತು ಸಣ್ಣದಾದ ತೇರನ್ನು ಚಿತ್ರಿಸುತ್ತಾರೆ. ಆ ತೇರು ಎಳೆಯುವ ವ್ಯಕ್ತಿಗಳ ಚಿತ್ರವನ್ನೂ ರೇಖೆಯಲ್ಲಿ ಮೂಡಿಸುತ್ತಾರೆ. ಇವೆಲ್ಲ ಸಾಮಾನ್ಯವಾಗಿ ಒಂದು ದಿನ ಮಟ್ಟಿಗಿನ ಚಿತ್ರಗಳಾಗಿರುತ್ತವೆ. ಯಾಕೆಂದರೆ ಪ್ರತಿ ದಿನ ಹೆಂಗಳೆಯರು ಹಿಂದಿನ ದಿನ ಬರೆದ ಚಿತ್ರವನ್ನು ಅಳುಕಿಸಿ, ಮತ್ತೇ ಕೆಂಪು ಬಣ್ಣವನ್ನು ಸಾರಿಸಿ ಹೊಸ ಚಿತ್ರಗಳನ್ನು ಚಿತ್ರಿಸುತ್ತಿರುತ್ತಾರೆ. ಆದರೆ ಐದನೆಯ ದಿನ ಬರೆಯುವ ಚಿತ್ರ ಮಾತ್ರ ಮುಂದಿನ ಹಬ್ಬದ ದಿನಗಳವರೆಗೆ ಹಾಗೆಯೇ ಇರುತ್ತದೆ.

ಐದನೆಯ ದಿನ ಕೆಂಪು ಬಣ್ಣದ ಛಾಯೆಯ ಮೇಲೆ ಸುಣ್ಣದಿಂದ ದೊಡ್ಡ ತೇರನ್ನು ಚಿತ್ರಿಸುತ್ತಾರೆ. ಬಸರಿ (ಬಸಳೆ) ಎಲೆಗಳನ್ನು ಬಳಸಿಕೊಂಡು ನೀಟಾಗಿ ತೇರಿನ ಕಳಸವನ್ನು ಚಿತ್ರಿಸುತ್ತಾರೆ. ಮೇಲ್ಭಾಗದಲ್ಲಿ ಸೂರ್ಯ, ಚಂದ್ರರನ್ನು ಬಿಡಿಸಿರುತ್ತಾರೆ. ತೇರಿನ ಅಕ್ಕಪಕ್ಕದಲ್ಲಿ ಹಾವು, ಚೇಳು, ಬಸವಣ್ಣ (ಎತ್ತು), ವಾದ್ಯಮೇಳಗಳನ್ನು ಬರೆಯುತ್ತಾರೆ. ದಿನವೂ ಪೂಜಿಸಿದಂತೆ ಈ ಚಿತ್ರಗಳಿಗೂ ಪೂಜೆ ನಡೆಯುತ್ತದೆ. ವಿಶೇಷವೆಂದರೆ ಈ ಐದನೆಯ ದಿನ ಹಬ್ಬವನ್ನಾಗಿ ಆಚರಣೆ ಮಾಡಲಾಗುತ್ತದೆ. ಅಂದು ಮನೆಯಲ್ಲಿ ಹೋಳಿಗೆ-ಪಾಯಸವನ್ನು ಮಾಡಿ ಆ ಚಿತ್ರಕ್ಕೆ ನೈವೇದ್ಯ ಅರ್ಪಿಸುವುದು ಕಂಡುಬರುತ್ತದೆ.

ಇಂದು ನಗರಗಳು ಮಾತ್ರವಲ್ಲ ಹಳ್ಳಿಗಳಲ್ಲಿಯೂ ಆಧುನಿಕತೆಗೆ ಒಗ್ಗಿಕೊಂಡವರು ಈ ಐದು ದಿನಗಳ ಬದಲಿಗೆ ಕಾಟಾಚಾರಕ್ಕೆ ಎನ್ನುವಂತೆ ಒಂದು ದಿನ ಮಾತ್ರ ಈ ಹಬ್ಬವನ್ನು ಆಚರಿಸಿ ಚಿತ್ರ ಬಿಡಿಸುವುದು ಕಂಡುಬರುತ್ತದೆ. ಮೊದಲಿನ ಸಡಗರ-ಸಂಭ್ರಮ ಕಾಣೆಯಾಗಿದ್ದು,

ಅದೊಂದು ದೇವರ ಕಾರ್ಯ ಎನ್ನುವಂತೆ ಮಾಡುತ್ತಿರುವುದನ್ನು ಕಂಡು ಗರಗದ ೮೦ ವರ್ಷದ ಆಸುಪಾಸಿನಲ್ಲಿ ಇರುವ ಬಸವ್ವ ಗುಡಗೇರಿಯವರು ಅಸಮಾಧಾನ ವ್ಯಕ್ತಪಡಿಸುತ್ತಾರೆ.[೧೪೨]

**ಸುಗ್ಗಿ ಕಾಲದ ಚಿತ್ರಗಳು :** ಬೆಳೆ ಬೆಳೆದ ರೈತ ಬೆಳೆಯನ್ನು ಕಟಾವು ಮಾಡಿದ ಮೇಲೆ ಸುಗ್ಗಿಯನ್ನು ಆಚರಿಸುತ್ತಾನೆ. ವಿಶೇಷವಾಗಿ ಉತ್ತರ ಕರ್ನಾಟಕದಲ್ಲಿ ಜೋಳ. ಗೋವಿನ ಜೋಳ, ರಾಗಿ, ನವಣೆ, ಬಾರ್ಲಿ ಗೋದಿ ಬೆಳೆಯ ಕಟಾವಿನ ಸಂದರ್ಭದಲ್ಲಿ ಸುಗ್ಗಿಯನ್ನು ಆಚರಿಸಲಾಗುತ್ತದೆ. ಇಂದು ಅಂತಹ ದೃಶ್ಯಗಳು ಅಪರೂಪವಾಗಿವೆ. ಮೊದಲಾದರೆ ಬೆಳೆಯನ್ನು ಕಟಾವು ಮಾಡಿದ ಮೇಲೆ ಅದನ್ನು ಕಸಕಡ್ಡಿಗಳಿಂದ ಮುಕ್ತಗೊಳಿಸಿ ಒಂದು ಕಡೆ ರಾಶಿಯನ್ನಾಗಿ ಒಟ್ಟಲಾಗುತ್ತಿತ್ತು. ರಾಶಿಯ ಸುತ್ತಲೂ ಈಶ್ವರ, ಬಸವಣ್ಣ, ಏಣಿ, ಗ್ವಾರಿ, ಕುಂಟೆ, ನೇಗಿಲು ಮೊದಲಾದವುಗಳ ಚಿತ್ರಗಳನ್ನು ಬಿಡಿಸಲಾಗುತ್ತಿತ್ತು. ಕೃಷಿ ಉಪಕರಣಗಳ ಚಿತ್ರಗಳನ್ನೂ ಕೆಲವು ಕಡೆ ಬಿಡಿಸಲಾಗುತ್ತಿತ್ತು. ಈ ಚಿತ್ರ ಬರೆಯಲೂ ಕೂಡ ಒಂದು ನಂಬಿಕೆ ಉಂಟು. ಮಕ್ಕಳಿಗೆ ದೃಷ್ಟಿಯಾಗದಿರಲಿ ಎಂದು ಕಾಡಿಗೆ ಬೊಟ್ಟು ಇಟ್ಟಂತೆ, ರಾಶಿಯ ಸುತ್ತ ಕಪ್ಪನೆಯ ಬೂದಿಯಿಂದ ಚಿತ್ರಗಳನ್ನು ಬಿಡಿಸಲಾಗುತ್ತದೆ. ಇಂದಿನ ದಿನಗಳಲ್ಲಿ ಕೃಷಿಯು ವ್ಯಾಪಾರದ ದೃಷ್ಟಿಕೋನವನ್ನು ಇಟ್ಟುಕೊಂಡು ವಾಣಿಜ್ಯ ಬೆಳೆಗಳನ್ನು ಹೆಚ್ಚಾಗಿ ಬೆಳೆಯುವುದರಿಂದ ಧಾರವಾಡ ಜಿಲ್ಲೆಯಲ್ಲಿ ಇಂತಹ ಸುಗ್ಗಿ ಚಿತ್ರಗಳನ್ನು ನೋಡಲು ಆಗುವುದಿಲ್ಲ.

**ಸೀಗಿ ಹುಣ್ಣಿಮೆಯ ಚಿತ್ರಗಳು :** ಅಶ್ವಿನಿ ಶುಕ್ಲ ಪೌರ್ಣಿಮೆಯನ್ನು ಸೀಗೆ ಹುಣ್ಣಿಮೆ, ಸೀಗಿ ಹುಣ್ಣಿಮೆ ಎಂದು ಕರೆಯಲಾಗುತ್ತದೆ. ಉತ್ತರ ಕರ್ನಾಟಕದಲ್ಲಿ ಈ ಹಬ್ಬವನ್ನು ವಿಶೇಷವಾಗಿ ಆಚರಿಸಲಾಗುತ್ತದೆ. '... ಜನಪದರಿಗೆ ಎಲ್ಲವೂ ದೇವರಾಗಿ ಕಂಡಿದ್ದು ಕಲ್ಲು, ಮಣ್ಣು, ಪ್ರಕೃತಿ, ಕುಂಟಿ, ರಂಟಿ ಎಲ್ಲವೂ ಇವರಿಗೆ ದೇವರಂತಾಗಿದ್ದು ಈ ಮಣ್ಣನ್ನು ನಮ್ಮ ಪಾಲಿನ ಚಿನ್ನವೆಂದು ಪೂಜಿಸುವ ಸಂಪ್ರದಾಯವೇ ಈ ಸೀಗಿ ಹುಣ್ಣಿವೆ. ಈ ಭೂಮಿ ಪೂಜೆಗೆ ಸೀಗವ್ವನ ಪೂಜೆ ಎಂದು ಕೂಡ ಕರೆಯುತ್ತಾರೆ. ಚರಗಾ ಚೆಲ್ಲುವ ಹಬ್ಬವೆಂದೂ ರೈತರು ಅತೀ ಉತ್ಸಾಹದಿಂದ ಈ ಹಬ್ಬವನ್ನು ಆಚರಿಸುವುದುಂಟು'[೧೪೩] ಎಂದು ಹುಬ್ಬಳ್ಳಿಯ ಡಾ. ರಾಮು ಮೂಲಗಿಯವರು ಅಭಿಪ್ರಾಯಪಡುತ್ತಾರೆ.

ಮೊದಲಾದರೆ ಹೆಣ್ಣುಮಕ್ಕಳು ಕುಂಬಾರನ ಮನೆಗೆ ಹೋಗಿ ಅಕ್ಕಿ-ಗೋದಿ ಮೊದಲಾದ ಧಾನ್ಯಗಳಿಂದ ಕುಂಬಾರನ ಹೆಂಡತಿಯ ಉಡಿ ತುಂಬುತ್ತಿದ್ದರು. ಆಗ ಕುಂಬಾರ ತಾನು

---

೧೪೨. ಕ್ಷೇತ್ರ ಕಾರ್ಯ : ೧೫-೦೫-೨೦೧೫

೧೪೩. ಪ್ರಜಾವಾಣಿ ಮೆಟ್ರೋ : ೨೯-೧೦-೨೦೧೨

ಸಿದ್ಧಪಡಿಸಿದ ಸೀಗವ್ವನ ಎರಡು ಪ್ರತಿಕೃತಿಗಳನ್ನು ಕೊಡುತ್ತಿದ್ದ. ಇದು ಸೀಗಿ ಹುಣ್ಣಿಮೆ ಇನ್ನೂ ಐದು ದಿನಗಳಿರುವಾಗಲೇ ನಡೆಯುವ ಕಾರ್ಯ. ಆನಂತರ ಸೀಗವ್ವಳ ಪೂಜೆಯನ್ನು ಸಾಂಗವಾಗಿ ನೆರವೇರಿಸಲಾಗುತ್ತಿತ್ತು. ಆದರೆ ಇಂದು ಅದು ಯಾಂತ್ರಿಕವಾಗಿ ಆಚರಣೆಗೊಳ್ಳುತ್ತಿದೆ. ಸಂಪ್ರದಾಯಬದ್ಧ ಅನುಸರಣೆ ಕಂಡುಬರುವುದಿಲ್ಲ. ಸೀಗವ್ವಳ ಮೂರ್ತಿಗಳು ಈಗ ಮಾರುಕಟ್ಟೆಯಲ್ಲಿಯೂ ಲಭ್ಯವಾಗುತ್ತವೆ.

'ಸೀಗಿ ಅನ್ನುವುದು ಸುಗ್ಗಿಯ ವಿಕಾರರೂಪವೆಂದೂ ಈ ಆಕೃತಿಗಳಿಗೆ ಕೆಲವೆಡೆ ಸೀಗಿಗೌರಿ ಅನ್ನುವ ಹಿನ್ನೆಲೆಯಲ್ಲಿ ಅದು ಸುಗ್ಗೀ ಗೌರಿ ಇರಬಹುದು ಎಂದು ವಾದಿಸುವವರೂ ಇಲ್ಲದಿಲ್ಲ. ಅನೇಕ ಭಾಗಗಳಲ್ಲಿ ಇದಕ್ಕೆ ಹೆಜ್ಜುಗ್ಗಿ ಹಬ್ಬ ಎನ್ನುತ್ತಾರೆ. ಹೆಜ್ಜುಗ್ಗಿ ಎಂದರೆ ಹಿರಿಯ ಸುಗ್ಗಿ ಎಂದೇ ಅರ್ಥ. ಇದು ಚಂದ್ರ ಸಂಪ್ರದಾಯದ ಮೂಲದಲ್ಲಿ ಬರುವ ಹಬ್ಬವೆಂದೂ ಇದನ್ನು ಕೌಮುದೀಮಹೋತ್ಸವವೆಂದು ಕರೆದು ಬೆಳದಿಂಗಳ ಹಬ್ಬ ಮಾಡುವುದೂ ಇದೆ'[೧೪೪] ಎನ್ನುವ ಶಶಿಕಲಾ ವಸ್ತ್ರದ ಅವರು, 'ಈ ಸೀಗಿ ಸಂಸ್ಕೃತ 'ಶಿಖಾ'ದ ತದ್ಭವ ರೂಪವೂ ಆಗಿರಬಹುದು. ಶಿಖರ-ಶಿಖಿ-ಶೀಗಿ-ಸೀಗಿ ಹೀಗೂ ಆಗಿರುವ ಸಾಧ್ಯತೆ ಇದೆ. ಇವು ಶಿಖರಾಕೃತಿಯಲ್ಲಿರುವುದೂ ನಿಜ. ಆದರೆ ಈ ಗುಪ್ಪೆಯ ಆಕೃತಿಗಳಿಗೆ ಸಂಸ್ಕೃತಿಯ ಪ್ರಾರಂಭದಿಂದಲೂ ವಿಶೇಷ ಹಿನ್ನೆಲೆ ಇದೆ ಎನ್ನುವುದನ್ನು ಸಂಶೋಧಕರು ಒಪ್ಪಿಕೊಂಡಿದ್ದಾರೆ. ಅಲ್ಲದೆ ಅನೇಕ ಜನಾಂಗಗಳಲ್ಲಿ ಇದು ಸಂಸ್ಕೃತಿಯ ಲಕ್ಷಣವಾಗಿ ಬೆಳೆದುಕೊಂಡು ಬಂದಿದೆ'[೧೪೫] ಎಂದೂ ಹೇಳುತ್ತಾರೆ. ಹೀಗಾಗಿ ಸೀಗವ್ವಳೇ ಬೇರೆ ; ಗೌರಿಯೇ ಬೇರೆ ಎನ್ನುವುದನ್ನು ನಾವು ಅರಿತುಕೊಳ್ಳಬೇಕು. ಯಾಕೆಂದರೆ ಆಚರಣೆಗಳಲ್ಲಿ ತುಂಬ ವ್ಯತ್ಯಾಸಗಳಿವೆ ಎಂಬುದನ್ನು ನೆನಪಿಡಬೇಕಾಗುತ್ತದೆ.

ರಾಯಬಹಾದ್ದೂರ ದಯಾರಾಮ ಅವರ ಮಾತುಗಳನ್ನು ಉಲ್ಲೇಖಿಸುವ ಶಶಿಕಲಾ ವಸ್ತ್ರದ ಅವರು, 'The inhebitants of Harappa appear also to have been in the habit of offering in their temples tera-cotta crnes with or without figures of animals of which Severed Specimens have been recoved. A large cone of dark stone, 11 inches high resembling the Shive Linga of modern times must have been used fo worship'[೧೪೬] ಎಂದು ಹೇಳಿ ಗುಪ್ಪೆಯಾಗಿ ಇರಿಸುವ ಸೀಗಿಯ ಬಗ್ಗೆ ಹೊಸದಾದ ವಿವರಣೆ

೧೪೪. ಜಾನಪದ ಸಾಹಿತ್ಯ ದರ್ಶನ-೧೦ : ಸಂ- ವೃಷಭೇಂದ್ರಸ್ವಾಮಿ ಎಸ್. ಎಂ : ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ : ೧೯೮೭ : ಪು-೧೪೬

೧೪೫. ಜಾನಪದ ಸಾಹಿತ್ಯ ದರ್ಶನ-೧೦ : ಸಂ- ವೃಷಭೇಂದ್ರಸ್ವಾಮಿ ಎಸ್. ಎಂ : ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ : ೧೯೮೭ : ಪು-೧೪೬

೧೪೬. ಜಾನಪದ ಸಾಹಿತ್ಯ ದರ್ಶನ-೧೦ : ಸಂ- ವೃಷಭೇಂದ್ರಸ್ವಾಮಿ ಎಸ್. ಎಂ : ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ : ೧೯೮೭ : ಪು-೧೪೬

ನೀಡಲು ಮುಂದಾಗುತ್ತಾರೆ. ಈ ಬಗ್ಗೆ ಇನ್ನಷ್ಟು ಚರ್ಚೆಯಾಗಬೇಕಿದೆ. ಜೊತೆಗೆ ವಿಸ್ತೃತ ಅಧ್ಯಯನದ ಅವಶ್ಯಕತೆ ಇದೆ ಎನಿಸುತ್ತದೆ.

ಧಾರವಾಡ ಜಿಲ್ಲೆಯಲ್ಲಿ ಸೀಗಿ ಹುಣ್ಣಿಮೆಯನ್ನು ತುಂಬ ವಿಶಿಷ್ಟವಾಗಿ ಆಚರಣೆ ಮಾಡಲಾಗುತ್ತದೆ. ಈ ದಿನ ಮನೆಯ ಹೊರಗೋಡೆಯ ಮೇಲೆ ಒಂದು ಬದಿಯಲ್ಲಿ ಜೇಡಿ ಮಣ್ಣು ಅಥವಾ ಸುಣ್ಣದಿಂದ ಗೋಡೆಯನ್ನು ಸಾರಿಸಲಾಗುತ್ತದೆ. ಆನಂತರ ಆಕಳ ಸೆಗಣಿಯಿಂದ ಉಬ್ಬುಶಿಲ್ಪವನ್ನು ಮಾಡಿ ಅದನ್ನು ಹೂವುಗಳಿಂದ ಸಿಂಗರಿಸುತ್ತಾರೆ. ಜೊತೆಗೆ ಸುಣ್ಣ, ಹುಲಮಂಜು (ಹುರಿಮಂಜು)ಗಳನ್ನು ಬಳಸಿ ಚಿತ್ರಗಳನ್ನು ಬಿಡಿಸಲಾಗುತ್ತದೆ. ಇಲ್ಲಿ ಸೂರ್ಯ, ಚಂದ್ರ, ಗಂಗೆ, ಗೌರಿ, ಬಾವಿ, ಹೊಳೆ, ಬಾಳೆಗಿಡ ಮೊದಲಾದವುಗಳನ್ನು ಚಿತ್ರಿಸಲಾಗುತ್ತದೆ.

ಒಳಗೋಡೆಯಲ್ಲಿಯೂ ಇಂತಹ ಚಿತ್ರಗಳನ್ನು ಈ ಸೀಗಿ ಹುಣ್ಣಿಮೆಯ ಸಂದರ್ಭದಲ್ಲಿ ರಚಿಸಲಾಗುತ್ತದೆ. ಜೇಡಿಮಣ್ಣಿನಿಂದ ಏಳು ದಿನಗಳವರೆಗೆ ಕ್ರಮವಾಗಿ ಒಂದು ಎರಡು, ಮೂರು, ನಾಲ್ಕು, ಐದು, ಆರು, ಏಳು ಸೀಗಿ ಪ್ರತಿಮೆಗಳನ್ನು ಮಾಡಿ ಮನೆಯ ಮಾಡಿನಲ್ಲಿ ಇಟ್ಟು ಪೂಜೆಯನ್ನು ನೆರವೇರಿಸಲಾಗುತ್ತದೆ. ಮಾಡಿನ ಸುತ್ತ ವಿಧವಿಧವಾದ ಚಿತ್ರ ರಚನೆಯನ್ನೂ ಮಾಡಲಾಗುತ್ತದೆ. ಆದರೆ ಆಧುನಿಕ ಕಾಲದ ಸಿಮೇಂಟಿನ ಕಾಂಕ್ರೀಟ್ ಕಟ್ಟಡಗಳಲ್ಲಿ ಇಂತಹ ಆಚರಣೆಗಳು ಕಂಡುಬರುವುದಿಲ್ಲ. ನೆಪಕ್ಕೆ ಎನ್ನುವಂತೆ ಹೊರ ಗೋಡೆಯ ಮೇಲೆ ಕೆಲವರು ಚಿತ್ರಗಳನ್ನು ಬಿಡಿಸಿ ಪೂಜೆ ಸಲ್ಲಿಸುವ ಪರಿಪಾಠ ಕಂಡುಬರುತ್ತದೆ.

ಸೀಗಿ ಹುಣ್ಣಿಮೆ ರೈತರ ಹಬ್ಬವಾಗಿಯೂ ಆಚರಿಸಲ್ಪಡುತ್ತದೆ. ಆ ದಿನ ರೈತರು ಭೂಮಿ ಪೂಜೆ ಮಾಡುತ್ತಾರೆ. ಹೀಗೆ ಪೂಜೆಗೆ ಹೋಗಬೇಕಾದರೆ ರೊಟ್ಟಿ ಬುತ್ತಿ ತುಂಬಿಕೊಂಡು ಹೋಗುವ ಎಣ್ಣೆ ಬುಟ್ಟಿಯನ್ನು ಸುಣ್ಣ, ಕೆಮ್ಮಣ್ಣಿನ ಮೂಲಕ ಸಿಂಗರಿಸುತ್ತಾರೆ. ಅಲ್ಲಿ ಅನೇಕ ರೀತಿಯ ಚಿತ್ರಗಳನ್ನು ಬಿಡಿಸಿರುತ್ತಾರೆ. ಬುಟ್ಟಿಯ ಮೇಲೆ ಸೂರ್ಯ, ಚಂದ್ರ, ನಿಚ್ಚಣಿಕೆ (ಏಣಿ), ಕುಡಗೋಲು, ಮನುಷ್ಯಾಕೃತಿಯ ಗೊಂಬೆ ಮೊದಲಾದವುಗಳನ್ನು ಬಿಡಿಸುತ್ತಾರೆ.

ಹಾಗೆಯೇ ಈ ಸಂದರ್ಭದಲ್ಲಿ ಊರಿನ ಎಲ್ಲರೂ ಪಾಂಡವರನ್ನು ಕುಳ್ಳಿರಿಸುವ ಪರಿಪಾಠವೂ ಇದೆ. ದುಂಡನೆಯ ಕಲ್ಲುಗಳಿಗೆ ಸುಣ್ಣ ಮತ್ತು ಕೆಮ್ಮಣ್ಣು ಬಳಸಿ ಗೊಂಬೆಯಾಕಾರ ನೀಡಿ ಅವುಗಳನ್ನು ಮನೆಯ ಬಾಗಿಲ ಹೊರಗೆ ಇಡುತ್ತಾರೆ. ಐದು ಗೊಂಬೆಗಳ ನಂತರ ಅನತಿ ದೂರದಲ್ಲಿ ಒಂದು ಗೊಂಬೆಯನ್ನು ಇಡುತ್ತಾರೆ. ಇದನ್ನು ಕಳ್ಳ ಅಥವಾ ಕರ್ಣ ಎಂಬ ನಂಬಿಕೆಯನ್ನು ಅವರು ತಳೆದಿದ್ದಾರೆ. ಹಾಗೆಯೇ ಹೊಲದ ನಡುವೆ ಜೋಳದ ದಂಟುಗಳಿಂದ ತ್ರಿಕೋನಾಕೃತಿಯ ಹಂದರ (ಚಪ್ಪರ) ಹಾಕಿ, ಅದರಡಿಯಲ್ಲಿ ದುಂಡನೆಯ ಐದು ಕಲ್ಲುಗಳನ್ನಿಟ್ಟು

ಸುಣ್ಣ–ಕೆಮ್ಮಣ್ಣು ಬಳಿದು ಪಾಂಡವರೆಂದು ಪೂಜಿಸುತ್ತಾರೆ. ಇದರ ಹಿಂದೆ ಇನ್ನೊಂದು ಸಣ್ಣ ಕಲ್ಲನ್ನು ಇಡುವರು. ಇದು ಕಳ್ಳ (ಕರ್ಣ) ಎಂಬ ಕಲ್ಪನೆಯಿದೆ ಮಾಡಿ ಕೆಲವು ಕಡೆ ಸೆಗಣಿಯಿಂದಲೂ ಪಾಂಡವರನ್ನು ಕುಳ್ಳಿರಿಸುವ ಪರಿಪಾಠವಿದೆ ಎಂಬುದಾಗಿ ಮನಸೂರಿನ ಚೆನ್ನವ್ವ ಮತ್ತು ಕರಬಸವ್ವ ಹೇಳುತ್ತಾರೆ.[೧೪೭] ಹಸಿರು ಪೈರಿನಿಂದ ಮೈದುಂಬಿ ಕಂಗೊಳಿಸುವ ಭೂತಾಯಿಗೆ ಸೀಮಂತ ಮಾಡಿ, ಬಯಕೆ ಊಟವನ್ನು ಸಲ್ಲಿಸುವ ಸಂಪ್ರದಾಯದ ಭೂಮಿ ಪೂಜೆಯೇ ಆಗಿದೆ. ಭೂಮಿಯನ್ನು ಆರಾಧಿಸುವ ಮತ್ತು ಭೂಮಿಗೆ ಬೆಳೆಯನ್ನು ತರುವಲ್ಲಿ ಸಹಕಾರಿ ಆಗಿರುವ ಸಾಮಗ್ರಿಗಳ ಪೂಜೆ ಮಾಡುವುದು ಇಲ್ಲಿ ಕಂಡುಬರುತ್ತದೆ.

**ಗೌರಿ ಹುಣ್ಣಿಮೆ :** ಪ್ರತಿ ವರ್ಷ ನವೆಂಬರ್ ತಿಂಗಳ ಭಾದ್ರಪದದಲ್ಲಿ ಬರುವ ಈ ಹಬ್ಬವನ್ನು ಕಾರ್ತಿಕ ಶುದ್ಧ ಪಂಚಮಿಯಂದು ಮನೆಗಳಲ್ಲಿ ಸ್ಥಾಪಿಸಿ ಪೂಜೆ ಮಾಡಲಾಗುತ್ತದೆ. ಗಣಪತಿ ಬರುವ ಮುಂಚೆಯೇ ಗೌರಿ ಮನೆ ಮನೆಗೆ ಬರುತ್ತಾಳೆ. ಇಲ್ಲಿಯೂ ವಿವಿಧ ರೀತಿಯ ಆಚರಣೆಗಳು ಕಂಡುಬರುತ್ತವೆ. ಅದರಂತೆ ಗೌರಿಯ ಮೂರ್ತಿಯನ್ನು ತಯಾರಿಸಿ ಅಥವಾ ಖರೀದಿಸಿ ತಂದು ಮನೆಯಲ್ಲಿ ಸ್ಥಾಪನೆ ಮಾಡಲಾಗುತ್ತದೆ. ಎರಡು ದಿನಗಳ ನಂತರ ಗೌರಿಯನ್ನು ನದಿ, ಹಳ್ಳ ಅಥವಾ ಬಾವಿಯಲ್ಲಿ ವಿಸರ್ಜನೆ ಮಾಡುತ್ತಾರೆ.

'...ಗೌರಿಯು ವರ್ಷಕ್ಕೊಮ್ಮೆ ಭೂಲೋಕಕ್ಕೆ ಬರುತ್ತಾಳೆ. ಈಕೆಯು ಕೈಲಾಸಪತಪಯಾದ ಶಿವನ ಹೆಂಡತಿಯಾದರೂ ಭೂಲೋಕದವರ ಮಗಳು. ಶಿವನು ಈ ಲೋಕದ ಜನರ ಭಾವನೆಂಬ ಭಾವನೆ ಜನಪದರಲ್ಲಿದೆ. ಇದರಿಂದ ಗೌರಿಯು ಮನೆಯ ಮಗಳಾದ ಕಾರಣ ಆಕೆಯನ್ನು ವರ್ಷಕ್ಕೊಮ್ಮೆ ಕರೆಯಿಸಿ, ಗೌರವಾದರಗಳಿಂದ ಗೌರಿ ಹುಣ್ಣಿಮೆಯ ದಿನ ಗಂಡನ ಮನೆಯಾದ ಕೈಲಾಸಕ್ಕೆ ಉಡಿಯಕ್ಕಿಯನ್ನು ಹಾಕಿ ಕಳಿಸಿ ಕೊಡುತ್ತಾ ಉತ್ತಮರಾದ ಅಣ್ಣತಮ್ಮಂದಿರನ್ನು ನೀಡೆಂದು ಆಕೆಯ ಆಶೀರ್ವಾದವನ್ನು ಬಯಸುತ್ತಾರೆ'[೧೪೮] ಎಂದು ಡಾ. ಮಲ್ಲಿಕಾರ್ಜುನ ಕುಂಬಾರ ಅವರು ಹೇಳುತ್ತಾರೆ. ಹೀಗೆ ಈ ಹಬ್ಬದ ಕತೆ ಬಿಚ್ಚಿಕೊಳ್ಳುತ್ತದೆ. ಇದಕ್ಕೆ ಹಲವಾರು ಉಪಕತೆಗಳೂ ಸೇರಿಕೊಂಡಿವೆ.

ಗೌರಿ ಹಬ್ಬವನ್ನು ಐದು ಅಥವಾ ಒಂಬತ್ತು ದಿನಗಳವರೆಗೆ ಆಚರಿಸಲಾಗುತ್ತದೆ. ಹೆಣ್ಣುಮಕ್ಕಳು ಆ ಹಬ್ಬದ ದಿನದ ಮಧ್ಯಾಹ್ನ ಊಟವನ್ನು ತೋಪಿಗೆ ಇಲ್ಲವೆ ಹೊಲಕ್ಕೆ ಹೋಗಿ ಮಾಡುತ್ತಾರೆ. ಆ ಸಮಯದಲ್ಲಿ ಒಂದು ವಿಚಿತ್ರ ಎನ್ನಿಸುವ ಆಚರಣೆಯೂ ಇದೆ. '... ... ಗಂಡು

೧೪೭. ಕ್ಷೇತ್ರಕಾರ್ಯ : ೧೫–೧೦–೨೦೧೧

೧೪೮. ಪ್ರಜಾವಾಣಿ : ಕರ್ನಾಟಕ ದರ್ಶನ : ೨೨–೦೧–೨೦೧೩

ಹುಡುಗರು ಇವರು ಉಂಡು ಬರುವುದರಲ್ಲಿ ಅಲ್ಲೇ ಹತ್ತಿರದಲ್ಲಿ ಒಣ ಮಣ್ಣಿನಲ್ಲೇ ನೆಲಕ್ಕೆ ಮಲಗಿಸಿದಂತೆ ಒಂದು ಪುರುಷಾಕೃತಿಯನ್ನು ಮಾಡಿರುತ್ತಾರೆ. ಅದರ ಹೊಟ್ಟೆಯಲ್ಲಿ ಮುಳ್ಳು ಚುಚ್ಚಿ, ಮೇಲೆ ಮಣ್ಣು ಮುಚ್ಚಿರುತ್ತಾರೆ. ಇದನ್ನು 'ಕುಂಯ್ಯಾ' ಎಂದು ಕರೆಯುತ್ತಾರೆ. ಹುಡಿಗೆಯರು ಇದರ ಸುತ್ತಲೂ ಕುಕ್ಕುರಗಾಲಲ್ಲಿ ಕುಳಿತು ಅದನ್ನು ಬಡಿ-ಬಡಿದು ಸತ್ತಾಗ ಅಳುವಂತೆ ಹಾಡಿ-ಹಾಡಿಕೊಂಡು ಅಳುತ್ತಾರೆ'[೧೪೯] ಎಂದು ಶಶಿಕಲಾ ವಸ್ತ್ರದ ಅವರು ಹೇಳುತ್ತಾರೆ. ಇದಕ್ಕೆ ವಿಶ್ಲೇಷಣೆಯ ಅಗತ್ಯ ಇದೆ.

ಇಲ್ಲಿ ಪುರುಷ ಮತ್ತು ಪ್ರಕೃತಿಯ ಆರಾಧನೆ ಏಕಕಾಲದಲ್ಲಿ ಜರುಗುತ್ತದೆ. ಜೊತೆಗೆ ಪ್ರಣಯದ ಉತ್ಕಟತೆ ಕೂಡ ಕಂಡುಬರುತ್ತದೆ. ಸಂಪ್ರದಾಯವಾಗಿ ಇದು ಮುಂದುವರೆದುಕೊಂಡು ಬಂದಿರುವುದರಿಂದ ಇದರ ಹಿಂದಿನ ಕಾರಣ ಮರೆತಿರುವ ಸಂಭಾವ್ಯತೆ ಇದೆ. ಈ ಬಗ್ಗೆ ವಿಶೇಷವಾದ ಅಧ್ಯಯನ ಮಾಡಿ ಅದರ ಹಿಂದಿನ ಮರ್ಮವನ್ನು ತಿಳಿದುಕೊಳ್ಳಬೇಕಿದೆ. ಬಹುಶಃ ದ್ವಿಪತ್ನಿತ್ವವನ್ನು ವಿರೋಧಿಸಿ ಈ ರೀತಿಯ ವರ್ತನೆಯನ್ನು ತೋರುತ್ತಿದ್ದಿರಬಹುದು ಎನಿಸುತ್ತದೆ. ಮುಂದಿನ ಅಧ್ಯಯನಗಳು ಈ ಬಗ್ಗೆ ಬೆಳಕು ಚೆಲ್ಲಬೇಕು. ಇದು ಗೌರಿ ಬಂದಾಗ ಮೊದಲೇ ಶಿವನ ಜಟೆಯಲ್ಲಿ ಗಂಗೆ ಇರುತ್ತಾಳೆ. ಇದರ ಅರಿವು ಗೌರಿಗೆ ಇದೆ. ಹಾಗಾಗಿಯೇ ಆಕೆ ಶಿವನನ್ನು ನಿಂದಿಸುತ್ತಾಳೆ ಎನ್ನುವುದಕ್ಕೆ ಈ ಹಬ್ಬದಲ್ಲಿ ಸಾಕ್ಷ್ಯಗಳು ಸಿಗುತ್ತವೆ. 'ಗೌರಿಯ ಎದುರಿಗೆ ದಾರದಲ್ಲಿ ತೂಗು ಬಿಟ್ಟ ಒಂದು ಹಸೀ ಮಣ್ಣಿನ ಸ್ತ್ರೀ ಮೂರ್ತಿಯೊಂದಿರುತ್ತದೆ. ಇದಕ್ಕೆ ಎಲ್ಲರೂ 'ದೀಬರದಿಂಡಿ' ಅನ್ನುತ್ತಾರೆ. ಇದು ಹಳ್ಳಿಯ ಬೈಗುಳ. ಗಡಸುಗಾರ್ತಿ-ಗಂಡುಬೀರಿ ಹೆಣ್ಣಿಗೆ ಹೀಗೆಂದು ಬೈಯ್ಯುತ್ತಾರೆ'[೧೫೦] ಎನ್ನುವ ಶಶಿಕಲಾ ವಸ್ತ್ರದ ಅವರು ಗಂಗೆಯ ಪ್ರಸ್ತಾಪವನ್ನು ಕೈ ಬಿಟ್ಟಿದ್ದಾರೆ ಎನಿಸುತ್ತದೆ. ದೀಬರದಿಂಡಿ ಬಗ್ಗೆ ಇರುವ ಹಾಡಿನಲ್ಲಿ ಆಕೆ ಎಲ್ಲದಕ್ಕೂ ಅಪಹಾಸ್ಯಕ್ಕೆ ಈಡಾಗುವ ಉತ್ತರವನ್ನೇ ಕೊಡುತ್ತಾಳೆ ಎನ್ನುವುದನ್ನು ಗಮನಿಸಬೇಕು.[೧೫೧] ಜೊತೆಗೆ ಇದೇ ಸಂದರ್ಭದಲ್ಲಿ ಗಂಗೆ-ಗೌರಿ ಮೂರ್ತಿಗಳನ್ನು ಬುಟ್ಟಿಗಳಲ್ಲಿ ಇಟ್ಟುಕೊಂಡು ಬರುವ ಕೆಲವು ವೇಷಗಾರರು ಗಂಗೆ-ಗೌರಿಯ ಜಗಳದ ಪ್ರಸ್ತಾಪ ಮಾಡುವುದನ್ನು ನಾವು ಕಂಡಿದ್ದೇವೆ.

---

೧೪೯. ಜಾನಪದ ಸಾಹಿತ್ಯ ದರ್ಶನ-೧೦ : ಸಂ-ವೃಷಭೇಂದ್ರಸ್ವಾಮಿ ಎಸ್. ಎಂ : ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ : ೧೯೮೭ : ಪು-೧೫೧

೧೫೦. ಜಾನಪದ ಸಾಹಿತ್ಯ ದರ್ಶನ-೧೦ : ಸಂ-ವೃಷಭೇಂದ್ರಸ್ವಾಮಿ ಎಸ್. ಎಂ : ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ : ೧೯೮೭ : ಪು-೧೬೪

೧೫೧. ದೀಬರ ದಿಂಡಿ ದೀಬರ ದಿಂಡಿ ದೀಪ ಎಲ್ಲಿಟ್ಟಿ ? / ಗಾಳಿ-ಗೀಳಿಗಿ ಆರಿತಂತ ಕುಂಬಿ ಮ್ಯಾಲಿಟ್ಟೆ / ದೀಬರ ದಿಂಡಿ ದೀಬರ ದಿಂಡಿ ಕೂಸಿನ್ನೆಲ್ಲಿಟಿ ? / ಕತ್ತಲ ಖೋಲ್ಯಾಗ ಕರಗಿತಂತ ಮಾಳಗಿ ಮ್ಯಾಲಿಟ್ಟೆ// ಎನ್ನುವ ಹಾಡು ತುಂಬ ಪ್ರಸಿದ್ಧವಾಗಿದೆ.

ಗೌರಿ ಹಬ್ಬದಲ್ಲಿ ವಿಶೇಷವಾಗಿ ಸಕ್ಕರೆ ಗೊಂಬೆಯನ್ನು ಮಾಡಲಾಗುತ್ತದೆ. ಗೌರಿ ಹಬ್ಬದಂದು ಸಕ್ಕರೆ ಗೊಂಬೆಗಳಿಗೆ ವಿಶೇಷವಾದ ಮಹತ್ವ ಇದೆ. ಈ ಸಕ್ಕರೆ ಗೊಂಬೆಗಳನ್ನು ತಯಾರಿಸುವಲ್ಲಿ ಕುಂದಗೋಳ ಹೆಚ್ಚು ಪ್ರಸಿದ್ಧಿಯನ್ನು ಪಡೆದಿದೆ. ಇಲ್ಲಿಯ ಮಂಜುನಾಥ ಹಿರೇಮಠರ ಕುಟುಂಬ ಈ ಕಾಯಕವನ್ನು ಮಾಡುತ್ತದೆ. ಈ ಸಕ್ಕರೆ ಗೊಂಬೆಯಲ್ಲಿ ರೈತ ಬಿತ್ತುತ್ತಿರುವ ಗೊಂಬೆ, ಬಾತುಕೋಳಿ, ಆನೆ, ಒಂಟೆ, ಗಿಳಿ, ತೇರು, ನವಿಲು, ಆರತಿ ತಟ್ಟೆ, ಈಶ್ವರಲಿಂಗ, ಹನುಮಂತ, ಗಣೇಶ ರೂಪಗಳನ್ನು ಮಾಡಲಾಗುತ್ತದೆ. ಇಲ್ಲಿ ಕಲಾತ್ಮಕತೆಗಿಂತ ಜಾನಪದ ದೃಷ್ಟಿಕೋನ ಹೆಚ್ಚಾಗಿ ಕಂಡುಬರುತ್ತದೆ. ಸಕ್ಕರೆಯ ಪಾಕದಲ್ಲಿ ತಯಾರಿಸಲಾದ ವಿವಿಧ ಆಕಾರದ ಗೊಂಬೆಗಳು ಆಕರ್ಷಣೀಯವಾಗಿರುತ್ತವೆ.

ಧಾರವಾಡದ ಮೃತ್ಯುಂಜಯ ನಗರದಲ್ಲಿ ಇರುವ ಬಿ.ಎಚ್. ಜನೇಗೌಡ ವೃತ್ತಿಯಿಂದ ತೆಂಗಿನಕಾಯಿ ವ್ಯಾಪಾರಿಯಾಗಿದ್ದರೂ ಗೌರಿ ಹಬ್ಬದಲ್ಲಿ ಸಕ್ಕರೆ ಗೊಂಬೆಗಳನ್ನು ತಯಾರಿಸುವ ಕಾಯಕ ಮಾಡುತ್ತಾರೆ.[೧೫೨] ಗಾಂಧಿ ನಗರದಲ್ಲಿರುವ ರವಿ ಜನೇಗೌಡ ಮತ್ತು ಕುಂಬಾರ ಓಣಿಯಲ್ಲಿ ಇರುವ ಪಿ.ಎಚ್. ಕುಂಬಾರ ಅವರೂ ಈ ಸಕ್ಕರೆ ಗೊಂಬೆಗಳನ್ನು ತಯಾರಿಸುತ್ತಾರೆ. ಈ ಸಕ್ಕರೆ ಗೊಂಬೆಗಳಲ್ಲಿ ಚಕ್ಕಡಿ, ತೇರು, ಆರತಿ, ಆನೆ, ಕುದುರೆ, ಗಿಳಿ, ಬಸವಣ್ಣ, ತುಳಸಿಕಟ್ಟೆ, ನವಿಲು, ರಾಮ, ಲಕ್ಷ್ಮಣ, ಸೀತೆ, ಹನುಮಂತ, ದೀಪಸ್ತಂಭ, ಮೊಲ, ಕೇದಿಗೆ, ಜಿಂಕೆ ಮೊದಲಾದ ಆಕಾರಗಳು ಕಂಡುಬರುತ್ತವೆ. ಇದಕ್ಕಾಗಿ ಪ್ರತ್ಯೇಕವಾದ ಅಚ್ಚುಗಳು ಇರುತ್ತವೆ. ಆಹಾರಕ್ಕಾಗಿ ಬಳಸುವ ಕೆಂಪು, ಹಳದಿ, ಹಸಿರು, ಕೇಸರಿ, ಬಿಳಿ, ಗುಲಾಬಿ ಬಣ್ಣಗಳನ್ನೇ ಇವುಗಳಲ್ಲಿ ಬಳಸುವುದರಿಂದ ಇವು ತಿನ್ನಲಿಕ್ಕೆ ಯೋಗ್ಯವಾದ ಸಕ್ಕರೆ ಗೊಂಬೆಗಳಾಗಿವೆ ಎಂದು ಗಾಂಧಿ ನಗರದ ರಾಜೇಸಾಬ್ ಚಾಕರಿ ಅವರು ಹೇಳುತ್ತಾರೆ.[೧೫೩]

ಗೌರಿ ಹಬ್ಬದಲ್ಲಿ ಮೂಡಿಬರುವ ಮತ್ತೊಂದು ಜನಪದ ಕಲೆ ಎಂದರೆ ಹತ್ತಿ ಹಾರವನ್ನು ತಯಾರಿಸುವುದು. ಗೌರಿಯ ಮನೆಯವರು ಬಡವರೆಂದು ಶಿವ ಹೇಳಿದಾಗ ಆಕೆ ತವರಿಗೆ ಹೋಗುವಾಗ ತನ್ನೆಲ್ಲ ಆಭರಣಗಳನ್ನು ಬಿಚ್ಚಿಟ್ಟು ಬಿಚ್ಚೋಲೆಯನ್ನು ಮಾತ್ರ ಧರಿಸಿ ತವರಿಗೆ ಹೋದಳು. ಆನಂತರ ಶಿವ ಕರೆಯಲು ಬಂದಾಗ ಆಕೆ ಆತನೊಡನೆ ಹೋಗುವಾಗ ಅಲ್ಲಿಯ ಹೆಣ್ಣುಮಕ್ಕಳು ಆಕೆಗೆ ಆಭರಣಗಳನ್ನು ನೀಡಿ ಸತ್ಕರಿಸಿ ಕಳುಹಿಸಿಕೊಟ್ಟರು ಎಂಬ ಕತೆ ಬರುತ್ತದೆ. ಇದಕ್ಕಾಗಿಯೇ ಗೌರಿ ಹಬ್ಬದ ಸಂದರ್ಭದಲ್ಲಿ ಹೆಣ್ಣುಮಕ್ಕಳು ಹತ್ತಿಯ ಹಾರಗಳ ತಯಾರಿಕೆ ಮಾಡುತ್ತಾರೆ. ಹತ್ತಿಯನ್ನು ಗೆಜ್ಜೆಯಾಕಾರದಲ್ಲಿ ವಿವಿಧ ವಿನ್ಯಾಸಗಳಲ್ಲಿ ಮಾಡಲಾಗುತ್ತದೆ. ಇದಕ್ಕೆ

೧೫೨. ಕ್ಷೇತ್ರಕಾರ್ಯ : ಧಾರವಾಡ : ೨೮-೧೧-೨೦೧೨
೧೫೩. ಕ್ಷೇತ್ರಕಾರ್ಯ : ಧಾರವಾಡ : ೨೮-೧೧-೨೦೧೨

ಗೌರಿ ಹಬ್ಬದ ದಿನ ಬೇಡಿಕೆಯೂ ಇರುತ್ತದೆ. ಹತ್ತಿಯ ಹಾರದಲ್ಲಿಯೇ ಕಲೆಯನ್ನು ಅರಳಿಸುವಿಕೆಯಲ್ಲಿ ಹೆಣ್ಣುಮಕ್ಕಳು ತಲ್ಲೀನರಾಗಿ ಕಾಯಕ ಮಾಡುತ್ತಾರೆ ಎಂದು ಹುಬ್ಬಳ್ಳಿಯ ಮೀನಾ ಧರ್ಬೆಯವರು ಹೇಳುತ್ತಾರೆ.[೧೫೪] ಅಂದರೆ ಪೌರಾಣಿಕ ಹಿನ್ನೆಲೆಯ ಕತೆಯೊಂದನ್ನು ಇಟ್ಟುಕೊಂಡು ಈ ಹಬ್ಬವನ್ನು ಸಾಕಾರಗೊಳಿಸಲಾಗುತ್ತಿದೆ. ಈ ಹಿನ್ನೆಲೆ ಇಂದಿನವರಿಗೆ ಹೆಚ್ಚು ಗೊತ್ತಿಲ್ಲವಾದರೂ ಅವರು ಗೌರಿ ಹಬ್ಬವನ್ನು ಅಚ್ಚುಕಟ್ಟಾಗಿಯೇ ನಡೆಸಿಕೊಂಡು ಬರುತ್ತಿದ್ದಾರೆ. ಈಗ ಇದೊಂದು ಫ್ಯಾಶನ್ ರೀತಿಯಲ್ಲಿ ಚಾಲ್ತಿಯಲ್ಲಿ ಇರುವುದನ್ನು ಕಾಣುತ್ತೇವೆ.

**ಹಟ್ಟಿ ಹಬ್ಬ :** ದೀಪಾವಳಿ ಹಬ್ಬವು ಸಾಮಾನ್ಯವಾಗಿ ಐದಾರು ದಿನಗಳ ಕಾಲ ನಡೆಯುತ್ತದೆ. ನೀರು ತುಂಬಿಸುವ ಹಬ್ಬ, ನರಕ ಚತುರ್ದಶಿ, ಅಮವಾಸ್ಯೆ, ಲಕ್ಷ್ಮೀ ಪೂಜೆ, ಬಲಿ ಪಾಡ್ಯಮಿ, ಹಟ್ಟಿ ಪೂಜೆ, ಪಾಂಡವರ ಪೂಜೆ, ಕಿಚ್ಚು ಹಾಯಿಸುವುದು ಮೊದಲಾದ ಸಂಭ್ರಮಗಳನ್ನು ಈ ಸಂದರ್ಭದಲ್ಲಿ ಆಚರಿಸಲಾಗುತ್ತದೆ. ಕೆಲವು ಕಡೆ ಈ ದೀಪಾವಳಿ ಸಂದರ್ಭದಲ್ಲಿ ಜರುಗುವ ಹಟ್ಟಿಹಬ್ಬ ರೈತಾಪಿಗಳ ಹಬ್ಬವಾಗಿ ಕಾಣಿಸಿಕೊಂಡು ಮಹತ್ವ ಪಡೆದುಕೊಂಡಿದೆ. ಹಳ್ಳಿಗರು ತಮ್ಮ ಹಟ್ಟಿಯಲ್ಲಿರುವ ದನಕರು, ಕುರಿ–ಆಡು ಮೊದಲಾದವುಗಳಿಗೆ ಪೂಜೆ ಸಲ್ಲಿಸಿ ಸಂಪತ್ತು ವೃದ್ಧಿಯಾಗಲಿ ಎಂದು ಬೇಡಿಕೊಳ್ಳುತ್ತಾರೆ.

ಉತ್ತರ ಕರ್ನಾಟಕದಲ್ಲಿ ರೈತರು ಹಟ್ಟಿ ಅಥವಾ ದಡ್ಡಿಯ ಭಾಗದಲ್ಲಿರುವ ಹೊಲದಲ್ಲಿ ಬೆಳೆದಿರುವ ಬನ್ನಿಗಿಡದ ಟೊಂಗೆಯನ್ನು ಕಡಿದು ತಂದು ನಿಲ್ಲಿಸಿ ಅಮವಾಸ್ಯೆಯ ದಿನ ಹಣತೆ ಹಚ್ಚಿ ಲಕ್ಷ್ಮಿ ಪೂಜೆಯನ್ನು ನೆರವೇರಿಸುತ್ತಾರೆ. ಬನ್ನಿಗಿಡವನ್ನು ವಿವಿಧ ರೀತಿಯಲ್ಲಿ ಅಲಂಕರಿಸಿ ಈ ಹಬ್ಬವನ್ನು ಆಚರಣೆ ಮಾಡುತ್ತಾರೆ. ಅಲ್ಲಿ ಬರೆಯುವ ಚಿತ್ರಗಳು ಸಾಮಾನ್ಯವಾಗಿ ಚುಕ್ಕೆ, ಗೆರೆಗಳನ್ನು ಒಳಗೊಂಡಿರುತ್ತವೆ. 'ಬಲಿ ಪಾಡ್ಯಮಿಯ ದಿನ ನಸುಕಿನಲ್ಲಿಯೇ ಎದ್ದು ಸ್ನಾನಾದಿಗಳನ್ನು ಮುಗಿಸಿ, ಹಸು–ಕರು, ಕುರಿ–ಆಡುಗಳನ್ನು ಬೆಚ್ಚ ಹಾಯಿಸುವುದಕ್ಕೆ ತಯಾರಿ ನಡೆಸುವರು. ದನ–ಕರು, ಕುರಿ–ಮೇಕೆಗಳನ್ನು ಹಟ್ಟಿಯ ಬಾಗಿಲಲ್ಲಿ ತಯಾರಿಸಿದ ಬೆಚ್ಚದಲ್ಲಿ ಹಾಯಿಸುವ ಪದ್ಧತಿ[೧೫೫] ಈಗಲೂ ರೂಢಿಯಲ್ಲಿದೆ. ದಕ್ಷಿಣ ಕರ್ನಾಟಕದಲ್ಲಿ ಎತ್ತುಗಳಿಗೆ ಮಾತ್ರ ಸಂಕ್ರಾಂತಿ ಸಮಯದಲ್ಲಿ ಕಿಚ್ಚು ಹಾಯಿಸುತ್ತಾರೆ. ಬಯಲು ನಾಡಿನಲ್ಲಿ ಮುಂಬರುವ ಚಳಿಯನ್ನು ತಡೆಯುವ ಸಾಮರ್ಥ್ಯ ದನ–ಕರುಗಳಿಗೆ ಬರಲೆಂದು ಹಟ್ಟಿಯ ಬಾಗಿಲ ಮುಂದೆ ಮೇವಿನ ಸೊಪ್ಪೆ ಕಿಚ್ಚು ಮಾಡುವರು. ಅದರಲ್ಲಿ ತುರುಬಿ, ತುಂಬಿ, ಗಣಜಲಿ, ಹೆಬ್ಬೇವು ಮೊದಲಾದ ಔಷಧಿ

---

೧೫೪. ಕ್ಷೇತ್ರಕಾರ್ಯ : ಹುಬ್ಬಳ್ಳಿ : ೨೯–೧೧–೨೦೧೨

೧೫೫. ಅಂದರೆ, ಬೆಂಕಿ ಹಾಯಿಸುವುದು ಎಂದರ್ಥ. ದನ–ಕರು, ಕುರಿ–ಮೇಕೆಗಳನ್ನು ಬೆಂಕಿಯ ಮೇಲೆ ಹಾಯಿಸುವುದರಿಂದ ಅವುಗಳ ಮೈಯಲ್ಲಿರುವ ಕ್ರಿಮಿ ಕೀಟಗಳು, ಉಣ್ಣೆ, ಹೇನುಗಳು ಬೆಂಕಿಯಲ್ಲಿ ಬಿದ್ದು ಸುಟ್ಟುಹೋಗುವುದಲ್ಲದೆ ಬೆಂಕಿಯ ಝಳಕ್ಕೆ ಮೈಯಲ್ಲಿನ ಕ್ರಿಮಿಗಳೂ ಸತ್ತು ಹೋಗುತ್ತವೆಂಬುದು ಜನಪದರ ನಂಬಿಕೆ ಮತ್ತು ವೈಜ್ಞಾನಿಕ ತಿಳಿವಳಿಕೆ.

ಮಹತ್ವ ಪಡೆದ ಸಸ್ಯಗಳ ಎಲೆಗಳನ್ನು ಹಾಗೂ ಲೋಬಾನ ಹಾಕುವರು. ಹಟ್ಟಿಯ ತುಂಬ ಸುವಾಸನೆಯುಕ್ತ ಹೊಗೆ ಆವರಿಸುತ್ತಿದ್ದಂತೆ ಹಟ್ಟಿಯಲ್ಲಿರುವ ದನ-ಕರು, ಕುರಿ-ಆಡುಗಳನ್ನು ತಂದು ಕಿಚ್ಚಿಗೆ ಹಾಯಿಸುವರು. ಪಾಂಡವರು ಮನೆಯನ್ನು ಸೇರುವ ಆ ದಿವಸದಲ್ಲಿ ಆ ಹೊಗೆಯೂ ಝುಳವೂ ದನ-ಕರು, ಕುರಿ-ಮರಿಗಳಿಗೆ ತಾಗಿದರೆ ಚಳಿಯು ಹತ್ತುವುದಿಲ್ಲವೆಂಬ ನಂಬಿಕೆ ರೈತರಲ್ಲಿ ಬೆಳೆದು ಬಂದಿದೆ'[೧೫೬] ಎಂದು ಬಸವರಾಜ ಆಕಳವಾಡಿಯವರು ತಿಳಿಸುತ್ತಾರೆ.

ಧಾರವಾಡ ಜಿಲ್ಲೆಯಲ್ಲಿ ಹಟ್ಟಿ ಹಬ್ಬವನ್ನು ವಿಶಿಷ್ಟ ರೀತಿಯಲ್ಲಿ ಆಚರಣೆ ಮಾಡುತ್ತಾರೆ. ಹಟ್ಟಿಯನ್ನು ಇಲ್ಲಿ ಕೊಟ್ಟಿಗೆ, ಹಕ್ಕಿ ಎಂದು ಕರೆಯುತ್ತಾರೆ. ಈ ಕೊಟ್ಟಿಗೆಯನ್ನು ರೈತರು ಸಿರಿದೇವಿ ಲಕ್ಷ್ಮಿಯ ಸ್ಥಾನವೆಂದು ಭಾವಿಸುತ್ತಾರೆ. ಕೊಟ್ಟಿಗೆಯಲ್ಲಿನ ದನಗಳ ಸೆಗಣಿಯನ್ನೇ ಬಳಸಿಕೊಂಡು 'ಹಟ್ಟಿ ಲಕ್ಕವ್ವ', 'ಹಟ್ಟೆವ್ವ' ಮೊದಲಾದ ಹೆಸರಿನಿಂದ ಕರೆಯುವ ಲಕ್ಷ್ಮಿಯ ವಿಗ್ರಹಗಳನ್ನು ತಯಾರಿಸುತ್ತಾರೆ. ಲಕ್ಷ್ಮೀಯ ಸುತ್ತಲೂ ಏಳು ಸುತ್ತಿನ ಕೋಟೆಯನ್ನೂ, ಸೈನಿಕರನ್ನೂ ಸೆಗಣಿಯಿಂದಲೇ ಮಾಡುತ್ತಾರೆ. ಹಟ್ಟಿ ಲಕ್ಕವ್ವಳ ಸೆಗಣಿ ವಿಗ್ರಹ ಹೆಣ್ಣಿನಾಕಾರದಲ್ಲಿಯೇ ಇರುತ್ತದೆ. ಅದರ ತಲೆಯ ಮೇಲೆ ಒಂದು ಮೊಸರಿನ ಗಡಿಗೆಯನ್ನು ಇಡುತ್ತಾರೆ. ಇದೂ ಕೂಡ ಸೆಗಣಿಯಿಂದಲೇ ಮಾಡಲ್ಪಟ್ಟಿರುತ್ತದೆ. ಆ ಗಡಿಗೆಯಲ್ಲಿ ಬೆಣ್ಣೆಯನ್ನು ಹಾಕುತ್ತಾರೆ. ಈ ವಿಗ್ರಹಗಳಿಗೆ ಪ್ರಾಕೃತಿಕವಾಗಿ ಹೊಲಗಳಲ್ಲಿ ಲಭ್ಯವಾಗುವ ಹೊನ್ನರಿಕೆ ಹೂವು, ಕೋಲಾಣಿ ತೆನೆ, ಹುಲ್ಲಿನ ತೆನೆ, ಉತ್ತರಾಣಿ ಕಡ್ಡಿ, ಜೋಳದ ಸಣ್ಣ ದಂಟು, ಚಂಡು ಹೂವು, ಗುರೆಳ್ಳು ಹೂವು, ಮೆಣಸಿನಕಾಯಿ ಮೊದಲಾದ ಹೊಲದಲ್ಲಿ ಬೆಳೆದ, ಪ್ರಾಕೃತಿಕವಾಗಿ ಸಿಗುವ ವಸ್ತುಗಳಿಂದಲೇ ಸಿಂಗರಿಸಲಾಗುತ್ತದೆ. ದೀಪಾವಳಿಯಂದು ಲಕ್ಷ್ಮೀ ಪೂಜೆ ಹಾಗೂ ರೈತರು ತಮ್ಮ ಕೊಟ್ಟಿಗೆಯಲ್ಲಿನ ದನಗಳ ಸೆಗಣಿಯಿಂದ ಲಕ್ಷ್ಮೀ(ಲಕ್ಕವ್ವ)ಯ ಮೂರ್ತಿಯನ್ನು ಮಾಡಿ ಪೂಜಿಸುವುದು ಉತ್ತರ ಕರ್ನಾಟಕದ ಒಂದು ಸಂಪ್ರದಾಯ. ಹಟ್ಟಿ(ಕೊಟ್ಟಿಗೆ)ಯಲ್ಲಿ ಲಕ್ಷ್ಮೀಯನ್ನು ತಯಾರಿಸಿ ಪೂಜಿಸುವುದರಿಂದ 'ಹಟ್ಟೀ ಲಕ್ಕವ್ವ' ಎನ್ನುವುದು ರೂಢಿಗೆ ಬಂದಿದೆ.

ಹಟ್ಟಿ ಹಬ್ಬದ ಸಲುವಾಗಿ ದನದ ಕೊಟ್ಟಿಗೆಯನ್ನು ಸ್ವಚ್ಛಗೊಳಿಸಿ ಸುಣ್ಣ ಕೆಮ್ಮಣ್ಣಿನಿಂದ ಬಳಿದು ಸಿಂಗರಿಸಲಾಗುತ್ತದೆ. ಸುಣ್ಣದ ಬಿಳಿ ಗೋಡೆಗಳ ಮೇಲೆ ಕೆಮ್ಮಣ್ಣಿನಿಂದ ಚಂದ್ರ, ಸೂರ್ಯ, ಏಣಿ, ಹಾವು, ಮನುಷ್ಯ, ಎತ್ತು, ಗಿಡ-ಮರ-ಬಳ್ಳಿ-ಹೂವು, ಕುಡಗೋಲು, ಕೊಡಲಿ ಮೊದಲಾದ ಆಕೃತಿಗಳನ್ನು ಬೆರಳಿನ ಮೂಲಕ ಬಿಡಿಸಲಾಗುತ್ತದೆ. ನೆಲದ ಮೇಲೆ ಕೂಡ ಕೆಮ್ಮಣ್ಣಿನ ಪಟ್ಟಿಯನ್ನು ಬರೆದು ಅದರ ನಡುವೆ ಎತ್ತಿನ ಹೆಜ್ಜೆ, ಮೇಕೆಯ ಹೆಜ್ಜೆಗಳನ್ನು ಸುಣ್ಣದಿಂದ ಚಿತ್ರಿಸುತ್ತಾರೆ. ಎಂದು

---

೧೫೬. ಸಂಯುಕ್ತ ಕರ್ನಾಟಕ : ಸಾಪ್ತಾಹಿಕ ಸೌರಭ : ೨೩-೧೦-೨೦೧೧

ಕಲಘಟಗಿಯ ಶಿವಯೋಗಯ್ಯ ಹಿರೇಮಠ ಹಬ್ಬ ಸಂಭ್ರಮವನ್ನು ವರ್ಣಿಸುತ್ತಾರೆ.[೧೫೭] ಇಡೀ ಧಾರವಾಡ ಜಿಲ್ಲೆಯಲ್ಲಿ ಹಟ್ಟಿ ಹಬ್ಬದ ಸಂಭ್ರಮ ಇಮ್ಮಡಿಯಾಗಿ ಕಂಡುಬರುತ್ತದೆ.

**ಮಣ್ಣೆತ್ತಿನ ಅಮವಾಸ್ಯೆ :** ಹೆಸರೇ ಸೂಚಿಸುವಂತೆ ಇದು ಮಣ್ಣಿನಿಂದ ತಯಾರಿಸಲಾದ ಎತ್ತುಗಳ ಪೂಜೆಯನ್ನು ಒಳಗೊಂಡ ಅಮವಾಸ್ಯೆಯ ಹಬ್ಬವಾಗಿದೆ. ಜೇಷ್ಠ ಬಹುಳ ಅಮವಾಸ್ಯೆಯ ದಿನವು ಮಣ್ಣೆತ್ತಿನ ಪೂಜೆಗೆ ತುಂಬ ಯೋಗ್ಯವಾದ ದಿನವಾಗಿದೆ. ಹಬ್ಬದ ದಿನ ಮಣ್ಣು ತಂದು, ಅದರಿಂದ ಎರಡು ಎತ್ತುಗಳನ್ನು ಮಾಡಿ ಪೂಜೆ ಸಲ್ಲಿಸಲಾಗುತ್ತದೆ. ಈಗ ಮಾರುಕಟ್ಟೆಯಲ್ಲಿ ವಿವಿಧ ಬಗೆಯ ಮಣ್ಣಿನ ಎತ್ತುಗಳು ಮಾರಾಟಕ್ಕೆ ಸಿಗುತ್ತವೆ. ಎತ್ತು ಎನ್ನುವ ಬದಲಿಗೆ ಇಲ್ಲಿ ಬಸವಣ್ಣ ಎನ್ನುತ್ತಾರೆ. ಸಾಮಾನ್ಯವಾಗಿ ಎತ್ತುಗಳನ್ನು ತಯಾರಿಸುವಾಗ ಮಣ್ಣಿನ ಹದ ತುಂಬ ಮುಖ್ಯವಾಗಿರುತ್ತದೆ. ಜಿಗುಟು ಅಥವಾ ಹುತ್ತದ ಮಣ್ಣು ತಂದು ಅದಕ್ಕೆ ಹತ್ತಿಯನ್ನು ಹಾಕಿ, ಕುಟ್ಟಿ ಹದಗೊಳಿಸಿ ವೃತ್ತಿಮೂಲದ ನುರಿತವರಂತೆ ರೈತರು ಈ ಎತ್ತುಗಳನ್ನು ತಯಾರಿಸುತ್ತಾರೆ. ಮೊದಲು ದೇಹವನ್ನು ಚೆನ್ನಾಗಿ ಮಾಡಿಕೊಂಡು ಆನಂತರ ಅದಕ್ಕೆ ಮುಖವನ್ನು ಮೆತ್ತಿಸುತ್ತಾರೆ. ಬಾಲವನ್ನೂ ಮೆತ್ತಿಸಲಾಗುತ್ತದೆ. ಕೋಡು (ಕೊಂಬು), ಕಿವಿ ಮೊದಲಾದವುಗಳನ್ನೂ ಕೆಲವು ಸಲ ಅದೇ ದೇಹದ ಆಕಾರದಲ್ಲಿಯೇ ನಿರ್ಮಿಸಿದರೆ, ಕೆಲವು ಸಲ ಅವುಗಳನ್ನು ಪ್ರತ್ಯೇಕವಾಗಿ ಮಾಡಿ ಮೆತ್ತಿಸಲಾಗುತ್ತದೆ ಹಾಗೂ ಜೋಳ, ಗುಲಗಂಜಿಯ ಕಾಳುಗಳಿಂದ ಕಣ್ಣು, ಕೊರಳ ಗೆಜ್ಜೆಪಟ್ಟಿಗಳನ್ನು ಮಾಡಿ ಸಿಂಗರಿಸುತ್ತಾರೆ. ಕೆಲವು ಕಡೆ ಆ ಎತ್ತುಗಳಿಗೆ ವಿವಿಧ ಬಣ್ಣಗಳನ್ನು ಬಳಿಯಲಾಗಿರುತ್ತದೆ.

ಜನಪದರ ಚಿತ್ರಕಲೆಗೆ ಬಸವಣ್ಣ ಚೆಂದವಾದ ಉದಾಹರಣೆಯಾಗಿದ್ದಾನೆ. ಪೂಜೆ ಸಲ್ಲಿಸಿದ ನಂತರ ಎತ್ತುಗಳನ್ನು ಹೊಲದಲ್ಲಿ ಇಟ್ಟು ಬರುವ ರೂಢಿ ಇದೆ. ಇಲ್ಲಿ ಬೆಚ್ಚು ಇಡುವುದು ಎಂಬ ವಿಶೇಷ ಕಾರ್ಯವೂ ನಡೆಯುತ್ತದೆ. 'ಹೊಲದಲ್ಲಿ ಬಸವಣ್ಣಗಳ ಪೂಜಾದಿಗಳು ಮುಗಿದ ಮೇಲೆ ಈಗಾಗಲೇ ತಮ್ಮೊಂದಿಗೆ ಒಯ್ದಿದ್ದ ಮಣ್ಣಿನ ಗಡಿಗೆಯ ತಳ ಹಾಗೂ ಸುತ್ತಲಿನ ಭಾಗಕ್ಕೆಲ್ಲ ಸುಣ್ಣ, ಕೆಮ್ಮಣ್ಣುಗಳನ್ನು ಸವರಿ ಮಣ್ಣೆತ್ತುಗಳ ಎದುರುಗಡೆಯಲ್ಲಿ ಡಬ್ಬು ಹಾಕುವರು. ಕೆಲವು ಸಲ ಒಂದು ಚಿಕ್ಕ ಕೋಲನ್ನು ನಿಲ್ಲಿಸಿ ಅದರ ಮೇಲೆ ಆ ಮಡಿಕೆಯನ್ನು ಡಬ್ಬು ಹಾಕುವರು. ಇದಕ್ಕೆ ಬೆಚ್ಚು ಇಡುವುದು ಎಂದು ಹೆಸರು. ಇದನ್ನು ಕೆಲವರು ಆ ಮಡಿಕೆಗೆ ಮನುಷ್ಯಾಕೃತಿಯಂತೆ ಕಣ್ಣು, ಮೂಗು, ಬಾಯಿಗಳನ್ನು ಬರೆದೂ ಇಡುವ ಪದ್ಧತಿಯುಂಟು. ಹೊಲದ ಉಳುಮೆಗೆ ಕಾರಣನಾದ ಬಸವಣ್ಣನೇ ಬೆಳೆ ಕಾಯಲು ಮತ್ತೆ ಹೊಲಕ್ಕೆ ಬಂದಿದ್ದಾನೆ ಎಂಬ ಎಚ್ಚರಿಕೆಯ ಸಂಕೇತವೇ ಈ

೧೫೭. ಕ್ಷೇತ್ರಕಾರ್ಯ : ಕಲಘಟಗಿ : ೨೦-೦೩-೨೦೧೨

ಬೆಚ್ಚು ಇರಿಸುವುದರ ಮೂಲ ಉದ್ದೇಶವೆಂದು ತೋರುತ್ತದೆ. ಹೊಲದೊಳಗಿನ ಬೆಚ್ಚನ್ನು ದೂರದಿಂದ ನೋಡಿದ ಯಾರಾದರೂ ಸರಿ ಸಾಮಾನ್ಯವಾಗಿ ಯಾರೋ ಹೊಲದೊಳಗಿದ್ದಾರೆ ಎಂಬ ಭೀತಿಯಿಂದ ಅಲ್ಲಿಂದ ಸುಮ್ಮನೆ ಹೊರಟು ಹೋಗುತ್ತಾರೆ. ಈ ಬೆಚ್ಚು ರೈತನ ಬೆಳೆಯನ್ನು ಸಂರಕ್ಷಣೆ ಮಾಡುವ ವಿಶೇಷ ವಸ್ತುವೆಂಬುದನ್ನು ಎಂದೂ ಮರೆಯುವಂತಿಲ್ಲ'[೧೫೮] ಎಂದು ಎಸ್.ಎಂ. ಹರದಗಟ್ಟಿಯವರು ಅಭಿಪ್ರಾಯಪಡುತ್ತಾರೆ. ಈ ವಿಶೇಷ ಪೂಜೆ ಮಣ್ಣನ್ನು ಪೂಜೆ ಮಾಡುವ ಮತ್ತು ಆ ಮಣ್ಣನ್ನು (ಹೊಲವನ್ನು) ರಕ್ಷಣೆ ಮಾಡುವ ಬೆಚ್ಚುಗಳ ಹಿಂದಿನ ವೈಜ್ಞಾನಿಕ ಕಾರಣಗಳನ್ನು ಸಾದರಪಡಿಸುತ್ತದೆ.

ಈಗಲೂ ಸಾಮಾನ್ಯವಾಗಿ ಹೊಲಗಳಲ್ಲಿ ಬೆಚ್ಚುಗಳನ್ನು ನಿಲ್ಲಿಸುವ ಪದ್ಧತಿ ಇದೆ. ಇವುಗಳನ್ನು ಬೆರ್ಚಪ್ಪ, ಬೆದರು ಬೊಂಬೆ, ಬೆದರು ಎಂದೂ ಕೂಡ ಕರೆಯುವದುಂಟು. ಇವುಗಳನ್ನು ನಿಲ್ಲಿಸುವುದಕ್ಕೆ ಇದೇ ದಿನ, ಇದೇ ಕಾಲ ಎಂಬುದು ನಿಗದಿಯಾಗಿರುವುದಿಲ್ಲ. ಬೆಳೆ ಹಾಳು ಮಾಡಲು ಬರುವ ಹಕ್ಕಿಗಳನ್ನು ಓಡಿಸಲು ಕೂಡ ಬೆಚ್ಚುಗಳನ್ನು ನಿಲ್ಲಿಸಿರುತ್ತಾರೆ. ಈ ಬೆಚ್ಚುಗಳನ್ನು ಶಿಲುಬೆಯಾಕಾರದಲ್ಲಿ ಎರಡು ಕೋಲುಗಳನ್ನು ಕಟ್ಟಿ ಹೊಲದ ನಡುವೆ ನೆಡುತ್ತಾರೆ. ಇದಕ್ಕೆ ಒಣ ಹುಲ್ಲನ್ನು ಸುತ್ತಿ ಅದನ್ನು ಮನುಷ್ಯಾಕೃತಿಯನ್ನಾಗಿಸುತ್ತಾರೆ. ತಲೆ ಭಾಗಕ್ಕೆ ಕರಿಯ ಮಡಿಕೆಯನ್ನು ಹಾಕಿ, ಕೆಳಗೆ ದೇಹದ ಭಾಗದ ಕಲ್ಪನೆಯಲ್ಲಿ ಹಳೆಯ ಅಂಗಿಯನ್ನು ತೊಡಿಸಿ ಅದರೊಳಗೆ ಹುಲ್ಲನ್ನು ಸೇರಿಸುತ್ತಾರೆ. ಈ ಮಡಿಕೆಯ ಮೇಲೆ ಸುಣ್ಣದಿಂದ ಕಣ್ಣು, ಕಿವಿ, ಬಾಯಿ, ಮೂಗು, ಮೀಸೆಗಳನ್ನು ವಿಕಾರವಾಗಿ ಚಿತ್ರಿಸಲಾಗಿರುತ್ತದೆ. ಮಣ್ಣೆತ್ತಿನ ಅಮವಾಸ್ಯೆಯ ಬಸವಣ್ಣನ ಪೂಜೆಯೊಂದಿಗೆ ಇಂದಿಗೂ ತಮ್ಮ ಹೊಲದಲ್ಲಿ ಬೆಚ್ಚುಗಳನ್ನು ನಿಲ್ಲಿಸುವ ಪದ್ಧತಿ ಇದೆ ಎಂದು ಗರಗದ ಗದಿಗಯ್ಯ ಪಾಟೀಲ ಅವರು ಹೇಳುತ್ತಾರೆ.[೧೫೯]

**ಆಕಾಶ ದೀಪ ತಯಾರಿಕೆ :** ಕಾರ್ತಿಕ ಮಾಸ ಬಂತು ಎಂದರೆ ಅದನ್ನು ದೀಪಗಳ ಹಬ್ಬವೆಂದೇ ಕರೆಯಲಾಗುತ್ತದೆ. ಮನೆಯ ಬಾಗಿಲು, ಕಿಟಕಿಗಳಲ್ಲಿ ದೀಪಗಳನ್ನು ಹಚ್ಚಿ ಬೆಳಗಿ ದೀಪೋತ್ಸವದ ಸಂಭ್ರಮವನ್ನು ಆಚರಣೆ ಮಾಡಲಾಗುತ್ತದೆ. ಇದು ವಿಶೇಷವಾಗಿ ಹೆಣ್ಣುಮಕ್ಕಳ ಹಬ್ಬವೆಂದೇ ಪ್ರಸಿದ್ಧಿಯಾಗಿದೆ. ಆದರೆ ಇದೇ ಸಂದರ್ಭದಲ್ಲಿ ಆಕಾಶಕ್ಕೆ ಹಾರಿ ಬಿಡುವ ಆಕಾಶ ದೀಪಗಳಲ್ಲಿ ಹೆಚ್ಚಾಗಿ ಗಂಡುಮಕ್ಕಳೇ ಕಂಡುಬರುತ್ತಾರೆ. ಧಾರವಾಡ ಜಿಲ್ಲೆಯಲ್ಲಿ ಈ ಆಕಾಶ ಬುಟ್ಟಿ ಅಥವಾ ಆಕಾಶ ದೀಪಗಳನ್ನು ಹಾರಿ ಬಿಡುವುದು ಇಂದಿಗೂ ನಡೆದುಕೊಂಡು ಬಂದಿದೆ. ಕುಂದಗೋಳ

---

೧೫೮. ಜಾನಪದ ಸಾಹಿತ್ಯ ದರ್ಶನ-೧೦ : ಸಂ-ವೃಷಭೇಂದ್ರಸ್ವಾಮಿ ಎಸ್. ಎಂ : ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ : ೧೯೮೭ : ಪು-೭೪

೧೫೯. ಕ್ಷೇತ್ರಕಾರ್ಯ : ೧೦-೦೬-೨೦೧೫

ತಾಲೂಕಿನ ಗುಡಗೇರಿ ಗ್ರಾಮದ ದ್ಯಾಮವ್ವ ದೇವಿ ಗುಡಿ ಓಣಿಯ ಯುವಕರು ಈ ಆಕಾಶ ದೀಪವನ್ನು ವಿಶಿಷ್ಟವಾಗಿ ತಯಾರಿಸುತ್ತಾರೆ.

ಮೊದಲು ಹಣ ಸಂಗ್ರಹಿಸಿ ಆಕಾಶ ದೀಪಕ್ಕೆ ಬೇಕಾದ ಸಾಮಗ್ರಿಗಳನ್ನು ಖರೀದಿಸುತ್ತಾರೆ. ಮೊದಲಿಗೆ ಅಲ್ಯೂಮಿನಿಯಂ ತಂತಿಯನ್ನು ಗೋಲಾಗಿ ಹೆಣೆದು ಅದಕ್ಕೆ ವಿವಿಧ ಬಣ್ಣದ ಹಾಳೆಗಳನ್ನು ಅಂಟಿಸುತ್ತಾರೆ. ಒಂದು ತುದಿಯನ್ನು ಮುಚ್ಚಲಾಗಿರುತ್ತದೆ. ತೆರೆದ ಒಂದು ತುದಿಯಲ್ಲಿ ತಂತಿಗೆ ಎಣ್ಣೆ ಹಾಕಿದ ಬಟ್ಟೆಯನ್ನು ಸುತ್ತಿ ಬೆಂಕಿ ಹಚ್ಚುತ್ತಾರೆ. ಒಳಗೆ ಬಿಸಿ ಗಾಳಿ ಹೋಗುತ್ತಿದ್ದಂತೆ ಆಕಾಶ ದೀಪವು ಆಕಾಶದತ್ತ ಮುಖ ಮಾಡಿ ಮೇಲ ಮೇಲಕ್ಕೆ ಹಾರಿ ಹೋಗುತ್ತದೆ. ಇದನ್ನು ಎಲ್ಲರೂ ಸಂಭ್ರಮಿಸುತ್ತಾರೆ ಎಂದು ಗುಡಗೇರಿ ಗ್ರಾಮದ ದೇವಪ್ಪ ಹನುಮಕ್ಕನವರ ಅವರು ವಿವರಿಸುತ್ತಾರೆ.[೧೬೦] ಈ ಆಕಾಶ ದೀಪವನ್ನು ತಯಾರಿಸುವಾಗ ತಂತಿಯ ಕವಾಟಿಗೆ ಸುತ್ತುವ ಹಾಳೆಗಳು ಮೊದಲೇ ಬಣ್ಣ ಬಣ್ಣದ್ದಾಗಿರುತ್ತವೆ. ಅವುಗಳ ಮೇಲೆ ಕೆಲವು ಚಿತ್ರಗಳನ್ನೂ ಬಿಡಿಸಲಾಗುತ್ತದೆ. ಪ್ರಾಣಿ, ಪಕ್ಷಿ, ಮನುಷ್ಯ, ಹೂವು, ಗಿಡ, ಬಳ್ಳಿ ಮೊದಲಾವುಗಳನ್ನು ಚಿತ್ರಿಸಿ ಅದನ್ನು ಅಂದಗೊಳಿಸಲಾಗುತ್ತದೆ. ಹೀಗಾಗಿ ಆಕಾಶ ದೀಪದ ಸೌಂದರ್ಯ ಇಮ್ಮಡಿಗೊಳ್ಳುತ್ತದೆ.

**ಜೋಕುಮಾರ :** ಗಣೇಶ ಚತುರ್ಥಿ ಮುಗಿದ ನಂತರ ಜೋಕುಮಾರಯನ್ನು ಬುಟ್ಟಿಯಲ್ಲಿ ಇಟ್ಟುಕೊಂಡು ಬರುವವರನ್ನು ಉತ್ತರ ಕರ್ನಾಟಕದಲ್ಲಿ ವಿಶೇಷವಾಗಿ ಕಾಣಬಹುದು. ಜೋಕುಮಾರ ಸ್ವಾಮಿ ಬಗ್ಗೆ ಹಲವಾರು ದಂತಕತೆಗಳು, ಪೌರಾಣಿಕ ಕತೆಗಳೂ ಹುಟ್ಟಿಕೊಂಡಿವೆ. ಸ್ವರ್ಗದಲ್ಲಿ ಜೋಕ ಎಂಬ ಋಷಿಯು ಭೂಮಿಗೆ ಬಂದು ಮಾರಿಯನ್ನು ಸೇರಿದ್ದರಿಂದ ಹುಟ್ಟಿದವನೇ ಜೋಕುಮಾರ ಎಂದು ಒಂದು ಕಡೆ ಹೇಳಲಾಗುತ್ತಿದ್ದರೆ, ಮತ್ತೊಂದು ಆತ ಪಾರ್ವತಿದೇವಿಯ ಮಗ ಎಂಬ ವಿಚಾರವೂ ಬರುತ್ತದೆ. ಕೆಲವು ಕಡೆ ಆತ ಮಾರಿಯ ಮಗ ಎಂದು ತಿಳಿದುಕೊಳ್ಳಲಾಗುತ್ತಿದ್ದು, ಗ್ರಾಮಸ್ಥರು ಮಾರಿಯ ಕಾಟವನ್ನು ತಪ್ಪಿಸುವ ಸಲುವಾಗಿ ಕಾಣಿಕೆಯ ರೂಪದಲ್ಲಿ ದವಸಧಾನ್ಯಗಳನ್ನು ಕೊಡುತ್ತಾರೆ. ಅದು ಏನೇ ಇರಲಿ, ಈ ಜೋಕುಮಾರ ಬಾಲ್ಯದಿಂದಲೇ ಅತೀ ಕಾಮುಕನಾಗಿದ್ದ ಎಂಬ ವಿಷಯವನ್ನು ಎಲ್ಲ ಕತೆಗಳು ಹೇಳುತ್ತವೆ. ಹೀಗಾಗಿಯೇ ಜೋಕುಮಾರನನ್ನು 'ಮಕ್ಕಳನ್ನು ಕೊಡುವ ದೇವರು' ಎನ್ನಲಾಗುತ್ತದೆ. 'ಅವನು ಬಂದು ಹೋದ ಮೇಲೆ ಗೊಡ್ಡುಗಳು ಹಾಲು ಕೊಡಲು ಆರಂಭಿಸುತ್ತವೆ. ಅವನನ್ನು ಅರಸಿಕೊಂಡು ಕುಂಚಿಗೆ, ಕುಲಾಯಿ ಹೊಲಿದು ಕೊಟ್ಟರೆ ಬಂಜೆಗೂ ಮಕ್ಕಳಾಗುತ್ತವೆ. ಹೊಲದಲ್ಲಿ

---

೧೬೦. ಕ್ಷೇತ್ರಕಾರ್ಯ : ೧೦-೧೦-೨೦೧೨

ಸಮೃದ್ಧವಾಗಿ ಬೆಳೆ ಬರುತ್ತದೆ ಎಂಬ ನಂಬಿಕೆಗಳು ಪ್ರಬಲವಾಗಿವೆ'[೧೬೧] ಹೀಗಾಗಿ ರೈತರು ಜೋಕುಮಾರಸ್ವಾಮಿಯನ್ನು ಮಳೆಯ ದೇವರೆಂದು ನಂಬುತ್ತಾರೆ. ಆತನನ್ನು ಪೂಜಿಸುವುದರಿಂದ ಮಳೆ–ಬೆಳೆ ಚೆನ್ನಾಗಿ ಆಗಿ ಫಸಲು ಹೆಚ್ಚು ಬರುತ್ತದೆ ಎಂಬ ವಿಷಯವೂ ಪ್ರತೀತಿಯಲ್ಲಿದೆ.

ಅದೇನೇ ಇದ್ದರೂ ರೈತರು ಮಣ್ಣನ್ನು ಪೂಜೆ ಮಾಡುವ ಒಂದು ಪರಿಕ್ರಮವೇ ಕಾಲಕ್ರಮೇಣದಲ್ಲಿ ಹಬ್ಬವಾಗಿ ಬೇರೆ ಬೇರೆ ಕತೆಗಳು ಹುಟ್ಟಿಕೊಂಡಿವೆ ಎನ್ನುವುದರಲ್ಲಿ ಯಾವುದೇ ಸಂದೇಹವಿಲ್ಲ. ಮಣ್ಣೆತ್ತಿನ ಅಮವಾಸ್ಯೆಯ ದಿನ ಪೂಜಿಸುವ ಮಣ್ಣಿನ ಎತ್ತುಗಳು, ಮಣ್ಣಿನಲ್ಲಿ ಅಥವಾ ಸೆಗಣಿಯಲ್ಲಿ ಮಾಡಲಾದ ಗುಳ್ಳವ್ವ, ನಾಗರ ಪಂಚಮಿಯ ದಿನ ಪೂಜಿಸುವ ಮಣ್ಣಿನ ಹಾವು, ಚೌತಿಯಂದು ಪೂಜಿಸುವ ಗಣಪತಿ ಮತ್ತು ಆನಂತರದಲ್ಲಿ ಬರುವ ಜೋಕುಮಾರ ಪೂಜೆ... ಇವೆಲ್ಲ ಮಣ್ಣನ್ನು ಪೂಜೆ ಮಾಡುವ ವಿವಿಧ ವಿಧಾನಗಳಾಗಿವೆ ಎಂದರೆ ತಪ್ಪಾಗಲಾರದು.

'ಅಂಬಿಗರು ಜೋಕುಮಾರನ ಮೂರ್ತಿಯನ್ನು ಮಣ್ಣಿನಿಂದ ಮಾಡಿ ಬಾಯಿಗೆ ಬೆಣ್ಣೆಯನ್ನು ಒರೆಸಿ, ಬೇವಿನ ತಪ್ಪಿನಲ್ಲಿ ಮುಚ್ಚಿ, ಅವನ ಗುಪ್ತಾಂಗವನ್ನು ನೀಟಾಗಿ ಕಾಣುವಂತೆ ಮಾಡಿರುತ್ತಾರೆ. ಆತನ ಅಕರಾಳ ವಿಕರಾಳ ದೇಹ ಸ್ವರೂಪವನ್ನು ಮಾಡಿ ತಲೆಗೆ ಕುಂಚಿಗೆ ಕಟ್ಟಿ, ಬಿದರಿನ ಬುಟ್ಟಿಯಲ್ಲಿ ಇಟ್ಟು ಗಂಗಾಮತಸ್ಥರು ಜೋಕುಮಾರನ ದರ್ಶನ ಮಾಡಿಸುತ್ತಾರೆ'[೧೬೨] ಎಂಬ ಡಾ. ರಾಮು ಮೂಲಗಿಯವರ ಮಾತುಗಳಲ್ಲಿ ಜೋಕುಮಾರಸ್ವಾಮಿಯ ವರ್ಣನೆ ಕಂಡುಬರುತ್ತದೆ. 'ಈ ಆಚರಣೆಗಾಗಿ ನಿರ್ಮಿಸಲಾಗುವ ಮೂರ್ತಿಯ ಸ್ವರೂಪ ಆಕರ್ಷಕವಾಗಿರುತ್ತದೆ. ಅದು ಮಣ್ಣಿನಿಂದ ಮಾಡಿದ ಪುರುಷ ಮೂರ್ತಿಯಾಗಿರುತ್ತದೆ. ಕೋರೆ ಮೀಸೆ, ಗುರುತರವಾದ ಹುಬ್ಬು, ದಪ್ಪನಾದ ತುಟಿಗಳು, ಉದ್ದ ಮೂಗು, ಸಾಮಾನ್ಯವಾದ ದೇಹಾಕೃತಿಗೆ ಎದ್ದು ಕಾಣುವ ಜನನೇಂದ್ರೀಯ ಇರುತ್ತದೆ. ಸಗಣಿಯಿಂದ ಸಾರಿಸಿದ ಬಿದಿರಿನ ಹೆಡಿಗೆಯಲ್ಲಿ ಈ ಮೂರ್ತಿಯನ್ನು ಇಟ್ಟುಕೊಂಡು ಅದರ ಮೇಲೆ ಬೇವಿನ ಸೊಪ್ಪನ್ನು ಹಾಕುತ್ತಾರೆ. ಮೂರ್ತಿಯ ಬಾಯಿಗೆ ಮತ್ತು ಜನನೇಂದ್ರೀಯಕ್ಕೆ ಬೆಣ್ಣೆಯನ್ನು ಲೇಪಿಸುವುದು ವಿಧಿ. ಜೋಕುಮಾರರನ್ನು ಕುರಿತ ಹಾಡುಗಳನ್ನು ಹೇಳುತ್ತ ಹೆಂಗಸರು ಊರಿನ ರೈತಾಪಿಗಳ ಮನೆಗೆ ಹೋಗುವುದು ಪದ್ಧತಿ'[೧೬೩] ಎನ್ನುವ ಮಾತಿನಲ್ಲಿ ಕೂಡ ಜೋಕುಮಾರಸ್ವಾಮಿಯ ಮೂರ್ತಿಯ ವರ್ಣನೆ ಚೆನ್ನಾಗಿ ಮೂಡಿಬಂದಿದೆ. ಊರಿನ ಗಲ್ಲಿ ಗಲ್ಲಿಗಳಲ್ಲಿ ತಿರುಗಾಡಿ ಪೂಜೆ ಮಾಡಿಸಿದ

---

೧೬೧. ವ್ಯವಸಾಯ ಸಂಬಂಧಿ ಆಚರಣೆಗಳು : ಸೋಮಣ್ಣ : ಕನ್ನಡ ವಿಶ್ವವಿದ್ಯಾಲಯ, ಹಂಪಿ : ೨೦೦೦ : ಪು–೪

೧೬೨. ಪ್ರಜಾವಾಣಿ : ಮೆಟ್ರೋ : ೨೬–೦೯–೨೦೧೨

೧೬೩. ವ್ಯವಸಾಯ ಸಂಬಂಧಿ ಆಚರಣೆಗಳು : ಸೋಮಣ್ಣ : ಕನ್ನಡ ವಿಶ್ವವಿದ್ಯಾಲಯ, ಹಂಪಿ : ೨೦೦೦ : ಪು–೪

ನಂತರ ಏಳನೇ ದಿನ ಜೋಕುಮಾರಸ್ವಾಮಿಯನ್ನು ಹೊಲಗೇರಿಯಲ್ಲಿ ಬಿಟ್ಟು ಹೋಗುತ್ತಾರೆ. ಆಗ ಆ ಕೇರಿಯವರು ಒನಕೆಯಿಂದ ಈ ಮೂರ್ತಿಯನ್ನು ಕೊಂದು ಹಳ್ಳಕ್ಕೆ ಹಾಕುತ್ತಾರೆ.

ಒಟ್ಟಿನಲ್ಲಿ ಒಂದು ಜಾನಪದೀಯ ಅಧ್ಯಯನಕ್ಕೆ ಯೋಗ್ಯವಾದ ಈ ಜೋಕುಮಾರಸ್ವಾಮಿಯ ಕತೆಯನ್ನು ಹೊರತುಪಡಿಸಿ ನೋಡುವುದಾದರೆ, ಜೋಕುಮಾರ ಸ್ವಾಮಿಯನ್ನು ನಿರ್ಮಿಸುವವರು ಅಂಬಿಗರು. ಅವರೇ ಅದಕ್ಕೆ ಸೂಕ್ತ ಎನ್ನಿಸುವಂತೆ ಕಣ್ಣು, ಬಾಯಿ, ಮೂಗು ಮಾಡಿ ಬಣ್ಣ ಬಳೆಯುತ್ತಾರೆ. ಜೊತೆಗೆ ಆತನ ಗುಪ್ತಾಂಗವನ್ನು ದೊಡ್ಡದಾಗಿ ಮಾಡಿ ಅದಕ್ಕೆ ಕೆಂಪು ಬಣ್ಣವನ್ನು ಎದ್ದು ಕಾಣುವಂತೆ ಬಳೆದಿರುತ್ತಾರೆ. ಅಲ್ಲಲ್ಲಿ ಚುಕ್ಕಿ ಮತ್ತು ಗೆರೆಗಳ ಮೂಲಕ ಆತನ ಮೈಯನ್ನು ಸಿಂಗಾರ ಮಾಡಿರುತ್ತಾರೆ. ವಿವಿಧ ಬಣ್ಣಗಳ ಬಟ್ಟೆಗಳಲ್ಲಿ ಆ ಮೂರ್ತಿಯನ್ನು ಬುಟ್ಟಿಯಲ್ಲಿ ಇಡಲಾಗುತ್ತದೆ. ಇದು ಜನಪದ ಕಲೆಯ ಒಂದು ಭಾಗವೇ ಆಗಿದ್ದು, ಚಿತ್ರಕಲೆಯ ಬಳಕೆ ಆಗಿರುವುದನ್ನು ಗಮನಿಸಬೇಕು. ಇಂದಿನ ಆಧುನಿಕ ಯುಗದಲ್ಲಿ ಈ ಜೋಕುಮಾರಸ್ವಾಮಿಯ ಹಬ್ಬ ಕಂಡುಬರುವುದು ವಿರಳ ಎಂದೇ ಹೇಳಬೇಕಾಗುತ್ತದೆ.

**ಕಾಮಣ್ಣ :** ಕಾಮಣ್ಣನ ಹಬ್ಬ ಕೂಡ ಪೌರಾಣಿಕ ಕತೆಯಲ್ಲಿ ನಿರೂಪಿಸಲ್ಪಟ್ಟದ್ದೇ ಆಗಿದೆ. ರಕ್ಕಸ ಸಂಹಾರಕ್ಕಾಗಿ ಶಿವನಿಂದ ಜನಿಸಿದ ಮಗ ಬೇಕಾಗಿರುತ್ತಾನೆ. ಆದರೆ ಸತಿಯ ಸಾವಿನಿಂದ ಶಿವ ಅಖಂಡ ತಪಸ್ಸಿನಲ್ಲಿ ನಿರತನಾಗಿರುತ್ತಾನೆ. ಪಾರ್ವತಿ ಆತನನ್ನು ಮದುವೆ ಆಗಬೇಕೆಂದು ನಿತ್ಯ ಸೇವೆ ಮಾಡುತ್ತಿರುತ್ತಾಳೆ. ಆಗಲೂ ಶಿವ ಕಣ್ತೆರೆಯುವುದಿಲ್ಲ. ದೇವತೆಗಳಿಗೆ ಚಿಂತೆಯಾಗಿ ಅದೇ ತಾನೇ ಮದುವೆಯಾಗಿದ್ದ ಕಾಮದೇವನಿಗೆ ಶಿವನ ಮೇಲೆ ಮನ್ಮಥಾಸ್ತ್ರ ಬಿಟ್ಟು ತಪಸ್ಸು ಕೆಡಿಸುವಂತೆ ಕೇಳಿಕೊಳ್ಳುತ್ತಾರೆ. ಕಾಮದೇವ ದೇವತೆಗಳ ಮಾತನ್ನು ನಡೆಯಿಸಿಕೊಡುತ್ತಾನೆ. ಆದರೆ ಸಿಟ್ಟಾದ ಶಿವ ಮೂರನೆಯ ಕಣ್ಣು ತೆರೆದು ಕಾಮದೇವನನ್ನು ಸುಟ್ಟು ಬೂದಿ ಮಾಡುತ್ತಾನೆ. ಆಗ ನವವಿವಾಹಿತೆಯಾದ ರತಿ, ತನ್ನ ಗಂಡನ ಸಾವಿನಿಂದ ತುಂಬ ದುಃಖಿತಳಾಗಿ ರೋಧಿಸುತ್ತಾಳೆ. ಆಗ ಶಿವ ಆತನಿಗೆ ಪರಮಕಾಯದ ಮೂಲಕ ಬದುಕು ಎಂದು ಹರಿಸುತ್ತಾನೆ. ಅಂದಿನಿಂದ ಕಾಮದೇವ ಎಲ್ಲರ ಮನಸ್ಸಿನಲ್ಲಿ ಉಳಿದು ಮನಸಿಜ ಎನಿಸಿಕೊಳ್ಳುತ್ತಾನೆ.

ಮನುಷ್ಯನಲ್ಲಿ ಇರುವ ಕಾಮವನ್ನು ವರ್ಷದಲ್ಲಿ ಒಂದು ದಿನವಾದರೂ ನಿಯಂತ್ರಣ ಮಾಡಬೇಕು ಎಂಬ ವೈಜ್ಞಾನಿಕ ವಿಚಾರದೊಂದಿಗೆ ಬಹುಶಃ ಈ ಕಾಮನ ಹಬ್ಬ ಆಚರಣೆಗೆ ಬಂದಿರುವ ಸಾಧ್ಯತೆ ಇದೆ. ತುಂಬ ಹಿಂದಿನಿಂದಲೂ ಇದು ಆಚರಣೆಯಾಗುತ್ತಿದ್ದು, ಇಂದಿಗೂ ಮುಂದುವರೆದುಕೊಂಡು ಬರುತ್ತಿದೆ. ಉತ್ತರ ಕರ್ನಾಟಕದಲ್ಲಿ ಈ ಹಬ್ಬವನ್ನು ತುಂಬ ಉತ್ಸಾಹದಿಂದ ಆಚರಿಸುತ್ತಾರೆ. ಶಿವರಾತ್ರಿ ಅಮವಾಸ್ಯೆ ಮುಗಿದ ಮೇಲೆ ಬರುವ ಹುಣ್ಣಿಮೆಯೇ ಹೋಳಿ ಹುಣ್ಣಿಮೆ. ಇದಕ್ಕೆ ಭಿನ್ನವಾದ ಕತೆಗಳೂ ಪ್ರಚಲಿತದಲ್ಲಿವೆ. ಇಲ್ಲಿ ಅವು ಅಪ್ರಸ್ತುತ.

ಕಾಮಣ್ಣನ ಹಬ್ಬದಲ್ಲಿ ಒಂದು ಕಟ್ಟಿಗೆಗೆ ಮನುಷ್ಯ ಆಕೃತಿಯನ್ನು ಮಾಡಿ, ಅದಕ್ಕೆ ಕುಂಬಳಕಾಯಿ ಇಲ್ಲವೆ ಪಪ್ಪಾಯಿ ಹಣ್ಣಿನಿಂದ ಮುಖವನ್ನು ಚಿತ್ರಿಸುತ್ತಾರೆ. ಕೆಲವು ಕಡೆ ಕಟ್ಟಿಗೆಯಿಂದ ಕಾಮನ ಮೂರ್ತಿಯನ್ನೇ ತಯಾರಿಸಿರುತ್ತಾರೆ. ಕಾಮಣ್ಣನ ಮುಖಭಾಗಕ್ಕೆ ಹಳದಿ ಬಣ್ಣ ಬಳಿದು ಕಪ್ಪು ಬಣ್ಣದಿಂದ ಕಣ್ಣು, ಬಾಯಿ, ಮೀಸೆ, ಹುಬ್ಬು, ಕಿವಿಗಳನ್ನು ಚಿತ್ರಿಸುತ್ತಾರೆ. ವಿಶೇಷವಾಗಿ ಕಾಮಣ್ಣನಿಗೆ ಕಾಲುಗಳು ಇರುವುದಿಲ್ಲ. ಎರಡು ಕೈಗಳು ಇರುತ್ತವೆ. ಮೈಮೇಲೆ ಅಂಗಿಯನ್ನು ತೊಡಿಸುತ್ತಾರೆ. ಕೆಲವು ಕಡೆ ತಲೆಗೆ ಪಟಗಾ ಹಾಕುತ್ತಾರೆ. ಇನ್ನೂ ಕೆಲವು ಕಡೆ ಬೋಳುತಲೆಯೇ ಇರುತ್ತದೆ. ಕಾಮಣ್ಣನ ಮುಖ ನೋಡಿದ ತಕ್ಷಣ ವಿಚಿತ್ರವಾಗಿ ಕಂಡರೂ ಆ ಮುಖದಲ್ಲಿ ಸೊಕ್ಕುತನ ಕಾಣುವಂತೆ ಚಿತ್ರ ಬಿಡಿಸುವುದು ಕಂಡುಬರುತ್ತದೆ. ಕೆಲವು ಕಡೆ ಕಾಮನ ಜೊತೆ ರತಿ ದೇವಿಯನ್ನೂ ಕೂಡಿಸಲಾಗುತ್ತದೆ. ರತಿದೇವಿಯ ಸಿಂಗಾರವನ್ನೂ ಕಾಮಣ್ಣನಿಗೆ ಮಾಡಿದಂತೆ ಮಾಡಿ ಸೀರೆ ಉಡಿಸಿರುತ್ತಾರೆ.

ಧಾರವಾಡ ಜಿಲ್ಲೆಯಲ್ಲಿ ಮೊದಲು ಕಾಮನ ಹಬ್ಬ ಕೆಲವು ಕಡೆ ಮಾತ್ರ ನಡೆಯುತ್ತಿತ್ತು. ಅಂದರೆ ಒಂದು ಊರಿನಲ್ಲಿ ಒಂದು ಅಥವಾ ಎರಡು ಕಡೆ ಮಾತ್ರ ಕಾಮಣ್ಣನನ್ನು ಸುಡಲಾಗುತ್ತಿತ್ತು. ಈಗೀಗ ಗಲ್ಲಿ ಗಲ್ಲಿಗೂ ಕಾಮಣ್ಣನನ್ನು ಕೂಡಿಸುವ ಉಮೇದು ಜನರಲ್ಲಿ ಕಂಡುಬರುತ್ತಿದೆ. ಎಲ್ಲ ಹಬ್ಬಗಳಿಗಿಂತಲೂ ಕಾಮಣ್ಣನ ಹಬ್ಬ ಇಂದಿಗೂ ಹೆಚ್ಚು ವ್ಯಾಪಕವಾಗುತ್ತದೆ. ಅದಕ್ಕೆ ತಕ್ಕಂತೆ ಕಾಮಣ್ಣನ ರೂಪ, ವೇಷಗಳೂ ಬದಲಾಗುತ್ತಿವೆ. ಗಣಪತಿ ಹಬ್ಬದಲ್ಲಿ ವಿಜೃಂಭಣೆ ಇರುವಂತೆ ಈ ಹಬ್ಬದಲ್ಲೂ ಕಂಡುಬರುತ್ತದೆ. ಧಾರವಾಡದಲ್ಲಿ ಕಾಮನಕಟ್ಟೆ ಎಂಬ ಸ್ಥಳ ಇಂದಿಗೂ ಒಂದು ಗ್ರಾಮವಾಗಿದೆ.

**ಗುರ್ಜಿ ಪೂಜೆ :** ಮಳೆಯನ್ನು ಪ್ರತಿನಿಧಿಸುವ ಆಚರಣೆಯೊಂದು ಕರ್ನಾಟಕದ ಕೆಲವು ಕಡೆ ಕಂಡುಬರುತ್ತದೆ. ಉತ್ತರ ಕರ್ನಾಟಕದಲ್ಲಿ ಇದು ಹೆಚ್ಚಾಗಿ ಕಾಣಸಿಗುತ್ತದೆ. ಗುರ್ಜಿ ಪೂಜೆಯನ್ನು ಮಳೆಮಲ್ಲಪ್ಪನ ಪೂಜೆ ಎಂಬುದಾಗಿ ಕರೆಯಲಾಗುತ್ತದೆ. ಇದು ಮಣ್ಣು ಪೂಜೆ ಮತ್ತು ಮಳೆಗಾಗಿ ಇರುವ ಹರಕೆಯ ಪೂಜೆಯಾಗಿದ್ದರೂ ಕೂಡ 'ಸಾಮಾನ್ಯವಾಗಿ ಈ ಪೂಜೆಯನ್ನು ಕೆಳವರ್ಗದವರು ಮಾತ್ರ ಆಚರಿಸುವ ಪದ್ಧತಿ ಇದೆ. ಏಳು-ಎಂಟು ವರ್ಷದ ಹುಡುಗನಿಗೆ ಮೈ ಮೇಲಿನ ಬಟ್ಟೆಯನ್ನು ತೆಗೆದು ಬೆತ್ತಲುಗೊಳಿಸಿ ಮರದ ಮಣೆಯ ಮೇಲೆ ಕೂರಿಸುತ್ತಾರೆ. ಆ ಹುಡುಗನ ಪಕ್ಕದಲ್ಲಿಯೇ ಎರಡು ಸಗಣಿ ಉಂಡೆಗಳಿಂದ ಬ್ಯಾನಪ್ಪಗಳನ್ನು ತಯಾರಿಸುವರು. ಬ್ಯಾನಪ್ಪಗಳಿಗೆ ತಲೆ ಭಾಗದಲ್ಲಿ ಗರಿಕೆಯನ್ನು ಸಿಕ್ಕಿಸುವರು. ಈ ಬ್ಯಾನಪ್ಪಗಳನ್ನು 'ಗುರ್ಜಿ' ಎಂದು ಕರೆಯುತ್ತಾರೆ. ಸಗಣಿಯ ಉಂಡೆಗಳು ಫಲವತ್ತತೆಯನ್ನು ಸಂಕೇತಿಸುತ್ತವೆ. ಈ ಬ್ಯಾನಪ್ಪಗಳು ಮಳೆಮಲ್ಲಪ್ಪನ ಪ್ರತೀಕ. ಈ ಬ್ಯಾನಪ್ಪಗಳನ್ನು ಮಣೆಯ ಮೇಲಿಟ್ಟು ಅರಿಶಿಣ, ಕುಖುಮ, ಗಂಧದ

ಕಡ್ಡಿ, ಕರ್ಪೂರ, ಕಾಯಿ–ಹಣ್ಣುಗಳಿಂದ ಪೂಜೆ ಸಲ್ಲಿಸುತ್ತಾರೆ. ನಂತರ ಬ್ಯಾನಪ್ಪಗಳಿರುವ ಮಣೆಯನ್ನು ಆ ಹುಡುಗ ಹೊತ್ತುಕೊಂಡು ಊರಿನ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಹೋಗುವನು. ಈ ಆಚರಣೆಯಲ್ಲಿ ಸಣ್ಣಪುಟ್ಟ ಹುಡುಗ ಹುಡುಗಿಯರು ಭಾಗವಹಿಸುವರು'[೧೬೪] ಎಂಬ ಮಾತನ್ನು ಗಮನಿಸಬೇಕು. ಜಿಲ್ಲೆಯ ಗ್ರಾಮೀಣ ಪ್ರದೇಶಗಳಲ್ಲಿ ಬಾಲಕರು ರೊಟ್ಟಿ ಹೆಂಚು (ತವೆ) ತಲೆಮೇಲೆ ಬೋರಲಾಗಿಟ್ಟುಕೊಂಡು ಅದರ ಮೇಲೆ ಸೆಗಣಿಯ ಬ್ಯಾನಪ್ಪ (ಬೆನಕ)ನನು ಇರಿಸಿಕೊಂಡು ಊರಲ್ಲಿನ ಮನೆಮನೆಗೆ ತೆರಳಿ ಪ್ರದಕ್ಷಿಣೆ ಹಾಕುತ್ತಾರೆ. ಈ ಗುರ್ಚಿಯನ್ನು ಹೊತ್ತುಕೊಂಡ ಬಾಲಕ ಮುಖಕ್ಕೆ ಹೆಂಚಿನ ಕಪ್ಪುಮಸಿಯಿಂದ ಗುರುತು ಸಿಗದಂತೆ ಬೆರಳುಗಳಿಂದ ಚಿತ್ರ ಬರೆಯುತ್ತಾರೆ. ಹಾಗೇ ಮೈಮೇಲೆಲ್ಲ ಮಸಿಯಿಂದ ಗೆರೆ, ಚುಕ್ಕೆಗಳಿಂದ ಚಿತ್ರಿಸುತ್ತಾರೆ. ಉತ್ತರ ಕರ್ನಾಟಕದ ಕೆಲವು ಕಡೆ ಹೆಣ್ಣುಮಕ್ಕಳು ಈ ಗುರ್ಜಿ ಅಥವಾ ಗುರ್ಚಿಯನ್ನು ಹೊತ್ತುಕೊಂಡು ಮನೆ ಮನೆಗೆ ಅಲೆದಾಡುತ್ತಾರೆ.

ಗುರ್ಚಿ ಗುರ್ಚಿ ಎಲ್ಯಾಡಿ ಬಂದೆ । ಹಳ್ಳ ಕೊಳ್ಳ ತಿರಿಗ್ಯಾಡಿ ಬಂದೆ
ಚಂದೋ ರಾಮ ಬಂದರ್ ಕಡೆಗೆ । ಬಾ ಮಳೆಯೋ ಬಾ ಮಳೆಯೋ
ಬಣ್ಣಾ ಕೊಡ್ತೀನಿ ಬಾ ಮಳೆಯೋ । ಸುಣ್ಣಾ ಕೊಡ್ತೀನಿ ಸುರಿ ಮಳೆಯೋ
ಕಪ್ಪೆಗೆ ರೊಟ್ಟಿ ಮೊರದಾಗೆ ಜೋಳ । ಬರಲೆವ್ವೋ ಬರಲೆವ್ವೋ

ಎಂದು ಈ ಸಂದರ್ಭದಲ್ಲಿ ಹಾಡಲಾಗುತ್ತದೆ. ಪ್ರತಿ ಮನೆಯ ಮುಂದೆ ಹೋಗಿ ನಿಂತಾಗ ಮನೆಯವರು ಗುರ್ಚಿಯ ಮೇಲೆ ಒಂದು ತಂಬಿಗೆ ನೀರು ಹಾಕುತ್ತಾರೆ. ಗುರ್ಚಿಯನ್ನು ಹೊತ್ತುಕೊಂಡವರು ಗರಗರನೇ ತಮ್ಮ ಸುತ್ತ ತಾವೇ ತಿರುಗುತ್ತಾರೆ. ಹಾಕಿದ ನೀರು ಮಳೆಯಂತೆ ಸುತ್ತಲೂ ಚಿಮ್ಮುತ್ತದೆ. ಇದು ಐದು ಇಲ್ಲವೆ ಏಳು ದಿನಗಳ ಕಾಲ ನಡೆಯುತ್ತದೆ. ಆನಂತರ ಮನೆ ಮನೆಗಳಿಂದ ಸಂಗ್ರಹಿಸಿದ ದವಸಧಾನ್ಯಗಳನ್ನು ಅಡುಗೆ ಮಾಡಿ ಹಬ್ಬವನ್ನು ಆಚರಿಸಲಾಗುತ್ತದೆ. ಹೀಗೆ ಮಾಡಿದರೆ ಮಳೆ ಬರುತ್ತದೆ ಎಂಬ ನಂಬಿಕೆ ಜನಪದರಲ್ಲಿದೆ. ಕೆಲವು ಕಡೆ ಈ ಗುರ್ಚಿಯ ಬದಲಿಗೆ ಮಣ್ಣಿನ ಬಸವಣ್ಣನನ್ನು ಮಾಡಿ ಪೂಜೆ ಮಾಡುವ ಪರಿಪಾಠವೂ ಕಂಡುಬರುತ್ತದೆ.

**ಗುಳ್ಳವ್ವ :** ಆಷಾಢ ಮಾಸದಲ್ಲಿ ಬರುವ ಗುಳ್ಳವ್ವನ ಹಬ್ಬ ತುಂಬ ವಿಶಿಷ್ಟವಾಗಿ ಆಚರಣೆಯಲ್ಲಿದೆ. ಅದೂ ಹೆಚ್ಚಾಗಿ ಉತ್ತರ ಕರ್ನಾಟಕದಲ್ಲಿ ಕಂಡುಬರುತ್ತದೆ. ಇದು ಕೂಡ ಮಣ್ಣಿಗೆ ಪೂಜೆ ಸಲ್ಲಿಸುವ ಒಂದು ಭಾಗವೇ ಆಗಿದೆ. ಗುಳ್ಳವ್ವ ಭೂಮಿಯ ಪ್ರತೀಕವಾಗಿದ್ದು ಜನಪದ ದೇವತೆಯಾಗಿದ್ದಾಳೆ. ಆದರೆ ಇದಕ್ಕೆ ಪುರಾಣಗಳಲ್ಲಿ ಯಾವ ಆಧಾರಗಳೂ ದೊರೆಯುವುದಿಲ್ಲ.

---

೧೬೪. ವ್ಯವಸಾಯ ಸಂಬಂಧಿ ಆಚರಣೆಗಳು : ಸೋಮಣ್ಣ : ಕನ್ನಡ ವಿಶ್ವವಿದ್ಯಾಲಯ, ಹಂಪಿ : ೨೦೧೦ : ಪು–೧೩

ಆಷಾಢದ ಮಾಸದ ಪ್ರತಿ ಮಂಗಳವಾರ ಗುಳ್ಳವ್ವನನ್ನು ಕೂಡ್ರಿಸಲಾಗುತ್ತದೆ. 'ಮಣ್ಣಿನ ಚೌಕಾಕಾರದ ಪೀಠದ ಮೇಲೆ ಮಣ್ಣಿನ ಮುದ್ರೆಯನ್ನಿಟ್ಟು ಮೊದಲನೆಯ ಮಂಗಳವಾರ ಲಿಂಗಾಕಾರದ ಗುಳ್ಳವ್ವ, ಎರಡನೆಯ ಮಂಗಳವಾರ ಗುಡಿಯಾಕಾರದ ಗುಳ್ಳವ್ವ, ಮೂರನೆಯ ಮಂಗಳವಾರ ಕಟ್ಟೆಯಾಕಾರದ ಗುಳ್ಳವ್ವ, ನಾಲ್ಕನೆಯ ಮಂಗಳವಾರ ನವಿಲಾಕಾರದ ಗುಳ್ಳವ್ವ, ಐದನೆಯ ಮಂಗಳವಾರ ಚಂಗಳವ್ವ ಅಂದರೆ ಹೆಣ್ಣಿನಾಕಾರದ ಗುಳ್ಳವ್ವನ ಮೂರ್ತಿಯನ್ನು ಮಾಡಿ ಪೂಜಿಸುವ ಸಂಪ್ರದಾಯವಿದೆ. ಇನ್ನೂ ಕೆಲವು ಕಡೆಗಳಲ್ಲಿ ಹದ ಮಾಡಿದ ಮಣ್ಣಿನ ನಾಲ್ಕು ಕಂಬಗಳನ್ನು ಮಾಡಿ ಒಂದೇ ಮಣೆಯ ಮೇಲೆ ಚೌಕಾಕಾರವಾಗಿಟ್ಟು, ಮುಂದಿನ ಎರಡು ಕಂಬಗಳ ಮಧ್ಯಕ್ಕೆ ಸುಂದರವಾದ ಕುಸುರಿನ ಬಾಗಿಲನ್ನಿಟ್ಟು, ಆ ನಾಲ್ಕು ಕಂಬಗಳ ಮೇಲೆ ದೊಡ್ಡ ಮಣೆ ಹಾಕುವುದುಂಟು. ಆ ಕಂಬ, ಬಾಗಿಲದ ಅಕ್ಕಪಕ್ಕಗಳಿಗೆ ಗುಲಗುಂಜಿ, ಕುಶಿಬಿ, ಜಾಲಿ ಹೂಗಳನ್ನು ಏರಿಸುವುದುಂಟು. ಈ ಪ್ರಕಾರ ನಾಲ್ಕು ವಾರ ಒಂದರ ಮೇಲೊಂದು ಬಾಗಿಲಿನ ಮಹಡಿ ಏರಿಸುತ್ತ ನಾಲ್ಕನೆಯ ವಾರಕ್ಕೆ ನಾಲ್ಕು ಕಂಬದ ಎತ್ತರದ ಗುಳ್ಳವ್ವನ ಗೋಪುರ ಮಾಡಿ ಶೃಂಗಾರ ಮಾಡುವರು. ಇದಕ್ಕೆ ಜರತಾರಿ ಹೂವಿನ ಖಣವನ್ನಾಗಲಿ, ಬಣ್ಣ ಬಣ್ಣದ ಹಾಳೆಗಳನ್ನಾಗಲಿ, ಛತ್ತರಿಗೆಯಂತೆ ಮಾಡಿ ಚುಚ್ಚುವುದು'[೧೬೫] ಸಂಪ್ರದಾಯ ಎಂದು ಚೆನ್ನಕ್ಕ ಎಲಿಗಾರ ಅವರು ಹೇಳುತ್ತಾರೆ. ಇಲ್ಲಿ ಪ್ರತಿ ಮಂಗಳವಾರವೂ ಒಂದೊಂದು ಆಕಾರದಲ್ಲಿ ಗುಳ್ಳವ್ವನನ್ನು ಮಾಡುವುದು ಮತ್ತು ಅವುಗಳನ್ನು ಸಿಂಗರಿಸುವ ಪ್ರಕ್ರಿಯೆ ಜನಪದ ಚಿತ್ರಕಲೆಯ ಮಹತಿಯನ್ನು ಸಾರುತ್ತದೆ.

ಇಂದಿಗೂ ಹಳ್ಳಿಗಳಲ್ಲಿ ಗುಳ್ಳವ್ವನನ್ನು ಕುಳ್ಳಿರಿಸುವ ಪರಿಪಾಠವಿದೆ. ಆದರೆ ಅದು ತುಂಬ ವಿರಳವಾಗುತ್ತ ಸಾಗಿದ್ದು, ಇದಕ್ಕೆ ಆಧುನಿಕ ಜೀವನಶೈಲಿ ಕಾರಣವಾಗಿರುವಂತೆಯೇ ಜನಪದ ನಂಬಿಕೆಯೂ ಕಾರಣವಾಗಿದೆ ಎನ್ನಬೇಕಾಗುತ್ತದೆ. ಯಾಕೆಂದರೆ, 'ಉತ್ತರ ಕರ್ನಾಟಕದಲ್ಲಿ ಗುಳ್ಳವ್ವನ ಸಂಪ್ರದಾಯ ಸಾರ್ವತ್ರಿಕವಾಗಿದ್ದು, ಈಕೆ ಕ್ಷುದ್ರದೇವತೆಗಳ ವರ್ಗಕ್ಕೆ ಸೇರಿದ್ದಾಳೆ. ಈ ಮಾತಿಗೆ **ಗುಳ್ಳವ್ವ ದೇವರಲ್ಲ ; ಉಡಕಿ ಗಂಡಲ್ಲ, ಒಳ್ಳೊಳ್ಳೆಯವರು ಉಳ್ಳಾಡುವಾಗ ಗುಳ್ಳವ್ವ ಪಲ್ಲಕ್ಕಿ ಬೇಡಿದಳು** ಎಂಬ ಗಾದೆಗಳು ಸಾಕ್ಷಿಯೆನಿಸಿವೆ'[೧೬೬] ಎಂದು ಚೆನ್ನಕ್ಕ ಎಲಿಗಾರ ಅವರು ಹೇಳುತ್ತಾರೆ.

**ನಾಗರ ಪಂಚಮಿ :** ನಾಗರ ಪಂಚಮಿ ನಾಡಿಗೆ ದೊಡ್ಡದು ಎಂಬ ಮಾತು ನಾಡಿನ ಎಲ್ಲ ಕಡೆಯೂ ಅನುರಣಿಸುತ್ತಲೇ ಇಂದಿಗೂ ಚಾಲ್ತಿಯಲ್ಲಿದೆ. ಇದು ನಾಗಪ್ಪನನ್ನು ಪೂಜಿಸುವ ಹಬ್ಬ.

---

೧೬೫. ಜಾನಪದ ಸಾಹಿತ್ಯ ದರ್ಶನ–೧೦ : ಸಂ–ವೃಷಭೇಂದ್ರಸ್ವಾಮಿ ಎಸ್. ಎಂ : ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ : ೧೯೮೭ : ಪು–೮೫

೧೬೬. ಜಾನಪದ ಸಾಹಿತ್ಯ ದರ್ಶನ–೧೦ : ಸಂ–ವೃಷಭೇಂದ್ರಸ್ವಾಮಿ ಎಸ್. ಎಂ : ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ : ೧೯೮೭ : ಪು–೯೦

ಹುತ್ತಪ್ಪನ ಪೂಜೆ ಎಂದೂ ಇದನ್ನು ಕರೆಯಲಾಗುತ್ತದೆ. ನಾಗಪೂಜೆಗೆ ಪೌರಾಣಿಕ ಪ್ರಸಂಗಗಳೂ ತುಂಬ ಇವೆ. ಮಹಾಭಾರತದಲ್ಲಿ ಬರುವ ನಾಗಕುಲದ ಚಿತ್ರಾಂಗದೆಯ ಉಲ್ಲೇಖ ಕೂಡ ಇಲ್ಲಿ ಬರುತ್ತದೆ. ತಕ್ಷಕ, ಪರೀಕ್ಷಿತ, ಜನಮೇಜಯ ಮೊದಲಾದ ಪಾತ್ರಗಳ ಮೂಲಕ ನಾಗವಂಶದ ನಿರ್ಮೂಲನೆಗೆ ಕೈಗೊಂಡ ಯಾಗದ ಕತೆ, ಆಸ್ತಿಕಮುನಿಯ ಪ್ರವೇಶದಿಂದ ಸುಖಾಂತ್ಯವಾಗುವ ಬಗೆಯನ್ನು ವಿವಿಧ ರೀತಿಯಲ್ಲಿ ಹೇಳಲಾಗುತ್ತದೆ. ನಾಗಕುಲದಿಂದ ಕ್ಷೋಭೆಗೆ ಒಳಗಾದ ಆರ್ಯರು ಅಂದಿನಿಂದ ನಾಗದೇವತೆಯನ್ನು ಪೂಜಿಸುವ ಪರಿಪಾಠ ಆರಂಭಿಸಿದರು ಎಂಬ ಕತೆಯೂ ಉಂಟು. ಇಡೀ ಭಾರತದಲ್ಲಿ ಈ ನಾಗ ಪೂಜೆಯನ್ನು ಮಾಡಿಕೊಂಡು ಬರಲಾಗುತ್ತಿದೆ. ಆರ್ಯರೊಂದಿಗೆ ಹೋರಾಟ ಮಾಡಿ, ಗೆಲುವು ಸಾಧಿಸಿದ ನಾಗವಂಶದ ಪ್ರತೀಕವಾಗಿಯೂ ಈ ಹಬ್ಬವನ್ನು ಆಚರಿಸಲಾಗುತ್ತಿತ್ತು. ಆದರೆ ಈಗ ಅದು ಯಾವುದೇ ಹಿನ್ನೆಲೆಯ ಅರಿವು ಇಲ್ಲದೆ ಆಚರಣೆಯಾಗುವ ಒಂದು ಹಬ್ಬವಾಗಿ ಪರಿಣಮಿಸಿದೆ.

ಶ್ರಾವಣ ಶುದ್ಧ ಪಂಚಮಿಯ ದಿನ ಈ ಹಬ್ಬ ಬರುತ್ತದೆ. ಇದಕ್ಕೆ ಜನಪದ ಕತೆಯೂ ಉಂಟು. 'ಒಕ್ಕಲಿಗನೊಬ್ಬ ರಂಟೆ ಹೊಡೆಯುತ್ತಿದ್ದಾಗ ಅದರ ಕುಡಕ್ಕೆ ಸಿಕ್ಕು ಹಾವಿನ ಮರಿಗಳೆಲ್ಲ ಸತ್ತು ಹೋದುದ್ದರಿಂದ ತಾಯಿ ಹಾವು ರೊಚ್ಚಿಗೆದ್ದು ಅಂದಿನ ರಾತ್ರಿ ಆ ಒಕ್ಕಲಿಗನ ಮನೆಯ ಮಂದಿಯನ್ನೆಲ್ಲ ಕಚ್ಚಿ ಕೊಂದು ಹಾಕಿದರೂ ಅದರ ರೋಷ ಶಮನವಾಗದೆ ದೂರದಲ್ಲಿ ಅತ್ತೆಯ ಮನೆಯಲ್ಲಿದ್ದ ಆ ಒಕ್ಕಲಿಗನ ಮಗಳನ್ನು ಕೊಲ್ಲಲು ಅತ್ತ ಹೊರಟಿತು. ಅದೇ ಹೊತ್ತಿಗೆ ಅತ್ತೆಯ ಮನೆಯಲ್ಲಿದ್ದ ಆ ಒಕ್ಕಲಿಗನ ಮಗಳು ಮಣ್ಣಿನ ಹಾವನ್ನು ಮಾಡಿ ಹಾಲೆರೆಯುತ್ತಿದ್ದದ್ದನ್ನು ಕಂಡ ನಾಗಿಣಿಯ ರೊಚ್ಚು ತಕ್ಕಮಟ್ಟಿಗೆ ಶಾಂತವಾಯಿತು. ಅದು ತಾನು ಒಕ್ಕಲಿಗನ ಮನೆಯಲ್ಲಿ ಮಾಡಿದ ಕೇಡನ್ನು ಹೇಳಲು, ಆಕೆ ಬೋರಾಡಿ ಅತ್ತು ತನ್ನ ತವರವರನ್ನೆಲ್ಲ ಬದುಕಿಸೆಂದು ಬೇಡಿಕೊಂಡಳು. ಆ ನಾಗಿಣಿಗೆ ಕರುಣೆ ಹುಟ್ಟಿ ಒಕ್ಕಲಿಗನ ಮನೆಗೆ ಬಂದು ಎಲ್ಲರ ವಿಷವನ್ನು ಮರಳಿ ಹೀರಿ ಬದುಕಿಸಿದ್ದರಿಂದ ಅವರೆಲ್ಲ ನಾಗಿಣಿಯನ್ನು ಪೂಜಿಸುತ್ತ ಬಂದರೆಂಬ ಕಥೆಯಿದೆ. ಅಂದು ಶ್ರಾವಣ ಶುದ್ಧ ಚೌತಿಯಾದ್ದರಿಂದ ಅಂದಿನ ದಿನವನ್ನು ನಾಗಚೌತಿ ಎಂಬ ಹೆಸರಿನಿಂದ ಕರೆಯುತ್ತ ಬಂದುದೇ ನಾಗಪೂಜೆಗೆ ಕಾರಣವೆನಿಸಿತು. ಮಗಳ ಈ ಉಪಕಾರದ ದ್ಯೋತಕವಾಗಿಯೇ ಇಂದಿಗೂ ನಾಗರಪಂಚಮಿ ಹಬ್ಬಕ್ಕೆ ಮಗಳನ್ನು ತವರಿನವರು ಕರೆ ತರುವರೆಂದು ಜಾನಪದರು ಹೇಳುತ್ತಾರೆ'[೧೬೭] ಎಂದು ಚೆನ್ನಕ್ಕ ಎಲಿಗಾರ ಅವರು ಹೇಳುತ್ತಾರೆ.

---

೧೬೭. ಜಾನಪದ ಸಾಹಿತ್ಯ ದರ್ಶನ–೧೦ : ಸಂ–ವೃಷಭೇಂದ್ರಸ್ವಾಮಿ ಎಸ್. ಎಂ : ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ : ೧೯೮೭ : ಪು–೯೨

ಈ ನಾಗಪಂಚಮಿ ಮೂರು ದಿನಗಳ ಕಾಲ ಆಚರಿಸಲ್ಪಡುತ್ತದೆ. ಮೊದಲನೆಯ ದಿನ ನಾಗರ ಅಮವಾಸ್ಯೆ. ಇದನ್ನು ರೊಟ್ಟಿ ಪಂಚಮಿ ಎಂದೂ ಕರೆಯಲಾಗುತ್ತದೆ. ಎರಡನೆಯ ದಿನ ನಾಗಚೌತಿ ಮತ್ತು ಮೂರನೆಯ ದಿನ ನಾಗಪಂಚಮಿ. ನಾಗಚೌತಿಯಂದು ಹೆಣ್ಣುಮಕ್ಕಳು ಹೊಸ ಬಟ್ಟೆ ಧರಿಸಿಕೊಂಡು ಹುತ್ತವನ್ನು ಹುಡುಕಿಕೊಂಡು ಹೋಗುತ್ತಾರೆ. ಹುತ್ತವನ್ನು ಕಂಡ ಮೇಲೆ ಅದನ್ನು ಪೂಜಿಸಿ ಆ ಹುತ್ತಿನ ಮಣ್ಣಿನಿಂದಲೇ ನಾಗಪ್ಪನನ್ನು ತಯಾರಿಸುತ್ತಾರೆ. ಇದು ತುಂಬ ಹಿಂದಿನ ಕತೆ. ಈಗ ಮಣ್ಣಿನಿಂದ ನಾಗಪ್ಪನನ್ನು ಮಾಡಿ ಮನೆ ಮನೆಗೆ ಮಾರುವ ವೃತ್ತಿಯೇ ಕಂಡುಬರುತ್ತದೆ. ಕೆಲವು ಕಡೆ ಮಾರುಕಟ್ಟೆಗಳಲ್ಲಿ ನಾಗಪ್ಪನ ವಿಗ್ರಹಗಳನ್ನು ಮಾರಾಟ ಮಾಡಲು ಕೂಡ ಇಡಲಾಗುತ್ತಿದೆ. ಹೆಡೆ ಎತ್ತಿದ ಸರ್ಪದ ಮೂರ್ತಿಯನ್ನು ಇಲ್ಲಿ ತಯಾರಿಸಲಾಗುತ್ತಿದೆ. ಅದಕ್ಕೆ ಸೂಕ್ತವಾದ ಬಣ್ಣವನ್ನು ಕೂಡ ಬಳೆಯಲಾಗುತ್ತದೆ. ಮೊದಲಾದರೆ ಕೆಮ್ಮಣ್ಣು ಮತ್ತು ಸುಣ್ಣದಿಂದ ಮಾತ್ರ ಬಣ್ಣ ಬಳೆದು ನಾಗಪ್ಪನನ್ನು ಸಿಂಗರಿಸಲಾಗುತ್ತಿತ್ತು. ಆದರೆ ಈಗ ದಿಟವಾದ ನಾಗರ ಹಾವು ಇರುವಂತೆಯೇ ಕಲಾಕೃತಿಗಳು ಮಾರುಕಟ್ಟೆಯಲ್ಲಿ ಲಭ್ಯ ಇವೆ. ಅವುಗಳನ್ನು ಮನೆಗೆ ತಂದು ಪೂಜೆ ಮಾಡಿ, ಮರುದಿನ ಮುತ್ತೈದೆಯರು ಹಾಲು ಎರೆಯುತ್ತಾರೆ. ಆನಂತರ ನೈವೇದ್ಯದೊಂದಿಗೆ ಹುತ್ತ ಇರುವಲ್ಲಿಗೆ ಹೋಗಿ ಆ ನಾಗಪ್ಪನನ್ನು ಇಟ್ಟು ಮತ್ತೊಮ್ಮೆ ಪೂಜೆ ಮಾಡಲಾಗುತ್ತದೆ.

ನಾಗಪ್ಪನನ್ನು ತಯಾರಿಸಲು ಹದವಾದ ಎರೆಮಣ್ಣು ಬೇಕಾಗುತ್ತದೆ. ಕೆಲವು ಕಡೆ ಹುತ್ತದ ಮಣ್ಣನ್ನು ಉಪಯೋಗಿಸಲಾಗುತ್ತದೆ. ದಿಟದ ನಾಗರ ಹಾವನ್ನೇ ಹೋಲುವಂತೆ ಮೂರ್ತಿಗಳನ್ನು ಮಾಡಲಾಗುತ್ತದೆ. ಇದರಿಂದಾಗಿ ಜನಪದರ ಚಿತ್ರಕಲೆಯ ಅರಿವು ಉಂಟಾಗುತ್ತದೆ. ಮೊದಲಿಗೆ ಯಾವುದೇ ವೃತ್ತಿಯಾಧಾರಿತವಾಗಿರದ ಕಾಲದಲ್ಲಿಯೂ ಇದು ಇತ್ತು. ಈಗಂತೂ ವೃತ್ತಿಯನ್ನಾಗಿಸಿಕೊಂಡ ಕೆಲವರು ನಾಗರಪಂಚಮಿಯ ಮುನ್ನಾ ದಿನವೇ ನಾಗಪ್ಪಗಳನ್ನು ತಯಾರಿಸಿ ಮಾರಾಟ ಮಾಡುತ್ತಾರೆ. ಇದಕ್ಕೆ ಯಾವುದೇ ಅಸಹಜ ಬಣ್ಣವನ್ನು ಬಳಸುವುದಿಲ್ಲ ಎಂಬುದು ಸಮಾಧಾನಕರ ಸಂಗತಿ. ಲಭ್ಯ ಇರುವ ನೈಸರ್ಗಿಕ ಬಣ್ಣಗಳನ್ನೇ ಬಳಸಿ ನಾಗಪ್ಪಗಳನ್ನು ತಯಾರಿಸಲಾಗುತ್ತದೆ. ಬಾಲ ಹರಡಿಕೊಂಡು ಕುಳಿತ ಹಾವು, ಹೆಡೆಯೆತ್ತಿದ ಹಾವು, ನಾಲಿಗೆ ಚಾಚಿದ ಹಾವು ಹೀಗೆ ನಾನಾ ತರಹದ ಮಣ್ಣಿನ ಮೂರ್ತಿಗಳನ್ನು ತಯಾರಿಸಲಾಗುತ್ತದೆ. ಇಂದಿಗೂ ಹಳ್ಳಿಗಳ ಮನೆಗಳಲ್ಲಿ ಸ್ವತಃ ನಾಗಪ್ಪನನ್ನು ಮಾಡಿ ಪೂಜಿಸುವ ಪರಿಪಾಠವಿದೆ. ಅಲ್ಲದೇ ಬಸವಣ್ಣ, ಇಲಿ ಮುಂತಾದ ಪೂಜಿಸಲ್ಪಡುವ ದೈವಗಳನ್ನು ಮಣ್ಣಿನಲ್ಲಿ ತಾವೇ ತಯಾರಿಸಿ ಸಂಭ್ರಮಿಸುವುದನ್ನು ಕಾಣಬಹುದು. ಈ ಸಂದರ್ಭದಲ್ಲಿ ಸಿಹಿ ಸಿಹಿಯಾದ ಶೇಂಗಾ, ದಾಣಿ, ಗುಳಿಗಿ, ಎಳ್ಳು, ಅಳ್ಳಿಟ್ಟಿನಿಂದ ವಿವಿಧ ಬಗೆಯ ಉಂಡೆಗಳನ್ನು ಹೆಣ್ಣುಮಕ್ಕಳು ತಯಾರಿಸುವರು.

ಜೊತೆಗೆ ಬಾಗಿಲಿಗೆ ತೋರಣವಾಗಿ ಹಾಗೂ ದೇವರಿಗೆ ಹಾರವಾಗಿ ಅರಳೆ (ಹತ್ತಿ) ಯಿಂದ ಮಾಡಿದ ಮಾಲೆಯನ್ನು ಹಾಕುವರು. ಇವುಗಳನ್ನು 'ಕೊಕ್ಕ ಬತ್ತಿ', 'ಕ್ವಾಡಾ ಬತ್ತಿ'ಗಳೆಂದು ಕರೆಯುವರು.

**ಗಾಜಿನ ಮೇಲೆ ಚಿತ್ರಕಲೆ :** ಗಾಜಿನ ಮೇಲೆ ಚಿತ್ರ ಬಿಡಿಸುವುದು ಬಲು ಅಪರೂಪ. ಅದೂ ಜನಪದ ಚಿತ್ರಕಲೆಯನ್ನು ಅಲ್ಲಿ ಬಿಡಿಸುವುದು ಇನ್ನೂ ದುಸ್ತರ. ಧಾರವಾಡ ಜಿಲ್ಲೆಯಲ್ಲಿ ಇದು ಇನ್ನೂ ವ್ಯಾಪಕವಾಗಿ ಬೆಳೆದು ಬಂದಿಲ್ಲವಾದರೂ ಅಲ್ಲಲ್ಲಿ ಅಂತಹ ಪ್ರಯತ್ನಗಳನ್ನು ಕಾಣುತ್ತೇವೆ. ಗಾಜಿನ ಮೇಲೆ ಚಿತ್ರ ಬಿಡಿಸುವಿಕೆಯನ್ನು ಮೀನಾಕಾರಿ ಎಂದು ಕರೆಯಲಾಗುತ್ತದೆ. ಹುಬ್ಬಳ್ಳಿಯಲ್ಲಿ ಗಾಜಿನ ಮನೆಯಿದೆ. ಅಲ್ಲಿಯ ಉದ್ಯಾನದಲ್ಲಿ ನಿರ್ಮಾಣವಾದ ಗಾಜಿನ ಮನೆಯ ಮೇಲ್ಭಾಗದಲ್ಲಿ ವಿವಿಧ ರೀತಿಯ ಚಿತ್ರಕಲೆ ಇರುವುದು ಕಂಡುಬರುತ್ತದೆ. ಸಿದ್ಧಾರೂಢ ಮಠದಲ್ಲಿ ದೊಡ್ಡ ಪ್ರಮಾಣದಲ್ಲಿ ಇರುವ ಗಾಜಿನ ಚಿತ್ರಗಳು ಕಣ್ಮನ ಸೆಳೆಯುತ್ತವೆ.

ಈ ಮೀನಾಕಾರಿ ಕಲೆ ಮೂಲತಃ ರಾಜಸ್ತಾನ ಮೂಲದ್ದು. ಹುಬ್ಬಳ್ಳಿಗೆ ಅದನ್ನು ಪರಿಚಯಿಸಿದವರು ರಾಜಸ್ತಾನದ ಆಜ್ಮೀರನ ಕಿಶನ್‌ಗಢ್‌ನ ಸೋಹನ್ ಭಾಯಿ. ಅವರು ತಮ್ಮ ಕಲಾವಿದರ ತಂಡದೊಂದಿಗೆ ಈ ಮೀನಾಕಾರಿ ಕಲೆಯನ್ನು ಮುನ್ನಡೆಸಿಕೊಂಡು ಬರುತ್ತಿದ್ದಾರೆ. ಸಿದ್ಧಾರೂಢ ಮಠದ ಕೈಲಾಸ ಮಂಟಪಕ್ಕೆ ಮೆರಗು ನೀಡಿರುವ ಈ ಕಲೆ ಮನಮೋಹಕವಾಗಿ ಮೂಡಿನಿಂತಿದೆ.

'ವಿವಿಧ ಆಕಾರದ ಗಾಜಿನ ಸಣ್ಣ ತುಂಡುಗಳ ಮೇಲೆ ಬಣ್ಣ, ಪೇಪರ್, ಅಂಟು, ಪೊರಕೆ ಕಡ್ಡಿ, ಅಲ್ಯೂಮಿನಿಯಂ ಮಿಶ್ರಿತ ಪ್ಲೇಟ್ ಇತ್ಯಾದಿಗಳನ್ನು ಬಳಸಿ ಬಿಡಿಸಲಾಗುವ ಚಿತ್ರಗಳು ಗಾಜಿನ ಮನೆಯ ಮೇಲೆ ಕೊರೆದು ಮಾಡಿದ ಕಲೆಯಂತೆ, ಒಮ್ಮೊಮ್ಮೆ ಉಬ್ಬು ಚಿತ್ರದಂತೆ ಕಾಣುತ್ತದೆ. ಇಡೀ ಗೋಡೆಯನ್ನು ಆವರಿಸಿದಾಗ ಅದರ ಮೇಲೆ ಬೆಳಕು ಬಿದ್ದರೆ ಬಣ್ಣದ ವಿಶಿಷ್ಟ ಲೋಕವೇ ಅಲ್ಲಿ ತೆರೆದುಕೊಳ್ಳುತ್ತದೆ'[೧೬೮] ಎಂದು ವಿಕ್ರಂ ಕಾಂತಿಕರೆ ಅವರು ಹೇಳುತ್ತಾರೆ. ಅಂದರೆ ಗಾಜಿನ ಮೇಲೆ ಬಿಡಿಸಲಾದ ರಂಗು-ರಂಗಿನ ಚಿತ್ರಗಳ ಮೇಲೆ ಬೆಳಕು ಹಾಯಿಸಿದಾಗ ಅಲ್ಲಿಯ ಚಿತ್ರಗಳು ಪ್ರತಿಫಲಿತಗೊಂಡು ವಿಶಿಷ್ಟ ಕಲಾಲೋಕವನ್ನು ಸೃಷ್ಟಿಸುತ್ತವೆ.

'ತ್ರಿಕೋನ, ಅಷ್ಟಕೋನ, ಆಯತ, ಚೌಕ ಮುಂತಾದ ಆಕಾರದಲ್ಲಿ ಕತ್ತರಿಸುವುದು. ಹೊಳೆಯುವ ಸಣ್ಣ ಗಾತ್ರದ ಪನ್ನಿಗಳನ್ನು ಪೊರಕೆ ಕಡ್ಡಿಯಿಂದ ಹೆಕ್ಕಿ ಅಂಟಿಸುವುದು, ಪೇಪರ್ ಪ್ಲೇಟ್‌ಗಳಲ್ಲಿ ಕಲೆಯನ್ನು ಕೆತ್ತುವುದು ಇತ್ಯಾದಿ ಸೂಕ್ಷ್ಮ ಕೆಲಸಗಳು ಈ ಕಲೆಯ ಸವಾಲುಗಳು.

---

೧೬೮. ಪ್ರಜಾವಾಣಿ : ಮೆಟ್ರೋ : ೦೧-೦೯-೨೦೧೧

ಅಪರಿಮಿತ ಆಸಕ್ತಿ, ಅಪಾರ ತಾಳ್ಮೆ, ಅರ್ಪಣಾ ಮನೋಭಾವ ಇತ್ಯಾದಿ ಗುಣಗಳು ಮೀನಾಕಾರಿ ಕಲಾವಿದರಿಗೆ ಇರಲೇ ಬೇಕು'[೧೬೯] ಎಂದು ಸೋಹನ್ ಭಾಯ್ ಹೇಳುತ್ತಾರೆ.

ಹುಬ್ಬಳ್ಳಿಯ ಕಂಚಗಾರ ಗಲ್ಲಿಯ ರಸ್ತೆಗೆ ಹೊಂದಿಕೊಂಡಿರುವಂತೆ ಇರುವ ಶ್ರೀ ಶ್ವೇತಾಂಬರಿ ಜೈನ ಮಂದಿರದಲ್ಲಿ ಕೂಡ ಈ ಗಾಜಿನ ಚಿತ್ರಕಲೆ ಇರುವುದು ಕಂಡುಬರುತ್ತದೆ. ಅಮೃತಶಿಲೆಯಲ್ಲಿ ನಿರ್ಮಾಣವಾದ ಈ ಮಂದಿರದ ಎಂಟು ಸ್ತಂಭಗಳು ಗುಮ್ಮಟವನ್ನು ಹೊತ್ತು ನಿಂತಿವೆ. ಗುಮ್ಮಟದ ಒಳಾಂಗಣ ಭಿತ್ತಿಗೆ ಕನ್ನಡಿ ಹಾಗೂ ಬಣ್ಣದ ಗಾಜುಗಳನ್ನು ಬಳಸಲಾಗಿದೆ. ಮಧ್ಯದಲ್ಲಿ ಗಾಜಿನ ಜಾಲರಿಯನ್ನು ತೂಗು ಹಾಕಲಾಗಿದೆ. ಗುಮ್ಮಟದ ಅಂಚಿನಲ್ಲಿ ಸಾಲಾಗಿ ವಿದ್ಯುತ್ ದೀಪಗಳನ್ನು ಅಳವಡಿಸಿದ್ದರಿಂದ, ಆ ದೀಪಗಳು ಹೊತ್ತಿಕೊಂಡಾಗ ಎಲ್ಲೆಡೆ ಬೆಳಕು ಪ್ರತಿಫಲಿಸತೊಡಗುತ್ತದೆ. ಇದೊಂದು ವಿಶಿಷ್ಟ ರೀತಿಯಲ್ಲಿ ಸಿದ್ಧಪಡಿಸಲಾದ ಮಂದಿರವೇ ಆಗಿದೆ ಎಂಬುದರಲ್ಲಿ ಯಾವುದೇ ಸಂದೇಹ ಬೇಡ.

**ಕಲ್ಲಿನ ಕಲಾಕೃತಿಗಳು :** ಕಲ್ಲಿನ ಮೇಲೆ ಕಲೆಯನ್ನು ಅರಳಿಸುವ ವಿಚಾರ ಎಲ್ಲರಿಗೂ ಗೊತ್ತಿರುವಂಥದ್ದೇ ಆಗಿದೆ. ಆದರೆ ಕಲ್ಲನ್ನು ಕೆತ್ತಿ ಅದನ್ನು ಒಂದು ಸುಂದರ ಶಿಲ್ಪವನ್ನಾಗಿ ತಯಾರಿಸುವ ಕಲೆ ತುಂಬ ಕಠಿಣವಾದದ್ದು. ಜಗತ್ತಿನಾದ್ಯಂತ ಇಂತಹ ಕಲಾಕೃತಿಗಳು ಕಂಡುಬರುತ್ತವೆ. ಬೌದ್ಧ ಗುಹಾಲಯಗಳು, ಹಲವಾರು ಮಂದಿರಗಳಲ್ಲಿ ಇಂತಹ ವಿಗ್ರಹಗಳನ್ನು ಕಾಣಬಹುದಾಗಿದೆ. ಪ್ರತಿಯೊಂದು ಊರಿನಲ್ಲಿ ಕೂಡ ಇಂತಹ ಕೆತ್ತನೆಯ ಕಲ್ಲಿನ ವಿಗ್ರಹಗಳು ಕಾಣಿಸಿಕೊಳ್ಳುತ್ತವೆ. ಮಾಸ್ತಿ ಕೈ, ವೀರಗಲ್ಲುಗಳನ್ನು ಈ ನಿಟ್ಟಿನಲ್ಲಿ ಗುರುತಿಸಬೇಕಾಗುತ್ತದೆ. ಬೇಲೂರು, ಹಳೆಬೀಡಿನಲ್ಲಿ ಇರುವ ಶಿಲ್ಪಕೃತಿಗಳಂತೂ ಜಗತ್ಪ್ರಸಿದ್ಧವಾಗಿವೆ.

ಧಾರವಾಡ ಜಿಲ್ಲೆಯಲ್ಲಿಯೂ ಕೂಡ ಇಂತಹ ವಿಗ್ರಹಗಳು ಕಂಡುಬರುತ್ತವೆ. ಪ್ರತಿಯೊಂದು ದೇವಾಲಯಗಳಲ್ಲಿ ಮೂರ್ತಿಗಳು ಇರುತ್ತವೆ. ಆ ಮೂರ್ತಿಗಳಿಗೇ ಎಲ್ಲ ಪೂಜೆಗಳೂ ಸಲ್ಲುತ್ತವೆ. ಆ ಮೂರ್ತಿಗಳು ಕೆಲವು ಕಡೆ ಕೆಲವು ಲೋಹ ಅಥವಾ ಮಣ್ಣಿನಿಂದ ಮಾಡಿದಂಥವುಗಳಾಗಿರುತ್ತವೆ. ಆದರೆ ಹೆಚ್ಚಾಗಿ ಕಲ್ಲಿನ ಮೂರ್ತಿಗಳೇ ಎಲ್ಲ ಕಡೆಯೂ ಕಂಡುಬರುತ್ತವೆ. ಆದರೆ ಕಲ್ಲನ್ನು ಕಲೆಗಾಗಿ ಬಳಸುವ ಪರಿಪಾಠ ಮಾತ್ರ ಹೆಚ್ಚಾಗಿ ಕಂಡುಬರುವುದಿಲ್ಲ. ಧಾರವಾಡದ ಸ್ಯಾಮ್ಸನ್ ಮತ್ತು ನಳಿನಿ ದಂಪತಿಗಳು ಈ ಕಾರ್ಯವನ್ನು ತುಂಬ ಕಲಾತ್ಮಕವಾಗಿ ಮಾಡುತ್ತಾರೆ. ಇವರು ಇದನ್ನು ಹವ್ಯಾಸವನ್ನಾಗಿಯೂ ವೃತ್ತಿಯನ್ನಾಗಿಯೂ ಪಾಲಿಸಿಕೊಂಡು ಬರುತ್ತಿದ್ದಾರೆ. ಹೊಸಪೇಟೆಯ ತುಂಗಭದ್ರಾ ಸ್ಟೀಲ್

---

೧೬೯. ಪ್ರಜಾವಾಣಿ : ಮೆಟ್ರೋ : ೦೧-೦೯-೨೦೧೧

ಪ್ರೊಡಕ್ಸ್‌ನಲ್ಲಿ ಉದ್ಯೋಗಿಯಾಗಿದ್ದ ಸ್ಯಾಮ್ಸನ್ ಅವರು ನಿವೃತ್ತಿಯ ನಂತರ ಈಗ ಧಾರವಾಡದಲ್ಲೇ ನೆಲೆಸಿದ್ದಾರೆ. ಧಾರವಾಡದ ಲಕ್ಷ್ಮಿ ನಗರದಲ್ಲಿ ಎಸ್.ಎನ್. (ಸ್ಯಾಮ್ಸನ್-ನಳಿನಿ) ಆರ್ಟ್ಸ್ ಹೆಸರಿನ ಮನೆಯಲ್ಲಿ ವಾಸವಾಗಿರುವ ಇವರು ಇಲ್ಲಿಯವರೆಗೆ ಹಲವಾರು ಕಲ್ಲಿನ ಮೂರ್ತಿಗಳನ್ನು ನಿರ್ಮಿಸಿದ್ದಾರೆ. 'ಅವರ ಬಹುತೇಕ ಕೃತಿಗಳು ಮಾಡರ್ನಿಸಂ ಶೈಲಿಯವಾದರೂ ೧೮ನ ಶತಮಾನದಲ್ಲಿ ಫ್ರೇಂಚ್‌ನಲ್ಲಿ ಜರುಗಿದ ಜನತಾಂತ್ರಿಕ ಕ್ರಾಂತಿಯಲ್ಲಿ ಒಡಮೂಡಿದ ಕಲೆಯಿಂದ ಪ್ರಭಾವಿತಗೊಂಡಿದೆ. ಹೈದರಾಬಾದ್‌ನ ಸಾಲಾರ್‌ಜಂಗ್ ಮ್ಯೂಸಿಯಂನ ಆಕರ್ಷಣೆಗಳಲ್ಲಿ ಒಂದಾದ ಮಾರ್ಗರೆಟ್ಟಾ-ಮೆಫೆಸ್ಟೊಫೆಲಿಸ್ ಎಂಬ ಕಲಾಕೃತಿಯನ್ನು ಸತತ ಏಳು ತಿಂಗಳ ಶ್ರಮದಿಂದ ಒಡಮೂಡಿಸಿದ್ದಾರೆ'[೧೭೦] ಎಂದರೆ ಸ್ಯಾಮ್ಸನ್ ಅವರ ಕಲಾ ತಪಸ್ಸಿನ ಬಗ್ಗೆ ಅರಿವಾಗುತ್ತದೆ.

'ಶಿಲ್ಪಕಲೆ ಸ್ಯಾಮ್ಸನ್ ಅವರಿಗೆ ಒಲಿದಿದ್ದೂ ಆಕಸ್ಮಿಕವೇ. ಹೊಸಪೇಟೆಗೆ ಹತ್ತಿರವಿರುವ ಹಂಪಿಯಲ್ಲಿ ದಿನಗಟ್ಟಲೇ ವಾರಗಟ್ಟಲೇ ಹೋಗಿ ಸುಮ್ಮನೇ ಕುಳಿತುಕೊಳ್ಳುತ್ತಿದ್ದರಂತೆ. ಆಗಾಗ ಅಲ್ಲಿನ ಶಿಲ್ಪಕಲಾಕೃತಿಗಳನ್ನು ನೋಡುತ್ತಿದ್ದ ಅವರಿಗೆ ನಾನೂ ಏಕೆ ಈ ವಿದ್ಯೆಯನ್ನು ಕಲಿತುಕೊಳ್ಳಬಾರದು ಎಂದೆನಿಸಿದೆ. ಗುರುವಿಲ್ಲದೇ ಸುಮ್ಮನೇ ಕಲ್ಲನ್ನು ತೆಗೆದುಕೊಂಡು ಕೆತ್ತನೆ ಶುರು ಮಾಡಿಯೇ ಬಿಟ್ಟರಂತೆ. ಮೊದ ಮೊದಲು ಅಷ್ಟೇನೂ ಸುಂದರವಾಗಿರದ ಕೆತ್ತನೆಯನ್ನು ಮಾಡಿದ ಅವರ ಕೈ ಪಳಗಿದ ಬಳಿಕ ಚಿತ್ರಗಳು ಒಂದು ಹದಕ್ಕೆ ಬಂದವು. ಈ ವೃತ್ತಿಯನ್ನು ವಾಣಿಜ್ಯ ಉದ್ದೇಶಕ್ಕೆ ಬಳಸಲು ಒಪ್ಪದ ಸ್ಯಾಮ್ಸನ್, ತಮ್ಮ ಹತ್ತಿರದ ಬಂಧುಗಳು, ಸ್ನೇಹಿತರ ಒತ್ತಾಯದ ಮೇರೆಗಷ್ಟೇ ಮೂರ್ತಿ ತಯಾರಿಕೆಗೆ ಮುಂದಾಗುತ್ತಾರೆ.'[೧೭೧] ಎನ್ನುವ ಮಾತುಗಳನ್ನು ಕೇಳಿದಾಗ ಕಲೆಯನ್ನು ಒಂದು ಆರಾಧನೆಯನ್ನಾಗಿ ನೋಡುವ ಸ್ಯಾಮ್ಸನ್ ಅವರ ಮನೋಭಾವದ ಪರಿಚಯವಾಗುತ್ತದೆ.

ಇವರ ಶಿಲ್ಪಕೃತಿಗಳಲ್ಲಿ ಬಾಗಲಕೋಟೆಯ ಕೃಷ್ಣಶಿಲೆ, ಹೊಸಪೇಟೆಯ ಬಿಳಿಶಿಲೆ ಹಾಗೂ ಧಾರವಾಡದ ಶಾಲ್ಮಲಾ ನದಿಗುಂಟ ದೊರೆಯುವ ನುಣ್ಣನೆಯ ಕಲ್ಲುಗಳು ಬಳಕೆಯಾಗುತ್ತವೆ. ವಿಶೇಷವಾಗಿ ಹೊಸ ಹೊಸ ವ್ಯಕ್ತಿಗಳ ಅಭಿವ್ಯಕ್ತಿಯನ್ನು ತಮ್ಮ ಶಿಲ್ಪಕಲೆಯಲ್ಲಿ ತೋರಿಸುವ ಅವರು ಚಿತ್ರಗಳನ್ನು ತೀರ ಸಹಜತೆಗೆ ಹತ್ತಿರವಾಗುವಂತೆ ಚಿತ್ರಿಸುತ್ತಾರೆ. ಮೈ ಮೇಲೆ ಹಾಕಿರುವ ಬಟ್ಟೆಯ ನಿರಿಗೆಗಳು, ಕೈಯಲ್ಲಿ ಧರಿಸುವ ಬಳೆಗಳು, ಕಾಲಲ್ಲಿ ಧರಿಸುವ ಕಡಗಗಳು ಇಂಚು ಇಂಚಾಗಿ ಸೂಕ್ಷ್ಮವಾದ ಕೆತ್ತನೆಗಳಾಗಿರುತ್ತವೆ.

---

೧೭೦. ಪ್ರಜಾವಾಣಿ : ವಾಣಿಜ್ಯ-ಯುವಜನ ವಿಭಾಗ : ೨೦-೧೦-೨೦೧೨
೧೭೧. ಪ್ರಜಾವಾಣಿ : ವಾಣಿಜ್ಯ-ಯುವಜನ ವಿಭಾಗ : ೨೦-೧೦-೨೦೧೨

**ನವಲಗುಂದದ ಜಮಖಾನೆ :** ನವಲಗುಂದ ಜಮಖಾನೆಗಳು ಇಂದಿಗೂ ಪ್ರಸಿದ್ಧವಾಗಿದ್ದರೂ ಬೇಡಿಕೆ ಕಡಿಮೆಯಾಗಿರುವುದರಿಂದ ಉತ್ಪತ್ತಿ ಕೂಡ ಕಡಿಮೆಯಾಗಿದೆ. 'ನವಲಗುಂದ ಜಮಖಾನೆಗೆ ಭೌಗೋಳಿಕ ಹಕ್ಕುಸ್ವಾಮ್ಯ (Geographical Indication) ಸಿಕ್ಕ ವಿಷಯವಾಗಿ ನಿಗಮದಿಂದ (ಕರಕುಶಲ ಅಭಿವೃದ್ಧಿ ನಿಗಮ) ... ... ಹುಬ್ಬಳ್ಳಿಯಲ್ಲಿ ಕಾರ್ಯಾಗಾರ ಏರ್ಪಡಿಸಲಾಗಿತ್ತು. ಅದರಲ್ಲಿ ಪಾಲ್ಗೊಂಡ ಎಲ್ಲ ನೇಕಾರ ಮಹಿಳೆಯರದ್ದೂ ಒಂದೇ ಗೋಳು. ಜಮಖಾನೆ ನೇಯ್ಗೆಯಿಂದ ಉಪಜೀವನ ನಡೆಸಲು ಆಗುತ್ತಿಲ್ಲ ಎಂದು ಅವರೆಲ್ಲ ಸಂಕಟ ಪಡುತ್ತಿದ್ದರು.'[೧೭೨] ಎಂಬುದನ್ನು ಅರಿತುಕೊಂಡಾಗ ಈ ಉದ್ದಿಮೆ ಇಂದು ಬೇಡಿಕೆ ಕಳೆದುಕೊಂಡಿದೆ ಎನ್ನಲೇ ಬೇಕಾಗುತ್ತದೆ. ಒಂದಾನೊಂದು ಕಾಲದಲ್ಲಿ ನವಲಗುಂದದ ಜಮಖಾನೆಗೆ ತುಂಬ ಬೇಡಿಕೆ ಇರುತ್ತಿತ್ತು. ಆದರೆ ಕಾಲ ಬದಲಾದಂತೆಲ್ಲ ಆಧುನಿಕ ವಸ್ತುಗಳು ಮನೆಯನ್ನು ಅಲಂಕರಿಸತೊಡಗಿದಾಗ ಸಾಂಪ್ರದಾಯಿಕವಾದ ಕಲಾವಂತಿಕೆಯ ವಸ್ತುಗಳು ಹಿನ್ನೆಲೆಗೆ ಸರಿಯತೊಡಗಿವೆ ಎಂಬುದನ್ನು ಈ ಮಾತು ಧ್ವನಿಸುತ್ತದೆ.

ವಿವಿಧ ಬಣ್ಣಗಳಲ್ಲಿ ಮೂಡಿಬರುವ ನವಲಗುಂದದ ಜಮಖಾನೆಗಳು ಚಾರ್ ಮೋರ್ (ನಾಲ್ಕು ನವಿಲು), ಪಗಡಿ ಮನಿ, ಬಡಿ ಗಡಿ (ಗಡಿ=ಹೂವು), ಚೋಟಿ ಗಡಿ, ತುಕಡ್ಯಾನ ಗಡಿ, ಅಂಗೋಟಿ ಚುಣಕ, ಮದ್ದಾನಿ ಚುಣಕ, ನಖ್ಯಾ ಚುಣಕ, ಖ್ಯಾದಗಿ, ಕರಿಗೋರಾ ದಡಿ (ಬಾರ್ಡರ್/ಅಂಚು), ಮಂಡ, ಸಿಂಪಲ್ ಮಾಡಲ್ ಎನ್ನುವ ಅವರದೇ ಆದ ಪಾರಿಭಾಷಿಕ ಪದಗಳಿಂದ ಜಮಖಾನೆಯ ವಿನ್ಯಾಸವನ್ನು ನವಲಗುಂದದ ಶೌಕತ್‌ಅಲಿ ಜಮಖಾನ[೧೭೩] ಅವರು ವಿವರಿಸುತ್ತಾರೆ. ಅಲ್ಲದೇ ನವಿಲು, ತ್ರಿಕೋನ, ಚಕ್ರ, ಹೂವು, ಬಳ್ಳಿ ಮೊದಲಾದ ಚಿತ್ರಗಳಿಂದ ಈ ಜಮಖಾನೆಗಳು ಕಣ್ಮನ ಸೆಳೆಯುತ್ತಿದ್ದವು. ಮನೆಗೆ ಯಾರಾದರೂ ಬಂಧುಗಳು-ನೆಂಟರಿಷ್ಟರು ಬಂದಾಗ ಅವರು ಕುಳಿತುಕೊಳ್ಳಲು ಇಂಥ ಜಮಖಾನೆಗಳನ್ನು ಮೊದಲು ಹಾಸಲಾಗುತ್ತಿತ್ತು. ಅದು ಮನೆಯ ಶ್ರೀಮಂತಿಕೆ ಮತ್ತು ಅಚ್ಚುಕಟ್ಟುತನವನ್ನು ತೋರಿಸುತ್ತಿತ್ತು. ಆದರೆ ಇದೀಗ ಕಾಲ ಬದಲಾಗಿದ್ದು, ನವಲಗುಂದದ ಜಮಖಾನೆಗಳು ಬೇಡಿಕೆ ಕಳೆದುಕೊಂಡಿವೆ. ಹಾಗಂತ ಅವುಗಳನ್ನು ತಯಾರಿಕೆಯೇ ನಿಂತು ಹೋಗಿದೆ ಎನ್ನುವಂತಿಲ್ಲ.

ಮೊದಲು ನವಲಗುಂದದಲ್ಲಿ ಬಹಳಷ್ಟು ಜನ ಈ ಜಮಖಾನೆ ನೇಯ್ಗೆ ಕೆಲಸವನ್ನು ಮಾಡುತ್ತಿದ್ದರು. ಆದರೆ ಈಗ ಸುಮಾರು ೧೦ ರಿಂದ ೧೨ ಕುಟುಂಬಗಳು ಮಾತ್ರ ಈ ನೇಯ್ಗೆಯನ್ನು ಮಾಡುತ್ತಿವೆ. ಕರ್ನಾಟಕದ ಕರಕುಶಲ ಅಭಿವೃದ್ಧಿ ನಿಗಮದ ವತಿಯಿಂದ

---

೧೭೨. ಪ್ರಜಾವಾಣಿ : ಮೆಟ್ರೋ : ೧೩-೧೧-೨೦೧೧

೧೭೩. ವಕ್ತೃ : ಶೌಕತ್‌ಅಲಿ ಜಮಖಾನೆ : ವಯಸ್ಸು-೫೮ : ನವಲಗುಂದ : ೩೦-೦೭-೨೦೧೬

'ಜಮಖಾನೆ ಕೇಂದ್ರ' ಸ್ಥಾಪಿಸಲಾಗಿದ್ದು, ಇಲ್ಲೂ ಸಹಿತ ಕೆಲವೇ ಕೆಲವು ಜನ ನೇಯ್ಗೆಯನ್ನು ಮಾಡುತ್ತಿದ್ದಾರೆ. ಉಳಿದವರು ಬೇರೆ ಬೇರೆ ಉದ್ಯೋಗಗಳಲ್ಲಿ ತೊಡಗಿಕೊಂಡಿದ್ದಾರೆ. ಇದೇ ಉದ್ಯೋಗವನ್ನು ಮುಂದುವರಿಸಿದರೆ ತಾವು ಬದುಕು ನಡೆಸುವುದು ದುಸ್ತರವಾಗುತ್ತದೆ. ಯಾಕೆಂದರೆ ಇಂದು ಜಮಖಾನೆಗಳು ಬೇಡಿಕೆಯನ್ನು ಕಳೆದುಕೊಂಡಿವೆ. ಹೀಗಾಗಿ ಕೆಲವು ಮದುವೆ, ಹಬ್ಬಗಳಲ್ಲಿ ಇವುಗಳ ಬಳಕೆ ಇರುವುದರಿಂದ ತಾವು ಅದನ್ನು ಮುಂದುವರಿಸಿಕೊಂಡು ಬಂದಿದ್ದು, ತಮ್ಮ ಮಕ್ಕಳು ಆ ವೃತ್ತಿಯನ್ನು ಮಾಡಲಾರರು ಎಂದು ನವಲಗುಂದದ ಮೆಹಬೂಬಿ ಪಟವೇಗಾರ ಅವರು ಹೇಳುತ್ತಾರೆ.[೧೭೪]

**ಅನುಪಯುಕ್ತ ವಸ್ತುಗಳಿಂದ ಕಲಾಕೃತಿ :** ಬಳಸಿ ಬೀಸಾಡುವಂತಹ ಕೆಲವು ವಸ್ತುಗಳನ್ನು ಆಯ್ದುಕೊಂಡು ಕಲಾಕೃತಿಯನ್ನಾಗಿಸುವ ಕಲೆಗಾರಿಕೆ ವಿಶೇಷವಾಗಿ ಹೆಂಗಳೆಯರಲ್ಲಿ ಕಂಡುಬರುತ್ತದೆ. ಇಲ್ಲಿ ಕ್ರಿಯಾಶೀಲತೆ ಇರುತ್ತದೆ. ಹೊಸದನ್ನು ಹೊಸೆಯುವ ಕನಸುಗಾರಿಕೆ ಇರುತ್ತದೆ. ಒಡೆದ ಕನ್ನಡಿ, ಕಟ್ಟಿಗೆಯ ತುಂಡುಗಳು, ಬಳೆ ಚೂರುಗಳು, ಬೆಂಕಿ ಕಡ್ಡಿಗಳು, ಹಣ್ಣಿನ ಬೀಜಗಳು, ಕತ್ತರಿಸಿದ ಬಟ್ಟೆಯ ತುಂಡುಗಳು, ಹಳೆಯ ಪ್ಲಾಸ್ಟಿಕ್ ಕವರ್‌ಗಳು ಮೊದಲಾದ ವಸ್ತುಗಳನ್ನು ಬಳಸಿಕೊಂಡು ಸುಂದರವಾದ ಆಕೃತಿಯನ್ನು ಮಾಡಿ ಮನೆಯನ್ನು ಅಲಂಕರಿಸುವ ಪರಿಪಾಠ ಇಲ್ಲಿ ಕಂಡುಬರುತ್ತದೆ.

ಹುಬ್ಬಳ್ಳಿಯ ಕಲಾವತಿ ಆರ್. ಕೂಡ್ಲಮಠ ಅವರು ಇಂತಹ ಕಲೆಗಾರಿಕೆಯಲ್ಲಿ ನುರಿತವರು. ೭೭ರ ಇಳಿವಯಸ್ಸಿನಲ್ಲಿಯೂ ಅವರದು ಬತ್ತದ ಉತ್ಸಾಹ. ಇವರು ಮೇಣದಿಂದ ಒಂಬತ್ತು ಬಗೆಯ ದುರ್ಗಾಮಾತೆಯ ಮುಖವಾಡಗಳನ್ನು ಮಾಡಿದ್ದಾರೆ. ಅವುಗಳಿಗೆ ಭಿನ್ನ ಭಿನ್ನವಾದ ಬಣ್ಣಗಳ ಬಳಕೆ ಮಾಡುವ ಮೂಲಕ ಅವು ಕಣ್ಮನ ಸೆಳೆಯುವಂತಹ ಕುಸರಿ ಕೆಲಸವೂ ಇಲ್ಲಿ ಎದ್ದು ಕಾಣಿಸುತ್ತದೆ. ಐದು ಪೈಸೆ ನಾಣ್ಯಗಳಲ್ಲಿ ತಯಾರಿಸಿದ ದೇವಸ್ಥಾನ, ಬೋಟ್, ಬಣ್ಣದ ಮಣಿಗಳಿಂದ ತಯಾರಿಸಿದ ಭಾರತದ ನಕಾಶೆ, ಮೊಟ್ಟೆಗಳಿಂದ ತಯಾರಿಸಲಾದ ಚಹಾಕಪ್ ಮತ್ತು ಸಾಸರ್, ಗೋಧಿ ಕಡ್ಡಿಗಳಿಂದ ನಿರ್ಮಿಸಿದ ತಾಜಮಹಲ್ ಪ್ರತಿಕೃತಿ, ಪೂರ್ಣಕುಂಭ, ಬೆಂಕಿಕಡ್ಡಿಗಳಿಂದ ಸುಂದರವಾದ ಅಲಂಕಾರಿಕ ಮನೆಗಳು, ಐಸ್‌ಕ್ರೀಮ್ ಕಡ್ಡಿಗಳಿಂದ ತಯಾರಿಸಲಾದ ತಿರುಗುವ ತೊಟ್ಟಿಲು, ವಿವಿಧ ಧಾನ್ಯಗಳಿಂದ ತಯಾರಿಸಲಾದ ಗಣಪತಿ, ಸಮುದ್ರ ತೀರದಲ್ಲಿ ದೊರೆಯುವ ಶಂಖ, ಕಪ್ಪೆ ಚಿಪ್ಪಿನಿಂದ ತಯಾರಿಸಲಾದ ಆನೆ ಮುಖದ ಕನ್ನಡಿ ಮೊದಲಾದವುಗಳು ಅವರ ಕಲೆಗಾರಿಕೆಗೆ ಸಾಕ್ಷಿಯಾಗಿವೆ. ಅಷ್ಟೇ ಅಲ್ಲದೆ ಅನ್ನ, ಬೇಸನ್

---

೧೭೪. ವಕ್ತೃ : ಮೆಹಬೂಬಿ ಪಟವೇಗಾರ : ವಯಸ್ಸು-೪೨ : ನವಲಗುಂದ : ೩೦-೦೭-೨೦೧೬

ಉಂಡೆ, ಕರ್ಚಿಕಾಯಿಗಳಿಂದ ಗಣೇಶ, ಆಂಜನೇಯ, ದುರ್ಗಾದೇವಿ, ಬದರೀನಾಥ, ಕೇದಾರನಾಥ ದೇವಾಲಯ, ಗುಡಿ–ಗೋಪುರಗಳು, ಪ್ಲಾಸ್ಟಿಕ್ ಕವರ್‌ಗಳಿಂದ ವಿಧವಿಧವಾದ ಕಾರ್ಪೆಟುಗಳು, ಬಾಳೆ ಎಲೆಯ ಮೇಲೆ ಊಟದ ಕಲಾಕೃತಿ, ಕೊಬ್ಬರಿಯ ಮೇಲೆ ಚಿತ್ರಿಸಿದ ಹೆಣ್ಣು–ಗಂಡಿನ ಚಿತ್ರ, ಮುತ್ತಿನ ಮಣಿಗಳಿಂದ ತಯಾರಿಸಿದ ಕೃಷ್ಣ, ಹತ್ತಿ (ಅರಳೆ)ಯಿಂದ ಸಿದ್ಧಪಡಿಸಿದ ಶಿವ–ಪಾರ್ವತಿ, ಬಿಸ್ಕೀಟಿನಲ್ಲಿ ತಯಾರಿಸಲಾದ ಅಲಂಕಾರಿಕ ಮನೆ ಮೊದಲಾದವುಗಳು ಗಮನ ಸೆಳೆಯುತ್ತವೆ.

ಅಷ್ಟೇ ಅಲ್ಲದೇ ಸಾದಾ ಮಡಿಕೆ–ಕುಡಿಕೆಗಳನ್ನು ತೆಗೆದುಕೊಂಡು ಅವುಗಳ ಮೇಲೆ ಚಿತ್ರ ಬಿಡಿಸಿ ಬಣ್ಣಗಳಿಂದ ತುಂಬಿ ಅವುಗಳನ್ನು ಅಂದಗೊಳಿಸುವಲ್ಲಿ ಕಲಾವತಿಯವರದು ಎತ್ತಿದ ಕೈ. ಹೀಗೆ ನಾನಾ ರೀತಿಯ ಅನುಪಯುಕ್ತ ವಸ್ತುಗಳಿಂದ ಇವರು ವಿವಿಧ ಬಗೆಯ ಕಲಾಕೃತಿಗಳನ್ನು ಮಾಡಿ, ಅವುಗಳನ್ನು ಸುಂದರಗೊಳಿಸುತ್ತಾರೆ.

ಹಾಗೆಯೇ ಕಲಘಟಗಿಯ ಗೌಳಿ ಬೀದಿಯಲ್ಲಿರುವ ತಿಪ್ಪಣ್ಣ ಉಳಿವೆಪ್ಪ ಕುರಗುಂದ ಅವರು ಕೂಡ ವಿವಿಧ ವಸ್ತುಗಳಿಂದ ಕಲಾಕೃತಿಗಳನ್ನು ತಯಾರಿಸುತ್ತಾರೆ. 'ತಮ್ಮ ಮನೆಯಲ್ಲಿಯೇ ಉಳವಿ ಚನ್ನಬಸವೇಶ್ವರನ ದೇವಾಲಯ ಪ್ರತಿಕೃತಿಯನ್ನು ನಿರ್ಮಿಸಿಕೊಂಡಿರುವುದೇ ಅವರ ಕಲಾಪ್ರೀತಿಗೆ ಸಾಕ್ಷಿಯಾಗಿದೆ. ತಮ್ಮ ಸುತ್ತಲೂ ದೊರೆಯುವ ಸಹಜ ವಸ್ತುಗಳಿಂದಲೇ ಕಲಾಕೃತಿ ತಯಾರಿಕೆಯಲ್ಲಿ ನಿಪುಣರಾಗಿರುವ ಇವರು ರಟ್ಟು, ಅಲ್ಯೂಮಿನಿಯಂ ತಂತಿ ಮತ್ತು ಕಬ್ಬಿಣದ ಪಟ್ಟಿಗಳಿಂದ ಅತ್ಯಂತ ಆಕರ್ಷಕವಾದ ಉಳವಿ ಮಂದಿರವನ್ನು ರಚಿಸಿರುವುದು ನೋಡುಗರನ್ನು ಆಕರ್ಷಿಸದೇ ಇರದು. ಇದರೊಂದಿಗೆ ಮಂದಿರಕ್ಕೆ ಬರುವ ಭಕ್ತರು, ಪೂಜಾ ಕಾರ್ಯದಲ್ಲಿ ತೊಡಗಿಸಿಕೊಂಡವರು, ಎತ್ತುಗಳು, ಭಕ್ತರ ಸಾಲು ಹೀಗೆ ದೃಶ್ಯರೂಪಕವನ್ನು ಜೋಡಿಸಿ ಇಟ್ಟಿರುವುದನ್ನು ನೋಡಿದರೆ ಕಲಾಕೃತಿಗಳ ರಚನೆಯಷ್ಟೇ ಅಲ್ಲದೇ ಕಲ್ಪನೆಯ ಸನ್ನಿವೇಶವನ್ನೂ ಸೃಷ್ಟಿಸಬಲ್ಲರು ಎಂಬುದು ವೇದ್ಯವಾಗುತ್ತದೆ'[೧೭೫] ಎನ್ನುವ ಕುಮಾರ ಭಟ್ ಅವರು ತಿಪ್ಪಣ್ಣ ಕುರಗುಂದ ಅವರ ಕಲೆಗಾರಿಕೆಯನ್ನು ಕುರಿತು ಖುಷಿ ವ್ಯಕ್ತಪಡಿಸುತ್ತಾರೆ. ತಿಪ್ಪಣ್ಣ ಅವರು ಹವ್ಯಾಸಕ್ಕಾಗಿ ಇದನ್ನು ರೂಢಿಸಿಕೊಂಡವರು. ಅವರ ವೃತ್ತಿ ಬೇರೆಯಾಗಿದೆ.

ಇದಷ್ಟೇ ಅಲ್ಲದೆ ಮಣ್ಣಿನಲ್ಲಿ ಗಣೇಶ, ಬಸವಣ್ಣ, ಅಕ್ಕಮಹಾದೇವಿ, ಚನ್ನಬಸವೇಶ್ವರ, ಶಿವ–ಪಾರ್ವತಿ ಮೂರ್ತಿಗಳನ್ನೂ ಇವರು ನಿರ್ಮಿಸಿದ್ದಾರೆ. ಸಿಮೆಂಟಿನ ಮೂರ್ತಿಗಳನ್ನೂ ಮಾಡುವ ಇವರು ಕಲ್ಲಿನ ಮೂರ್ತಿಗಳನ್ನು ಕೆತ್ತುವುದರಲ್ಲಿಯೂ ತೊಡಗಿಸಿಕೊಂಡಿದ್ದಾರೆ.

---

೧೭೫. ಪ್ರಜಾವಾಣಿ : ಮೆಟ್ರೋ : ೦೮–೧೦–೨೦೧೨

ಕಲಾಕೃತಿಗಳೊಂದಿಗೆ ಸನ್ನಿವೇಶವನ್ನು ಸೃಷ್ಟಿಸುವ ಇವರ ಕಲಾನಿಪುಣತೆ ಜಾನಪದ ಕಲೆಗಾರಿಕೆಯಲ್ಲಿ ಎದ್ದು ಕಾಣುವಂಥದ್ದು.

**ಮೈದಾ ಹಿಟ್ಟಿನ ಆಭರಣಗಳು :** ಮದುವೆಗಳು ನಡೆಯುವ ಸಂದರ್ಭದಲ್ಲಿ ಮೈದ ಹಿಟ್ಟಿನ ಆಭರಣಗಳನ್ನು ತಯಾರಿಸಿ ಮಸೂಟಕ್ಕೆ ಸುರಗಿ ವಸ್ತುಗಳನ್ನು ಅಣಿ ಮಾಡಲಾಗುತ್ತದೆ. ಮೊದಲು ವಾರಗಳ ಕಾಲ ನಡೆಯುತ್ತಿದ್ದ ಮದುವೆಗಳೇ ಇಂದು ತಾಸೊಪ್ಪತ್ತಿನಲ್ಲಿ ನಡೆಯುವ ಇಂದಿನ ಆಧುನಿಕ ಕಾಲದಲ್ಲಿ ಈ ಸುರಗಿ ಸಾಮಾನುಗಳಿಗೆ ಹೆಚ್ಚಿನ ಬೇಡಿಕೆ ಇಲ್ಲ. ಅವುಗಳನ್ನು ಮಾಡುವವರೂ ಈಗ ಬೆರಳೆಣಿಕೆಯಷ್ಟು ಜನ ಮಾತ್ರ. ಧಾರವಾಡ ಜಿಲ್ಲೆಯಲ್ಲಿ ಇದನ್ನು ಮಾಡಲು ಮೊದಲು ತುಂಬ ಜನ ಹೆಂಗಳೆಯರು ಹಗಲಿರುಳು ಎನ್ನದೇ ದುಡಿಯುತ್ತಿದ್ದರು. ಆದರೆ ಇಂದು ಆ ಸಂಭ್ರಮವಿಲ್ಲ. ಹಳ್ಳಿ ಪ್ರದೇಶಗಳಲ್ಲಿ ಇದು ಅಲ್ಲಲ್ಲಿ ಕಂಡುಬರುವುದುಂಟು.

ಮೈದಾ ಹಿಟ್ಟಿನಲ್ಲಿ ಮಸೂಟದ ಪದಕದ ಸರ, ಬೊರಮಾಳ ಸರ, ಮೇಲ್ಗುಂಡು, ಜುಲ್ಫಿ ಹೂವು ಮೊದಲಾದವುಗಳನ್ನು ಮಾಡಲಾಗುತ್ತದೆ. ಅದೂ ಅಲ್ಲದೇ ವಿವಿಧ ರೀತಿಯ ಅಲಂಕಾರಿಕ ವಸ್ತುಗಳನ್ನೂ ಮಸೂಟದಲ್ಲಿ ಮಾಡಲಾಗುತ್ತದೆ. ಕುಂದಗೋಳ ತಾಲೂಕಿನ ಗುಡಗೇರಿ ಗ್ರಾಮದ ಹೊಸಪೇಟೆ ಓಣಿಯ ಶೇಖವ್ವ ಸವಣೂರ ಎಂಬ ಇಳಿವಯಸ್ಸಿನ ಹೆಣ್ಣುಮಗಳು ಇಂದಿಗೂ ಈ ಕಾಯಕದಲ್ಲಿ ನಿರತಳಾಗಿದ್ದಾಳೆ. ತಾನು ತಯಾರಿಸುವ ಮಸೂಟದ ಮೈದಾ ಹಿಟ್ಟಿನ ಆಭರಣಗಳಿಗೆ ತಕ್ಕ ಸಂಭಾವನೆಯನ್ನೂ ಪಡೆಯುತ್ತಾಳೆ. ನೋಡಿದರೆ ಥೇಟ್ ಬಂಗಾರದ ಆಭರಣಗಳೇ ಎನಿಸುವಷ್ಟು ಸಹಜವಾಗಿ ಈ ಮೈದಾ ಹಿಟ್ಟಿನ ಆಭರಣಗಳು ಇರುತ್ತವೆ. ಅವುಗಳಲ್ಲಿ ಕಲಾತ್ಮಕವಾದ ಕುಸರಿ ಕೆಲಸವೂ ಇರುತ್ತದೆ ಎಂಬುದನ್ನು ಪ್ರತ್ಯೇಕವಾಗಿ ಹೇಳುವ ಅವಶ್ಯಕತೆಯಿಲ್ಲ.

ಈ ಶೇಖವ್ವ ಸವಣೂರ 'ಮೆದುವಾದ ಮೈದಾ ಉಂಡೆಯನ್ನು ಕಡ್ಡಿಯಿಂದ ಕಲಾತ್ಮಕ ಮಾಡಿ ಅದಕ್ಕೆ ಸರ, ಗುಂಡು, ಪದಕ ಸರ ತಯಾರು ಮಾಡಿ ಅವುಗಳಿಗೆ ಬಂಗಾರದ ಬಣ್ಣ ಹಚ್ಚುತ್ತಾಳೆ. ಮುಳಗಾಯಿ, ಚೌಳಿಕಾಯಿ ಎಂದು ವಿವಿಧ ತರಕಾರಿಗಳನ್ನು ಮಾಡಿ, ಅವುಗಳಿಗೆ ತಕ್ಕ ಬಣ್ಣ ಕೊಡುತ್ತಾಳೆ. ಇದು ಶ್ರಮ-ಶ್ರದ್ಧೆ ಬೇಡುವ ಕೆಲಸ'[೧೭೬] ಎಂದು ವಾಸುದೇವ ಮುರಗಿಯವರು ಅಭಿಪ್ರಾಯಪಡುತ್ತಾರೆ. ಈಗ ಇಂತಹ ಕಲೆ ಕಂಡುಬರುವುದು ಕಡಿಮೆಯಾಗಿದ್ದು, ನಾಡಿನ ಸಾಂಸ್ಕೃತಿಕ ಪರಂಪರೆಯಲ್ಲಿ ಇದ್ದ ಒಂದು ವಿಶೇಷ ಕಲೆ ಅವನತಿಯಾಗುತ್ತಿದೆ ಎಂಬುದು ನಿಜಕ್ಕೂ ಖೇದಕರ ಸಂಗತಿ.

---

೧೭೬. ಪ್ರಜಾವಾಣಿ : ಮೆಟ್ರೋ : ೧೫-೦೯-೨೦೧೨

**ಬೀಸುಕಲ್ಲು ಮತ್ತು ರುಬ್ಬು ಕಲ್ಲುಗಳು :** ನಮ್ಮ ಹಳೆಯ ಕಾಲದಲ್ಲಿ ಯಂತ್ರಗಳ ಆಗಮನಕ್ಕಿಂತ ಮೊದಲು ಅಡುಗೆ ಮಾಡಲು ಬೇಕಾದ ಪದಾರ್ಥಗಳನ್ನು ಮನೆಯಲ್ಲೇ ತಯಾರಿಸಿಕೊಳ್ಳಲಾಗುತ್ತಿತ್ತು. ಹಿಟ್ಟು, ಖಾರ, ಮಸಾಲೆ ಮೊದಲಾದವುಗಳನ್ನು ತಯಾರಿಸಲು ವಿಶಿಷ್ಟವಾದ ಕಲ್ಲಿನ ಪರಿಕರಗಳು ಇರುತ್ತಿದ್ದವು. ಆದರೆ ಇಂದು ಯಾಂತ್ರೀಕರಣದ ಪ್ರಭಾವದಿಂದಾಗಿ ಬೀಸುವ ಕಲ್ಲುಗಳು, ರುಬ್ಬುವ ಕಲ್ಲುಗಳು, ಕಡಬತ್ತು ಕಲ್ಲು, ಒಳ್ಳು ಇವೆಲ್ಲವುಗಳು ಮಾಯವಾಗಿವೆ. ಇವುಗಳ ಜಾಗವನ್ನು ಮಿಕ್ಸಿ-ಗ್ರೈಂಡರ್‌ಗಳು ಆಕ್ರಮಿಸಿಕೊಂಡಿವೆ.

ಕಲ್ಲು ವಡ್ಡರು ಮಾಡುವ ಬೀಸುಕಲ್ಲುಗಳು ಇಂದು ಅಲ್ಲಲ್ಲಿ ಕಾಣಿಸುತ್ತವೆಯಾದರೂ ಅವುಗಳ ಬಳಕೆ ಇಲ್ಲ. ಅವು ಸುಮ್ಮನೆ ಮನೆಯಲ್ಲಿ ಫ್ಯಾಶನ್‌ಗಾಗಿಯೋ ಅಥವಾ ಹಬ್ಬ-ಹರಿದಿನಗಳಲ್ಲಿ ಶಾಸ್ತ್ರಕ್ಕೋ ಎಂಬಂತೆ ಬಳಸಲ್ಪಡುತ್ತಿವೆ. ಮೊದಲು ಈ ಬೀಸುಕಲ್ಲುಗಳ ಸೊಬಗು ಹೇಳತೀರದು. ಹೆಂಗಳೆಯರು ನಸುಕಿನಲ್ಲಿ ಎದ್ದು ಹಿಟ್ಟು ಮಾಡಲು ಜೋಳ, ರಾಗಿ ಬೀಸುಕಲ್ಲಿನಲ್ಲಿ ಹಾಕಿ ಹಾಡುಗಳನ್ನು ಹಾಡುತ್ತ ಮಾಡುತ್ತಿದ್ದ ಕಾಯಕ ಇಂದು ಮರೆಯಾಗಿದೆ. ಎರಡು ವೃತ್ತಾಕಾರದ ಕಲ್ಲುಗಳನ್ನು ಒಂದರ ಮೇಲೆ ಒಂದರಂತೆ ಕೂಡಿಸಿ, ಮೇಲಿನ ಒಂದು ಕಲ್ಲಿಗೆ ಧಾನ್ಯ ಹಾಕಲು ಒಂದು ದೊಡ್ಡ ರಂಧ್ರ ಮಾಡಲಾಗಿರುತ್ತದೆ. ಅದೇ ಕಲ್ಲಿನ ಒಂದು ಕೊನೆಯಲ್ಲಿ ಅದನ್ನು ತಿರುಗಿಸಲು ಬರುವಂತೆ ಕಟ್ಟಿಗೆಯ ತುಂಡನ್ನು ಸಿಕ್ಕಿಸಲು ಒಂದು ಅವಕಾಶ ಮಾಡಲಾಗಿರುತ್ತದೆ. ಈ ಬೀಸುಕಲ್ಲಿನ ಮೇಲ್ಮೈಯಲ್ಲಿ ವಿವಿಧ ಬಗೆಯಾಗಿ ಚಿತ್ರಗಳನ್ನು ಬಿಡಿಸಲಾಗಿರುತ್ತದೆ. ತ್ರಿಕೋನಾಕಾರ, ವೃತ್ತ, ಚೌಕ ಮೊದಲಾದ ಚಿತ್ರಗಳಲ್ಲದೇ ಹೂವು, ತೊಟ್ಟಿಲು, ಚಕ್ರ, ಕೆಲವು ಪ್ರಾಣಿ ಮೊದಲಾದ ಚಿತ್ರಗಳನ್ನೂ ಕೆತ್ತಲಾಗಿರುತ್ತದೆ. ಇದು ಬೀಸುಕಲ್ಲಿನ ಅಂದವನ್ನು ಹೆಚ್ಚಿಸುತ್ತದೆ.

ಮಸಾಲೆಯನ್ನು ಅರೆಯಲು  ರುಬ್ಬುಕಲ್ಲುಗಳು ಮೊದಲು ತುಂಬ ಉಪಯುಕ್ತವಾಗಿದ್ದವು. ಒಂದು  ಇವು ಚಿಕ್ಕದಾಗಿ ಇದ್ದು, ಪಾತ್ರೆಯಂತಹ ಒಂದು ಕಲ್ಲು ಇದ್ದರೆ, ಮೇಲೆ ಅರಿಯಲು ಒಂದು ಹಿಡಿಕೆಯಾಕಾರದ ಕಲ್ಲು ಇರುತ್ತದೆ. ಕುಟ್ಟಲು ಒರಳುಕಲ್ಲು (ಒಳಕಲ್ಲು)ಗಳನ್ನು ಬಳಸಿದರೆ, ಒನಕೆಯಿಂದ ಧಾನ್ಯಗಳನ್ನು ಕುಟ್ಟಲು ಬಳಸುತ್ತಾರೆ. ಇಲ್ಲಿ ಹೆಚ್ಚಾಗಿ ಚಿತ್ರಕಲೆ ಕಂಡುಬರುವುದಿಲ್ಲವಾದರೂ ಅಲ್ಲಲ್ಲಿ ಕೆಲವು ಗೆರೆಗಳು, ವೃತ್ತಗಳು, ಚೌಕಗಳನ್ನು ಬಿಡಿಸಿರಲಾಗುತ್ತದೆ. ಇದೇ ರೀತಿಯಲ್ಲಿ ಚಿಕ್ಕ ಗಾತ್ರದಲ್ಲಿ ಕಡಬತ್ತು ಕಲ್ಲುಗಳು ಕಂಡುಬರುತ್ತಿದ್ದು ಮನೆಗೆ ಬೇಕಾದ ಸಣ್ಣ-ಪುಟ್ಟ ವಸ್ತುಗಳನ್ನು ಕುಟ್ಟಿ ಪುಡಿ ಮಾಡಲು ಬಳಸಲಾಗುತ್ತದೆ.

ಒಳಕಲ್ಲುಗಳು ವಿಶೇಷವಾಗಿ ಭತ್ತವನ್ನು ಕುಟ್ಟಲು, ಖಾರ ಕುಟ್ಟಲು ಅನುಕೂಲವಾಗಿರುತ್ತವೆ. ಇವುಗಳನ್ನೂ ಕೂಡ ಕಲ್ಲು ವಡ್ಡರೇ ಮಾಡಿರುತ್ತಾರೆ. ನೆಲದಲ್ಲಿ ಇದನ್ನು ಹುಗಿಯಲಾಗಿರುತ್ತದೆ.

ಭತ್ತವನ್ನು ಕುಟ್ಟುವಾಗ ಒನಕೆಯನ್ನು ಬಳಸಿದರೆ, ಮೆಣಸಿನಕಾಯಿ ಖಾರವನ್ನು ಕುಟ್ಟುವಾಗ ಕಬ್ಬಿಣದ ಹಾರೆಯನ್ನು ಬಳಸಲಾಗುತ್ತದೆ. ಇವು ಗಾತ್ರದಲ್ಲಿ ಹೆಚ್ಚು-ಕಮ್ಮಿಯಾಗಿರುತ್ತವೆ. ಕೆಲವು ಕಡೆ ದೊಡ್ಡದಾದ ಒಳಕಲ್ಲುಗಳು ಕಂಡುಬಂದರೆ ಇನ್ನೂ ಕೆಲವು ಕಡೆ ದೊಡ್ಡದಾಗಿರುವ ಒಳಕಲ್ಲುಗಳು ಕಂಡುಬರುತ್ತವೆ. ತುಂಬ ಆಳವಾಗಿ ಹುಗಿದಿರುವ ಈ ಒಳಕಲ್ಲುಗಳು ತುಂಬ ಗಟ್ಟಿಯಾಗಿರುತ್ತವೆ. ಮೇಲೆ ಹರವಿಕೊಂಡ ಬಾಯಿಯ ಮೇಲೆ ಸಣ್ಣ ಸಣ್ಣ ಕುಸರಿ ಕೆತ್ತನೆಯ ಚಿತ್ರಗಳು ಕಂಡುಬರುತ್ತವೆ.

ಇವೆಲ್ಲವುಗಳನ್ನು ಇಂದು ಮದುವೆ ಶಾಸ್ತ್ರ ನೆರವೇರಿಸುವಾಗ ಮಾತ್ರ ಬಳಸಲಾಗುತ್ತದೆ. ಹಳೆಯ ಮನೆಗಳಲ್ಲಿ ಇಂದಿಗೂ ಒಳಕಲ್ಲು ಮತ್ತು ಬೀಸುಕಲ್ಲುಗಳನ್ನು ಕಾಣಬಹುದು. ಆದರೆ ಅವುಗಳ ಬಳಕೆ ಮಾತ್ರ ಆಗುತ್ತಿಲ್ಲ. ಇವು ಮನುಷ್ಯನ ಶಾರೀರಿಕ ಸಂಪತನ್ನು ಹೆಚ್ಚು ಮಾಡಿ ಆರೋಗ್ಯದಿಂದ ಇಡಲು ಸಹಾಯಕವಾಗಿರುತ್ತಿದ್ದವು. ಆಧುನಿಕತೆಗೆ ಒಗ್ಗಿಕೊಂಡ ನಾವು ಅದನ್ನು ತಪ್ಪಿಸಿಕೊಂಡಿದ್ದೇವೆ ಎಂದರೆ ತಪ್ಪಾಗಲಾರದು.

**ಯುಗಾದಿಯ ಶಾವಿಗೆ :** ಪ್ರತಿಯೊಂದು ಹಬ್ಬಕ್ಕೆ ಭಿನ್ನ ಭಿನ್ನವಾದ ತಿನಿಸು-ತಿಂಡಿಗಳನ್ನು ಮಾಡುವ ಭಾರತದಲ್ಲಿ ಎಲ್ಲವೂ ವ್ಯಾಪಾರದ ದೃಷ್ಟಿಕೋನದಿಂದಲೇ ಇಂದು ಕಾಣಿಸಿಕೊಂಡು ಮೊದಲಿನ ಸಂಸ್ಕೃತಿಯನ್ನು ಹಾಳು ಮಾಡಿವೆ ಎಂದರೆ ತಪ್ಪಾಗಲಾರದು. ಧಾರವಾಡ ಜಿಲ್ಲೆಯ ಕೆಲವು ಹಳ್ಳಿಗಳಲ್ಲಿ ಯುಗಾದಿಗೆ ಹೊಸೆಯುವ ಶಾವಿಗೆ ತುಂಬ ಪ್ರಸಿದ್ಧಿ ಪಡೆದಿತ್ತು. ಇದು ಹತ್ತಾರು ಜನ ಹೆಂಗಳೆಯರು ಸೇರಿ ಮಾಡುವ ಕಾರ್ಯವಾಗಿತ್ತು. ಎತ್ತರಕ್ಕೆ ಇಟ್ಟ ಉದ್ದನೆಯ ಪಳಿಯ ಅಥವಾ ಮರದ ಮಣೆ(ಹಲಗೆ)ಯ ಮೇಲೆ ಶಾವಿಗೆ ಹೊಸೆಯುವ ಹಿರಿಯರು, ಕೆಳಗೆ ಧಾರೆಯಂತೆ ಹರಿದು ಬರುವ ಶಾವಿಗೆಯನ್ನು ಅಡ್ಡಲಾಗಿ ಹಾಕಿರುವ ಕೋಲಿನ ಮೇಲೆ ವಿವಿಧ ರೀತಿಯಲ್ಲಿ ಸುತ್ತುವ ಹಾಗೂ ಮೊರದ ಮೇಲೆ ಹಾಕುವ ಮುಖಾಂತರ ಯುವತಿಯರು, ನಡು ನಡುವೆ ಹಾಡು, ಹರಟೆ, ನಗು ಮನೆ ತುಂಬಿರುತ್ತಿತ್ತು. ಬೇಸಿಗೆಯ ಬೇಸರಿಕೆಯನ್ನು ಇಂಥ ಕೆಲಸಗಳಲ್ಲಿ ಕಳೆಯುತ್ತಿದ್ದರು. ಶ್ಯಾವಿಗೆ ಮಾಡಲು ಬಳಸುವ ಮಣೆಗಳು ಕೂಡ ಗೆರೆ, ಚಕ್ರ, ತ್ರಿಕೋನ, ವರ್ತುಲ, ಹೂವು, ಪಕ್ಷಿ ಇತ್ಯಾದಿ ಚಿತ್ರಗಳಿಂದ ಕಂಗೊಳಿಸುತ್ತಿದ್ದವು. ಆದರೆ ಈಗ ಮಶೀನುಗಳೇ ಆ ಕೆಲಸವನ್ನು ಮಾಡುತ್ತಿರುವುದರಿಂದ ಸಾಂಪ್ರದಾಯಿಕ ಶೈಲಿಯ ಶಾವಿಗೆ ಇಂದು ತಮ್ಮ ಅಸ್ತಿತ್ವವನ್ನು ಕಳೆದುಕೊಂಡಿವೆ. ಆದರೂ ಇಂದಿಗೂ ಕೆಲವು ಹಳ್ಳಿಗಳಲ್ಲಿ ವರ್ಷಕ್ಕೊಮ್ಮೆಯಾದರೂ ಇಂತಹ ಸಡಗರ ಅಲ್ಲಲ್ಲಿ ನೋಡಲು ಸಿಗುತ್ತದೆ. ಶಾವಿಗೆ ಮಾಡಿ ಉಳಿದ ಹಿಟ್ಟಿನಿಂದ ಮಕ್ಕಳಿಗೆ ಗುಬ್ಬಿಯ ಆಕಾರವನ್ನು ಮಾಡಿ, ಅದನ್ನು ಒಣಗಿಸಿ ಆನಂತರ ಅದನ್ನು ಸುಟ್ಟು, ಬೆಲ್ಲ ಸೇರಿಸಿ ತಿನ್ನಲು ಕೊಡಲಾಗುತ್ತಿತ್ತು.

'ಉಗಾದಿಗಂತ ಮಾಡಿಟ್ಟ ಶಾವಿಗೀನ ಹಬ್ಬಕ್ಕ ಬಸಿತೇವ್ರಿ. ಉಗಾದಿ ದಿನಾ ಮನಿ ಮಂದೆಲ್ಲಾ ಎಣ್ಣಿ ಹಚ್ಚಿ ಜಳಕಾ ಮಾಡತೇವ್ರಿ. ಶಾವಿಗಿ ಬಸದ ಸಕ್ರಿ ಇಲ್ಲಾಂದ್ರ ಬೆಲ್ಲ, ತುಪ್ಪ ಹಾಕ್ಕೊಂಡ ಉಣ್ಣತೇವ್ರಿ. ಈ ಹಬ್ಬಕ್ಕ ಶಾವಿಗಿ ಬೇಕ ಬೇಕ ನೋಡ್ರಿ. ಅದೂ ಮನಿಯಾಗ ಮಾಡಿದ ಹೊಸಾ ಶಾವಿಗೀನರೀ'[೧೭೭] ಎಂದು ಅಮ್ಮೀನಬಾವಿಯ ಅಂಬಕ್ಕ ಹೇಳಿದರೆ, 'ನಾವು ಮನಿಯೊಳಗ ಕೈಯಲ್ಲಿಯೇ ಶಾವಿಗೆಯನ್ನು ಮಾಡುತ್ತಿದ್ದೇವು. ಕೈಗೆ ತುಪ್ಪ ಹಚ್ಚಿಕೊಂಡು ಎಳೆ ಎಳೆಯಾಗಿ ತಿಕ್ಕಿ, ದಾರದಂಗೆ ತೀಡುತ್ತೇವೆ. ಅಷ್ಟೇ ಅಲ್ಲ ಶಾವಿಗೆ ಹಿಟ್ಟಿನಲ್ಲಿಯೇ ಗೋಲಿ, ಸೌತೆ ಬೀಜ, ಪರಡಿ, ಉಗರತ್ತು ಇನ್ನಿತರ ಪದಾರ್ಥ ಮಾಡತೇವ್ರಿ'[೧೭೮] ಎಂದು ಧಾರವಾಡದ ಶಶಿಕಲಾ ಅವರು ಹೇಳುತ್ತಾರೆ. ಕೆಲವು ಕಡೆ ಬಣ್ಣ ಬಣ್ಣದ ಶಾವಿಗೆಯನ್ನೂ ಮಾಡಲಾಗುತ್ತಿತ್ತು. ಅವುಗಳನ್ನು ಸುತ್ತುವಾಗ ಜನಪದ ಶೈಲಿಯ ಕೆಲವು ಚಿತ್ತಾರಗಳ ಮಾದರಿಯಲ್ಲಿ ಸಿಂಗರಿಸಲಾಗುತ್ತಿತ್ತು. ಮದುವೆಗೆ ಮಾಡುವ ಶಾವಿಗೆಯಲ್ಲಿ ಇಂತಹ ವಿಶೇಷವನ್ನು ಕಾಣಬಹುದು.

**ಹಸಿರು ತೋರಣಗಳು :** ಪ್ರತಿಯೊಂದು ಹಬ್ಬಕ್ಕೂ ಮನೆಯನ್ನು ಸಿಂಗರಿಸಿ ಬಾಗಿಲಿಗೆ ತಳಿರು-ತೋರಣ ಕಟ್ಟುವ ಪರಿಪಾಠ ಬಹು ಹಿಂದಿನಿಂದಲೇ ಬಂದಿದೆ. ಇಂದಿಗೂ ಅದನ್ನು ವಿಶೇಷವಾದ ಕೆಲವು ಹಬ್ಬಗಳಲ್ಲಿ ಕಾಣುತ್ತೇವೆ. ಮಾವಿನ ಎಲೆಗಳಿಂದ ಬಾಗಿಲುಗಳಿಗೆ ತೋರಣವನ್ನು ಸಿದ್ಧಪಡಿಸುವುದು ಒಂದು ತೆರನಾದರೆ, ಎಲೆಗಳ ನಡುವೆ ಹೂವುಗಳನ್ನು ಸೇರಿಸಿ ತೋರಣ ಮಾಡುವುದು ಇನ್ನೊಂದು ಪ್ರಕಾರ. ಹಾಗೆಯೇ ಎಲೆಗಳೊಂದಿಗೆ ಅಥವಾ ಎಲೆರಹಿತವಾಗಿ ಹೊಲದಲ್ಲಿ ತಾವು ಬೆಳೆದ ಚೌಳಿಕಾಯಿ, ಉಳ್ಳಾಗಡ್ಡಿ ಸಸಿ, ಬಳ್ಳೊಳ್ಳಿ ಗೊಂಚಲು, ಕೆಲವು ಸಣ್ಣ ಸಣ್ಣ ಎಳೆಯ ತೆನೆಗಳು ಮೊದಲಾವುಗಳನ್ನು ಸೇರಿಸಿ ತೋರಣಗಳನ್ನು ಮಾಡುವುದು ಮತ್ತೊಂದು ಬಗೆಯಾಗಿದೆ.

ಹಬ್ಬ-ಹರಿದಿನಗಳಲ್ಲದೇ ಸಭೆ, ಸಮಾರಂಭ, ಮದುವೆ ಮೊದಲಾದ ಸಂಭ್ರಮಕ್ಕೆ ಈ ಹಸಿರು ತೋರಣಗಳು ಶೋಭೆ ತರುವುದಷ್ಟೇ ಅಲ್ಲದೇ ಜನಸಂದಣಿಯಲ್ಲಿ ಆಮ್ಲಜನಕವನ್ನು ಬಿಡುಗಡೆ ಮಾಡುವ ಮುಖಾಂತರ ವಾತಾವರಣವನ್ನು ಶುಭ್ರಗೊಳಿಸುವ ಕಾರ್ಯ ಮಾಡುತ್ತವೆ ಎಂಬ ವೈಜ್ಞಾನಿಕ ಸತ್ಯವನ್ನು ನಮ್ಮ ಜನಪದರು ಕಂಡುಕೊಂಡಿರುವರು. ಇಂದು ರೆಡಿಮೇಡ್ ಆಗಿ ದೊರೆಯುವ ಪ್ಲಾಸ್ಟಿಕ್ ತೋರಣಗಳೂ ಮಾರುಕಟ್ಟೆಯಲ್ಲಿ ಲಭ್ಯ. ಆದರೂ ಎಲೆಗಳಿಂದ ಮಾಡಿದ ಸಾಂಪ್ರದಾಯಿಕ ತೋರಣಗಳೇ ಇಂದಿಗೂ ಮಹತ್ವ ಕಾಯ್ದುಕೊಂಡು ಬಂದಿವೆ. ಕೆಲವು ಕಡೆ ಇನ್ನೂ ಬಲಿಯದ ಎಳೆಯ ಗರಿಗಳಿಂದ ಮೀನು, ನಕ್ಷತ್ರ ಮೊದಲಾದ ವಿನ್ಯಾಸಗಳನ್ನು ಮಾಡಿ

---

೧೭೭. ಪ್ರಜಾವಾಣಿ : ಮೆಟ್ರೋ : ೦೨-೦೪-೨೦೧೧

೧೭೮. ಪ್ರಜಾವಾಣಿ : ಮೆಟ್ರೋ : ೦೨-೦೪-೨೦೧೧

ತೋರಣಗಳ ಅಂದವನ್ನು ಹೆಚ್ಚಿಸಲಾಗುತ್ತದೆ ಎಂದು ನಿಗದಿಯ ಸೋಮವ್ವ ಪಾಟೀಲ ಹೇಳುತ್ತಾರೆ.[೧೭೯] ಹಾಗೆಯೇ ತೋರಣಕ್ಕೆ ತರುವ ಎಲೆಗಳಿಂದ ಮಕ್ಕಳಿಗೆ ಗಡಿಯಾರ, ಉಂಗುರ, ಪೀಪಿ, ಬುಟ್ಟಿ ಮೊದಲಾದ ಆಟಿಕೆಗಳನ್ನೂ ಮಾಡಿಕೊಡುತ್ತೇವೆ ಎಂದು ಗರಗದ ಸೋಮಲಕ್ಕ ಲಮಾಣಿ ಹೇಳುತ್ತಾರೆ.[೧೮೦] ಎಲೆ-ಹೂವುಗಳಿಂದಲೂ ಜನಪದ ಚಿತ್ರಕಲೆಯನ್ನು ಜೀವಂತವಾಗಿ ಇಟ್ಟುಕೊಂಡು ಬಂದಿರುವ ಪರಂಪರೆ ನಮ್ಮದಾಗಿದ್ದು ಆಧುನಿಕತೆಗೆ ಒಳಗಾದ ನಾವು ಇಂದು ಪ್ಲಾಸ್ಟಿಕ್ ತೋರಣಗಳ ಮೊರೆ ಹೋಗುತ್ತಿರುವುದು ವಿಪರ್ಯಾಸವೇ ಸರಿ.

**ಮೊಹರಮ್ ಹಬ್ಬದ ಚಿತ್ರಗಳು :** ಧಾರವಾಡ ಜಿಲ್ಲೆಯಲ್ಲಿ ಮೊಹರಮ್ ಹಬ್ಬವನ್ನು ಕೇವಲ ಮುಸ್ಲಿಂರು ಮಾತ್ರ ಆಚರಣೆ ಮಾಡುವುದಿಲ್ಲ. ಕೆಲವು ಹಿಂದೂ ಧರ್ಮದವರೂ ಮೊಹರಮ್ ಆಚರಣೆಯಲ್ಲಿ ತೊಡಗಿಕೊಳ್ಳುತ್ತಾರೆ. ತಮ್ಮದೇ ಹಬ್ಬ ಎನ್ನುವಂತೆ ಸಂಭ್ರಮಿಸುತ್ತಾರೆ. ಇಲ್ಲಿ ಮೊದಲು ಹುಲಿವೇಷ ಹಾಕುವುದನ್ನು ಗಮನಿಸಬೇಕು.

'ಸತ್ಯಕ್ಕಾಗಿ, ನ್ಯಾಯಕ್ಕಾಗಿ, ಮಾನವ ಧರ್ಮಕ್ಕಾಗಿ ಜೀವದ ಹಂಗು ತೊರೆದು ಹೆಂಡತಿ-ಮಕ್ಕಳನ್ನು ಕಟ್ಟಿಕೊಂಡು ಹೋರಾಡಿದ ಮಹಾನ್ ಮಾನವತಾವಾದಿ ಹು॥ ಹುಸೇನ್‌ರು ಕರ್ಬಲಾ ಮೈದಾನದಲ್ಲಿ ಮಡಿದಾಗ ಹುಸೇನ್‌ರ ವಸ್ತುಗಳನ್ನು ಹುಲಿಯು ಕಾಯುತ್ತಿತ್ತಂತೆ. ಅದರ ಸಂಕೇತವಾಗಿ ಮೊಹರಂ ಆಚರಣೆಯ ಸಂದರ್ಭದಲ್ಲಿ ಹುಲಿವೇಷ ಹಾಕುವುದು ರೂಢಿಯಲ್ಲಿ ಬಂದಿರಬೇಕೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ'[೧೮೧] ಇದು ನಿಜವೂ ಇರಬಹುದು. ಹಿಂದೂ-ಮುಸ್ಲಿಂ ಭಾವೈಕ್ಯದ ಹಬ್ಬವಾಗಿರುವ ಇಲ್ಲಿ ಹರಕೆ ಹೊತ್ತುಕೊಂಡವರಲ್ಲಿ ಕೆಲವರು ಹುಲಿವೇಷ ಹಾಕುತ್ತಾರೆ. ಹುಲಿವೇಷ ಹಾಕಿಕೊಳ್ಳುವ ವ್ಯಕ್ತಿ ತನ್ನ ಮೈಮೇಲೆಲ್ಲ ಬಣ್ಣದಿಂದ ಹುಲಿ ರೂಪದ ಚಿತ್ರ ಬರೆದುಕೊಳ್ಳುತ್ತಾನೆ ಅಥವಾ ಬೇರೆಯವರು ಬರೆಯುತ್ತಾರೆ. ಇದನ್ನು ಪಾಶ್ಚಾತ್ಯರಲ್ಲಿ ಕಂಡುಬರುವ ಬಾಡಿ ಪೇಂಟಿಂಗ್ (Body Painting)ಗೆ ಹೋಲಿಸಬಹುದು. ಹಳದಿ, ಕೆಂಪು, ಕಂದು ಮತ್ತು ಬಿಳಿ ಮೊದಲಾದ ಪ್ರಾಕೃತಿಕ ಬಣ್ಣಗಳಿಂದ ಮೈಮೇಲೆ ಮೂಡುವ ಹುಲಿಯನ್ನು ಹೋಲುವ ಗೆರೆಗಳು ಮತ್ತು ಮುಖ ಥೇಟ್ ವ್ಯಕ್ತಿಯನ್ನು ಹುಲಿಯೇ ಎನ್ನುವಂತೆ ಕಾಣಿಸುತ್ತದೆ.

ಹುಲಿವೇಷ ಹಾಕಿದವರು ಕೈಯಲ್ಲಿ ಢಾಲು, ಚಿಗರೆ ಕೊಂಬಿನಿಂದ ಮಾಡಿದ ಚೂರಿ, ಪಾಂಜಾ ಹಿಡಿದುಕೊಂಡಿರುತ್ತಾರೆ. ಮೇಮ್ಯೆಲೆ ಕೇವಲ ಹನುಮಾನ ಚೆಡ್ಡಿಯನ್ನು ಮಾತ್ರ ಧರಿಸಿರುತ್ತಾರೆ. ದಾಂತಾ ಅಂದರೆ ಕೋರೆ ಹಲ್ಲುಗಳನ್ನು ಕಟ್ಟಿಗೆಯಿಂದ ಮಾಡಿ ಅವುಗಳಿಗೆ ಬಿಳಿ

---

೧೭೯. ಕ್ಷೇತ್ರಕಾರ್ಯ : ನಿಗದಿ : ೨೦-೦೭-೨೦೧೩

೧೮೦. ಕ್ಷೇತ್ರಕಾರ್ಯ : ಗರಗ : ೧೨-೦೨-೨೦೧೩

೧೮೧. ಕನ್ನಡ ಜನಪದ ಕಲಾ ಪ್ರವೇಶ : ಚಕ್ಕೆರೆ ಶಿವಶಂಕರ : ೨೦೦೬ : ಪು-೭೩

ಬಣ್ಣ ಬಳೆದು ಬಾಯಿಯಲ್ಲಿ ಇಟ್ಟುಕೊಂಡಿರುತ್ತಾರೆ. ವಿಶೇಷವಾಗಿ ಹಿಂಬದಿಯಲ್ಲಿ ಹುಲಿಯ ಕಿವಿ ಮತ್ತು ಕಮಾನಿನ ಆಕಾರದ ಟೋಪಿಯನ್ನು ಇವರು ಧರಿಸಿರುತ್ತಾರೆ.  ಸೊಂಟಕ್ಕೆ ಮತ್ತು ಎರಡೂ ತೋಳುಗಳಿಗೆ ನವಿಲು ಗರಿಗಳನ್ನು ಕಟ್ಟಿಕೊಂಡಿರುತ್ತಾರೆ. ತಲೆ ಮೇಲೆ ಕೂಡ ನವಿಲು ಗರಿಯನ್ನು ಸಿಕ್ಕಿಸಿಕೊಂಡಿರುತ್ತಾರೆ. ಸೊಂಟಕ್ಕೆ ಕರಿ ಕಂಬಳಿಯಿಂದ ಹೊಸೆದ ಹಗ್ಗ, ಗೆಜ್ಜೆಪಟ್ಟಿ, ಗಂಟೆ ಸರ, ನಡುಪಟ್ಟಿಯನ್ನು ಧರಿಸಿರುತ್ತಾರೆ.

ಹಿಂದೂ ದೇವತೆಗಳ ಪಲ್ಲಕ್ಕಿಯಂತೆಯೇ ಮೊಹರಂ ಹಬ್ಬದಲ್ಲಿ ಡೋಲಿಯನ್ನು ಬಳಸಲಾಗುತ್ತದೆ. ಈ ಡೋಲಿಯನ್ನು ಕಟ್ಟಿಗೆ, ಬಿದಿರು ಮೊದಲಾವುಗಳಿಂದ ತಯಾರಿಸಿರುತ್ತಾರೆ. ಈ ಡೋಲಿಯನ್ನು ಬಣ್ಣ ಬಣ್ಣದ ಪೇಪರ್ ಹಾಳೆಗಳು, ಬಟ್ಟೆಗಳು, ಮುತ್ತಿನ ಸರಗಳು, ಹೂಮಾಲೆಗಳು, ಲೈಟಿನ ಸರಗಳಿಂದ ಸಿಂಗರಿಸುತ್ತಾರೆ. ತಾಜಮಹಲ್ ಆಕಾರದ ಡೋಲಿಗಳನ್ನು ಸಿದ್ಧಪಡಿಸಲಾಗುತ್ತದೆ. ಇದಕ್ಕೆ ಸೂಕ್ಷ್ಮವಾದ ಚಿತ್ರಗಾರಿಕೆ ಕೂಡ ಇರುತ್ತದೆ. ಇದರಲ್ಲಿ ಮಾರಿ ತಟ್ಟೆ, ಕಂಬಗಳು, ಗರುಡಗಂಬಗಳು, ಅಂಬರದಾನಿ, ಹಣೆಪಟ್ಟಿ, ಬಿಲ್ಲ, ಚಟ್ ಎಂಬ ಭಾಗಗಳು ಇರುತ್ತವೆ. ಕುದುರೆ, ಹಸ್ತ, ಛತ್ರಿ ಮೊದಲಾದವುಗಳಿಂದ ಇದು ಸಿಂಗರಗೊಳಿಸಲಾಗುತ್ತದೆ ಎಂದು ಚಿಕ್ಕನರ್ತಿಯ ೪೮ ವಯಸ್ಸಿನ ಹುಸೇನಪ್ಪ ಅವರು ಹೇಳುತ್ತಾರೆ.[೧೮೨]

ಧಾರವಾಡ ಜಿಲ್ಲೆಯ ಕುಂದಗೋಳ ತಾಲೂಕಿನ ಯರಗುಪ್ಪಿ ಗ್ರಾಮದಲ್ಲಿ ಮೊಹರಮ್ ಹಬ್ಬವನ್ನು ವಿಶೇಷವಾಗಿ ಆಚರಿಸಲಾಗುತ್ತದೆ. ಅಲ್ಲಿ ಯರಗುಪ್ಪಿ, ಮುಳ್ಳೊಳ್ಳಿ, ಚಿಕ್ಕನರ್ತಿ, ಯರಿನಾರಾಯಣಪುರ ಮೊದಲಾದ ಏಳು ಊರುಗಳ ಡೋಲಿಗಳು ಒಂದೇ ಕಡೆ ಸೇರಿ ಮೆರವಣಿಗೆ ಹೊರಡುತ್ತವೆ.

ಮೊಹರಂ ಹಬ್ಬದಲ್ಲಿ ಬಳಸುವ ಪಂಜಾಗಳು ನಿಜವಾದ ಅರ್ಥ ಅಲ್ಲಾಹ ದೇವರ ಮುಖ ಆಗಿದೆ. ಆದರೆ ಇವು ನೋಡಲು ಹುಲಿಯ ಕೈಗಳನ್ನು ಹೋಲುವುದರಿಂದ ಇವುಗಳಿಗೆ ಪಂಜಾಗಳು ಎನ್ನುತ್ತಾರೆ. ಹಿತ್ತಾಳೆ ಅಥವಾ ಬೆಳ್ಳಿಯ ತಗಡಿನಿಂದ ಇದನ್ನು ತಯಾರಿಸುತ್ತಾರೆ. ಕೈ ಬೆರಳುಗಳ ಮಾದರಿಯಲ್ಲಿ ತಗಡಿನ ತುಣುಕುಗಳನ್ನು ಅಂಟಿಸಿರುತ್ತಾರೆ. ಒಂದು ಕೋಲಿಗೆ ಇದನ್ನು ಸಿಕ್ಕಿಸಲಾಗುತ್ತದೆ. ಇದಕ್ಕೆ ಮಕ್ಮಲ್ ಬಟ್ಟೆ, ಚೈನಾಸಿಲ್ಕ್ ಬಣ್ಣ ಬಣ್ಣದ ಬಟ್ಟೆಗಳಿಂದ ಅಲಂಕಾರ ಮಾಡಲಾಗುತ್ತದೆ. ಇಲ್ಲಿ ವಿಶೇಷವಾಗಿ ಬಿಡಿಸಲ್ಪಟ್ಟ ಚುಕ್ಕಿ, ಚಂದ್ರನ ಚಿತ್ರಗಳು ಗಮನ ಸೆಳೆಯುತ್ತವೆ.

---

೧೮೨. ಕ್ಷೇತ್ರಕಾರ್ಯ : ಚಿಕ್ಕನರ್ತಿ : ೨೩-೧೧-೨೦೧೨

ಧಾರವಾಡದ ಜಕಣಿ ಬಾವಿಯ ಹತ್ತಿರ ವಾಸ ಇರುವ ಮಹ್ಮದ್ ಅನ್ವರ್ ಜಮಖಂಡಿ ಅವರು ಹಣ್ಣಿನ ವ್ಯಾಪಾರಿಯಾಗಿದ್ದರೂ ಹುಲಿವೇಷದ ಬಣ್ಣಗಾರಿಕೆ ಮಾಡುವಲ್ಲಿಯೂ ಸಿದ್ಧಹಸ್ತರಾಗಿದ್ದಾರೆ. ಹಬ್ಬದಲ್ಲಿ ಇದು ಅವರಿಗೆ ಆದಾಯ ತಂದು ಕೊಡುವ ಮೂಲವೂ ಹೌದು. ಆದರೆ ಹುಲಿವೇಷದ ಬಣ್ಣ ಬಿಡಿಸುವಾಗ ಇವರು ಯಾವುದೇ ಸಂಭಾವನೆಯನ್ನು ಕೇಳುವುದಿಲ್ಲ. ಹುಲಿವೇಷ ಹಾಕಿಸಿಕೊಂಡವರೇ ನೂರರಿಂದ ಐನೂರು ರುಪಾಯಿಗಳವರೆಗೆ ಕಾಣಿಕೆಯ ರೂಪದಲ್ಲಿ ಸಲ್ಲಿಸುತ್ತಾರೆ.

ಧಾರವಾಡದ ಹಜರತ್ ಅಲ್ಲಾಭಕ್ಷ ಗರಗ, ಇರ್ಫಾನ್ ಅಹ್ಮದ್, ಅಮ್ಮಿನಭಾವಿಯ ಮಹ್ಮದ್ ಅಲಿ ಅಂಬರಗಟ್ಟಿ ಮೊದಲಾದವರು ಈ ಕಾಯಕದಲ್ಲಿ ತೊಡಗಿಕೊಂಡಿದ್ದಾರೆ. ಮೊಹರಂ ಹಬ್ಬದ ಆಚರಣೆಯಲ್ಲಿ ಕುಂದಗೋಳ ತಾಲೂಕಿನ ಗೌಡಗೇರಿ ಮತ್ತು ರಟಗೇರಿ ಗ್ರಾಮಗಳಿಗೆ ವಿಶೇಷ ಮಹತ್ವ ಇದೆ. ಈ ಊರುಗಳಲ್ಲಿ ಮುಸ್ಲಿಂ ಜನಾಂಗದವರು ಯಾರೂ ಇಲ್ಲದಿದ್ದರೂ ಊರವರೇ ಸೇರಿಕೊಂಡು ಮೊಹರಂ ಹಬ್ಬವನ್ನು ತುಂಬ ಸಂಭ್ರಮದಿಂದ ಆಚರಣೆ ಮಾಡುತ್ತಾರೆ.

ಪಾಂಜಾಗಳನ್ನು ಸಿಂಗರಿಸಲು ಶೇರಾ ಅಥವಾ ಮಕನಾ ತುಂಬ ಮಹತ್ವದದ್ದು. ಇದನ್ನು ತಯಾರಿಸುವಲ್ಲಿ ಹುಬ್ಬಳ್ಳಿಯ ೬೫ ವಯಸ್ಸಿನ ಖಾದರ್‌ಸಾಬ ಅಖ್ತಾರ ವಿಶೇಷವಾದ ಶ್ರಮ ಹಾಕುತ್ತಾರೆ. ಇದನ್ನು ಅವರು ವೃತ್ತಿಯನ್ನಾಗಿ ಮಾಡಿಕೊಂಡಿದ್ದಾರೆ. ದಪ್ಪ ರಟ್ಟಿಗೆ ಥರ್ಮಾಕೋಲ್ ಬೆಂಡಿನಿಂದ ಚಿತ್ರಗಳನ್ನು ಕತ್ತರಿಸಿಕೊಂಡು ಅವುಗಳಿಗೆ ಹೂವು, ಮಿಂಚು, ಬಣ್ಣವನ್ನು ಸರಿಯಾಗಿ ಬಳಸಿ ನಂತರ ಹೊಲಿಗೆ ಹಾಕಿ ಅದರ ಮೇಲೆ ಮುತ್ತುಗಳನ್ನು ಜೋಡಿಸಿ ಸಿದ್ಧಪಡಿಸಿದ ಒಂದು ಶೇರಾಗೆ ಎಂಟು ನೂರರಿಂದ ಸಾವಿರ ರುಪಾಯಿಗಳವರೆಗೆ ಬೆಲೆಯನ್ನು ಅವರು ನಿಗದಿ ಮಾಡಿರುತ್ತಾರೆ.[೧೮೩] ಅಂದರೆ ಇದು ಮೊದ ಮೊದಲಿಗೆ ಹವ್ಯಾಸವಾಗಿ ಆರಂಭವಾಗಿದ್ದು, ಅನಂತರದಲ್ಲಿ ವೃತ್ತಿಯ ಸ್ವರೂಪ ಪಡೆದುಕೊಂಡಿದೆ ಎನ್ನಬೇಕಾಗುತ್ತದೆ.

**ತೆಂಗಿನಕಾಯಿಯಲ್ಲಿ ಗಣೇಶಮೂರ್ತಿ :** ಧಾರವಾಡದ ಕೆಲಗೇರಿ ದೊಡ್ಡ ಓಣಿಯ ಉದಯೋನ್ಮುಖ ಕಲಾವಿದರಾದ ಶ್ರೀ ಜಗದೀಶ ಭಾವಿಕಟ್ಟಿ ಯವರು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ವತಿಯಿಂದ ತೆಂಗಿನಕಾಯಿಯಲ್ಲಿ ಗಣೇಶ ಮೂರ್ತಿಯನ್ನು ತಯಾರಿಸಿ ಪೂಜಿಸುವಂತೆ ಕೈಗೊಂಡ ಕಾರ್ಯವು ಜನರಲ್ಲಿ ಪರಿಸರ ಪ್ರಜ್ಞೆಯನ್ನು ಮೂಡಿಸುವ ಹೊಸ ಕ್ರಾಂತಿಯನ್ನು ಮಾಡಿದೆ. ಪರಿಸರಕ್ಕೆ ಮಾರಕವಾಗುವ ವಸ್ತುಗಳಿಂದ

೧೮೩. ಕ್ಷೇತ್ರಕಾರ್ಯ : ೨೫-೧೧-೨೦೧೨ : ಹುಬ್ಬಳ್ಳಿ

ಗಣೇಶಮೂರ್ತಿಯನ್ನು ತಯಾರಿಸುವುದು ಮತ್ತು ಪ್ರತಿಷ್ಠಾಪಿಸಬಾರದೆಂಬ ಆದೇಶದ ಅನುಸಾರ ಕೆಲಗೇರಿಯ ಐವತ್ತು ಮಹಿಳೆಯರಿಂದ ಸುಮಾರು ಹತ್ತು ಸಾವಿರ ತೆಂಗಿನಕಾಯಿಯ ಗಣೇಶ ಮೂರ್ತಿಗಳನ್ನು ತಯಾರಿಸುವ ಕೌಶಲ ತರಬೇತಿಯನ್ನು ಈ ಯೋಜನೆಯಲ್ಲಿ ಹಮ್ಮಿಕೊಳ್ಳಲಾಗಿತ್ತು.

ಸಿಪ್ಪೆ ಸುಲಿಯದ ಪೂರ್ಣ ತೆಂಗಿನಕಾಯಿಯನ್ನು ತೊಳೆದು ಬಟ್ಟೆಯಿಂದ ಸ್ವಚ್ಛವಾಗಿ ಒರೆಸಿ, ಒಣಗಿದ ನಂತರ ಅದರ ಮೇಲೆ ವಿಶಿಷ್ಟ ಸಲಕರಣೆಗಳ ಸಹಾಯದಿಂದ ಗಣೇಶನ ಮೂರ್ತಿಯನ್ನು ಸೂಕ್ಷ್ಮವಾಗಿ ಕಣ್ಣು, ಕಿವಿ, ಸೊಂಡಿಲು, ಕಿರೀಟ, ಹಸ್ತ, ಜನಿವಾರ, ಕಾಲುಗಳನ್ನು ಉಬ್ಬುಶಿಲ್ಪದಂತ ವಿನ್ಯಾಸದಲ್ಲಿ ಒಂದು ಮಗ್ಗಲು ಕಾಣುವಂತೆ ಕೆತ್ತಲಾಗುತ್ತದೆ. ಈ ಮೂರ್ತಿಗಳಿಗೆ ಪ್ರಾಕೃತಿಕ ಬಣ್ಣಗಳಿಂದ ಹುಬ್ಬು, ಕಣ್ಣು, ಬೆರಳುಗಳನ್ನು ರೇಖಿಸುತ್ತಾರೆ. ಗಣೇಶ ಮೂರ್ತಿಗಳಲ್ಲದೆ ಮಹಾತ್ಮ ಗಾಂಧೀಜಿಯವರ ಜೊತೆಗಿರುತ್ತಿದ್ದ 'ಮೂರು ಮಂಗಗಳ' ಮೂರ್ತಿಗಳು, ಬುದ್ಧನ ಮುಖ, ಮಂಗನ ಮುಖ, ಹನುಮಂತನ ಮುಖ, ಕುಳಿತಿರುವ ಗೂಬೆ, ಎತ್ತುಗಳು, ಯೋಚನಾ ಮಗ್ನ ಮೂರ್ತಿಗಳು ಇವರ ಕಲೆಗಾರಿಕೆಯಲ್ಲಿ ಮೈದಳೆದಿವೆ. 'ಹೊನ್ನ ಬಿತ್ತೇವು ಹೊಲಕೆಲ್ಲ' ಎಂಬ ಶೀರ್ಷಿಕೆಯಲ್ಲಿ ಜೋಡೆತ್ತುಗಳನ್ನು ತೆಂಗಿನಕಾಯಿಯಲ್ಲೇ ತಯಾರಿಸಿದ್ದಾರೆ.

'ಪ್ಲಾಸ್ಟರ್ ಆಪ್ ಪ್ಯಾರಿಸ್ (POP) ಹಾಗೂ ರಾಸಾಯನಿಕ ಬಣ್ಣಗಳಿಂದ ತಯಾರಿಸುವ ಮೂರ್ತಿಗಳು ಪರಿಸರಕ್ಕೆ ಹಾನಿಕಾರಕವಾಗಿದ್ದು, ನಾವು ತಯಾರಿಸುವ ತೆಂಗಿನಕಾಯಿ ಮೂರ್ತಿಗಳು ಪರಿಸರಕ್ಕೆ ಪೂರಕವಾಗಿವೆ. ಸಸ್ಯಗಳಿಂದ ತಯಾರಿಸಿದ ನೈಸರ್ಗಿಕ ಬಣ್ಣಗಳನ್ನು ಲೇಪಿಸಿ ಮನ ಸೆಳೆಯುವಂತೆ ಮಾಡುತ್ತೇವೆ. ಸಾಂಪ್ರದಾಯಿಕ ಮಣ್ಣಿನ ಮೂರ್ತಿಗಳಂತೆ ಈ ಮೂರ್ತಿಗಳನ್ನು ನೀರಿನಲ್ಲಿ ವಿಸರ್ಜಿಸದೇ ಮಣ್ಣಿನಲ್ಲಿ ಹೂಳಿದರೆ ಮೊಳಕೆಯೊಡೆದು ಸಸಿಯಾಗುತ್ತದೆ. ವರ್ಷಕ್ಕೊಂದು ತೆಂಗಿನಮರ ಗಣೇಶನ ಹೆಸರಿನಲ್ಲಿ ಪ್ರತಿಷ್ಠಾಪನೆಗೊಳ್ಳುತ್ತದೆ ಎಂಬ ಖುಷಿಯೂ, ನೆನಪೂ ಎಲ್ಲರಲ್ಲಿ ಉಳಿಯುತ್ತದೆ. ತೆಂಗಿನಕಾಯಿಯನ್ನು ಮನೆಗೆ ಬಂದ ಪರಿಚಿತರಿಗೆ, ಅತಿಥಿಗಳಿಗೆ, ಸಂಬಂಧಿಕರಿಗೆ ಉಡುಗೊರೆಯಾಗಿ ಕೊಡುವುದರಿಂದ ಅವರಲ್ಲೂ ಪರಿಸರದ ಬಗ್ಗೆ ಕಾಳಜಿಯನ್ನು ಮೂಡಿಸಿದಂತಾಗುತ್ತದೆ.'[೧೮೪] ಎಂದು ಕಲಾವಿದರಾದ ಜಗದೀಶ ಭಾವಿಕಟ್ಟಿ ಮತ್ತು ಈರನಗೌಡ ಭಾವಿಕಟ್ಟಿಯವರು ಅಭಿಪ್ರಾಯಪಡುತ್ತಾರೆ.

**ಕ್ರಿಸ್ಮಸ್ ಹಬ್ಬದ ಚಿತ್ರಕಲೆ :** ಭಾರತ ದೇಶವನ್ನು ಸರ್ವಧರ್ಮಗಳ ತೋಟ ಎಂದು ಬಣ್ಣಿಸಲಾಗುತ್ತಿದೆ. ಇಲ್ಲಿ ಹಿಂದೂ-ಮುಸ್ಲಿಂ-ಶಿಖ್-ಇಸಾಯಿ-ಬೌದ್ಧ-ಕ್ರಿಶ್ಚಿಯನ್ ಮೊದಲಾದ

---

೧೮೪ .ಕ್ಷೇತ್ರಕಾರ್ಯ : ೨೦-೦೭-೨೦೧೭

ಧರ್ಮಗಳು ನೆಲೆ ಕಂಡುಕೊಂಡಿದ್ದು ಅವುಗಳ ಹಬ್ಬಗಳ ದಿನ ಆಚರಿಸುವ ಸಾಂಪ್ರದಾಯಿಕ ಪ್ರಕ್ರಿಯೆಗಳಲ್ಲಿ ಜನಪದದ ಸೊಗಸುಗಾರಿಕೆಯನ್ನು ಕಾಣಬಹುದಾಗಿದೆ. 'ಕ್ರಿಸ್ಮಸ್ ಹಬ್ಬವೆಂದರೆ ಕ್ರಿಸ್ತಪುರಾಣ (Christ-myth)ದ ಒಂದು ವಿಶಿಷ್ಟ ಸಾಮುದಾಯಿಕ ಆಚರಣೆ (Ritual). ಈ ಹಬ್ಬವನ್ನು ಭಾರತೀಯ ಸಂಪ್ರದಾಯಕ್ಕನುಗುಣವಾಗಿ, ಕೃಷ್ಣ ಜಯಂತಿ, ಬುದ್ಧ ಜಯಂತಿ, ಮಹಾವೀರ ಜಯಂತಿಯೇ ಮೊದಲಾದ ಹಬ್ಬಗಳ ಸಾದೃಶ್ಯದ ಮೇರೆಗೆ ಕ್ರಿಸ್ತ ಜಯಂತಿಯೆಂದೂ ಕರೆಯುತ್ತಾರೆ'[೧೮೫] ಎಂದು ವಿಲ್ಯಂ ಮಾಡ್ತ ಅವರು ಹೇಳುತ್ತಾರೆ.

ಕ್ರಿಸ್ತ ಹುಟ್ಟಿದ ದಿನವನ್ನು ಭಾರತದಲ್ಲಿ ತುಂಬ ವಿಜೃಂಭಣೆಯಿಂದ ಆಚರಿಸಲಾಗುತ್ತದೆ. ಕ್ರಿಸ್ಮಸ್ ಗೋದಲಿ, ಕ್ರಿಸ್ಮಸ್ ವೃಕ್ಷ, ಕ್ರಿಸ್ಮಸ್ ನಕ್ಷತ್ರ ಮೊದಲಾದವುಗಳಲ್ಲಿ ಜನಪದ ಚಿತ್ರಕಲೆಯ ಸುಳಿವುಗಳನ್ನು ಕಂಡುಕೊಳ್ಳಬಹುದಾಗಿದೆ. 'ಯೇಸುವಿನ ಹುಟ್ಟಿನಿಂದ ಲೌಕಿಕ ಮೌಲ್ಯಗಳು ಅಪಮೌಲ್ಯಗೊಳ್ಳುತ್ತವೆ. ದೇವದರ್ಶನವಾಗುವುದು ಜಗತ್ತಿನ ಒಣ ಆಡಂಬರದಲ್ಲಿಯಲ್ಲ. ಆತ ಹುಟ್ಟಿದುದು ಜಗತ್ತು ನಿದ್ರೆಯಲ್ಲಿದ್ದಾಗ ; ಛಳಿಗಾಲದ ನಟ್ಟಿರುಳಿನ ಏಕಾಂತದಲ್ಲಿ ನಗರ ಪಟ್ಟಣಗಳನ್ನು ತಲಗಿ ದೂರದ ಹಳ್ಳಿಯೊಂದರ ಗೋದಲಿಯಲ್ಲಿ. ಆತನ ಜನ್ಮವೃತ್ತಾಂತ ಮೊದಲು ಮುಟ್ಟಿಸಿದ್ದು ಚಕ್ರವರ್ತಿಗಳಿಗಲ್ಲ, ಅಧಿಕಾರಿಗಳಿಗೂ ಅಲ್ಲ, ಉಚ್ಚ ಕುಲದವರಿಗೂ ಅಲ್ಲ, ಸ್ವಾಮಿ ಪುರೋಹಿತರಿಗಂತೂ ಅಲ್ಲವೇ ಅಲ್ಲ. ದೇವದೂತರು ಗಗನದಿಂದ ಸುವಾರ್ತೆಯನ್ನು ಪ್ರಪ್ರಥಮವಾಗಿ ಸಾರಿ ಹೇಳಿದುದು ದೀನದಲಿತರಿಗೆ, ಬಡಬಗ್ಗರಿಗೆ. ಇನ್ನು ಮುಂದೆ ನಿಮ್ಮ ವರ್ಗದವರಿಗೆ ಪ್ರಥಮ ಸ್ಥಾನ. ಪ್ರಥಮರಿಗೆ ಕೊನೆಯ ಸ್ಥಾನ. ಇವು ಕ್ರೈಸ್ತ ಜೀವನ (Christian living)ದ ಮೌಲ್ಯಗಳು' ಎಂದು ವಿಲ್ಯಂ ಮಾಡ್ತ ಅವರು ವ್ಯಾಖ್ಯಾನಿಸುತ್ತಾರೆ. ಅಂದರೆ ಸಾಮಾನ್ಯ ಜನರ ರಕ್ಷಕನಾಗಿ ಯೇಸು ಹುಟ್ಟಿರುವುದನ್ನು ಇಲ್ಲಿ ಸ್ಪಷ್ಟಪಡಿಸಲಾಗಿದೆ. ಭಾರತೀಯ ಧರ್ಮಗಳಂತೆಯೇ ಇಲ್ಲಿಯೂ ಕೂಡ ಯೇಸು ದುಷ್ಟ ಸಂಹಾರಕ್ಕೆ ಬಂದವನು ಮತ್ತು ಶಿಷ್ಟರ ರಕ್ಷಣೆಗೆ ನಿಂತವನು ಎಂಬುದನ್ನು ಯೇಸುವಿನ ಕತೆಯಲ್ಲಿ ಹೇಳಲಾಗುತ್ತದೆ.

ಯೇಸುಕ್ರಿಸ್ತ ಜಯಂತಿಯ ದಿನ ಬೆತ್ಲೆಹೇಮಿನ ಗೋದಲಿಯಂತೆಯೇ ಪ್ರತಿಕೃತಿಯನ್ನು ಮಾಡಲಾಗುತ್ತದೆ. ಅಲ್ಲಿ ಬಾಲ ಕ್ರಿಸ್ತ ಮತ್ತು ಮೇರಿಯಮ್ಮನ ಮೂರ್ತಿಗಳನ್ನು ಪ್ರತಿಷ್ಠಾಪನೆ ಮಾಡಲಾಗುತ್ತದೆ. ದನ ಮತ್ತು ಕತ್ತೆಗಳ ಪ್ರತಿಕೃತಿಗಳೂ ಇಲ್ಲಿ ಕಂಡುಬರುತ್ತವೆ. ಇದನ್ನು ಕಟ್ಟಿಗೆಯ ಮೂಲಕವೂ ಮಣ್ಣಿನ ಮೂಲಕವೂ ಮಾಡಲಾಗುತ್ತದೆ. ಇಲ್ಲಿ ಬಣ್ಣಗಳ ಬಳಕೆ ಹೆಚ್ಚಿನ ಪ್ರಮಾಣದಲ್ಲಿ ಇರುತ್ತದೆ. ಪ್ರತಿಕೃತಿಗಳು ಸಹಜ ಎನ್ನಿಸುವಷ್ಟರ ಮಟ್ಟಿಗೆ ಇರುತ್ತವೆ. ಕ್ರಿಸ್ಮಸ್ ಹಬ್ಬದಲ್ಲಿ ಇವುಗಳನ್ನು ನೋಡಲು ಕ್ರಿಶ್ಚಿಯನೇತರರೂ ಬರುತ್ತಾರೆ.

---

೧೮೫. ಜಾನಪದ ಸಾಹಿತ್ಯ ದರ್ಶನ–೧೦ : ಸಂ–ವೃಷಭೇಂದ್ರಸ್ವಾಮಿ ಎಸ್. ಎಂ : ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ : ೧೯೮೭ : ಪು–೧೯೦

ಧಾರವಾಡ ಜಿಲ್ಲೆಯಲ್ಲಿ ಇರುವ ಚರ್ಚ್‌ಗಳಲ್ಲಿ, ಕ್ರೈಸ್ತರು ವಾಸಿಸುವ ಕಾಲೋನಿಗಳಲ್ಲಿ ಕ್ರಿಸ್ತ ಜಯಂತಿಯನ್ನು ಆಚರಿಸಲಾಗುತ್ತದೆ. ಭಾರತೀಯ ಸಂಪ್ರದಾಯದಂತೆ ರಂಗೋಲಿ ಚಿತ್ರಗಳೂ ಅಲ್ಲಿ ಕಂಗೊಳಿಸುತ್ತವೆ. ಯೇಸುವಿನ ಜನ್ಮವೃತ್ತಾಂತವನ್ನು ಹೇಳುವ ಚಿತ್ರಗಳನ್ನು ತುಂಬ ಕಲಾತ್ಮಕವಾಗಿ ಅಲ್ಲಲ್ಲಿ ಬಿಡಿಸಿರುವುದು ಕಂಡುಬರುತ್ತದೆ. ಈ ಬಗ್ಗೆ ಹೆಚ್ಚಿನ ಅಧ್ಯಯನಗಳು ಆಗಿಲ್ಲ. ಅವುಗಳ ಬಗ್ಗೆ ಕೂಲಂಕಶವಾಗಿ ತಿಳಿದುಕೊಂಡು ಮಾಹಿತಿಯನ್ನು ಸಂಗ್ರಹಿಸಿದರೆ ಜನಪದ ಚಿತ್ರಕಲೆಯಲ್ಲಿ ಕ್ರೈಸ್ತರ ಕೊಡುಗೆ ಕೂಡ ತುಂಬ ಇದೆ ಎಂಬುದು ತಿಳಿದುಬರುತ್ತದೆ.

ಹೀಗೆ ಜನಪದ ಚಿತ್ರಕಲೆಯನ್ನು ಇಲ್ಲಿ ವೃತ್ತಿಮೂಲ, ಹವ್ಯಾಸಿ ಹಾಗೂ ಇತರೆ ಎಂದು ವಿಭಾಗಿಸಿಕೊಂಡು ಅಧ್ಯಯನ ಮಾಡಿದರೂ ಕೆಲವು ಸಂದೇಹಗಳು ತಲೆದೋರುತ್ತವೆ. ಯಾಕೆಂದರೆ ಇಂದು ಎಷ್ಟೋ ಜನಪದ ಹವ್ಯಾಸಿ ಚಿತ್ರಕಲೆಗಳು ವೃತ್ತಿಯಾಗಿ ಪರಿಗಣಿಸಲ್ಪಟ್ಟಿವೆ. ಹಾಗೆಯೇ ವೃತ್ತಿಮೂಲದ ಜನಪದ ಚಿತ್ರಕಲೆ ಇಂದು ಹೆಚ್ಚು ಕಡಿಮೆ ಇಲ್ಲವಾಗುತ್ತಿದೆ. ಇತರೆ ವಿಭಾಗದಲ್ಲಿ ಅಧ್ಯಯನಕ್ಕೆ ಒಳಪಡಿಸಲಾದ ಜನಪದ ಚಿತ್ರಕಲೆ ಕೂಡ ಕೆಲವು ಸಲ ಹವ್ಯಾಸವಾಗಿಯೂ ಕೆಲವು ಸಲ ವೃತ್ತಿಯಾಗಿಯೂ ಕಾಣಿಸಿಕೊಳ್ಳುತ್ತದೆ. ಹೀಗೆ ಒಂದರೊಳಗೊಂದು ಸೇರಿಕೊಂಡು ವೃತ್ತಿ ಯಾವುದು, ಹವ್ಯಾಸ ಯಾವುದು ಎಂದು ಪತ್ತೆ ಹಚ್ಚುವುದಕ್ಕೂ ಸಾಧ್ಯವಿಲ್ಲದ ಸ್ಥಿತಿ ಇಂದು ನಿರ್ಮಾಣವಾಗಿದೆ.

ಒಟ್ಟಿನಲ್ಲಿ ಜನಪದ ಚಿತ್ರಕಲೆ ಅಗಾಧವಾದ ವಿಸ್ತಾರವನ್ನು ಹೊಂದಿದ್ದು, ಅದರ ಇತಿಹಾಸ ಕೂಡ ತುಂಬ ಪ್ರಾಚೀನತಮವಾಗಿದೆ. ಸಾಂಸ್ಕೃತಿಕ ಹಿರಿಮೆಯನ್ನು ತನ್ನ ಒಡಲೊಳಗೆ ಇಟ್ಟುಕೊಂಡ ಈ ಜನಪದ ಚಿತ್ರಕಲೆ ಇಂದಿಗೂ ವಿವಿಧ ರೂಪಗಳಲ್ಲಿ ಕಾಣಿಸಿಕೊಳ್ಳುತ್ತಿದೆ. ಆಧುನಿಕ ಚಿತ್ರಕಲೆಯ ಭರಾಟೆಯಲ್ಲಿ ಜನಪದ ಚಿತ್ರಕಲೆ ಹಾಳಾಯಿತು ಎಂದು ಹಳಹಳಿಸುವುದು ಸರಿಯಲ್ಲ. ಯಾಕೆಂದರೆ ಆಧುನಿಕ ಚಿತ್ರಕಲೆ ಕೂಡ ಜನಪದ ಮೂಲವನ್ನೇ ಇಟ್ಟುಕೊಂಡಿದೆ ಎಂಬುದನ್ನು ಮರೆಯುವಂತಿಲ್ಲ.

‘ಜನಪದ ಕಲೆಗೆ ಆಕಾಶದಷ್ಟು ವ್ಯಾಪ್ತಿ, ಸಾಗರದಷ್ಟು ಆಳವಿದೆ. ನಮ್ಮ ಬದುಕಿನ ಎಲ್ಲ ಬಗೆಯ ಸೃಜನಶೀಲ ಸೃಷ್ಟಿಯು ಜನಪದ ಕಲೆಯಾಗಿ ಪರಿಣಮಿಸಿದೆ. ಆರಾಧನಾ ಸಂಸ್ಕೃತಿಯ ಮನೋಭಾವದಿಂದ ಹುಟ್ಟಿಕೊಂಡ ಜನಪದ ಚಿತ್ರಕಲೆಯು ಜನಪದದ ಸೌಂದರ್ಯಪ್ರಜ್ಞೆ, ಕಲಾ ಶ್ರೀಮಂತಿಕೆಗೆ ಸಾಕ್ಷಿಯಾಯಿತು. ಜನಪದ ಚಿತ್ರಕಲೆಯ ಮೂಲಕ ಮಾನವ ಸಂಸ್ಕೃತಿಯು ಕಾಲಕ್ರಮೇಣ ಹೇಗೆ ರೂಪುಗೊಂಡಿತು ಎಂಬುದನ್ನು ಅರಿಯಲು ಮಹತ್ವಪೂರ್ಣವಾದ ದಾಖಲೆಯಾಗಿ ನಿಲ್ಲುತ್ತದೆ. ಆದರಿಂದು ಆಧುನಿಕ ಸಂದರ್ಭದಲ್ಲಿ ಜನಪದಕ್ಕೆ ಅದರಲ್ಲೂ ಜನಪದ

ಚಿತ್ರಕಲೆ ಮರೆಯಾಗುತ್ತಿದೆ. ಚಿತ್ರಕಲೆಯ ಅಳಿಗಾಲದಿಂದ ಪರ್ಯಾಯವಾಗಿ ಜನಪದರ ಹಾಡು, ಸಂಸ್ಕೃತಿ ಅವಸಾನವಾಗುತ್ತಿದೆ. ಅವಿಭಕ್ತ ಕುಟುಂಬ ವ್ಯವಸ್ಥೆ ಛಿದ್ರ ಛಿದ್ರವಾಗಿದೆ. ಆರೋಗ್ಯದಲ್ಲಿ ಆತಂಕ ಸೃಷ್ಟಿಯಾಗಿದೆ. ಧಾರ್ಮಿಕ ಆಚರಣೆಗಳು ಯಾಂತ್ರೀಕೃತವಾಗಿವೆ. ಮನುಷ್ಯ ಮನುಷ್ಯರ ನಂಬುಗೆಗಳು ಕಡಿಮೆಯಾಗಿವೆ. ಕಲೆಯನ್ನು ಪ್ರೀತಿಸುವ, ಗೌರವಿಸುವರ ಸಂಖ್ಯೆ ವಿರಳವಾಗಿದೆ. ಕರಕುಶಲತೆಗಿಂತ ಯಂತ್ರ ಬಿಡಿಸುವ ಕಲೆಗೆ ಯುವ ಪೀಳಿಗೆ ಮೋಹಿತವಾಗಿದೆ. ಈ ಎಲ್ಲ ಆತಂಕಗಳು ಜನಪದ ಚಿತ್ರಕಲೆಯ ಅವಸಾನಕ್ಕೆ ಮೊದಲಾಗಿವೆ. ಪರಂಪರೆಯ ಜ್ಞಾನವನ್ನು ಆಧುನಿಕತೆಗೆ ಒಗ್ಗಿಸಿಕೊಳ್ಳುವುದಷ್ಟೇ ನಮ್ಮ ಮುಂದಿರುವ ಒಂದು ಪರ್ಯಾಯ ಅವಕಾಶ. ಹೀಗಾಗಿ ಆಧುನಿಕ ಚಿತ್ರ ಕಲಾವಿದರು, ಪರಂಪರೆಯಕೊಂಡಿಯಿಂದ ಕಳಚಿಕೊಳ್ಳದೇ ಇದನ್ನು ರೂಢಿಸಿಕೊಳ್ಳುವ ಮೂಲಕ ತಮ್ಮ ಸೃಜಶೀಲತೆಯ ಹೊಸ ಸೃಷ್ಟಿಯನ್ನು ತೆರೆದಿಡಬೇಕಾಗಿದೆ'[೧೮೬] ಎಂಬ ಡಾ. ಪ್ರಕಾಶ ಖಾಡೆಯವರ ಮಾತುಗಳಲ್ಲಿ ಜಾನಪದ ಅಳಿವು-ಉಳಿವಿನ ಪ್ರಶ್ನೆಯಾಗಿದೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಜನಪದ ಕಲೆಗಳ ಮೂಲಕವೇ ಮನುಷ್ಯನ ಬದುಕು ವಿಕಸನವಾಗಿದೆ ಎಂದು ಅವರು ಹೇಳುವ ಮಾತುಗಳಲ್ಲಿ ಸತ್ಯವಿದೆ.

'ಜನಪದ ಕಲೆಗಳು ಜನಾಂಗದಿಂದ ಜನಾಂಗಕ್ಕೆ ದೊಡ್ಡ ಕೊಡುಗೆಗಳಾಗಿ ಬಂದಿವೆ. ಕೈಗಾರಿಕಾ ಕ್ರಾಂತಿಯಿಂದ  ಜನರು ಹಳ್ಳಿಗಳನ್ನು ತೊರೆದು ನಗರದತ್ತ ಮುಖ ಮಾಡಿದಾಗ ಜಾನಪದದ ಅಳಿವು ಆರಂಭವಾಯಿತೆಂದೇ ಭಾವಿಸಲಾಗಿತ್ತು. ಈ ಆತಂಕವನ್ನು ನಮ್ಮ ಪಂಡಿತ ಜನ ಬುಗಿಲೆಬ್ಬಿಸಿ ಜಾನಪದವನ್ನು ಸಂಕುಚಿತವಾಗಿ ಕಾಣುವ ಸಂದರ್ಭ ತಂದಿಟ್ಟರು. ಆದರೆ ಜಾನಪದವೆಂಬುದು ಸಾಯುವ ಸರಕಲ್ಲ. ಅದು ಪರಂಪರೆಯಿಂದ ಪರಂಪರೆಗೆ ಕಾಲಕ್ಕನುಗುಣವಾಗಿ ಬದಲಾಗುತ್ತ ಹೊಸ ರೂಪ ತಾಳುತ್ತ ಉಳಿದುಕೊಂಡು ಬಂದಿದೆ ; ಬರುತ್ತಿದೆ. ಹೀಗಾಗಿ ಜಾನಪದವು ಗತಕಾಲದ ಪ್ರತಿಧ್ವನಿ ಮಾತ್ರವಲ್ಲ ; ಸಮಕಾಲೀನ ಸಂದರ್ಭದ ಸಶಕ್ತ ಧ್ವನಿಯಾಗಿದೆ'[೧೮೭] ಎಂದು ಕೂಡ ಡಾ. ಪ್ರಕಾಶ ಖಾಡೆಯವರು ಅಭಿಪ್ರಾಯಪಡುತ್ತಾರೆ. ಈ ಎಲ್ಲ ವಿಚಾರಗಳನ್ನು ಅರಿತುಕೊಂಡಾಗ ಆಧುನಿಕತೆಯ ರಭಸಕ್ಕೆ ಜನಪದ ಚಿತ್ರಕಲೆ ಸಿಲುಕಿಕೊಂಡರೂ ರೂಪಾಂತರ ಮಾರ್ಗವಾಗಿ ಮತ್ತೇ ಕಾಣಿಸಿಕೊಳ್ಳುತ್ತಿರುವುದು ಕಂಡುಬರುತ್ತದೆ. ಇದೀಗ ಇದೇ ಜನಪದ ಚಿತ್ರಕಲೆ ಫ್ಯಾಶನ್ ಆಗಿಯೂ ಬಳಕೆ ಆಗುತ್ತಿರುವ ಸಂದರ್ಭಗಳು ನಮ್ಮ ಕಣ್ಣಮುಂದೆಯೇ ಘಟಿಸುತ್ತಿರುವುದನ್ನು ನಾವು ಕಾಣಬಹುದಾಗಿದೆ.

---

೧೮೬. http://avadhimag.com/2012/10/13/
೧೮೭. http://avadhimag.com/2012/10/13/

ಇಲ್ಲಿ ಇನ್ನೊಂದು ಮಾತನ್ನು ಹೇಳಲೇಬೇಕು ಎನಿಸುತ್ತದೆ ; '....ಸಮಗ್ರ ಜಾನಪದ ಸಂಗ್ರಹಕ್ಕೆ ಇನ್ನೂ ನಾಂದಿಯಾಗಿಲ್ಲ. ಸಂಗ್ರಹಣವೇ ಆಗದಿದ್ದ ಮೇಲೆ ಅಧ್ಯಯನ, ಸಂಪಾದನೆ, ವಿಮರ್ಶೆಗಳ ಕಾರ್ಯ ಹೇಗೆ ನಡೆಯಬೇಕು ? ಇದೆಲ್ಲ ನಡೆಯಬೇಕಾದರೆ ವ್ಯಾಪಕ ದೃಷ್ಟಿಯ ಸಂಗ್ರಹಣಕಾರ್ಯ ನಡೆಯಲೇ ಬೇಕು. ಇಷ್ಟರವರೆಗೆ ಇದು ನಡೆಯದೇ ಇರಲು ಹಲವಾರು ಕಾರಣಗಳಿದ್ದಿರಬಹುದು. ಮುಖ್ಯವಾಗಿ ಈ ಬಗೆಗೆ ತರಬೇತಿ ಪಡೆದವರಿಲ್ಲ ; ಅಥವಾ ಅಂತಹ ತರಬೇತಿ ಕೊಡುವ ಸಾಮರ್ಥ್ಯ ಇದ್ದವರೂ ವಿರಳ. ಈವರೆಗೆ ಜಾನಪದವನ್ನು ಕೇವಲ ಭಾಷಿಕ ಅಥವಾ ಸಾಹಿತ್ಯಿಕ ದೃಷ್ಟಿಯಿಂದ ಮಾತ್ರ ಗಮನಿಸಿರುವುದು ಇನ್ನೊಂದು ಪ್ರಧಾನ ಕಾರಣವಾಗಿರಬಹುದು'[೧೮೮] ಎನ್ನುವ ಎಂ.ಎಸ್. ಸುಂಕಾಪುರ ಅವರ ೭೦-೮೦ರ ದಶಕದ ಮಾತುಗಳು ಇಂದಿಗೂ ಪ್ರಸ್ತುತ ಎನಿಸುತ್ತವೆ. ಕ್ಷೇತ್ರಕಾರ್ಯಗಳ ಮೂಲಕ ಹೊಸ ಹೊಸ ಅಧ್ಯಯನಗಳು ನಡೆಯಬೇಕು ಎನ್ನುವುದು ಇಲ್ಲಿಯ ಆಶಯವಾಗಿದೆ.

'ನಮ್ಮ ಸಂಸ್ಕೃತಿಯ ತಾಯಿ ಬೇರಾದ ಜಾನಪದದ ಬಗ್ಗೆ ಎಲ್ಲರಿಗೂ ಹುಚ್ಚು ಹಿಡಿಯಬೇಕು. ಜಾತಿಮತ ಭೇದವಿಲ್ಲದೆ, ಸರ್ವೋದಯದ ದೃಷ್ಟಿಯಿಂದ ಸಾಗಿ ಬಂದಿರುವ ಸಂಸ್ಕೃತಿ ಎಂದರೆ ಜನಪದ ಸಂಸ್ಕೃತಿ. ಇಂತಹ ಸಂಸ್ಕೃತಿ ಈಗ ಒಂದು ಬಗೆಯಲ್ಲಿ ನಿಂತ ನೀರಾಗಿದೆ. ಎಷ್ಟೋ ಕಾಲದಿಂದ, ಎಲ್ಲಿಂದಲೋ ಹರಿದು ಬಮದ ಹೊಳೆ ಆಧುನಿಕತೆಯ ಅಡ್ಡಗಟ್ಟೆಯಿಂದ ಮುಂದೆ ಸಾಗದೆ ನಿಂತು ಬಿಟ್ಟಿದೆ. ನೀರಿನ ಮೇಲೆ ಹಾವಸೆಗಟ್ಟಿದೆ. ಈ ನೀರನ್ನು ನಿಲ್ಲಲು ಬಿಡಬಾರದು. ಇದು ಮುಂದೆ ಹರಿದು ಜನಮನವನ್ನು ತಣಿಸಿ, ಒಳ್ಳೊಳ್ಳೆಯ ಮರಗಿಡ ಪೈರುಪಚ್ಚೆಗಳಾಗಿ ಬೆಳೆದು ಹೊಸ ಹೊಸ ಫಲಪುಷ್ಪಗಳನ್ನು ನೀಡಬೇಕು. ಆಗಲೇ ಅದು ಸಾರ್ಥಕವಾಗುವುದು'[೧೮೯] ಎಂದು ಎಚ್.ಎಲ್. ನಾಗೇಗೌಡ ಅವರು ಹೇಳುತ್ತಾರೆ. ಇದನ್ನು ಭಿನ್ನ ದೃಷ್ಟಿಕೋನದಿಂದ ನೋಡುವ ವಾದವೂ ಕಾಣಿಸಿಕೊಳ್ಳುತ್ತದೆ. ಜಾನಪದವು ಎಂದಿಗೂ ಅಳಿಯುವುದಿಲ್ಲ ; ಅದು ನಿತ್ಯ ನಿರಂತರ ಎನ್ನುವ ಸಮಾಧಾನದ ಮಾತುಗಳೂ ಕೇಳಿ ಬರುತ್ತವೆ. 'ಜಾನಪದ ನಿಂತ ನೀರಲ್ಲ, ಅದು ಸದಾ ಚಲನಶೀಲ. ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ ಎಂಬ ಬಸವಣ್ಣನವರ ವಚನ ಜಾನಪದಕ್ಕೆ ಅನ್ವಯಿಸುತ್ತದೆ. ಜಾನಪದವನ್ನು ಸಜೀವ ಪಳಿಯುಳಿಕೆ (Folklore is lively fossil which refuses to die) ಎಂದು ಕರೆಯಲಾಗಿದೆ. ಜನಪದ ಸಾವನ್ನು ನಿರಾಕರಿಸುತ್ತಾ, ಕಾಲಮಾನದ ಅಗತ್ಯಕ್ಕನುಗುಣವಾಗಿ ಮಾರ್ಪಾಟು ಹೊಂದುತ್ತಾ, ತನ್ನ ಜೀವಂತಿಕೆಯನ್ನು ಕಾಪಾಡಿಕೊಳ್ಳುತ್ತದೆ. ಆಚಾರ್ಯ ಬಿ.ಎಂ.ಶ್ರೀಕಂಠಯ್ಯನವರು

೧೮೮. ಜಾನಪದ ವೈಜ್ಞಾನಿಕ ಕ್ಷೇತ್ರಕಾರ್ಯ : ಸಿ.ಸಿ.ಎ.ಪೈ, ಎಸ್.ಜೆ. : ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ : ೧೯೭೮ : ಪು-vii

೧೮೯. ಜಾನಪದ ಸಾಹಿತ್ಯ ದರ್ಶನ-೭ : ಸಂ-ವೃಷಭೇಂದ್ರಸ್ವಾಮಿ ಎಸ್.ಎಂ : ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ : ೧೯೮೨ : ಪು-೩೦

ಗರತಿಯ ಹಾಡು ಮುನ್ನುಡಿಯಲ್ಲಿ ಜನವಾಣಿ ಬೇರು ಕವಿ ವಾಣಿ ಹೂವು ಎಂದರು. ಈ ಜನವಾಣಿಯ ಬೇರು ಬಲವಾಗಿದೆ. ನೆಲದ ಆಳಕ್ಕೆ ಇಳಿದಿದೆ. ನೆಲದ ಸತ್ವವನ್ನು ಹೀರಿಕೊಂಡ ಈ ಬೇರು, ಮೇಲಣ ಟೊಂಗೆಯಲ್ಲಿ ಹಸಿರು ಮುರಿಯುವ ಎಲೆಗಳನ್ನು, ಜೀವಂತಿಕೆಯಿಂದ ನಳನಳಿಸುವ ಹೂವು, ಹೀಚು, ಕಾಯಿ, ಹಣ್ಣುಗಳನ್ನು ತಳೆಯುತ್ತದೆ. ಈ ಜಾನಪದ ಕಡಿದಷ್ಟು ಚಕ್ರಕುಡಿಯೊಡೆತದೊಂದಿಗೆ ಚಪ್ಪರದ ತುಂಬಾ ಹಬ್ಬಿಕೊಳ್ಳುವ ಬಸಳೆಯಂತೆ'[೧೯೦] ಎನ್ನುವ ಮಾತುಗಳಲ್ಲಿ ಜಾನಪದದ ಜೀವಂತಿಕೆಯ ಉಲ್ಲೇಖ ಬಂದಿದೆ. ಏನೇ ಆಧುನಿಕತೆಯ ಸೋಗು ಬಂದರೂ ಅದು ಎಂದಿಗೂ ನಾಶವಾಗುವುದಿಲ್ಲ ; ಅದು ಮತ್ತೆ ಚಿಗಿತು ನಿಲ್ಲುತ್ತದೆ ಎನ್ನುವ ಆಶಯ ಇಲ್ಲಿ ಕಾಣಿಸಿಕೊಳ್ಳುತ್ತದೆ. ಆದರೆ ಆ ಒರತೆಯನ್ನು ಬಗೆದು ಹಿಡಿದಿಟ್ಟುಕೊಳ್ಳುವ ಪ್ರಯತ್ನ ಮಾತ್ರ ಜಾನಪದ ಅಧ್ಯಯನಕಾರರು ಕೈಗೊಳ್ಳಬೇಕಾಗುತ್ತದೆ.

ಈ ತೆರನಾದ ಜಾನಪದ ಅಧ್ಯಯನಕ್ಕೆ ಪೂರಕ ಸಾಮಗ್ರಿಯಾಗಬಲ್ಲ ಮಾಹಿತಿಗಳನ್ನು ಕಲೆ ಹಾಕಿ, ಅವುಗಳನ್ನು ಹಿಂಜಿ, ವಿಶ್ಲೇಷಣೆ ಮಾಡುವ ಕಾರ್ಯ ಇಂದು ಎಂದಿಗಿಂತಲೂ ಹೆಚ್ಚಾಗಿದೆ. ಇತ್ತೀಚೆಗೆ ಇಂತಹ ಪರಿಕ್ರಮಗಳು ಸುರುವಾಗಿವೆ. ಆದರೆ ಹೇಳಿಕೊಳ್ಳುವಂತಹ ಕಾರ್ಯ ಇನ್ನೂ ತುಂಬ ಇದೆ ಎನ್ನಲೇ ಬೇಕಾಗುತ್ತದೆ. ಹೀಗಾಗಿ ಇಲ್ಲಿ ಅಧ್ಯಯನಕ್ಕೆ ಒಳಪಡಿಸಿರುವ ಜನಪದ ಚಿತ್ರಕಲೆಗೆ ಸಂಬಂಧಿಸಿದ ಮಾಹಿತಿಗಳು ಈ ನಿಟ್ಟಿನಲ್ಲಿ ಹೆಚ್ಚು ಪ್ರಸ್ತುತವಾಗಬಲ್ಲವು. ಮೊದಲು ಸಂಗ್ರಹದ ಕಾರ್ಯ ನಡೆದರೆ, ಅದನ್ನು ಒಂದು ಕಡೆ ಪೇರಿಸಿದರೆ ಅದರಿಂದ ಹೆಚ್ಚಿನ ಅಧ್ಯಯನಗಳು ನಡೆಯಲು ಸಹಕಾರಿಯಾಗಬಲ್ಲದು.

ಧಾರವಾಡ ಜಿಲ್ಲೆ ಸಾಹಿತ್ಯದ ತವರುಭೂಮಿ ಹೇಗೋ ಹಾಗೆಯೇ ಕಲೆಗಳ ತವರೂ ಎಂದು ಹೇಳಲಡ್ಡಿಯಿಲ್ಲ. ಸಾಹಿತ್ಯ, ಸಂಗೀತ, ನೃತ್ಯ, ನಾಟಕ, ಚಿತ್ರಕಲೆ ಮೊದಲಾದವುಗಳು ಈ ಜಿಲ್ಲೆಯಲ್ಲಿ ವಿಶೇಷವಾಗಿ ಕಂಡುಬರುತ್ತವೆ. ಜಿಲ್ಲೆಯ ಜನಪದ ಚಿತ್ರಕಲೆ ಕೂಡ ಹೆಸರುವಾಸಿಯಾಗಿದೆ. ಈ ಜನಪದ ಚಿತ್ರಕಲೆಯಲ್ಲಿ ಸಾಂಸ್ಕೃತಿಕ ಬದುಕನ್ನು ನಾವು ಕಾಣುತ್ತೇವೆ. ಆದರೆ ಆಧುನಿಕತೆಯ ಸ್ಪರ್ಷದೊಂದಿಗೆ ಜನಪದ ಚಿತ್ರಕಲೆ ಇಂದು ತೋರಿಸುವುದಕ್ಕೆ, ಪ್ರದರ್ಶನಕ್ಕೆ ಇಡುವುದಕ್ಕೆ ಮಾತ್ರ ಸೀಮಿತವಾಗಿರುವುದು ಕಂಡು ಬರುತ್ತದೆ.

* * * * *

---

೧೯೦. ಸುವರ್ಣ ಜಾನಪದ ಲೇಖನಗಳು : ಸಂ–ದಂಡೆ ವೀರಣ್ಣ ಮತ್ತು ಶೆಟ್ಟಿ ಶ್ರೀಪಾದ : ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು : ೨೦೦೬ : ಪು–IV